ವಿಜಯನಗರ ಅಧ್ಯಯನ


ಸಂಪುಟ 3

ಹಂಪಿ ಉತ್ಸವ 1997ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಎಂ.ಎಲ್. ಶಿವಶಂಕರ

ಚನ್ನಬಸಪ್ಪ ಎಸ್. ಪಾಟೀಲ





1998

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ವಿಜಯನಗರ ಅಧ್ಯಯನ

ಸಂಪುಟ 3

ಹಂಪಿ ಉತ್ಸವ 1997ರಲ್ಲಿ ಮಂಡಿಸಿದ ಪ್ರಬಂಧಗಳು

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ 3

ಹಂಪಿ ಉತ್ಸವ 1997ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು
ಎಂ.ಎಲ್. ಶಿವಶಂಕರ
ಚನ್ನಬಸಪ್ಪ ಎಸ್. ಪಾಟೀಲ

1998
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಪ್ರಥಮ ಮುದ್ರಣ: 500 ಪ್ರತಿಗಳು

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಬೆಲೆ: ರೂ. 150/-

ಡಿ.ಟಿ.ಪಿ. ಅಕ್ಷರ ಜೋಡಣೆ: ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, ಮೈಸೂರು
ಮುದ್ರಣ: ಎಫ್‌ಓಎಸ್‌ಟಿಆಯ್‌ಎಸ್, ಸಿಎಫ್‌ಟಿಆರ್‌ಆಯ್, ಮೈಸೂರು

ಪ್ರಸ್ತಾವನೆ

ಇಡೀ ದಕ್ಷಿಣ ಭಾರತದಾದ್ಯಂತ ಹಬ್ಬಿದ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿ-ವಿಜಯನಗರ ಪಟ್ಟಣವು ಸುಮಾರು ಎರಡು ನೂರು ವರ್ಷಗಳವರೆಗೆ ಪ್ರಮುಖವಾದ ಸಾಂಸ್ಕೃತಿಕ ಕೇಂದ್ರವಾಗಿ ಮೆರೆಯಿತು. ಅಂದಿನ ವೈಭವವನ್ನು ಕಣ್ಣಾರೆ ಕಂಡ ವಿದೇಶಿ ಪ್ರವಾಸಿಗರು ತಮ್ಮ ಕಥನಗಳಲ್ಲಿ ದಾಖಲಿಸಿದ್ದಾರೆ. ವಿಜಯನಗರದ ಆಚರಣೆಗಳಲ್ಲಿ ಪ್ರಸಿದ್ಧವಾಗಿದ್ದ ನವರಾತ್ರಿ ಉತ್ಸವ ದೇಶ ವಿದೇಶದ ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು. 1565ರಲ್ಲಿ ಪತನಾದ ಪಟ್ಟಣದ ಭಗ್ನಾವಶೇಷಗಳು ಈಗಲೂ ವಿದ್ವಾಂಸರನ್ನು, ಆಸಕ್ತರನ್ನು ಮತ್ತು ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ವಿಜಯನಗರದ ಗತವೈಭವವು ಕಣ್ಣಿಗೆ ಗೋಚರಿಸುವಂತೆ ಮಾಡಲು ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಪ್ರಾರಂಭಿಸಿ ವ್ಯಾಪಕವಾದ ಉತ್ಖನನ, ಸಂರಕ್ಷಣೆ ಮತ್ತು ಸಂಶೋಧನೆಗಳನ್ನು ಕೈಗೊಂಡಿದೆ. ಹಂಪಿಯ ಸ್ಮಾರಕಗಳ ಪುನರುಜ್ಜೀವನವಾಗುತ್ತಿರುವಂತೆ ಸಾಂಸ್ಕೃತಿಕ ಪುನರುಜ್ಜೀವನಗೊಳಿಸುವುದಕ್ಕಾಗಿ ಪ್ರತಿ ವರ್ಷ ನವೆಂಬರ್ 3, 4 ಮತ್ತು 5 ರಂದು ಮೂರು ದಿನಗಳ ಹಂಪಿ ಉತ್ಸವವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಚಾರ ಸಂಕಿರಣವನ್ನು ನಡೆಸಿ, ಅಲ್ಲಿ ಮಂಡಿತವಾದ ಪ್ರಬಂಧಗಳನ್ನು ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಪ್ರಕಟಿಸುತ್ತಿದೆ. ಕಳೆದ ವರ್ಷ ಅಂದರೆ 1997ರಲ್ಲಿ ಮಂಡಿಸಲಾದ 19 ಪ್ರಬಂಧಗಳನ್ನು "ವಿಜಯನಗರ ಅಧ್ಯಯನ: ಸಂಪುಟ 3" ರಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟವು ವಿದ್ವಾಂಸರಿಗೆ ಮತ್ತು ಸಾರ್ವಜನಿಕರಿಗೆ ಉಪಯುಕ್ತ ಮಾಹಿತಿ ನೀಡುವುದರಲ್ಲಿ ಸಂದೇಹವಿಲ್ಲ.

ಈ ಪುಸ್ತಕದಲ್ಲಿಯ ಪ್ರಬಂಧಗಳನ್ನು ಶ್ರೀಮತಿ ಎಂ. ಚಂದ್ರಮ್ಮ ಮತ್ತು ಶ್ರೀಮತಿ ಕೆ.ಆರ್. ಶೋಭಾ ಅವರು ಅಂದವಾಗಿ ಬೆರಳಚ್ಚು ಮಾಡಿದ್ದಾರೆ. ಕೇಂದ್ರೀಯ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಪ್ರಕಾಶ್ ಅವರು ಈ ಪುಸ್ತಕದ ಮುದ್ರಣವನ್ನು ಸಂತೋಷದಿಂದ ಒಪ್ಪಿ, ಶ್ರೀ ಎಚ್.ವಾಯ್ ಮಹಾಕೂಟೇಶ್ವರ್, ಮುಖ್ಯಸ್ಥರು, ಎಫ್‌ಓಎಸ್‌ಟಿಆಯ್‌ಎಸ್ ಮತ್ತು ಶ್ರೀ ಎಸ್. ಉಮೇಶ್, ಮುದ್ರಣದ ತಾಂತ್ರಿಕ ಅಧಿಕಾರಿ ಅವರ ನೆರವಿನಿಂದ ಸಕಾಲದಲ್ಲಿ ಮುದ್ರಿಸಿದ್ದಾರೆ. ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೈಸೂರು
22-10-1998

ಎಂ.ಎಲ್ ಶಿವಶಂಕರ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ

ಪ್ರಬಂಧ ಮಂಡಿಸಿದವರು

1. ಶ್ರೀ ಸಿ.ಟಿ.ಎಂ. ಕೊಟ್ರಯ್ಯ
340, ಎಂ ಬ್ಲಾಕ್, ಕುವೆಂಪುನಗರ,
ಮೈಸೂರು–570 023

2. ಶ್ರೀ ಆರ್.ಎಚ್. ಕುಲಕರ್ಣಿ
ಯು.ಜಿ.ಸಿ. ಹಿರಿಯ ಸಂಶೋಧನಾ ವಿದ್ಯಾರ್ಥಿ,
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ,
ಮಾನಸಗಂಗೋತ್ರಿ, ಮೈಸೂರು–570 006

3. ಡಾ. ರು.ಮ. ಷಡಕ್ಷರಯ್ಯ
ನಿರ್ದೇಶಕರು,
ಕನ್ನಡ ಸಂಶೋಧನಾ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

4. ಕು. ಸುಜಾತ ಮಲ್ಲನಗೌಡ
ಆಶ್ರಯ ಶ್ರೀ ಹಂಪನಗೌಡ ಬಾದರ್ಲಿ,
ಮಾಜಿ ಶಾಸಕರು,
ಸಿಂಧನೂರು, ರಾಯಚೂರು ಜಿಲ್ಲೆ

5. ಶ್ರೀ ಟಿ.ಯಂ. ಮಂಜುನಾಥಯ್ಯ
ಪುರಾತತ್ವ ಸಹಾಯಕರು,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ,
ಕಮಲಾಪುರ, ಹೊಸಪೇಟೆ ತಾಲೂಕ,
ಬಳ್ಳಾರಿ ಜಿಲ್ಲೆ

6. ಡಾ. ಕೆ.ಜಿ. ವಸಂತಮಾಧವ
ಹಿರಿಯ ಸಂಶೋಧಕ (ಐಸಿಎಚ್‌ಆರ್) ಮತ್ತು
ಸಂದರ್ಶಕ ಪ್ರಾಧ್ಯಾಪಕ,
ಕಲ್ಲಿಕೋಟೆ ವಿಶ್ವವಿದ್ಯಾನಿಲಯ,
ಕಲ್ಲಿಕೋಟೆ, ಕೇರಳ

7. ಡಾ. ಎಂ.ಎಚ್. ಶಂಕರನಾರಾಯಣ
143, ವಿವೇಕಾನಂದ ನಗರ,
ಬೆಂಗಳೂರು–560 085

8. ಶ್ರೀ ಹೆಚ್.ಟಿ. ತಳವಾರ್
ಸಹಾಯಕ ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
ಅರಮನೆ ಆವರಣ, ಮೈಸೂರು–570 001

9. ಡಾ. ಶ್ರೀನಿವಾಸ ಪಾಡಿಗಾರ
ಪ್ರವಾಚಕ,
ಪ್ರಾಚೀನ ಭಾರತದ ಇತಿಹಾಸ ಮತ್ತು
ಶಾಸನ ವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–580 003

10. ಡಾ. ಎನ್. ಸರಸ್ವತಿ
ಅಧ್ಯಾಪಕರು, ಇತಿಹಾಸ ವಿಭಾಗ,
ಮಾನಸಗಂಗೋತ್ರಿ,
ಮೈಸೂರು–570 006

11. ಡಾ. ಮೃತ್ಯುಂಜಯ ರುಮಾಲೆ
ವಿಜಯನಗರ ಕಾಲೇಜ್
ಹೊಸಪೇಟೆ–583 201

12. ಡಾ. ದೇವರ ಕೊಂಡಾರೆಡ್ಡಿ
ಪ್ರವಾಚಕ,
ಶಾಸನ ಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ,
ಕಮಾಲಾಪುರ–583 220,
ಬಳ್ಳಾರಿ ಜಿಲ್ಲೆ

13. ಡಾ. ಚನ್ನಬಸಪ್ಪ ಎಸ್. ಪಾಟೀಲ
ಉಪ ನಿರ್ದೇಶಕರು,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
ಅರಮನೆ ಆವರಣ, ಮೈಸೂರು–570 001

14. ಶ್ರೀ ಸೀತಾರಾಮ ಜಾಗೀರ್‌ದಾರ್
'ಕಲ್ಪ' 406/ಬಿ, ಮುಖ್ಯರಸ್ತೆ–3,
ಸರಸ್ವತೀಪುರಂ,
ಮೈಸೂರು–570 009

15. ಡಾ. ಕೆಳದಿ ವೆಂಕಟೇಶ ಜೋಯಿಸ್
ಕ್ಯೂರೇಟರ್,
ಕೆಳದಿ ವಸ್ತುಸಂಗ್ರಹಾಲಯ,
ಕೆಳದಿ–577 401,
ಸಾಗರ ತಾಲೂಕ, ಶಿವಮೊಗ್ಗ ಜಿಲ್ಲೆ

16. ಶ್ರೀ ಜಯದೇವಪ್ಪ ಜೈನಕೇರಿ
ನಂ. 87 ಶಾಂತಲಾ,
ಕುವೆಂಪು ರಸ್ತೆ,
ಜಿಲ್ಲಾ ಪಂಚಾಯತ್ ಎದುರು, ಶಿವಮೊಗ್ಗ–577 201

17. ಡಾ. ನಿರ್ಮಲ್‌ರಾಜು
ಉಪ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾಲಯ, ಮೈಸೂರು–570 005

18. ಶ್ರೀ ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ,
ಕೆಳದಿ–577 401,
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

19. ಡಾ. ಸಿ. ಮಹದೇವ
ಪ್ರವಾಚಕ, ಪುರಾತತ್ವ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ,
ಕಮಲಾಪುರ–583 220, ಬಳ್ಳಾರಿ ಜಿಲ್ಲೆ

ಪರಿವಿಡಿ

ಸಂಕ್ಷೇಪಗಳು

ಆರಿಇಂಎ	:	ಆನುವಲ್ ರಿಪೊರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಆರಿಸೌಇಂಎ	:	ಆನುವಲ್ ರಿಪೊರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಾಫಿ
ಇಂಎಂ	:	ಇಂಡಿಯನ್ ಎಂಟಿಕ್ವೇರಿ
ಎಇಂ	:	ಎಪಿಗ್ರಾಫಿಯ ಇಂಡಿಕ
ಎಕ	:	ಎಪಿಗ್ರಾಫಿಯ ಕರ್ನಾಟಕ
ಕಇ	:	ಕರ್ನಾಟಕ ಇನ್ಸ್‌ಕ್ರಿಪ್‌ಶನ್ಸ್
ಕಸಾಪಪ	:	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
ಕ್ವಾಜಮಿಸೊ	:	ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸಾಯಿಟಿ
ಜಬಾಂಬ್ರಾಂರಾಏಸೊ	:	ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ದಿ ಏಷಿಯಾಟಿಕ್ ಸೊಸಾಯಿಟಿ
ಪ್ರೊರಿಕರೀಇ	:	ಪ್ರೊಗ್ರೆಸ್ ರಿಪೋರ್ಟ್ ಆಫ್ ದಿ ಕನ್ನಡ ರೀಸರ್ಚ್ ಇನ್ಸ್‌ಟಿಟ್ಯೂಟ್
ಮೈಆರಿ	:	ಆನುವಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್
ವಿಪ್ರೊರೀ	:	ವಿಜಯನಗರ ಪ್ರೊಗ್ರೆಸ್ ಆಫ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್
APGAS	:	Andhra Pradesh Government Archaeological Series
ARIE	:	Annual Report on Indian Epigraphy
EC	:	Epigraphia Carnatica
Ep.Andh.	:	Epigraphia Andhrica
IA	:	Indian Antiquary
JES	:	Journal of the Epigraphical Society of India
KI	:	Karnataka Inscriptions
SII	:	South Indian Inscriptions
VI	:	Vijayanagara Inscriptions

1. ಬುಕ್ಕಸಾಗರದ ಶಿಲ್ಪಗಳಲ್ಲಿ ಶೈವ/ವೀರಶೈವ ಶರಣರು

– ಸಿ.ಟಿ.ಎಂ. ಕೊಟ್ರಯ್ಯ

ಹಂಪೆಯಿಂದ ಸುಮಾರು ಹತ್ತು ಕಿಲೋಮೀಟರು ದೂರದಲ್ಲಿರುವ ಬುಕ್ಕಸಾಗರ ಗ್ರಾಮದ ವೀರಭದ್ರಸ್ವಾಮಿಯ ದೇವಾಲಯದ ರಂಗಮಂಟಪದಲ್ಲಿರುವ ಕಲ್ಲಿನಿಂದ ನಿರ್ಮಿತವಾದ ಗೋಡೆಗಂಬಗಳ ಮೇಲೆ, ಈ ಶಿಲ್ಪಗಳು ಕಾಣಬರುತ್ತವೆ. ಈ ಶಿಲ್ಪಿಗಳಲ್ಲಿ ಶೈವ/ವೀರಶೈವ ಶರಣರ ಮೋಕ್ಷ ಸಾಧನಾ ಪಥಗಳಲ್ಲಿ ಜರುಗಿದ ಘಟನಾವಳಿಗಳಿಗೆ ಸಂಬಂಧಿಸಿದ ದೃಶ್ಯಗಳನ್ನು ಕಡೆದು ನಿರೂಪಿಸಲಾಗಿದೆ. ಅವುಗಳನ್ನು ಉಬ್ಬು ಶಿಲ್ಪಗಳಾಗಿ ತೋರಿಸಲಾಗಿದೆ.

ಈ ಶಿಲ್ಪಗಳು ಶೈವ/ವೀರಶೈವ ಸಿದ್ಧಪುರುಷರನ್ನು ಪ್ರತಿನಿಧಿಸುವವುಗಳಾಗಿರುವುದರಿಂದ, ಅವುಗಳಿಗೆ ವಿವರಣೆಗಳನ್ನು ಪರಂಪರಾಗತವಾಗಿ ಬಂದಿರುವ ಶಿಲ್ಪ ಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳಲ್ಲಿ ಕಾಣಲಾಗದು. ಮತ್ತು ಅವು ಎಲ್ಲೆಡೆಯೂ ಕಾಣಸಿಗದಂಥಹ ಶಿಲ್ಪಗಳಾಗಿರುತ್ತವೆ. ಹಾಗಾಗಿ ಅವುಗಳನ್ನು ತಮ್ಮದೇ ಆಧ ಒಂದು ವಿಶಿಷ್ಟ ವರ್ಗದ ಶಿಲ್ಪಗಳೆಂದು ಪರಿಗಣಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವು ಮೊದಲ ಬಾರಿಗೆ ಗಮನಕ್ಕೆ ಬಂದಿರುತ್ತದೆ. ಹಾಗಾಗಿ ಅವು ಬಹು ಮುಖ್ಯವಾದವು ಹಾಗೂ ವಿನೂತನವಾದ ಶಿಲ್ಪಗಳೆಂದು ತಿಳಿಯಬೇಕಾಗುತ್ತದೆ.

ಈ ಶರಣರ ಶಿಲ್ಪಗಳಲ್ಲಿ, ಹಲವು ತಮಿಳುನಾಡಿನ ಶೈವ ಪಂಥದವರಿಂದ ಪ್ರಚಲಿತಕ್ಕೆ ಬಂದ ಅರವತ್ತ ಮೂವರು ಪುರಾತನರನ್ನು ಪ್ರತಿನಿಧಿಸಿದರೆ, ಇನ್ನು ಕೆಲವು ಕರ್ನಾಟಕದ ವೀರಶೈವ ಸಿದ್ಧ ಪುರುಷರನ್ನು ಬಿಂಬಿಸುತ್ತವೆ. ಆದುದರಿಂದ ಅವು ಶೈವ/ವೀರಶೈವ ಶರಣರನ್ನು ಕುರಿತಾದ ಶಿಲ್ಪಗಳೆಂದು ಪರಿಗಣಿಸಬೇಕಾಗುತ್ತದೆ.

ಆ ಶಿಲ್ಪಗಳನ್ನು ಗುರುತಿಸಲು ಅನುಕೂಲವಾಗುವಂತೆ ಅವುಗಳಿಗೆ ಹೆಸರಿನ ಅಥವಾ ವಿವರಣಾಪಟ್ಟಿಗಳನ್ನು ಶಿಲ್ಪಿಯು ಲಿಖಿಸಿ ತೋರಿಸಿರುವುದಿಲ್ಲ. ಹಾಗಾಗಿ ಅವುಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದ ಶೈವ/ವೀರಶೈವ ಸಾಹಿತ್ಯವನ್ನೇ ನಾವು ಮೊರೆ ಹೋಗಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ವಿಜಯನಗರದ ಆಳ್ವಿಕೆಯ ಕಾಲದಲ್ಲಿ, ಶಿಲ್ಪಗಳಿಗೆ ಹೆಸರಿನ ಅಥವಾ ವಿವರಣಾಪಟ್ಟಿಗಳನ್ನು ಬರೆಯುವ ಪದ್ಧತಿಯು ಬಳಕೆಯಿಂದ ಬಿಟ್ಟು ಹೋಗಿತ್ತೆಂದೇ ಹೇಳಬಹುದು. ಎಲ್ಲಾದರೂ ಕಂಡುಬಂದರೆ ಅದು ಬಹು ಅಪರೂಪದ ಸಂಗತಿಯೆಂದು ತಿಳಿಯಬೇಕು.

ಈಗ ಆ ಶಿಲ್ಪ ರೂಪುಗಳಿಗೆ ಸಂಬಂಧಿಸಿದ ವ್ಯಕ್ತಿ, ಪ್ರಾಸಂಗಿಕ ಕಥೆ ಮತ್ತು ಮುಖ್ಯ ಘಟನೆ ಅಥವಾ ವೃತ್ತಾಂತ ಮುಂತಾದವುಗಳನ್ನು ಸಾಹಿತ್ಯಾಧಾರಗಳಿಂದ ಸಂಕ್ಷಿಪ್ತವಾಗಿ ವಿವರಿಸಿ, ಅನಂತರ ಸಂಬಂಧಿಸಿದ ಶಿಲ್ಪವನ್ನು ಗುರುತಿಸಿ ವರ್ಣಿಸಲಾಗುವುದು. ಆ ಸಾಹಿತ್ಯ ಮತ್ತು ಆ ಶಿಲ್ಪಗಳ ಉದ್ದೇಶಗಳು, ಶೈವ/ವೀರಶೈವ ಧರ್ಮ, ಶರಣರು, ಅವರ ಜೀವನ, ಅವರು ಅನುಸರಿಸಿದ ತತ್ವಗಳು ಮತ್ತು ಸಾಧನೆಗಳನ್ನು ಪ್ರಚುರ ಪಡಿಸುವುದು ಮತ್ತು ಅವುಗಳಿಗೆ ಒಂದು ಶಾಶ್ವತವಾದ ಸ್ಥಾನವನ್ನು ಕಲ್ಪಿಸುವುದೇ ಆಗಿದ್ದವು. ಮುಖ್ಯವಾಗಿ ಆ ಮಾಧ್ಯಮಗಳ ಮೂಲಕ ಶೈವ/ ವೀರಶೈವ ಧರ್ಮದ ಮಹತ್ವವನ್ನು ಮತ್ತು ಅಧಿಕ್ಯವನ್ನು ಜನಮನದಲ್ಲಿ ಬಿತ್ತರಿಸುವುದೇ ಆಗಿತ್ತೆಂದು ತಿಳಿಯಬೇಕು.

1. ಸಾಂಖ್ಯ ತೊಂಡ (ಚಿತ್ರ 1)

ಸಾಂಖ್ಯ ತೊಂಡನೆಂಬ ಶಿವಭಕ್ತನು ಮೊದಲಿಗೆ ಜೈನನಾಗಿದ್ದನು. ಅವನ ತಂದೆ ಕಾಳ ಬೌದ್ಧನೆಂಬ ಜೈನನು ಶಾಂತ ಮಂಡಲವೆಂಬ ದೇಶದಲ್ಲಿದ್ದನು. ತಂದೆ ಜೈನನಾಗಿದ್ದರೂ ಸಾಂಖ್ಯ ತೊಂಡನು ಹುಟ್ಟುತ್ತಲೇ ಶಿವನಲ್ಲಿ ಭಕ್ತಿವುಳ್ಳವನಾಗಿದ್ದನು. ಹಾಗಾಗಿ ಸಮಕಾಲೀನ ಜೈನ, ಚಾರವಾಕ ಮತ್ತು ಬೌದ್ಧ ಧರ್ಮಗಳಿಗೆ ಕಟುವಾದ ವಿರೋಧಿಯಾಗಿದ್ದನು. ತನಗೆ ಜೈನ ಧರ್ಮದ ಅನುಯಾಯಿಗಳಾದ ತಂದೆ ತಾಯಿಯರನ್ನು ಕೊಟ್ಟದ್ದಕ್ಕಾಗಿ ಶಿವನಲ್ಲಿಯೇ ಅತಿರೇಕವಾದ ಕೋಪ ಹೊಂದಿದವನಾಗಿದ್ದನು. ಮೇಲೆ ಹೇಳಿದ ಆ ಮೂರೂ ಅನ್ಯ ಧರ್ಮಗಳನ್ನು ವಿನಾಶಗೊಳಿಸಬೇಕೆಂಬುದೇ ಅವನ ಹಠ ಮತ್ತು ಧ್ಯೇಯವಾಗಿತ್ತು. ಆ ಕಾರಣಕ್ಕಾಗಿ ಅವನು ಪ್ರತಿನಿತ್ಯವೂ ತನ್ನ ಆರಾಧ್ಯ ದೈವ ಮೂರ್ತಿಯಾಗಿದ್ದ ಶಿವಲಿಂಗವೊಂದನ್ನು ಪುಷ್ಪಗಳಿಗೆ ಬದಲಾಗಿ ಮೂರು ಕಲ್ಲುಗಳಿಂದ ಪೂಜಿಸುತ್ತಿದ್ದನು. ಮತ್ತು ಆ ರೀತಿಯಾಗಿ ಮೂರು ಪ್ರಹರಗಳಲ್ಲಿ ಪೂಜಿಸುತ್ತಿದ್ದನು. ಆ ಮೂರು ಕಲ್ಲುಗಳು ಮೇಲೆ ತಿಳಿಸಿದ ಮೂರು ಅನ್ಯ ಧರ್ಮಗಳ ಪ್ರತೀಕಗಳೆಂದು ನಂಬಿದ್ದನು. ಅಲ್ಲದೇ ಆ ರೀತಿಯಲ್ಲಿ ಪ್ರತಿದಿನವೂ ತನ್ನ ಆರಾಧ್ಯ ಶಿವಲಿಂಗವನ್ನು ಪೂಜಿಸದೆ ಆಹಾರವನ್ನು ಸೇವಿಸುವುದಿಲ್ಲವೆಂದೂ ಶಪಥ ಮಾಡಿದ್ದನು. ಆ ನಿಯಮಗಳು ಕೆಲವು ಕಾಲ ಯಾವ ಅಡ್ಡಿ ಆತಂಕಗಳಿಲ್ಲದೇ ಜರುಗಿದವು. ಆದರೆ ಒಂದು ದಿನ, ಆತನ ಆರಾಧ್ಯ ದೈವದ ಶಿವಾಲಯಕ್ಕೆ ಹೋಗುವ ದಾರಿಗೆ ಅಡ್ಡವಾಗಿ ಹರಿಯುತ್ತಿದ್ದ ನದಿಯು ಆ ದಿನ ಪ್ರವಾಹದಿಂದಾಗಿ ತುಂಬಿ ಹರಿಯುತ್ತಿದ್ದು ಅವನಿಗೆ ದಾಟಿ ಹೋಗುವುದಕ್ಕಾಗಲಿಲ್ಲ. ಮತ್ತು ಆ ದಿನ

ಪೂಜಿಸಲಾಗಲಿಲ್ಲ. ಸತತವಾಗಿ ಮೂರು ದಿನಗಳವರೆಗೆ ನದಿಯಲ್ಲಿನ ನೀರಿನ ಪ್ರವಾಹವು ಕಡಿಮೆಯಾಗಲಿಲ್ಲ. ಹಾಗಾಗಿ ಆವನು ಆ ಮೂರು ದಿನಗಳವರೆಗೂ ತನ್ನ ದೈವವನ್ನು ಪೂಜಿಸಲಾಗಲಿಲ್ಲ. ಮತ್ತು ತನ್ನ ಪ್ರತಿಜ್ಞೆಗನುಗುಣವಾಗಿ ಆ ಮೂರು ದಿನಗಳಲ್ಲಿ ಆಹಾರವನ್ನು ಸೇವಿಸಲೇ ಇಲ್ಲ. ಮೂರು ದಿನಗಳು ಕಳೆದ ನಂತರ ಪ್ರವಾಹವು ಕಡಿಮೆಯಾಯಿತು. ಆಗ, ಆ ನಾಲ್ಕನೆಯ ದಿನ ಸಾಂಖ್ಯ ತೊಂಡನು ತನ್ನ ಆರಾಧ್ಯ ದೈವದ ಮಂದಿರಕ್ಕೆ ಹೋಗಿ ತಲುಪಿದನು. ತಾನು ಹಿಂದಿನ ಮೂರು ದಿನಗಳಲ್ಲಿ ಪೂಜೆ ಮಾಡಲು ಅನುಕೂಲವಾಗದಿದ್ದುದಕ್ಕಾಗಿ ವ್ಯಥೆಪಟ್ಟನು. ತಾನು ದಿನವೂ ಮೂರು ಹೊತ್ತು ಅರ್ಪಿಸಬೇಕಾಗಿದ್ದ ಕಲ್ಲುಗಳನ್ನು ಎಣಿಕೆ ಮಾಡಿ (3x3x3 = 27), ಮೊತ್ತದಲ್ಲಿ 27 ಕಲ್ಲುಗಳ ಅರ್ಪಣೆಯು ತಪ್ಪಿಹೋಯಿತೆಂದು ತಿಳಿದು, ಆ ಅಡಚಣೆಗೂ ಆ ಶಿವನೇ ಹೊಣೆಯೆಂದು ಭಾವಿಸಿ ಕೋಪಗೊಂಡನು. ಆ ಕಾರಣಕ್ಕಾಗಿ, ಹಾಗೆ ತಪ್ಪಿಹೋಗಿದ್ದ 27 ಕಲ್ಲುಗಳ ಬದಲಾಗಿ ಒಂದೇ ಒಂದು ದೊಡ್ಡ ಕಲ್ಲೇ ಸಾಕೆಂದು ತಿಳಿದು ಒಂದು ಬಹು ದೊಡ್ಡದಾದ ಕಲ್ಲನ್ನು ಎತ್ತಿಕೊಂಡು ಶಿವಲಿಂಗಕ್ಕೆ ಹೊಡೆಯಬೇಕೆನ್ನುವಷ್ಟರಲ್ಲಿ, ಶಿವನು ಲಿಂಗದೊಳಗಿನಿಂದ ಪ್ರತ್ಯಕ್ಷನಾಗಿ ಹೊರ ಬಂದು, ಭಕ್ತನ ಕೈಗಳನ್ನು ಹಿಡಿದು ನಿಲ್ಲಿಸಿದನು. ಮತ್ತು ಆ ಸಾಂಖ್ಯ ತೊಂಡನ ಸರಳ ಹಾಗೂ ನಿಷ್ಠೆಯಿಂದ ಕೂಡಿದ ನಿರ್ಮಲ ಭಕ್ತಿಗೆ ಮೆಚ್ಚಿ ಆ ಕಲ್ಲನ್ನೇ ಪುಷ್ಪವನ್ನಾಗಿ ಪರಿವರ್ತಿಸಿ ಅರ್ಪಿಸಿಕೊಂಡನು. ಮತ್ತು ಸಾಂಖ್ಯ ತೊಂಡನನ್ನು ಕೈಲಾಸಕ್ಕೆ ಕರೆದೊಯ್ದನು.

ಮೇಲಿನ ಶಿವಶರಣನ ಕಥೆಗೆ ಸಂಬಂಧಿಸಿರುವ ಶಿಲ್ಪ ಮೂರ್ತಿಯು ಒಂದು ದೃಶ್ಯವನ್ನು ಮಾತ್ರ ಬಿಂಬಿಸುತ್ತದೆ. ಅಲ್ಲಿ ಒಂದು ಪೀಠದ ಮೇಲೆ ಶಿವಲಿಂಗವಿದೆ; ಆ ಲಿಂಗ (ಬಾಣ)ದ ಶಿರೋಭಾಗದ ಮೇಲೆ ಮೂರು ದುಂಡನೆ ಕಲ್ಲುಗಳು (ಬಹುಶಃ ಹಿಂದಿನ ದಿನಗಳಲ್ಲಿ ಇರಿಸಿದ್ದ ಕಲ್ಲುಗಳು) ಕಾಣುವಂತೆ ಕಡೆಯಲಾಗಿದೆ. ಆ ಶಿವಲಿಂಗದ ಎದುರಿನಲ್ಲಿ ಭಕ್ತ ಸಾಂಖ್ಯ ತೊಂಡನು ನಿಂತುಕೊಂಡಿದ್ದು, ತನ್ನ ಎರಡೂ ಕೈಗಳಲ್ಲಿ ಬಹು ಭಾರವಾಗಿರುವ ಒಂದು ದೊಡ್ಡ ಕಲ್ಲನ್ನು, ತನ್ನ ತಲೆಯ ಮೇಲ್ಗಡೆ ಎತ್ತಿ ಹಿಡಿದುಕೊಂಡಿದ್ದಾನೆ. ಮತ್ತು ಆ ಶಿವಲಿಂಗದ ಮೇಲೆ ಎಸೆಯಲು ಸಿದ್ಧನಾಗಿ ನಿಂತಿರುವಂತೆ ಶಿಲ್ಪಿಯು ಕಡೆದು ತೋರಿಸಿದ್ದಾನೆ. ಅಷ್ಟು ಮಾತ್ರ ಮೇಲಿನ ಕಥೆಗೆ ಸಂಬಂಧಿಸಿದ ಶಿಲ್ಪ ದೃಶ್ಯವು ಇದಾಗಿದೆ.

ಈ ಶಿಲ್ಪದಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಬಹು ಮುಖ್ಯ ವಿಷಯವನ್ನು ಗಮನಿಸಬಹುದಾಗಿದೆ. ಇಲ್ಲಿ ಸಾಂಖ್ಯ ತೊಂಡನು ವೀರಶೈವರು ಇಷ್ಟ ಲಿಂಗವನ್ನು ಧರಿಸುವ ಪದ್ಧತಿಯ ಪ್ರಕಾರ ಲಿಂಗಧಾರಿಯಾಗಿದ್ದಾನೆಂದು ಹೇಳಬಹುದು. ಆತನ ಇಷ್ಟ ಲಿಂಗವು ಲಿಂಗ ವಸ್ತ್ರದಲ್ಲಿ ಸುತ್ತಿರುವಂತೆ ಮತ್ತು ಕೊರಳಿನಿಂದ ನೇತಾಡುವಂತಿದ್ದು, ಹೃದಯದ ಸ್ಥಾನದ ಮೇಲೆ ಎದ್ದು ಕಾಣುವ ಹಾಗೆ ಸ್ಫುಟವಾಗಿ ರೂಪಿಸಲಾಗಿದೆ.

2. ಕೋಳೂರು ಕೊಡಗೂಸು ಚನ್ನಕ್ಕ (ಚಿತ್ರಗಳು 2 ಮತ್ತು 3)

ಕೋಳೂರು ಕೊಡಗೂಸು ಚನ್ನಕ್ಕನ ಕಥೆ ಬಹು ಜನಜನಿತವಾದುದಾಗಿದೆಯಲ್ಲವೆ? ಆ ಕಥೆಯನ್ನು ಕೇಳದವರೇ ಇಲ್ಲವೆಂದೂ ಹೇಳಬಹುದು. ಆದರೂ ಸಂಕ್ಷಿಪ್ತವಾಗಿ ಆ ಕಥೆಯ ವಿವರಗಳನ್ನು ಶಿಲ್ಪ ಮೂರ್ತಿಗಳಲ್ಲೂ ತಿಳಿಯಪಡಿಸುವ ಕಾರಣಕ್ಕಾಗಿ ಹೇಳಬೇಕಾಗಿದೆ. ಆ ಕಥೆಯ ಪ್ರಕಾರ ಕೋಳೂರು ಎಂಬ ಸ್ಥಳದಲ್ಲಿ ಶಿವದೇವನೆಂಬ ನಿಷ್ಠಾವಂತ ಶಿವಭಕ್ತನಿದ್ದನು. ಅವನಿಗೆ ಚನ್ನಕ್ಕನೆಂಬ ಏಳು ವರ್ಷ ವಯಸ್ಸಿನ ಒಬ್ಬಳೇ ಮಗಳಿದ್ದಳು. ಕೊಡಗೂಸು ಎಂದರೆ ಅವಿವಾಹಿತಳಾದ ಚಿಕ್ಕ ವಯಸ್ಸಿನ ಹೆಣ್ಣು ಮಗು ಎಂಬ ವಾಡಿಕೆ. ಆ ಹುಡುಗಿಯ ತಂದೆಗೆ ದಿನ ನಿತ್ಯದ ಕಾಯಕವೆಂದರೆ ಅದೇ ಊರಿನ ಕಲ್ಲಿನಾಥ ದೇವಾಲಯದಲ್ಲಿದ್ದ ಶಿವಲಿಂಗವನ್ನು ಪೂಜಿಸುವುದು, ಮತ್ತು ಕಪಿಲ ಗೋವಿನ ಹಾಲನ್ನು ತಪ್ಪದೇ ನೈವೇದ್ಯ ಮಾಡುವುದಾಗಿತ್ತು. ಒಂದು ದಿನ ಆ ಹುಡುಗಿಯ ತಂದೆ ತಾಯಿಗಳಿಬ್ಬರೂ ಪಕ್ಕದ ಊರಿಗೆ ಒಂದು ದೇವ ಕಾರ್ಯ ನಿಮಿತ್ತ ಹೋಗಲೇಬೇಕಾಗಿ ಬಂದಿತು. ಆದುದರಿಂದ ತನ್ನ ನಿತ್ಯದ ಕಾಯಕಗಳ ನಿರ್ವಹಣೆಯನ್ನು ಆ ಚನ್ನಕ್ಕನಿಗೆ ವಹಿಸಿಕೊಟ್ಟು ಪ್ರಯಾಣ ಹೊರಟನು. ಹಾಗೆ ಹೊರಡುವುದಕ್ಕೆ ಮೊದಲು ಆ ಚನ್ನಕ್ಕನು ಪಾಲಿಸಬೇಕಾಗಿದ್ದ ನಿಯಮಗಳನ್ನೆಲ್ಲಾ ವಿವರಿಸಿದ ನಂತರ ಕಲ್ಲಿನಾಥ ಶಿವಲಿಂಗಕ್ಕೆ ಪೂಜೆ ಮತ್ತು ಒಂದು ಬಟ್ಟಲು ಹಾಲನ್ನುಣಿಸುವುದನ್ನು ಮರೆಯದೇ ಪಾಲಿಸಬೇಕೆಂದು ತಿಳಿಸಿದನು. ಆ ಹುಡುಗಿಯು ತನಗೆ ದೊರೆತ, ದೊಡ್ಡವರು ನಿರ್ವಹಿಸುವಂತಹ ಅವಕಾಶಕ್ಕಾಗಿ ಬಹಳ ಸಂತಸಗೊಂಡಳು. ಅನಂತರ ಮಿಂದು, ಮಡಿ ಬಟ್ಟೆಗಳನ್ನು ತೊಟ್ಟು, ಭಸಿತವನ್ನು ಧರಿಸಿಕೊಂಡು, ಪೂಜಾ ಸಾಮಾಗ್ರಿಗಳು ಮತ್ತು ಹಾಲಿನ ಬಟ್ಟಲಿನೊಂದಿಗೆ ದೇವಾಲಯಕ್ಕೆ ಹೋದಳು. ದೇವಾಲಯದಲ್ಲಿ ಇತರ ಕಾರ್ಯಗಳು ಮುಗಿದ ನಂತರ ಕಾಯಿಸಿ ಆರಿಸಲಾಗಿದ್ದ ಹಿತವಾದ ಹಾಲಿನ ಬಟ್ಟಲನ್ನು ಕಲ್ಲಿನಾಥ ಶಿವನ ಮುಂದಿರಿಸಿದಳು. ಆ ಮುಗ್ಧ ಹುಡುಗಿಯ ನಂಬಿಕೆಯು, ಆ ಶಿವಲಿಂಗವು ಮಾನವನೋಪಾದಿಯಲ್ಲಿ ಹಾಲನ್ನು ಕುಡಿಯುತ್ತದೆ ಎಂಬುದಾಗಿತ್ತು. ಆದರೆ ಹಾಗೆ ಜರುಗಲಿಲ್ಲ. ಅದನ್ನು ಕಂಡು ಬಹು ದುಃಖಿತಳಾಗಿ, ಕಲ್ಲಿನಾಥನನ್ನು ಹಾಲು ಕುಡಿಯುವಂತೆ ವಿಧ ವಿಧವಾಗಿ ಬೇಡಿಕೊಂಡಳು. ಕಲ್ಲಿನಾಥನಿಂದ ಏನು ಪ್ರತಿಕ್ರಿಯೆ ಕಾಣಬರದಿರಲು, ನಿರಾಶಳಾಗಿ ತನ್ನ ತಲೆಯನ್ನೇ ಕಲ್ಲಿನಿಂದಾದ ಶಿವಲಿಂಗಕ್ಕೆ ಚಚ್ಚಲು ತೊಡಗಿದಳು. ಆ ಸಮಯಕ್ಕೆ ಅವಳ ಮುಗ್ಧ ಮತ್ತು ನಿಷ್ಠಾವಂತ ಭಕ್ತಿಗೆ ಸುಪ್ರೀತನಾದ ಶಿವನು, ಆ ಲಿಂಗದಿಂದ ನಿಜರೂಪದಲ್ಲಿ ಹೊರಗೆ ಬಂದು ಹಾಲನ್ನು ಸೇವಿಸಿ ಅವಳನ್ನು ಮನೆಗೆ ಕಳುಹಿಸಿಕೊಟ್ಟನು.

ಅವಳು ಮನೆಗೆ ಸಂತೋಷದಿಂದ ಹಿಂದಿರುಗುವ ಸಮಯಕ್ಕೆ ಸರಿಯಾಗಿ ಆ ಹುಡುಗಿಯ ತಂದೆ ತಾಯಂದಿರು ಪ್ರವಾಸದಿಂದ ಹಿಂದಿರುಗುವವರಾಗಿದ್ದರು. ಆ ಹುಡುಗಿಯ ಕೈಯ್ಯಲ್ಲಿ ಬರಿಯ ಬಟ್ಟಲು ಇರುವುದನ್ನು ಅವಳ ತಂದೆಯು ನೋಡಿ ಆಶ್ಚರ್ಯಗೊಂಡು ಹಾಲು



1. ಸಾಂಖ್ಯ ತೊಂಡ

ಏನಾಯಿತೆಂದು ಪ್ರಶ್ನಿಸಿದನು. ಅದಕ್ಕೆ ಅವಳು ನಡೆದ ಸಂಗತಿಯನ್ನು ತಿಳಿಸಿದಳು. ಅವಳು ಹೇಳಿದುದನ್ನು ಅವಳ ತಂದೆ ನಂಬಲಿಲ್ಲವಲ್ಲದೇ ಸುಳ್ಳನ್ನು ಹೇಳುತ್ತಿದ್ದಾಳೆಂದು ಕೋಪಗೊಂಡನು. ಶಿವನು ಭಕ್ತರ (ಜಂಗಮರ) ಮೂಲಕ ಅರ್ಪಿಸಿದ ಆಹಾರ ವಸ್ತುಗಳನ್ನು ಸೇವಿಸುತ್ತಾನಲ್ಲದೇ, ಶಿಲಾವಿಗ್ರಹಗಳ ಮೂಲಕವಲ್ಲವೆಂಬುದು ಆ ಶಿವದೇವನ ನಂಬಿಕೆಯಾಗಿತ್ತು. ಆ ಕಾರಣದಿಂದಾಗಿ ಚನ್ನಕ್ಕನು ಹೇಳಿದುದೆಲ್ಲವೂ ಅಸತ್ಯವೆಂದನು. ಆದರೆ ಆ ಹುಡುಗಿಯು ಅದನ್ನೊಪ್ಪಲಿಲ್ಲ. ಹಾಗಾಗಿ, ಪುನಃ ಕಲ್ಲಿನಾಥ ದೇವಾಲಯಕ್ಕೆ ಹಾಲನ್ನು ತೆಗೆದುಕೊಂಡು ಹೋಗಿ ಶಿವಲಿಂಗಕ್ಕೆ ಅರ್ಪಿಸಿ ಪರೀಕ್ಷಿಸುವುದೆಂದು ಕೊನೆಯಲ್ಲಿ ನಿರ್ಧರಿಸಿದರು. ಆ ಪ್ರಕಾರ ಶಿವದೇವನು ತನ್ನ ಮಗಳ ಕೈಯ್ಯಲ್ಲಿ ಒಂದು ಬಟ್ಟಲು ಹಾಲನ್ನು ಕೊಟ್ಟು, ಅವಳನ್ನು ಮುಂದೆ ಕಳುಹಿಸಿ ತಾನು ಹಿಂದಿನಿಂದ ಅವಳಿಗೆ ತಿಳಿಯದಂತೆ ಹಿಂಬಾಲಿಸಿದನು. ಆ ಮುಗ್ಧ ಹುಡುಗಿಯು ಹಾಲಿನ ಬಟ್ಟಲಿನ ಸಮೇತ ದೇವಾಲಯದೊಳಗೆ ಹೋಗಿ ಆ ಬಟ್ಟಲನ್ನು ಶಿವಲಿಂಗದ ಮುಂದಿರಿಸಿ ಹಾಲನ್ನು ಮುಂಚಿನಂತೆ ಸ್ವೀಕರಿಸಬೇಕೆಂದು ವಿಧ ವಿಧವಾಗಿ ಬೇಡಿಕೊಂಡಳು. ಶಿವನು ಆ ಬಾಲಕಿಯ ನಿಜ ಭಕ್ತಿಯನ್ನು ಪ್ರಕಟ ಮಾಡಬೇಕೆಂದಿದ್ದನು. ಆ ಹಾಲು ಹಾಗೆಯೇ ಉಳಿಯಿತು. ಆಗ ಮರೆಯಲ್ಲಿ ನಿಂತುಕೊಂಡು ಎಲ್ಲವನ್ನು ವೀಕ್ಷಿಸುತ್ತಿದ್ದ ಆ ಹುಡುಗಿಯ ತಂದೆಯು ಹೊರ ಬಂದು, ಕೋಪಾವೇಶದಿಂದ ಶಿವನ ಹೆಸರಿನಲ್ಲಿ ಅಪಚಾರವೆಸಗಿದ ತನ್ನ ಮಗಳ ರುಂಡವನ್ನೇ ಕತ್ತರಿಸಿ ಹಾಕುವುದಾಗಿ ಪ್ರತಿಜ್ಞೆ ಮಾಡಿ ಅವಳನ್ನು ಕೊಲ್ಲಲು ಸಿದ್ಧನಾದನು. ಆ ಕ್ಷಣದಲ್ಲಿ, ಶಿವನು ನಿಜರೂಪದಲ್ಲಿ ಲಿಂಗದಿಂದ ಹೊರಬಂದು, ಹಾಲನ್ನು ಕುಡಿದು ಕೊಡಗೂಸನ್ನು ತನ್ನ ಕುಕ್ಷಿಯೊಳಗೆ ಮಡಗಿಕೊಂಡು ಕೈಲಾಸಕ್ಕೆ ಹೋದನು. ಆ ಹುಡುಗಿಯ ತಂದೆಯು, ಆಶ್ಚರ್ಯ, ಸಂತೋಷ, ಭಕ್ತಿ ಮತ್ತು ಮೆಚ್ಚುಗೆಯಿಂದ ಎಲ್ಲವನ್ನು ನೋಡುತ್ತಾ ನಿಂತಿದ್ದನು.

ಈಗ ಮೇಲಿನ ಕಥೆಯನ್ನು ನಿರೂಪಿಸುವ ಶಿಲ್ಪ ಕೃತಿಗಳನ್ನು ತಿಳಿಯೋಣ. ಶಿಲ್ಪಿಯು ಆ ಕಥೆಗೆ ಸಂಬಂಧಿಸಿದ, ಮುಖ್ಯವಾದ ಎರಡು ದೃಶ್ಯಗಳನ್ನು ಮಾತ್ರ ತೋರಿಸಿರುತ್ತಾನೆ. ಅವು ಕಥೆಯ ಕ್ರಮಾಗತಿಯನ್ನು ಸೂಚಿಸುವಂತಿವೆ. ಮೊದಲನೆಯ ನಿರೂಪಣೆಯಲ್ಲಿ ಆ ಕೊಡಗೂಸು ಚನ್ನಕ್ಕನು ಕಲ್ಲಿನಾಥ ಶಿವಲಿಂಗದ ಎದುರಿಗೆ ಎಡಗೈಯಲ್ಲಿ ಒಂದು ಬಟ್ಟಲನ್ನು (ಹಾಲನ್ನು) ಹಿಡಿದುಕೊಂಡು ಶಿವಲಿಂಗಕ್ಕೆ ಅರ್ಪಿಸುವಂತೆ ನಿಂತಿದ್ದಾಳೆ. ಎರಡನೆಯ ದೃಶ್ಯವು ಕಥೆಯ ಕೊನೆಯಲ್ಲಿ ನಡೆದ ಘಟನೆಯನ್ನು ನಿರೂಪಿಸುತ್ತದೆ. ಈ ದೃಶ್ಯದಲ್ಲಿ, ಪುನಃ ಕೊಡಗೂಸು ಚನ್ನಕ್ಕನು ಎಡಗೈಯ್ಯಲ್ಲಿ ಬಟ್ಟಲನ್ನು (ಹಾಲನ್ನು) ಹಿಡಿದುಕೊಂಡು ಶಿವಲಿಂಗಕ್ಕೆ ಅರ್ಪಿಸುತ್ತಿರುವಂತೆ ನಿಂತಿದ್ದಾಳೆ. ಅವಳ ತಂದೆಯನ್ನು ಈ ಚಿತ್ರದಲ್ಲಿ ಕಾಣಿಸಲಾಗಿಲ್ಲ. ಅದೇ ಕ್ಷಣದಲ್ಲಿ ಶಿವನು ಶಿವಲಿಂಗದಿಂದ ಹೊರ ಬಂದು ಆ (ಹಾಲಿನ) ಬಟ್ಟಲಿಗಾಗಿ ಕೈಚಾಚಿದ್ದಾನೆ. ಇಲ್ಲಿ ಶಿವನು ಚತುರ್ಭುಜನಾಗಿದ್ದು ಹಿಂದಿನ ಕೈಗಳಲ್ಲಿ ತ್ರಿಶೂಲ ಮತ್ತು ಡಮರು ಧಾರಿಯಾದ್ದಾನೆ. ಮುಂದಿನ ಬಲ ಹಸ್ತವು ಹಾಲಿನ ಬಟ್ಟಲಿನ ಕಡೆಗೆ ಚಾಚಿದ್ದು ವರದ ಮುದ್ರೆಯಲ್ಲಿರುವಂತೆ ಕಡೆಯಲಾಗಿದೆ.

ಈ ಶಿಲ್ಪಗಳಲ್ಲಿ ಕಾಣಬರುವ ಲಕ್ಷಣಗಳು, ಉಡುಗೆ, ತೊಡಿಗೆ, ಕೇಶ ವಿನ್ಯಾಸ ಮುಂತಾದವುಗಳೆಲ್ಲವೂ ವಿಜಯನಗರದ ಸಮಕಾಲೀನದವುಗಳೆಂದು ಗುರುತಿಸುವಷ್ಟು ವೈಶಿಷ್ಟ್ಯಪೂರ್ಣವಾಗಿವೆ. ಕೊಡಗೂಸು ಚನ್ನಕ್ಕನನ್ನು ಏಳು ವರ್ಷಗಳಿಗಿಂತಲೂ ಹಿರಿಯವಳೆಂಬಂತೆ ಶಿಲ್ಪಿಯು ತೋರಿಸಿದ್ದಾನೆ.

3. ತಿರುವಣ್ಣೆಯ ಮೀನುಗಾರ ಅತಿ ಭಕ್ತ (ಚಿತ್ರ 4)

ಚೋಳ ದೇಶದಲ್ಲಿ ತಿರುವಣ್ಣೆಯೆಂಬ ಒಂದು ಗ್ರಾಮ (ಅಥವಾ ಕಾವೇರಿ ತೀರದಲ್ಲಿ ಸಾಗರವೆಂಬ ಪುರ). ಅಲ್ಲಿ ಅತಿ ಭಕ್ತನೆಂಬ ಹೆಸರಿನ ಶಿವಭಕ್ತನಿದ್ದನು. ಅವನು ವೃತ್ತಿಯಿಂದ ಮೀನುಗಾರನಾಗಿದ್ದನು. ಆದರೂ ಅವನೊಬ್ಬ ನಿಷ್ಠಾವಂತ ಶಿವಭಕ್ತನಾಗಿದ್ದು, ಹಲವೊಂದು ನಿಯಮಾವಳಿಗಳನ್ನು ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ತಪ್ಪದೇ ಪಾಲಿಸುತ್ತಿದ್ದನು. ತನ್ನ ವೃತ್ತಿ ಕಾಯಕಕ್ಕನುಗುಣವಾಗಿ ಅವನು ನಿತ್ಯವೂ ಹತ್ತಿರದ ಹೊಳೆಗೆ ಹೋಗಿ ಅಲ್ಲಿ ಬಲೆಯನ್ನು ಬೀಸಿ ಮೀನುಗಳನ್ನು ಹಿಡಿಯುತ್ತಿದ್ದನು. ಹಾಗೆ ಮೀನುಗಳನ್ನು ಹಿಡಿಯುವ ಕಾರ್ಯದಲ್ಲಿ, ಮೊಟ್ಟ ಮೊದಲಿಗೆ ಸಿಕ್ಕ ಮೀನುಗಳನ್ನು, ತನ್ನ ಆರಾಧ್ಯ ದೈವವಾದ ಶಿವನಿಗೆ ಅರ್ಪಿತವೆಂದು ಹೇಳಿ, ಅವುಗಳನ್ನು ಪುನಃ ನೀರಿಗೆ ಬಿಟ್ಟು ಬಿಡುತ್ತಿದ್ದನು. ತದನಂತರ ಸಿಕ್ಕ ಮೀನುಗಳನ್ನು ಮಾರಿ ಬಂದ ಹಣದಿಂದ ವೀರಶೈವ ಜಂಗಮ ಲಿಂಗಕ್ಕೆ ಉಣಬಡಿಸಿ, ಅನಂತರ ತನಗೆ ಮತ್ತು ತನ್ನ ಹೆಂಡತಿ ಮಕ್ಕಳಿಗೆ ಉಪಯೋಗಿಸಿಕೊಳ್ಳುತ್ತಿದ್ದನು. ಮಾರನೆಯ ದಿನಕ್ಕಾಗಿ ಏನನ್ನು ಉಳಿಸಿಕೊಳ್ಳುತ್ತಿರಲಿಲ್ಲ. ಅವು, ಅವನು ನಿತ್ಯವು ಪಾಲಿಸುತ್ತಿದ್ದ ನೇಮಗಳಾಗಿದ್ದವು. ಹಾಗೆಯೇ ಕೆಲವು ದಿನಗಳು ಸಂದವು.

ಒಂದು ದಿನ, ಅವನ ಆರಾಧ್ಯ ದೈವವು ಅವನನ್ನು ಪರೀಕ್ಷೆಗೊಳಪಡಿಸಬೇಕೆಂದು ಒಂದು ಹಂಚಿಕೆಯನ್ನು ಮಾಡಿಕೊಂಡಿತು. ಅದರ ಪ್ರಕಾರ ಮಾರನೆಯ ದಿನ ಅತಿ ಭಕ್ತನು ಹೊಳೆಗೆ ಹೋಗಿ ಯಥಾ ಪ್ರಕಾರ ಮೀನುಗಳನ್ನು ಹಿಡಿಯಲೋಸುಗ ಬಲೆಯನ್ನು ಬೀಸಿದಾಗ, ಒಂದು ಮೀನು ಸಹ ಅದರೊಳಕ್ಕೆ ಬೀಳಲಿಲ್ಲ. ಆ ದಿನವೆಲ್ಲವೂ ಮತ್ತೆ ಮತ್ತೆ ಪ್ರಯತ್ನಿಸಿದರೂ ಅವನಿಗೆ ಒಂದು ಮೀನೂ ಸಿಗಲಿಲ್ಲ. ಅದೇ ರೀತಿ ಮೀನುಗಳು ಸಿಗದೇ ಇರುವುದು ನಿರಂತರವಾಗಿ ಮೂರು ದಿನಗಳವರೆಗೆ ಪುನರಾವೃತ್ತಿಯಾಯಿತು. ಹಾಗಾಗಿ ಅವನು ಮತ್ತು ಅವನ ಸಂಸಾರ ಆ ದಿನಗಳಲ್ಲಿ ಉಪವಾಸ ಇರಬೇಕಾಯಿತು. ಆದರೂ, ಅವನಿಗೆ ಹೆಚ್ಚಾದ ಚಿಂತೆಯಾದುದು ತಾನು ನಿತ್ಯವೂ ಉಣಬಡಿಸುತ್ತಿದ್ದ ಶಿವಭಕ್ತರಿಗೆ (ಜಂಗಮ ಲಿಂಗಕ್ಕೆ) ತನ್ನ ಕಾಯಕವನ್ನು ಸಲ್ಲಿಸಲಾಗದಿದ್ದುದಕ್ಕೆ ಮತ್ತು ತಾನು ನಿಷ್ಠೆಯಿಂದ ಆಚರಿಸುತ್ತಿದ್ದ ನಿಯಮವು ನಿಂತು ಹೋದುದಕ್ಕಾಗಿ.



2. ಕೋಳೂರು ಕೊಡಗೂಸು



3. ಕೋಳೂರು ಕೊಡಗೂಸು

ಆದರೂ, ಅವನು ನಿರಾಶನಾಗದೆ ಮಾರನೆಯ ದಿನ ಹೊಳೆಯ ಇನ್ನೊಂದು ಭಾಗಕ್ಕೆ ಹೋಗಿ ಮೀನುಗಳನ್ನು ಹಿಡಿದೇ ತೀರುವ ದೃಢ ನಿರ್ಧಾರದಿಂದ ಬಲೆಯನ್ನು ಹರಡಿದನು. ಈ ಬಾರಿ ಅವನಿಗೆ ಬಹುವಾದ ಆಶ್ಚರಿಯನ್ನುಂಟು ಮಾಡುವಂತಹ ಘಟನೆ ನಡೆಯಿತು. ಅವನು ಬೀಸಿದ ಬಲೆಯಲ್ಲಿ ಒಂದೇ ಒಂದು ಹೊಂಬಣ್ಣದ ಮೀನು ಸಿಕ್ಕಿ ಬಿದ್ದಿತು. ಸುಂದರ ಮೀನು ಸಿಕ್ಕಿಬಿದ್ದಾಗಲೂ ಅದಕ್ಕೆ ಆಶೆ ಪಡದೇ ಮತ್ತು ತನ್ನ ನಿಯಮಕ್ಕನುಗುಣವಾಗಿ, ಆ ಮೀನನ್ನು ಶಿವನಿಗೆ ಅರ್ಪಿಸುತ್ತಾ ಪುನಃ ನೀರಿಗೆ ಎಸೆದನು. ಅದೇ ರೀತಿ ಅವನು ನಿರಾಶನಾಗದೇ ಹೊಳೆಯ ಬೇರೆ ಬೇರೆ ಭಾಗಗಳಲ್ಲಿ ಪ್ರಯತ್ನಿಸಿದಾಗಲೂ ಅದೇ ಮೀನು ಬಲೆಯಲ್ಲಿ ಸಿಗುತ್ತಿತ್ತು. ಅದು ಮೊದಲನೆಯ ಬಾರಿಗೆ ಶಿವನಿಗೆ ಅರ್ಪಿತವಾದುದರಿಂದ ಅದನ್ನು ತೆಗೆದುಕೊಳ್ಳದೆ ನೀರಿಗೆ ಬಿಡುತ್ತಿದ್ದನು. ಹಾಗೆಯೇ ಆ ದಿನದ ಸೂರ್ಯಾಸ್ತದವರೆಗೂ ಅನೇಕ ಬಾರಿ ಪ್ರಯತ್ನಿಸಿದಾಗಲೂ ಅದೇ ಹಿಂದಿನ ಘಟನೆ ಪುನರಾವೃತ್ತಿಯಾಗುತ್ತಿತ್ತು. ಹಾಗಾಗಿ ಅವನಿಗೆ ಬಹುವಾದ ನಿರಾಶೆಯೊಂದಿಗೆ ಚಿಂತೆಯೂ ಮತ್ತು ಆಶ್ಚರ್ಯವೂ ಏಕಕಾಲದಲ್ಲಿ ಉಂಟಾಯಿತು. ಆ ದಿನವೂ ಉಪವಾಸ ಇರಬೇಕಾಯಿತಲ್ಲದೇ, ಶಿವಭಕ್ತರಿಗೂ ಉಣಬಡಿಸಲಾಗಲಿಲ್ಲ.

ಮಾರನೆಯ ದಿನ ಬೇರೆ ನದಿಗೆ ಹೋದನು. ಬಲೆಯನ್ನು ಹರಡುವುದಕ್ಕೆ ಮೊದಲು ಒಂದು ದೃಢವಾದ ನಿರ್ಧಾರವನ್ನು ಕೈಗೊಂಡನು. ಅದರ ಪ್ರಕಾರ ಆ ದಿನವೂ ಸಹ ಅದೇ ಮೀನು ಪುನಃ ಬಲೆಯಲ್ಲಿ ಕಂಡು ಬಂದರೆ ಆ ಬಲೆಯನ್ನು ಹಿಂದಕ್ಕೆಳೆಯದೇ, ಅಲ್ಲಿಯೇ ಇದ್ದು ಸ್ಥಳವನ್ನು ಬಿಟ್ಟು ಏಳುವುದಿಲ್ಲವೆಂದು ಪ್ರತಿಜ್ಞಾಪೂರ್ವಕವಾಗಿ ನಿರ್ಧರಿಸಿದನು. ಎಂದರೆ, ತನಗೆ ಅವಶ್ಯವಾಗಿ ಬೇಕಿದ್ದ ಮೀನುಗಳು ಆ ದಿನವೂ ಸಿಗದಿದ್ದರೆ ಆ ಸ್ಥಳದಿಂದ ಕದಲದೇ ಅಲ್ಲಿಯೇ ಅಸುನೀಗುವುದೆಂದಾಗಿತ್ತು. ಅನಂತರ ಬಲೆಯನ್ನು ನೀರಿನೊಳಗೆ ಹರಡಿದನು. ಆಗ, ಶಿವನು ಅತಿ ಭಕ್ತನ ಗಾಢವಾದ ಭಕ್ತಿ ನಿಷ್ಠೆಗಳಿಗೆ ಮೆಚ್ಚಿ ಒಲಿದವನಾಗಿ ಮತ್ತಷ್ಟು ಪರೀಕ್ಷೆ ಸರಿಯಲ್ಲವೆಂದನು. ಅದಕ್ಕನುಗುಣವಾಗಿ, ಈ ಬಾರಿ ತಾನು ಮತ್ತು ತನ್ನ ಪರಿವಾರದ ದೇವಿ, ಗಣಪತಿ, ಷಣ್ಮುಖ, ಇತರ ಶಿವಗಣಗಳು ಮುಂತಾದವರೊಡಗೂಡಿ, ಎಲ್ಲರೂ ಬಲೆಯಲ್ಲಿಯೇ ಪ್ರತ್ಯಕ್ಷರಾದರು. ಮತ್ತು ಅತಿ ಭಕ್ತನ ಮೇಲೆ ತಮಗುಂಟಾಗಿದ್ದ ಮೆಚ್ಚುಗೆ, ಸಂತೋಷಗಳನ್ನು ವ್ಯಕ್ತಪಡಿಸಿದರಲ್ಲದೇ, ಅವನಿಗೆ ಶಿವಗಣ ಪದವಿಯನ್ನಿತ್ತು ಸನ್ಮಾನಿಸಿದರು.

ಮೇಲಿನ ಕಥೆಗೆ ಸಂಬಂಧಿಸಿದ ಒಂದೇ ದೃಶ್ಯವು ಶಿಲಾಕೃತಿಯಲ್ಲಿ ಕಾಣಬರುತ್ತದೆ. ಅದರಲ್ಲಿ ಅತಿ ಭಕ್ತನನ್ನು ಒಂದು ನದಿಯ ದಡದ ಮೇಲೆ ನಿಂತಿರುವಂತೆ ತೋರಿಸಲಾಗಿದೆ. ಅವನ ಎದುರಿಗೆ ಶಿವನು ನಿಜರೂಪದಲ್ಲಿ ಚತುರ್ಭುಜನಾಗಿ ನಿಂತಿದ್ದಾನೆ. ಅತಿ ಭಕ್ತನು ಜಟಾಧರನಾಗಿದ್ದಾನೆ. ಇವರೀರ್ವರ ಮಧ್ಯದಲ್ಲಿ, ನದಿಯನ್ನು ಸಾಂಪ್ರದಾಯಿಕ ರೀತಿಯಲ್ಲಿ ತೋರಿಸಲಾಗಿದೆ. ಅತಿ ಭಕ್ತನು ಬಲಗೈಯ್ಯಲ್ಲಿ ಒಂದು ಕೋಲಿನಂಥಹ ವಸ್ತುವನ್ನು ಹಿಡಿದುಕೊಂಡು, ಅದರ ಸಹಾಯದಿಂದ ಮೀನು ಹಿಡಿಯುವ ಗಾಳವನ್ನು ನೀರಿಗೆ ಬಿಟ್ಟುಕೊಂಡು ನಿಂತಿರುವಂತೆ ಶಿಲ್ಪವನ್ನು ಕಡೆಯಲಾಗಿದೆ. ಆ ಗಾಳಕ್ಕೆ ಒಂದೇ ಒಂದು ಮೀನು (ಹೊನ್ನಿನ ವರ್ಣದ ಅದೇ ಮೀನು) ಸಿಕ್ಕಿ ಕೊಂಡಿರುವಂತೆಯೂ ಶಿಲ್ಪಿಯು ತೋರಿಸಿದ್ದಾನೆ. ಶಿವನಿಗೆ ನಾಲ್ಕು ಕೈಗಳಿದ್ದು, ಮುಂದಿನ ಬಲಗೈಯನ್ನು ಅಭಯ ಮುದ್ರೆಯಲ್ಲಿ ತೋರಿಸಿರುವುದರಿಂದ ಅದು ಕಥೆಯೊಳಗಣ ಕೊನೆಯ ದೃಶ್ಯವೆಂದು ಗುರುತಿಸಬಹುದು.

4. ಕುಂಬಾರ ಗುಂಡಯ್ಯ (ಚಿತ್ರ 5)

ಇದು ಮಣ್ಣಿನ ಮಡಿಕೆಗಳನ್ನು ಮಾಡುವ ಕಾಯಕದವನಾಗಿದ್ದ ಗುಂಡಯ್ಯನೆಂಬ ಶಿವಭಕ್ತನ ಕಥೆ. ಅವನು ಉತ್ತರ ದೇಶದಲ್ಲಿಯ ಬಾಲಿಕೆ ಎಂಬ ಗ್ರಾಮದಲ್ಲಿ ವಾಸವಾಗಿದ್ದನು. ಅವನ ಸತಿಯ ಹೆಸರು ಕೇತಲದೇವಿಯೆಂದಾಗಿತ್ತು. ಅವನು ನಿಷ್ಠಾವಂತ, ಭಾವ ಶುದ್ಧಿಯ ಶಿವಭಕ್ತನಾಗಿದ್ದನು. ಆ ಕಾರಣದಿಂದಾಗಿ, ತನ್ನ ವೃತ್ತಿಯಲ್ಲಿ ಗಳಿಸಿದ ಹಣದಿಂದಾಗಿ ಶಿವಭಕ್ತ ಜಂಗಮರಿಗೆ ನಿತ್ಯವೂ ಅನ್ನ ದಾಸೋಹ ಮಾಡುತ್ತಿದ್ದನು.

ಅವನು ತನ್ನ ವೃತ್ತಿಯಲ್ಲಿ ನಿರತನಾಗಿದ್ದಾಗಲೂ ಶಿವನಾಮವನ್ನು ಭಾವೋನ್ಮಾದದಿಂದ ಜಪಿಸುತ್ತಾ, ವೀರಶೈವ ತತ್ವಗಳಿಗನುಗುಣವಾಗಿ ಅನುಷ್ಠಾನದಲ್ಲಿ ತಲ್ಲೀನನಾಗಿರುತ್ತಿದ್ದನು. ಎಂದರೆ, ಗುಂಡಯ್ಯನು ಷಟ್ ಚಕ್ರಗಳನೆ ತಿಗುರಿಯ ಮಾಡಿ, ಜ್ಞಾನವೆಂಬ ಸೂತ್ರವ ಸುತ್ತಿ, ಸ್ವಪ್ನದ ತೋರಿಕೆಯೆಂಬ ಕೆಸರ ತಿಗುರಿಯ ಮೇಲಿಟ್ಟು, ನಿಷ್ಠೆಯೆಂಬ ಕೋಲಿನಲ್ಲಿ ತಿರುಗಿಸಿ, ಮಡಕೆಯ ಮಾಡಿ, ಮಡಕೆಯ ತಟ್ಟುವ ಧ್ವನಿ ಕರಡೆ, ಕಂಸಾಳ, ಕಹಳೆ, ಉಡುಕ್ಕಿನ ಧ್ವನಿಗಳಂತಾಗಿ, ಲಿಂಗದಲ್ಲಿ ಪರವಶವನ್ನೈದಿ, ಬಂದವರ ಹೋದವರನರಿಯದೇ ತಲೆದೂಗುತ್ತಿದ್ದನು. ಹಾಗೆ ನಿರಂತರವೂ ಶಿವನಲ್ಲೇ ತಲ್ಲೀನನಾಗಿರುತ್ತಿದ್ದ ಗುಂಡಯ್ಯನು, ಎಲ್ಲೆಲ್ಲಿಯೂ ಮತ್ತು ಯಾವಾಗಲೂ ಶಿವನನ್ನೇ ತನ್ನ ಭಾವನಾ ದೃಷ್ಟಿಯಲ್ಲಿ ಕಾಣುತ್ತಿದ್ದನು. ತನ್ನ ಹಸಿ ಮಡಕೆಗಳನ್ನು ತಟ್ಟೊತ್ತಿಗೆಯಿಂದ (dabber) ತಿದ್ದುವಾಗಲೂ ಸಹ ತನ್ನನ್ನೇ ಮರೆತು ಬಿಡುತ್ತಿದ್ದನು. ಮತ್ತು ಆಗ ಉಂಟಾಗುತ್ತಿದ್ದ ಶಬ್ದ ಧ್ವನಿಯಲ್ಲಿ ಶಿವನ ವಾದ್ಯಗಳಾದ ಡಮರುಗ ಮುಂತಾದವುಗಳಿಂದ ಹೊರಡುವ ಶಬ್ದ ತಾಳಗಳನ್ನು ಕೇಳಿ ಗುರುತಿಸುತ್ತಿದ್ದನು.

ಒಂದು ದಿನ ಶಿವನು, ಕೈಲಾಸದಲ್ಲಿ ಒಡ್ಡೋಲಗದಲ್ಲಿ ಕುಳಿತಿರುವಾಗ ಇದ್ದಕ್ಕಿದ್ದ ಹಾಗೆ ತಾಳ ಲಯಗಳನ್ನು ಕೇಳಿಸಿಕೊಂಡವನಂತೆ ತಲೆಯಾಡಿಸಲಾರಂಭಿಸಿದನು. ಅದಕ್ಕೆ ಕಾರಣ, ಆತನ ನಿಷ್ಠಾವಂತ ಭಕ್ತನಾಗಿದ್ದ ಗುಂಡಯ್ಯನು, ತಾಳಬದ್ಧವಾಗಿ ತಟ್ಟೊತ್ತಿಗೆಯಿಂದ ಹಸಿಯಾದ ಮಡಕೆಯನ್ನು ಸರಿಪಡಿಸುವ ಕಾಯಕದಲ್ಲಿ ತೊಡಗಿದ್ದಾಗ ಹೊರಡಿಸಲಾದ ಶಬ್ದ ತರಂಗಗಳು. ಅವನ್ನು ಕೇಳಿ ಸುಪ್ರೀತನಾದ ಶಿವನು, ಭೂಮಿಗೆ



4. ಅತಿಭಕ್ತ



5. ಕುಂಬಾರ ಗುಂಡಯ್ಯ

ಇಳಿದು ಬಂದು, ಗುಂಡಯ್ಯನು ಹೊರಡಿಸುತ್ತಿದ್ದ ತಾಳಲಯಗಳಿಗನುಗುಣವಾಗಿ ಅವನ ಹಿಂದೆ ನಾಟ್ಯವಾಡಲು ಆರಂಭಿಸಿದನು. ಗುಂಡಯ್ಯನು ತನ್ನ ಮುಂದೆ ಹಸಿಯಾದ ಮಡಕೆಗಳನ್ನು ಹರಡಿಕೊಂಡಿದ್ದುದರಿಂದ, ಶಿವನು ನಾಟ್ಯವಾಡಲು ಹಿಂದಿನ ಸ್ಥಳವನ್ನೇ ಆರಿಸಿಕೊಳ್ಳಬೇಕಾಯಿತು. ಗುಂಡಯ್ಯನು ತನ್ನ ಕಾಯಕದಲ್ಲಿ ಮತ್ತು ಶಿವಧ್ಯಾನದಲ್ಲಿ ಸಂಪೂರ್ಣವಾಗಿ ತಲ್ಲಿನನಾಗಿದ್ದುದರಿಂದ ಶಿವನು ತನ್ನ ಹಿಂದೆ ಇರುವುದನ್ನು ಹಾಗೂ ನಾಟ್ಯವಾಡುತ್ತಿರುವುದನ್ನು ಗಮನಿಸಲೇ ಇಲ್ಲ. ಅಥವಾ ಹಿಂದಿರುಗಿ ನೋಡಲೇ ಇಲ್ಲ. ಅಷ್ಟೊಂದು ಗಾಢವಾಗಿತ್ತು ಭಾವಪರವಶತೆ. ಕೊನೆಯಲ್ಲಿ ಶಿವನೇ ಗುಂಡಯ್ಯನ ಮುಂದಕ್ಕೆ ಬಂದು, ಮಣ್ಣಿನ ಪಾತ್ರೆಗಳು ಹಾಳಾಗದಂತೆ ಎಚ್ಚರ ವಹಿಸಿ ತೃಪ್ತಿಯಾಗುವವರೆಗೆ ನಾಟ್ಯವಾಡಿದನು. ಆಗಲೂ ಸಹ ತನ್ನ ಭಕ್ತಿ ಮತ್ತು ಕಾಯಕಗಳಿಗೆ ಭಂಗವುಂಟಾಗಬಹುದೆಂಬ ಭಯದಿಂದಾಗಿ ಗುಂಡಯ್ಯನು ಕಣ್ಣುಗಳನ್ನು ತೆರೆಯಲಿಲ್ಲ, ಶಿವನನ್ನು ನೋಡಲಿಲ್ಲ. ತನ್ನ ಕಾಯಕ ಪೂರ್ಣಗೊಂಡನಂತರವೇ ಕಣ್ಣುಗಳನ್ನು ತೆರೆದು ಮುಂದೆ ನಿಂತಿದ್ದ ತನ್ನ ಆರಾಧ್ಯ ದೈವವಾದ ಶಿವನನ್ನು ನೋಡಿ ಬಹುವಾಗಿ ಸಂತುಷ್ಟನಾಗಿ ಶಿವನಿಗೆ ಸಾಷ್ಟಾಂಗವೆರಗಿದನು. ಸುಪ್ರೀತನಾದ ಶಿವನು ಗುಂಡಯ್ಯನಿಗೆ ಪ್ರಮಥ ಪದವಿಯನ್ನಿತ್ತು ಕೈಲಾಸಕ್ಕೆ ಕರೆದುಕೊಂಡು ಹೋದನು.

ಈ ಶಿವಭಕ್ತ ಕುಂಬಾರ ಗುಂಡಯ್ಯನ ಹೆಸರನ್ನು ಕ್ರಿ.ಶ. 1280ರಲ್ಲಿ ಹೊರಡಿಸಲಾದ ಮರಡೀಪುರದ ಶೀಲಾಶಾಸನದಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು. ಅಬ್ಬಲೂರಿನ ಸೋಮೇಶ್ವರ ದೇವಾಲಯದಲ್ಲಿ ಕಾಣಬರುವ ಶಿಲ್ಪ ಚಿತ್ರದ ಕೆಳಗೆ 'ಕುಂಬಾರ ಗುಂಡನ ಮುಂದೆ ಬಂದಾಡಿದ ನಮ್ಮ ಶಿವನು' ಎಂಬ ಲಿಖಿತ ವಿವರಣಾ ಪಟ್ಟಿಯು ಕಾಣಬರುತ್ತದೆ. ಅದು ಕ್ರಿ.ಶ. 1200ರಲ್ಲಿ ಹೊರಡಿಸಲಾದ ಶಾಸನವಾಗಿದೆ.

ಬುಕ್ಕಸಾಗರದಲ್ಲಿ ಕಾಣಬರುವ ಶಿಲ್ಪವು ಮೇಲೆ ಹೇಳಿದ ಕಥೆಯನ್ನು ಪ್ರತಿನಿಧಿಸುವುದಾಗಿದ್ದು ಒಂದೇ ದೃಶ್ಯವನ್ನು ನಿರೂಪಿಸಿರುತ್ತದೆ. ಆ ದೃಶ್ಯದಲ್ಲಿ, ಕುಂಬಾರ ಗುಂಡಯ್ಯನು ನೆಲದ ಮೇಲೆ ಕುಳಿತಿದ್ದು, ಎಡಗೈಯ್ಯನ್ನು ಮಡಕೆಯೊಳಗೆ ತೂರಿಸಿ, ಬಲಗೈಯ್ಯಲ್ಲಿ ಹಿಡಿದಿರುವ ತಟ್ಟೊತ್ತಿನ ಸಹಾಯದಿಂದ ಆ ಮಡಕೆಯ ಉಬ್ಬು ತಗ್ಗುಗಳನ್ನು ಸರಿಪಡಿಸುವ ಮತ್ತು ಘಟ್ಟಿಗೊಳಿಸುವ ಕಾರ್ಯದಲ್ಲಿ ನಿರತನಾಗಿದ್ದಾನೆ. ಅವನ ಎದುರಿನಲ್ಲಿ ಶಿವನು ನಿಜ ರೂಪದಲ್ಲಿ ಆಗಲೇ ಪ್ರತ್ಯಕ್ಷನಾಗಿ ನಿಂತಿದ್ದಾನೆ.

ಮೇಲಿನ ಶಿಲ್ಪದ ವಿಶೇಷತೆಯೆಂದರೆ ಶಿವನಿಗೆ ಎರಡು ಕೈಗಳಿರುವಂತೆ ಮತ್ತು ಕಂಕಾಲಮೂರ್ತಿ ಶಿವನ ರೂಪದಲ್ಲಿ ಕಡೆಯಲಾಗಿದೆ. ಅದೇ ರೀತಿ ಗುಂಡಯ್ಯನನ್ನು ಒಬ್ಬ ಶ್ರೀಮಂತನೋಪಾದಿಯಲ್ಲಿ ವಿವಿಧ ಆಭರಣಗಳು, ಶಿರೋಭೂಷಣ ಮುಂತಾದವುಗಳೊಂದಿಗೆ ಇರುವಂತೆ ತೋರಿಸಲಾಗಿದೆ.

5. ಮಾನಕಂಜರರಾಯ ಮತ್ತು ಆತನ ಮಗಳು ಸೋಮಪ್ರಭಾದೇವಿ (ಚಿತ್ರ 6)

ಈ ಕಥೆಯಲ್ಲಿಯೂ ಯಥಾಪ್ರಕಾರವಾಗಿ, ನಿಷ್ಠೆಯಿಂದ ಕೂಡಿದ ಶಿವಭಕ್ತಿಯ ಮಹತ್ವ, ಶ್ರೇಷ್ಠತೆ ಮತ್ತು ಘನತೆಗಳನ್ನು ಕುರಿತಂತೆ ದೃಢೀಕರಿಸುವ ವಿವರಣೆಗಳನ್ನು ಗಮನಿಸಬಹುದು. ಮಾನಕಂಜರರಾಯನೆಂಬವನು ಕಂಜರಪುರದ ಒಬ್ಬ (ಸಾಮಂತ) ರಾಜನಾಗಿದ್ದನು. ಅವನ ರಾಣಿ ಗುಣವತಿ ಮತ್ತು ಅವರ ಮಗಳು ಸೋಮಪ್ರಭಾದೇವಿಯಾಗಿದ್ದರು. ಬಹು ಸುಂದರವಾದ ಸೋಮಪ್ರಭಾದೇವಿ ಶಿವನ ಅನುಗ್ರಹದಿಂದಾಗಿಯೇ ಜನಿಸಿದವಳಾಗಿದ್ದಳು. ಅವಳು ಪ್ರಾಯಕ್ಕೆ ಬಂದವಳಾದುದರಿಂದ ವಿವಾಹ ಪ್ರಯತ್ನಗಳು ನಡೆಯುತ್ತಿದ್ದವು. ಆ ಸಮಯದಲ್ಲಿ ಚೋಳದೇಶದ ಕರವೂರ ಎಂಬ ಊರಿನ ರಾಜನು ತನ್ನ ಮಗನಾದ ಪಗಲ್ಚೋಳರಾಯನೆಂಬವನಿಗೆ ಮಾನಕಂಜರರಾಯನ ಮಗಳನ್ನು ತೆಗೆದುಕೊಳ್ಳುವುದಾಗಿ ಮದುವೆಯ ಪ್ರಸ್ತಾಪವನ್ನು ಮಾಡಿದನು. ಆ ಪ್ರಸ್ತಾಪವನ್ನು ಮಾನಕಂಜರರಾಯನು ಸ್ವಾಗತಿಸಿ ಒಪ್ಪಿಗೆಯನ್ನಿತ್ತನು. ಅನಂತರ ವಿವಾಹ ಮಹೋತ್ಸವವನ್ನು ಜರುಗಿಸುವುದಕ್ಕಾಗಿ ಅವಶ್ಯವಿದ್ದ ವಿಶೇಷ ರೀತಿಯ ಏರ್ಪಾಟುಗಳನ್ನು ಮಾಡಲಾಯಿತು. ಆ ಸಂಬಂಧದಲ್ಲಿ ಆಚರಿಸಬೇಕಾಗಿದ್ದ ಆರಂಭದ ಶಾಸ್ತ್ರ ಕ್ರಮವು ಜರುಗಬೇಕೆನ್ನುವ ಸಮಯಕ್ಕೆ ಸರಿಯಾಗಿ ಶಿವನು ಜಂಗಮ ವೇಷದಲ್ಲಿ ಆ ವಿವಾಹ ಸ್ಥಳಕ್ಕೆ ಬಂದನು. ಮಾನಕಂಜರನ ಭಕ್ತಿ ನಿಷ್ಠೆಯನ್ನು ಪರೀಕ್ಷೆಗೊಳಪಡಿಸುವ ಉದ್ದೇಶದಿಂದ ಶಿವನು ಹಾಗೆ ಬಂದನು. ಆ ಅಭ್ಯಾಗತ ಜಂಗಮನನ್ನು ನೋಡಿದ ಕೂಡಲೇ, ಮಾನಕಂಜರರಾಯನು ಜಂಗಮ ಲಿಂಗಕ್ಕೆ ಸಲ್ಲಬೇಕಾದ ಭಕ್ತಿ ಮರ್ಯಾದೆಗಳಿಂದ ಆತನನ್ನು ಆಮಂತ್ರಿಸಿ ಉಪಚರಿಸಿದನು. ಅವನ ಅಭಿಷ್ಟಗಳ ಬಗ್ಗೆ ವಿಚಾರಿಸಿದನು. ಆಗ ಆ ವೇಷಧಾರಿ ಜಂಗಮನು ಒಂದು ವಿಚಿತ್ರವಾದ ಬೇಡಿಕೆಯನ್ನು ಮಾನಕಂಜರರಾಯನ ಮುಂದಿಟ್ಟನು. ಆ ವಿವಾಹ ಮಹೋತ್ಸವದ ನಿಮಿತ್ತವಾಗಿ, ವಿಧ ವಿಧವಾದ ಮುತ್ತಿನ ದಂಡೆ, ಹೂವಿನ ಹಾರಗಳು, ವಜ್ರಾಭರಣಗಳು ಮುಂತಾದವುಗಳಿಂದ ಅಲಂಕರಿಸಲ್ಪಟ್ಟಿದ್ದ ಸೋಮಪ್ರಭಾದೇವಿಯ ಹೊಂಬಣ್ಣದ ಕೇಶರಾಶಿಯ ಜಡೆಯನ್ನು ಕೂಡಲೇ ಕತ್ತರಿಸಿ ಕೊಡಬೇಕೆಂದು ಕೇಳಿದನು. ಹಾಗೆ ಕತ್ತರಿಸಿ ಕೊಡುವ ಕೇಶದಿಂದ ಗೊಂಡೆ ಕುಚ್ಚಗಳನ್ನು ಮಾಡಿಕೊಂಡು ತನ್ನ ಬಸವನ ಕೋಡುಗಳಿಗೆ, ದಂಡಕ್ಕೆ ಮತ್ತು ಪಾದುಕಾ ಹಾವುಗೆಗಳ ಗುಂಡುಗಳಿಗೆ ಅಲಂಕರಣ ಮಾಡುವುದಾಗಿ ಆತನು ತಿಳಿಸಿದನು. ಆದರೂ ನಿಷ್ಠಾವಂತನಾದ ಶಿವಭಕ್ತ ಮಾನಕಂಜರರಾಯನು ಅದನ್ನು ಕೇಳಿದ



6. ಮಾನಕಂಜರರಾಯ



7. ವೀಣೆಕಾಯಕದ ಮಾದರಸ

ನಂತರವೂ ಎಷ್ಟೂ ವಿಚಲಿತನಾಗದೆ ಮತ್ತು ಆ ಜಂಗಮನ ಬೇಡಿಕೆಯನ್ನು ಈಡೇರಿಸಿದ ಸಂದರ್ಭದಲ್ಲಿ ವಿವಾಹ ಕಾರ್ಯಗಳು ನಿಂತು ಹೋಗುವ ಸಾಧ್ಯತೆಗಳಿದ್ದಾಗಲೂ ಮಾನಕಂಜರರಾಯನು ಧೈರ್ಯಗೆಡದೆ, ಹಿಂಜರಿಯದೆ ಒಪ್ಪಿಕೊಂಡನು. ಅದಕ್ಕನುಗುಣವಾಗಿ ಕಾರ್ಯ ಪ್ರವೃತನಾಗಲು ಸಿದ್ಧನಾದನು. ತಕ್ಷಣವೇ ಒಂದು ಹರಿತವಾದ ಮಚ್ಚುಗತ್ತಿಯನ್ನು ತೆಗೆದುಕೊಂಡು ಬಂದು ಮದುವೆಯಾಗುವ ವಧುವಾಗಿ ಸರ್ವಾಲಂಕೃತಳಾಗಿ ಕುಳಿತಿದ್ದ ಮಗಳ ಮುಡಿಯನ್ನು ಕತ್ತರಿಸಿ ಆ ಜಂಗಮ ವೇಷದವನಿಗೆ ಅತಿ ಭಕ್ತಿ ಮತ್ತು ವಿನಯಗಳಿಂದ ಅರ್ಪಿಸಿದನು. ಆ ಕ್ಷಣವೇ ಜಂಗಮ ವೇಷಧಾರಿಯಾಗಿದ್ದ ಶಿವನು ಬಹುವಾಗಿ ಸುಪ್ರೀತನಾಗಿ ತನ್ನ ನಿಜರೂಪವನ್ನು ತೋರಿದನು. ಸೋಮಪ್ರಭಾದೇವಿಯ ಕೂದಲು ಮೊದಲಿನಂತಾಗುವಂತೆ ಹಾಗೂ ವಿವಾಹವು ಸಾಂಗೋಪವಾಗಿ ಜರುಗುವಂತೆ ಅನುಗ್ರಹಿಸಿದನು. ನವ ದಂಪತಿಗಳಿಗೆ ಶುಭಾಶೀರ್ವಾದಗಳನ್ನು ಮಾಡಿದನು. ಅನಂತರ ಮಾನಕಂಜರರಾಯ ಮತ್ತು ಆತನ ರಾಣಿಯ ಸಮೇತ ಕೈಲಾಸಕ್ಕೆ ತೆರಳಿ ಅಲ್ಲಿ ಅವರೀರ್ವರಿಗೆ ಗಣ ಪದವಿಗಳನ್ನಿತ್ತು ಅನುಗ್ರಹಿಸಿದನು.

ಮೇಲೆ ವಿವರಿಸಿದ ಒಂದೇ ದೃಶ್ಯವನ್ನು ಬುಕ್ಕಸಾಗರದ ಶಿಲ್ಪವೊಂದರಲ್ಲಿ ಕಾಣಬಹುದು. ಆ ಶಿಲ್ಪ ಚಿತ್ರದಲ್ಲಿ ಮಾನಕಂಜರರಾಯನ ಮಗಳಾದ ಸೋಮಪ್ರಭಾದೇವಿಯು ಮಧ್ಯದಲ್ಲಿ ಪದ್ಮಾಸನಾಸೀನಳಾಗಿ ಕುಳಿತು ಕೊಂಡಿದ್ದಾಳೆ. ಅವಳ ಎರಡೂ ಕೈಗಳನ್ನು ಅಂಜಲೀ ಮುದ್ರೆಯಲ್ಲಿರುವಂತೆ ತೋರಿಸಲಾಗಿದೆ. ಅವಳ ಬಲಕ್ಕೆ ತಂದೆ ಮಾನಕಂಜರರಾಯನು ನಿಂತುಕೊಂಡಿದ್ದು ಮಗಳ ಸಿರಿ ಮುಡಿಯನ್ನು ಎಡಗೈಯ್ಯಲ್ಲಿ ಹಿಡಿದುಕೊಂಡು, ಬಲಗೈಯ್ಯಲ್ಲಿರುವ ಮಚ್ಚನಿಂದ ಕತ್ತರಿಸುತ್ತಿರುವಂತೆ ಕಡೆಯಲಾಗಿದೆ. ಅವರಿಬ್ಬರ ನಿಷ್ಠಾಭಕ್ತಿಯನ್ನು ನೋಡಿ ಸುಪ್ರೀತನಾದ ಶಿವನು ತನ್ನ ನಿಜರೂಪದಲ್ಲಿ ಬಂದು, ಅವಳ ಎಡ ಪಾರ್ಶ್ವದಲ್ಲಿ ನಿಂತಿರುವಂತೆ ತೋರಿಸಲಾಗಿದೆ. ಇಲ್ಲಿ ಶಿವನಿಗೆ ನಾಲ್ಕು ಕೈಗಳಿರುವಂತೆ ತೋರಿಸಿದ್ದು, ಹಿಂದಿನ ಹಸ್ತಗಳಲ್ಲಿ ಡಮರುಗ ಮತ್ತು ತ್ರಿಶೂಲಗಳಿದ್ದರೆ, ಮುಂದಿನ ಎರಡು ಹಸ್ತಗಳು ವರದ ಮತ್ತು ಅಭಯ ಮುದ್ರೆಗಳಲ್ಲಿವೆ.

ಈ ಶಿಲ್ಪಗಳಲ್ಲಿ ಕಾಣಬರುವ ಇತರ ವೈಶಿಷ್ಟ್ಯಗಳೆಂದರೆ ಮೂರ್ತಿ ಲಕ್ಷಣಗಳು, ಆಭರಣಗಳು, ಅಲಂಕಾರಗಳು, ಉಡುಗೆಗಳು ಮತ್ತು ಭಾವರೂಪಗಳು ವಿಜಯನಗರದ ಸಮಕಾಲೀನ ಶಿಲ್ಪಗಳನ್ನು ವಿಶೇಷವಾಗಿ ಹೋಲುತ್ತವೆ.

6. ವೀಣೆ ಕಾಯಕದ ಮಾದರಸ (ಚಿತ್ರ 7)

ಸಕಲೇಶ ಮಾದರಸನೆಂಬವನು ಅಂಬೆಯ ರಾಜನಾಗಿದ್ದನು. ಆತನೂ ಸಹ ಬಹುವಾದ ನಿಷ್ಠೆಯ ಶಿವಭಕ್ತನಾಗಿದ್ದನು. ರಾಜ್ಯಾಧಿಕಾರ ಮತ್ತಿತರ ಪ್ರಾಪಂಚಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾಗಲೂ ಆತನು ಧಾರ್ಮಿಕ, ಸಾತ್ವಿಕ, ಮತ್ತು ಸರಳವಾದ ಜೀವನ ನಡೆಯಿಸುವ ಧ್ಯೇಯವುಳ್ಳವನಾಗಿದ್ದನು. ಎಂದರೆ, ವೀರಶೈವ ಧರ್ಮದ ಅನುಯಾಯಿಗಳು ಅನೂಚಾನವಾಗಿ ಆಚರಿಸುತ್ತಿದ್ದ ವ್ರತ, ಶೀಲ, ನೇಮ, ಆಚಾರ, ಗುರು, ಲಿಂಗ, ಜಂಗಮ, ದಾಸೋಹ ಮುಂತಾದ ತತ್ವಗಳನ್ನು ನಿಷ್ಠೆಯಿಂದ ಮತ್ತು ತ್ರಿಕಾಲವೂ ಪರಿಪಾಲಿಸುತ್ತಾ ಜೀವನ ನಡೆಯಿಸುತ್ತಾ ಇದ್ದನು. ಮತ್ತು ನಿರಂತರವಾಗಿ ಜಂಗಮ ದಾಸೋಹವು ನಡೆಯುವುದಕ್ಕೆ ಅವಶ್ಯವಿದ್ದ ಸಹಾಯ ಮಾಡುತ್ತಿದ್ದನು. ತನ್ನ ದಿನ ನಿತ್ಯದ ಪದ್ಧತಿಯಂತೆ ಶಿವಪೂಜಾ ಕಾರ್ಯಗಳು ಮುಗಿದ ನಂತರ ಶಿವನನ್ನು ಸಂಪ್ರೀತಿಗೊಳಿಸುವ ಉದ್ದೇಶದಿಂದ ತನ್ನ ಆರಾಧ್ಯ ದೈವದ ಮುಂದೆ ನಿಂತು ಕೆಲ ಕಾಲ ವೀಣೆಯನ್ನು ನುಡಿಸುತ್ತಾ ಶಿವಧ್ಯಾನದಲ್ಲಿ ತನ್ನನ್ನೇ ಮರೆಯುತ್ತಿದ್ದನು. ಆ ವೀಣೆಯ ಸಹಾಯದಿಂದ ಆತನು ಬತ್ತೀಸು ರಾಗಗಳನ್ನು, ಅರವತ್ತುನಾಲ್ಕು ಗೀತಗಳನ್ನು, ಎಂಭತ್ತೆಂಟು ಪ್ರಬಂಧಗಳನ್ನು, ನೂರೊಂದು ತಾಳಗಳು ಮುಂತಾದವುಗಳನ್ನು ನುಡಿಸಿ, ತನ್ನ ಆರಾಧ್ಯ ದೈವವಾದ ಶಿವನನ್ನು ಸುಪ್ರೀತಗೊಳಿಸುತ್ತಿದ್ದನು. ಕೆಲಕಾಲದನಂತರ ಮಲ್ಲರಸನೆಂಬ ವೀರಶೈವ ಜಂಗಮನು ಮಾದರಸನನ್ನು ಕಂಡು ಅವನಿಗೆ ಕಲ್ಯಾಣಕ್ಕೆ ಹೋಗಿ, ಅಲ್ಲಿರುವ ವೀರಶೈವ ಧರ್ಮದ ದಿಗ್ಗಜಗಳೆಂದು ಹೆಸರಾಗಿದ್ದ ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವಣ್ಣ ಮತ್ತಿತರ ವೀರಶೈವ ಪ್ರಮಥರನ್ನು ಸಂಧಿಸಿ, ಅವರು ಜರುಗಿಸುತ್ತಿದ್ದ ಶಿವಾನುಭವ ಗೋಷ್ಠಿಗಳಲ್ಲಿ ಭಾವಹಿಸಬೇಕೆಂದು ತಿಳಿಸಿದನು. ಆ ಸಲಹೆಗನುಗುಣವಾಗಿ, ಮಾದರಸನು ಕಲ್ಯಾಣಕ್ಕೆ ಹೋಗಿ ಅಲ್ಲಿ ಕೆಲಕಾಲ ಇದ್ದು ಅನಂತರ ಶ್ರೀಶೈಲಕ್ಕೆ ಹೋಗಿ ತನ್ನ ಇಷ್ಟ ಲಿಂಗವಾಗಿದ್ದ ಸಕಲೇಶ್ವರನಲ್ಲಿ ಐಕ್ಯವಾಗಿ ಮೋಕ್ಷವನ್ನು ಕಂಡುಕೊಂಡನು.

ಮೇಲಿನ ಕಥೆಯ ಒಂದು ಭಾಗವನ್ನು ಮಾತ್ರ ಬುಕ್ಕಸಾಗರದ ಶಿಲ್ಪದಲ್ಲಿ ಕಂಡರಿಸಲಾಗಿದೆ. ಇಲ್ಲಿ ಸಕಲೇಶ ಮಾದರಸನನ್ನು, ತನ್ನ ಇಷ್ಟ ದೇವತೆಯಾದ ಶಿವಲಿಂಗದ ಎದುರಿಗೆ ನಿಂತುಕೊಂಡು, ವೀಣೆಯನ್ನು ಎರಡೂ ಕೈಗಳ ಸಹಾಯದಿಂದ ನುಡಿಸುತ್ತಾ ಶಿವಧ್ಯಾನದಲ್ಲಿ ನಿರತನಾಗಿರುವಂತೆ ತೋರಿಸಲಾಗಿದೆ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಗಣನೆಗೆ ತೆಗೆದು ಕೊಳ್ಳಬೇಕಾಗುತ್ತದೆ. ವೀರಶೈವರ ಚರಿತ್ರೆಗಳಲ್ಲಿ ಇನ್ನೂ ಹಲವು ವೀರಶೈವ ಭಕ್ತರು, ತಮ್ಮ ಧಾರ್ಮಿಕ ಜೀವನದಲ್ಲಿ ವೀಣೆ ನುಡಿಸುವ ಕಾಯಕವನ್ನು ಮಾಡುತ್ತಿದ್ದಂತೆ ತಿಳಿದುಬರುತ್ತದೆ. ಆದರೂ ಮೇಲಿನ ಶಿಲ್ಪವನ್ನು ಗುರುತಿಸುವುದಕ್ಕೆ ಸಕಲೇಶ ಮಾದರಸನ ಕಥೆಯೇ ಹೆಚ್ಚು ಸೂಕ್ತವೆಂದು ಕಂಡುಬಂದುದರಿಂದ ಹಾಗೆ ಮಾಡಲಾಗಿದೆ.

7. ಸತ್ಯಕ್ಕ (ಚಿತ್ರಗಳು 8–9)

ಸತ್ಯಕ್ಕನೆಂಬ ನಿಷ್ಠಾವಂತ ಶಿವಭಕ್ತಳೊಬ್ಬಳು ಜಂಬೂರು ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಅವಳು, ಶಿವನಲ್ಲಿ ತನಗಿದ್ದ ಅಗಾಧವಾದ ಮತ್ತು ಅಚಲವಾದ ಭಕ್ತಿಯ ಕಾರಣಗಳಿಂದಾಗಿ ಶಿವನ ಹೆಸರಿನ ವಿನಃ ಬೇರೆ ಯಾವುದೇ ದೇವತೆಯ ಹೆಸರನ್ನು ಯಾವುದೇ ಸಂದರ್ಭದಲ್ಲಿಯೂ ಕೇಳುವುದಿಲ್ಲವೆಂದು ಹಾಗೂ ಸಹಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಳು. ಅದಕ್ಕೆ ಬದ್ಧಳಾಗಿ ನಡೆದುಕೊಳ್ಳುತ್ತಿದ್ದಳು ಸಹ. ತಾನು ಯಾವಾಗಲೂ ಶಿವಧ್ಯಾನದಲ್ಲಿ ತಲ್ಲೀನಳಾಗಿರುತ್ತಿದ್ದಳು. ಹೀಗಿರುವಾಗ, ಒಂದು ದಿನ ಜಂಗಮ ವೇಷಧಾರಿಯಾದ ಶಿವನು ಅವಳ ಅಚಲ ಭಕ್ತಿಯನ್ನು ಪರೀಕ್ಷಿಸಲೋಸುಗ ಅವಳ ಮನೆ ಬಾಗಿಲಿಗೆ ಭಿಕ್ಷಾರ್ಥಿಯಾಗಿ ಬಂದು ನಿಂತಿದ್ದನು. ಅವನನ್ನು ನೋಡಿದ ಸತ್ಯಕ್ಕನು, ಒಳಗೆ ಹೋಗಿ ಒಂದು ದೊಡ್ಡ ಸಟ್ಟುಗದಲ್ಲಿ ಆ ಜಂಗಮನಿಗೆ ಬಡಿಸುವುದಕ್ಕಾಗಿ ಆಹಾರವನ್ನು ತಂದಳು. ಅವಳು ತಾನು ತಂದ ಆಹಾರವನ್ನು ಆ ಜಂಗಮನಿಗೆ ಬಡಿಸುತ್ತಿರುವ ಸಮಯದಲ್ಲಿ, ಆತನು ಉದ್ದೇಶ ಪೂರಕವಾಗಿಯೇ 'ಹರಿದ ಹರಿಯಿಂದ ಒಕ್ಕಿತು' ಎಂದು ದ್ವಂದಾರ್ಥದಲ್ಲಿ ನುಡಿದನು. ತಕ್ಷಣವೇ 'ಹರಿ' (ವಿಷ್ಣು) ಎಂಬ ಶಬ್ದವೊಂದನ್ನು ಕೇಳಿದ ಕೂಡಲೇ ತಾಳ್ಮೆಯನ್ನು ಕಳೆದುಕೊಂಡು ಜಂಗಮನನ್ನು ಅದೇ ಸಟ್ಟುಗದಿಂದ ಜೋರಾಗಿ ಹೊಡೆದಳು. ಆ ಪೆಟ್ಟಿನಿಂದಾಗಿ ಅವನಿಗೆ ಗಾಯಗಳಾದವು ಮತ್ತು ಕೆಲವು ಹಲ್ಲುಗಳು ಕಳಚಿ ಬಿದ್ದುವು. ಆಗ ಅವನ ಚೀರಾಟವನ್ನು ಕೇಳಿದ ಅಕ್ಕಪಕ್ಕದ ಜನರು ಆಶ್ಚರ್ಯ ಮತ್ತು ಕುತೂಹಲಭರಿತರಾಗಿ ಅವಳ ಮನೆಯ ಮುಂದೆ ನೆರೆದರು. ಆ ನೆರೆದ ಜನರಿಗೆ ತಿಳಿಸಿ ಹೇಳುವ ರೀತಿಯಲ್ಲಿ, ಆ ಜಂಗಮ ವೇಷಿಯು ಪುನಃ ಅದೇ ಶಬ್ದಗಳನ್ನು ಉಚ್ಚರಿಸಿದನು. ಆಗಲೂ ಕೂಡಾ, ಹಿಂದೂ ಮುಂದೂ ನೋಡದೇ ಮತ್ತು ಬೇರೇನನ್ನೂ ವಿಚಾರಿಸದೇ 'ಹರಿ' ಎಂಬ ಶಬ್ದವನ್ನು ಕೇಳುವಂತೆ ಮಾಡಿದುದಕ್ಕಾಗಿ ಆ ಸತ್ಯಕ್ಕನು ಆ ಜಂಗಮ ವೇಷಿಯನ್ನು ಅದೇ ಸೌಟಿನಿಂದ ಮೇಲಿಂದ ಮೇಲೆ ಹೊಡೆಯುತ್ತಲೇ ಇದ್ದಳು. ಅಷ್ಟು ಜನರು ಅಲ್ಲಿ ನೆರೆದು ನೋಡುತ್ತಿದ್ದಾಗಲೂ ಅವಳು ಎಷ್ಟೂ ಹಿಂಜರಿಯದೇ ಅಳುಕದೇ ತನ್ನ ನಿಷ್ಠೆಗೆ ಮತ್ತು ಪ್ರತಿಜ್ಞೆಗೆ ಬದ್ಧಳಾಗಿ ನಡೆದುಕೊಂಡಳು. ಕೊನೆಯಲ್ಲಿ ಅವಳ ಅಚಲ ಭಕ್ತಿಗೆ ಶಿವನು ಮೆಚ್ಚಿ ತನ್ನ ನಿಜರೂಪವನ್ನು ತೋರಿ ಎಲ್ಲರಿಗೂ ಸಂತೋಷವನ್ನುಂಟು ಮಾಡಿದನು. ಅಂತ್ಯದಲ್ಲಿ ಸತ್ಯಕ್ಕನಿಗೆ ಮೋಕ್ಷವನ್ನು ಅನುಗ್ರಹಿಸಿದನು.

ಮೇಲಿನ ಕಥೆಗೆ ಸಂಬಂಧಿಸಿದಂತೆ ಎರಡು ಶಿಲ್ಪ ದೃಶ್ಯಗಳು ಬುಕ್ಕಸಾಗರದ ವೀರಭದ್ರಸ್ವಾಮಿಯ ದೇವಾಲಯದಲ್ಲಿ ಕಾಣಬರುತ್ತವೆ. ಮೊದಲನೇ ಶಿಲ್ಪ ದೃಶ್ಯದಲ್ಲಿ ಸತ್ಯಕ್ಕ ಮತ್ತು ಜಂಗಮ ವೇಷದಲ್ಲಿರುವ ಶಿವ ಎದುರುಬದುರಾಗಿ ನಿಂತಿದ್ದಾರೆ. ಬಹುಶಃ ಸತ್ಯಕ್ಕನ ಮನೆಯ ದ್ವಾರದ ಮುಂದೆ ಇಲ್ಲಿ ಜಂಗಮನು ವಿಶಿಷ್ಟವಾದ ಉಡುಗೆಯಲ್ಲಿರುವುದನ್ನು ಗಮನಿಸಬೇಕು. ಆತನು ತಲೆಯ ಮೇಲೆ ದಪ್ಪವಾದ ಪಾವಡ (ತಲೆಯ ರುಮಾಲು) ವನ್ನು ಸುತ್ತಿಕೊಂಡಿದ್ದಾನೆ ಮತ್ತು ನೀಳವಾದ ನಿಲುವಂಗಿಯನ್ನು (ಮೊಳಕಾಲಿಗಿಂತಲೂ ಕೆಳಗಿರುವ ಅಂಗಿಯನ್ನು) ತೊಟ್ಟುಕೊಂಡಿದ್ದಾನೆ. ಆತನ ಎಡದ ಬಗಲಿನಿಂದ ಒಂದು ಜೋಳಿಗೆಯೂ ನೇತಾಡುತ್ತಿದೆ. ಸತ್ಯಕ್ಕನು ಸಟ್ಟುಗದಲ್ಲಿ ಆಹಾರವನ್ನು ತೆಗೆದುಕೊಂಡು ಆ ಜಂಗಮನಿಗೆ ಬಡಿಸಲು ಹೊರ ಬಂದಿರುವಂತೆ ಅವನ ಎದುರಿನಲ್ಲಿ ನಿಂತಿದ್ದಾಳೆ. ಸ್ವಲ್ಪ ಮೇಲೆತ್ತಲಾಗಿರುವ ಅವಳ ಬಲಗೈಯಲ್ಲಿ ಸಟ್ಟುಗವೂ ಕಾಣಿಸುತ್ತಿದೆ. ಬಹುಶಃ ಆ ಜಂಗಮನಿಂದ 'ಹರಿ' ಎಂಬ ಶಬ್ದವು ಹೊರ ಬಂದ ಕ್ಷಣದಲ್ಲಿ ಅವನನ್ನು ಹೊಡೆಯುವ ಉದ್ದೇಶದಿಂದ ಹಾಗೆ ಸಟ್ಟುಗ ಹಿಡಿದ ಕೈಯ್ಯನ್ನು, ಇನ್ನೇನು ಹೊಡೆದು ಬಿಡುವಳೋ ಎಂಬಂತೆ, ಮೇಲಕ್ಕೆ ಎತ್ತಿದ್ದಾಳೆ.

ಇನ್ನೊಂದು ದೃಶ್ಯವು, ಕಥೆಯ ಅಂತ್ಯದ ಘಟನೆಯನ್ನು ಬಿಂಬಿಸುತ್ತದೆ. ಇದರಲ್ಲಿ ಕೊನೆಯಲ್ಲಿ ಶಿವನು ತನ್ನ ನಿಜ ರೂಪವನ್ನು ತೋರಿಸಿರುವುದನ್ನು ನೋಡಬಹುದು. ಇಲ್ಲಿಯೂ ಸತ್ಯಕ್ಕ ಮತ್ತು ನಿಜರೂಪದಲ್ಲಿರುವ ಶಿವ ಎದುರು ಬದಿರಾಗಿ ನಿಂತಿದ್ದಾರೆ. ಎರಡನೇ ಬಾರಿಗೂ ಜಂಗಮ ವೇಷದಲ್ಲಿದ್ದ ಶಿವನು 'ಹರಿ – ಹರಿ' ಎಂದು ಪದೇ ಪದೇ ಹೇಳಿದುದನ್ನು ಕೇಳಿಸಿಕೊಂಡ ಸತ್ಯಕ್ಕ ಹೆಚ್ಚಿನ ಕೋಪದಿಂದ ಅದೇ ಸಟ್ಟುಗದಿಂದ ಹೊಡೆಯುತ್ತಿರುವಂತೆ ಕೈಯನ್ನು ಪೂರ್ತಿಯಾಗಿ ಮೇಲೆತ್ತಿದ್ದಾಳೆ. ಹಾಗಾಗಿ ಸಟ್ಟುಗವನ್ನು ಹಿಡಿದಿರುವ ಅವಳ ಬಲಗೈ ಅವಳ ತಲೆಯ ಮೇಲ್ಗಡೆ, ಇನ್ನೇನು ಹೊಡೆಯುವಳೋ ಎಂಬಂತೆ, ಶಿಲ್ಪಿಯು ತೋರಿಸಿದ್ದಾನೆ. ಅದನ್ನು ಅರಿತುಕೊಂಡು ಶಿವನು ನಿಜ ರೂಪಕ್ಕೆ ಬಂದು, ತನ್ನ ತಲೆಯನ್ನು ಸ್ವಲ್ಪ ಹಿಂದಕ್ಕೆ ತೆಗೆದುಕೊಂಡು ಬಾಗಿರುವಂತೆ ತೋರಿಸಲಾಗಿದೆ. ಇಲ್ಲಿಯೂ ಶಿವನು ನಾಲ್ಕು ಕೈಗಳನ್ನು ಹೊಂದಿದ್ದು, ಮುಂದಿನ ಎರಡು ಹಸ್ತಗಳು ವರದ ಮತ್ತು ಅಭಯ ಮುದ್ರೆಗಳಲ್ಲಿದ್ದರೆ, ಹಿಂದಿನ ಹಸ್ತಗಳು ಡಮರುಗ ಮತ್ತು ತ್ರಿಶೂಲಗಳನ್ನು ಹಿಡಿದುಕೊಂಡಿರುವುದನ್ನು ನೋಡಬಹುದು. ಇತರ ವಿವರಗಳು, ವಿಜಯನಗರ ಕಾಲದ ಶಿಲ್ಪ ವೈಶಿಷ್ಟ್ಯಗಳನ್ನು ಹೋಲುತ್ತವೆಂದು ಖಚಿತವಾಗಿ ಹೇಳಬಹುದು.

8. ಬೇಡರ ಕಣ್ಣಪ್ಪ (ಚಿತ್ರಗಳು 10–11)

ಬೇಡರ ಕಣ್ಣಪ್ಪನಿಗೆ ಸಂಬಂಧಿಸಿರುವುದೆಂದು ಹೇಳಾಲಾಗುವ ಕಥೆಯು ಬಹು ಜನಜನಿತವಾದುದಾಗಿದೆ. ಆ ಕಥೆಯ ನಾಯಕನನ್ನು ತೋರಿಸುವ ಉಬ್ಬು ಶಿಲ್ಪಗಳು ಎಲ್ಲೆಲ್ಲೂ ಕಾಣಬರುತ್ತವೆ. ಶಿಲ್ಪಕಾರರಿಗೆ ಕಣ್ಣಪ್ಪನ ಶಿಲ್ಪಗಳನ್ನು ಕಡೆಯುವುದು ಬಹು ಮೆಚ್ಚಿನ ವಿಷಯವಾಗಿತ್ತೆಂದು ಅನೇಕ ಕಡೆಗಳಲ್ಲಿ ಕಾಣಬರುವ ಶಿಲ್ಪ ದೃಷ್ಟಾಂತಗಳಿಂದ ಹೇಳಬಹುದು. ಅಲ್ಲದೇ ಶಿಲಾ ಶಾಸನಗಳಲ್ಲೂ ಕಣ್ಣಪ್ಪನ ವಿಷಯಗಳು ಉಲ್ಲೇಖವಾಗಿರುವುದನ್ನು ನೋಡಬಹುದು.

ಕಣ್ಣಪ್ಪನ ಮೂಲದ ಹೆಸರು ತಿಣ್ಣನ್ ಎಂಬುದು. ಅದು ಅವನ ತಂದೆಯಾದ ನಾಗತಟ್ಟಯ್ಯ ಎಂಬವನಿಂದ ಕೊಡಲ್ಪಟ್ಟುದಾಗಿತ್ತು. ಅವರು ತಿರುಕಾಳತಿ (ಕಾಳಹಸ್ತಿ) ಎಂಬ ಪ್ರಾಂತದ ಉಡುಪ್ಪೂರು ಎಂಬ ಗ್ರಾಮದಲ್ಲಿ ವಾಸವಾಗಿದ್ದರು. ಅವರು ಬೇಡರ ಜನಾಂಗದ ಮುಖಂಡರಾಗಿದ್ದು ಮೃಗ ಪಕ್ಷಿಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದರು. ಅವನ ಮಾತಾ ಪಿತೃಗಳ ಬಹು ದಿನಗಳ ಪ್ರಾರ್ಥನೆಗಳ ಫಲವಾಗಿ, ಮುರುಗನ್ ದೇವರ ವರ ಪ್ರಸಾದದಿಂದಾಗಿ ತಿಣ್ಣನ್ ಜನಿಸಿದವನಾಗಿದ್ದನು.

ಅವನು ಬೇಟೆಯಾಡುತ್ತಿದ್ದ ಕಾಡಿಗೆ ಹತ್ತಿರದಲ್ಲಿ ಒಂದು ಚಿಕ್ಕ ಬೆಟ್ಟವಿತ್ತು. ಅದರ ಮೇಲೆ ತ್ರಿಕಾಳತ್ತಿಯಪ್ಪನೆಂಬ ಹೆಸರಿನ ಶಿವಲಿಂಗವಿತ್ತು. ಒಂದು ದಿನ ತಿಣ್ಣನ್ ತನ್ನ ಅನುಚರರೊಡಗೂಡಿ ಆ ಕಾಡಿಗೆ ಬೇಟೆಯಾಡಲು ಹೋದನು. ಸಾಯಂಕಾಲದ ಹೊತ್ತಿಗೆ ಬಹು ದಣಿವಾದುದರಿಂದ ಅಲ್ಲಿಯೇ ಸ್ವಲ್ಪ ಸಮಯದವರೆಗೆ ವಿಶ್ರಮಿಕೊಳ್ಳಬೇಕೆಂದು ಇಚ್ಛಿಸಿದನು. ಹಾಗೆ ವಿಶ್ರಮಿಸುತ್ತಿರುವಾಗಲೇ ಸಮೀಪದಲ್ಲಿಯೇ ಶಿವಲಿಂಗ ರೂಪದಲ್ಲಿದ್ದ ಪರದೈವದ ಪ್ರಭಾವವು, ಅವನಿಗೆ ತಿಳಿಯದಂತೆಯೇ ಅವನ ಮೇಲಾಯಿತಲ್ಲದೇ, ಅವನಲ್ಲಿ ಹುಟ್ಟಿನಿಂದಲೇ ಬಂದಿದ್ದು, ಆದರೆ ಸುಪ್ತವಾಗಿದ್ದ ದೈವಭಕ್ತಿಯು ಜಾಗೃತಗೊಂಡಿತು ಮತ್ತು ಉತ್ತೇಜಿತವಾಯಿತು. ಕೂಡಲೆ ಅವನು ಎದ್ದು ಆ ಶಿವಲಿಂಗದ ದರ್ಶನ ಮಾಡಿದನು. ತತ್‌ಕ್ಷಣದಲ್ಲಿಯೇ, ದರ್ಶನ ಮಾತ್ರದಿಂದಲೇ ಬಹು ಪ್ರಭಾವಿತನಾಗಿ, ಆ ದೈವದಲ್ಲಿ ಆಸಕ್ತಿ ಹುಟ್ಟಿ, ಅದಕ್ಕೆ ಪೂಜಾ ಕಾರ್ಯವನ್ನು ನೆರವೇರಿಸಲು ಉದ್ಯುಕ್ತನಾದನು. ತನಗೆ ತೋಚಿದ ರೀತಿಯಲ್ಲಿ ಪೂಜಾ ಕಾರ್ಯಗಳನ್ನು ನೆರವೇರಿಸಿದನು. ಆ ಶಿವಲಿಂಗಕ್ಕೆ ತನ್ನಲ್ಲಿದ್ದ ಬೇಟೆಯಾಡಿ ಕೊಂದ ಪ್ರಾಣಿಗಳ ಬೇಯಿಸಿದ ಮಾಂಸವನ್ನು, ಅದೂ ತಾನು ತಿಂದು ರುಚಿ ನೋಡಿ ಚೆನ್ನಾಗಿರುವುದೆಂದು ಖಚಿತ ಪಡಿಸಿಕೊಂಡ ನಂತರ ಅರ್ಪಿಸಿದನು.


ಅದೇ ಶಿವಲಿಂಗವನ್ನು ಸಮೀಪದಲ್ಲಿಯೇ ವಾಸವಾಗಿದ್ದ ಶಿವಗೋಚಾರಿಯಾರ್ ಎಂಬ ತಾಪಸಿಯು, ಆಗಮಗಳಲ್ಲಿ ನಿರ್ದೇಶಿಸಲಾಗಿರುವ ಕ್ರಮಾಚರಣೆಗಳಿಗನುಗುಣವಾಗಿ ಪ್ರತಿನಿತ್ಯವೂ ಪೂಜಿಸುತ್ತಿದ್ದನು. ಅದೇ ದಿನ ಸ್ವಲ್ಪ ಸಮಯದ ನಂತರ ಆ ತಾಪಸಿಯು ನಿತ್ಯದ ಕ್ರಮದಂತೆ ಅಲ್ಲಿಗೆ ಬಂದನು. ಅಲ್ಲಿ ಆ ಶಿವಲಿಂಗದ ಸುತ್ತಲೂ ಹರಡಿದ್ದ ಮಾಂಸ ಮೂಳೆಗಳಿಂದ ಅಪವಿತ್ರವಾಗಿದ್ದ ದೃಶ್ಯವನ್ನು ನೋಡಿ ಬಹುವಾಗಿ ಬೇಸರ ಪಟ್ಟುಕೊಂಡನು ಹಾಗೂ ಅಸಹ್ಯ ಪಟ್ಟುಕೊಂಡನು. ಅದು ಸರಿಯಾದ ಕ್ರಮವಲ್ಲವೆಂದು ಆ ಕಾರ್ಯವನ್ನು ದ್ವೇಷಿಸಿದನು. ಅಲ್ಲಿ ಯಾರೂ ಕಾಣದಿದ್ದುದರಿಂದ ಹೇಗೋ ಸಾವರಿಸಿಕೊಂಡು ಆ ಅಪವಿತ್ರ ವಸ್ತುಗಳನ್ನೆಲ್ಲಾ ಗುಡಿಸಿ ಹಾಕಿ ದೂರ ಎಸೆದನು. ದಿನ ನಿತ್ಯದಂತೆ ತನ್ನ ಪದ್ಧತಿಯಲ್ಲಿ ಪೂಜಾ ಕಾರ್ಯಗಳನ್ನು ನೆರವೇರಿಸಿ ತನ್ನ ವಾಸದ ಸ್ಥಳಕ್ಕೆ ಹೊರಟು ಹೋದನು. ಹೀಗೆಯೇ ಕೆಲವು ದಿನಗಳು ಸಂದುವು. ಎಂದರೆ, ತಿಣ್ಣನ್ ತನ್ನ ರೀತಿಯಲ್ಲೇ ದಿನವೂ ಪೂಜೆ ಮಾಡಿ ಹೊರಟು ಹೋಗುತ್ತಿದ್ದನು ಮತ್ತು ಸ್ವಲ್ಪ ಸಮಯದನಂತರ ಆ ಸ್ಥಳಕ್ಕೆ ಬರುತ್ತಿದ್ದ ಶಿವಗೋಚಾರಿಯಾರ್ ಅವುಗಳನ್ನೆಲ್ಲಾ ಗುಡಿಸಿ, ಸಾರಿಸಿ, ನಂತರ ಸ್ನಾನ ಮಾಡಿ ತನ್ನ ಪದ್ಧತಿಯಲ್ಲಿ ಪುನಃ ಪೂಜೆ ಮಾಡುತ್ತಿದ್ದನು. ಕೊನೆಗೊಂದು ದಿನ ಆ ಶಿವಗೋಚಾರಿಯಾರ್ ಬಹಳ ಬೇಸತ್ತವನಾಗಿ ಆ ಶಿವದೈವದಲ್ಲಿಯೇ ಮೊರೆಹೊಕ್ಕು ಬೇಡಿಕೊಂಡನು. ಅದಕ್ಕೆ ಪ್ರತಿಕ್ರಿಯೆಯಾಗಿ ಒಂದು ರಾತ್ರಿ ತಾಪಸಿಯ ಕನಸಿನಲ್ಲಿ ಆ ದೈವವು ಕಾಣಿಸಿಕೊಂಡು, ಆ ತಿಣ್ಣನ್ ಎಲ್ಲರಂತಲ್ಲ, ಅವನು ಸಾಮಾನ್ಯನಲ್ಲ, ಅವನು ನಿಷ್ಠಾವಂತ ಶಿವಭಕ್ತನು ಎಂದು ಹೇಳಿತು. ಆ ವಿಷಯವನ್ನು ಮನದಟ್ಟು ಮಾಡಿಕೊಳ್ಳಬೇಕಿದ್ದರೆ, ಮಾರನೆಯ ದಿನ ತಿಣ್ಣನ್ ಪೂಜಾ ಕಾರ್ಯಗಳನ್ನು ನೆರವೇರಿಸುವ ಸಮಯದಲ್ಲಿ ಮರೆಯಲ್ಲಿ ನಿಂತುಕೊಂಡಿದ್ದು, ಅಲ್ಲಿ ಜರುಗಲಿರುವ ಘಟನಾವಳಿಗಳನ್ನು ವೀಕ್ಷಿಸಬೇಕೆಂದು ಆ ದೈವವು ಆಜ್ಞಾಪಿಸಿತು. ಅದೇ ಪ್ರಕಾರ ಮಾರನೆಯ ದಿನ ಆ ಶಿವಗೋಚಾರಿಯಾರ್ ಬಹುವಾದ ಕುತೂಹಲದಿಂದ ಶಿವಲಿಂಗವಿದ್ದಲ್ಲಿಗೆ ಹೋಗಿ ತನ್ನ ಪದ್ಧತಿಯಂತೆ ಪೂಜಾಕಾರ್ಯಗಳನ್ನು ನೆರವೇರಿಸಿ, ಅನಂತರ ಮರೆಯಲ್ಲಿ ನಿಂತುಕೊಂಡು ತಿಣ್ಣನ್‌ನ ಬರುವಿಗಾಗಿ ಜಾಗರೂಕತೆಯಿಂದ ಕಾಯುತ್ತಿದ್ದನು.

ನಿರೀಕ್ಷಿಸಿದ್ದಂತೆ, ಸ್ವಲ್ಪ ಸಮಯದ ನಂತರ ತಿಣ್ಣನ್ ತನಗೆ ಇಷ್ಟವಿದ್ದ ಪೂಜಾದ್ರವ್ಯಗೊಳಡನೆ ಅಲ್ಲಿಗೆ ಬಂದನು. ಅವನು ಬರುವಾಗ ನದಿಯಿಂದ ನೀರನ್ನು ತನ್ನ ಬಾಯಲ್ಲಿ ತುಂಬಿಕೊಂಡು ತಂದಿದ್ದನು. ಅದೇ ರೀತಿ ಹೂವುಗಳನ್ನು ತನ್ನ ತಲೆಯ ಕೂದಲಿನಲ್ಲಿ ಸಿಕ್ಕಿಸಿಕೊಂಡು ಮತ್ತು ಕಾಡಿನ ಎಲೆಗಳಿಂದ ಮಾಡಿದ ದೊನ್ನೆಯಲ್ಲಿ ಹುರಿದ ಮಾಂಸದ ತುಂಡುಗಳನ್ನು ತಂದಿದ್ದನು.

ಅವನು ಆ ಶಿವಲಿಂಗದ ಹತ್ತಿರಕ್ಕೆ ಹೊದಾಗ, ಅದರ ಬಲಗಣ್ಣಿನಿಂದ ಕೆನ್ನೀರು (ರಕ್ತ) ಹರಿಯುತ್ತಿದ್ದುದನ್ನು ಗಮನಿಸಿದನು. ಹಾಗೇಕಾಯಿತೆಂದು ತಿಳಿಯದೇ ಸಖೇದಾಶ್ಚರ್ಯಗಳಿಂದ ಕೂಡಿದವನಾಗಿ ಹರಿಯುತ್ತಿದ್ದ ಆ ಕೆನ್ನೀರನ್ನು ಒರೆಸಲು ಪ್ರಯತ್ನಿಸಿದನು. ಆದರೆ ಅದು ಮತ್ತಷ್ಟು ಹೆಚ್ಚಾಯಿತೇ ವಿನಃ ನಿಲ್ಲಲಿಲ್ಲ. ಆಗ ತನಗೆ ತಿಳಿದ ಕೆಲವು ವನಸ್ಪತಿಗಳನ್ನು ತಂದು ಔಷಧೋಪಚಾರ ಮಾಡಿದನು. ಆದರೂ ಪ್ರಯೋಜನವಾಗಲಿಲ್ಲ. ಆಗ ಥಟ್ಟನೆ ಒಂದು ವಿಚಾರ ಹೊಳೆಯಿತು. 'ಮಾಂಸಕ್ಕೆ ಮಾಂಸವೇ ಸರಿಯಾದ ಔಷಧಿಯೆಂಬಂತೆ ತನ್ನ ಬಲಗಣ್ಣನ್ನೇ ಹೊರತೆಗೆದು, ಶಿವಲಿಂಗದ ಬಲಗಣ್ಣಿಗೆ ಅಂಟಿಸಲು ಸಿದ್ಧನಾದನು. ತಕ್ಷಣವೇ ತನ್ನಲ್ಲಿದ್ದ ಬಾಣದ ಸಹಾಯದಿಂದ ತನ್ನ ಬಲಗಣ್ಣನ್ನು ಕಿತ್ತು ಲಿಂಗದ ಬಲಗಣ್ಣಿಗೆ ಅಂಟಿಸಿದನು. ಆಗ ಕೆನ್ನೀರು ಹೊರ ಬಾರದೇ ನಿಂತುದನ್ನು ನೋಡಿ ಸಂತೋಷದಿಂದ ಉಬ್ಬಿದನು. ಆದರೆ ಮರುಕ್ಷಣದಲ್ಲಿಯೇ ಆ ಲಿಂಗದ ಎಡ ಕಣ್ಣಿನಿಂದ ರಕ್ತ ಹೊರ ಹರಿಯತೊಡಗಿತು. ಅದನ್ನು ನೋಡಿದವನೇ ತಡ ಮಾಡದೆ ತನ್ನ ಇನ್ನೊಂದು ಕಣ್ಣನ್ನು ಕಿತ್ತು ಅಂಟಿಸಲು ಸಿದ್ಧನಾದನು. ಆದರೆ, ಹಾಗೆ ಮಾಡಿದಾಗ, ತನಗೆ ಎರಡೂ ಕಣ್ಣುಗಳು ಇಲ್ಲವಾಗಿಬಿಡುವುದರಿಂದ ಯಾವ ಸ್ಥಳದಲ್ಲಿ



8. ಸತ್ಯಕ್ಕ



9. ಸತ್ಯಕ್ಕ

ಅಂಟಿಸಬೇಕೆಂಬುದು ತಿಳಿಯದೇ ಹೋಗಬಹುದೆಂದು ಯೋಚಿಸಿ ಅದಕ್ಕೆ ಉಪಾಯವಾಗಿ ತನ್ನ ಬಲ ಕಾಲಿನ ಅಂಗುಷ್ಟವನ್ನು ಆ ಲಿಂಗದ ಎಡ ಕಣ್ಣಿ ಮೇಲಿಟ್ಟು, ಅಲ್ಲಿಗೆ ತನ್ನ ಎಡ ಕಣ್ಣನ್ನು ಕಿತ್ತು ಅಂಟಿಸಬೇಕೆಂದು ನಿರ್ಧರಿಸಿದನು. ಉಳಿದಿದ್ದ ಒಂದೇ ಒಂದು ಕಣ್ಣನ್ನು ಕೀಳಬೇಕೆಂದು ಬಾಣವನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು, ಕಾರ್ಯ ಪ್ರವೃತ್ತನಾಗಬೇಕೆನ್ನುವಷ್ಟರಲ್ಲಿ ಶಿವನು ಆ ಲಿಂಗದೊಳಗಿನಿಂದ ನಿಜರೂಪದಲ್ಲಿ ಹೊರ ಬಂದು, ಕಣ್ಣನ್ನು ಕಿತ್ತುಕೊಳ್ಳದಂತೆ 'ಕಣ್ಣಪ್ಪ ನಿಲ್ಲು' ಎಂದು ಹೇಳುತ್ತಾ ತಡೆದನು. ಬಲದ ಕಣ್ಣನ್ನು ಹಿಂದಕ್ಕೆ ಕೊಟ್ಟು ಮೊದಲಿನಂತೆ ಮಾಡಿ ಆತನಿಗೆ ಶಿವಗಣ ಪದವಿಯನ್ನು ಕೊಟ್ಟು ಅನುಗ್ರಹಿಸಿದನು. ಅಂದಿನಿಂದ ಆ ಬೇಟೆಕಾರ ತಿಣ್ಣನ್ ಕಣ್ಣಪ್ಪನೆಂಬ ಹೆಸರಿನಿಂದ ಪ್ರಸಿದ್ಧಿಯಾದನು.

ಮೇಲೆ ವಿವರಿಸಿದ ಬಹು ಜನಜನಿತವಾಗಿರುವ ಕಥೆಯನ್ನು ಬುಕ್ಕಸಾಗರದ ದೇವ ಮಂದಿರದಲ್ಲಿ ಎರಡು ದೃಶ್ಯಗಳಲ್ಲಿ ಶಿಲ್ಪಿಯು ಬಹು ಚತುರತೆಯಿಂದ ನಿರೂಪಿಸಿದ್ದಾನೆ. ಮೊದಲನೆಯ ದೃಶ್ಯದಲ್ಲಿ ಕಣ್ಣಪ್ಪನು ತನ್ನ ಆರಾಧ್ಯ ದೈವವಾದ ಶಿವಲಿಂಗದ ಎದುರಿನಲ್ಲಿ ಎಡ ಕಾಲಿನ ಮೇಲೆ ನಿಂತಿದ್ದಾನೆ. ಆತನಿಗಾಗಲೇ ಬಲ ಕಣ್ಣನ್ನು ತೆಗೆದಾಗಿದೆ. ಆತನ ಬಲಗಾಲಿನ ಹೆಬ್ಬೆಟ್ಟು ಶಿವಲಿಂಗದ ಎಡ ಕಣ್ಣಿನ ಸ್ಥಳದ ಮೇಲೆ ಇರುವಂತೆ ತೋರಿಸಲಾಗಿದೆ. ಅವನು ತನ್ನ ಎರಡೂ ಕೈಗಳಲ್ಲಿ ಬಾಣವೊಂದನ್ನು ಹಿಡಿದುಕೊಂಡು ಎಡ ಕಣ್ಣನ್ನು ಕೀಳುತ್ತಿರುವಂತೆ ಕಡೆಯಲಾಗಿದೆ.

ಮುಂದಿನ ಚಿತ್ರವೇ ಕಥೆಯಲ್ಲಿ ಬರುವ ಕೊನೆಯ ದೃಶ್ಯವನ್ನು ಬಿಂಬಿಸುವಂತಹುದಾಗಿದೆ. ಅಲ್ಲಿ, ಶಿವನು ತನ್ನ ನಿಜರೂಪದಲ್ಲಿ ಶಿವಲಿಂಗವನ್ನು ಭೇದಿಸಿಕೊಂಡು ಹೊರ ಬಂದಿದ್ದಾನೆ. ಕಣ್ಣಪ್ಪನಿಗೆ ಆಗ ಇರುವ ಒಂದೇ ಒಂದು ಕಣ್ಣನ್ನು ಕಿತ್ತು ಕೊಳ್ಳಬಾರದೆಂದು ಹೇಳುವಂತೆ ತನ್ನ ಮುಂದಿನ ಬಲಗೈಯನ್ನು ಚಾಚಿ ತಡೆಯುತ್ತಿರುವಂತೆ ತೋರಿಸಲಾಗಿದೆ. ಅದೇ ಕೈಯ ಹಸ್ತವು ಅಭಯ ಮುದ್ರೆಯಲ್ಲಿದ್ದು, ಕಣ್ಣಪ್ಪನನ್ನು ಶಿವನು ಅನುಗ್ರಹಿಸುತ್ತಿರುವನೆಂಬಂತೆ ಶಿಲ್ಪಿಯು ತೋರಿಸಿದ್ದಾನೆ. ಎರಡೂ ಚಿತ್ರಗಳಲ್ಲಿ ಕಣ್ಣಪ್ಪನು ನಿಂತಿರುವ ಭಂಗಿಗಳು ವಾಸ್ತವಿಕವಾದವುಗಳಾಗಿವೆ ಮತ್ತು ಶಿಲ್ಪಿಯ ವಿಶೇಷ ಚತುರತೆಗೆ ಅವು ನಿದರ್ಶನಗಳಾಗಿವೆ.

9. ಏಕಾಂತದ ರಾಮಯ್ಯ (ಚಿತ್ರ 12)

ಏಕಾಂತದ ರಾಮಯ್ಯ ಮತ್ತು ಆತನ ಹೆಸರಿನ ಸುತ್ತ ಜನಜನಿತವಾಗಿರುವ ಕಥಾ ಪ್ರಸಂಗಗಳು ಬಹು ಮುಖ್ಯವಾದವುಗಳಾಗಿವೆ. ಆತನೊಬ್ಬ ವೀರಶೈವ ಶರಣ ಮತ್ತು ನಿಶ್ಚಯವಾಗಿಯೂ ಚಾರಿತ್ರಿಕ ವ್ಯಕ್ತಿ. ಆತನು ಬಸವೇಶ್ವರರಿಗಿಂತಲೂ ಪೂರ್ವದಲ್ಲಿದ್ದವನೆಂದ ಬಳಿಕ, ವಿಜಯನಗರ ಸ್ಥಾಪನೆಗಿಂತಲೂ ನೂರಾರು ವರ್ಷಗಳ ಮೊದಲೇ ಜೀವಿಸಿದ್ದ ವ್ಯಕ್ತಿ. ಈಗಾಗಲೇ ವಿವರಿಸಿರುವಂತೆ, ವೀರಶೈವ ಧರ್ಮದ ಒಂದು ಮೂಲ ತತ್ವದ ಸಂಕೇತವಾಗಿರುವ ವೀರಭದ್ರ ದೇವತಾ ಮೂರ್ತಿಯ ವರಪ್ರಸಾದದಿಂದ, ಏಕಾಂತದ ರಾಮಯ್ಯನು ಜನಿಸಿದ್ದನೆಂದು ಅವನ ತಂದೆ ತಾಯಿಗಳು ತಿಳಿದಿದ್ದರು. ಏಕೆಂದರೆ, ಅವರು ತಮ್ಮ ಆರಾಧ್ಯ ದೈವವಾಗಿದ್ದ ವೀರಭದ್ರ ಸ್ವಾಮಿಯನ್ನು ಅನೇಕ ವರ್ಷಗಳವರೆಗೆ ಪ್ರಾರ್ಥಿಸಿ, ಸೇವೆ ಸಲ್ಲಿಸಿದ ನಂತರ ಆತನ ಜನನವಾಗಿತ್ತು. ಅದೇನೇ ಇದ್ದರೂ, ಏಕಾಂತದ ರಾಮಯ್ಯನು ಕಲ್ಯಾಣ ಚಾಲುಕ್ಯ ವಂಶದ ಅರಸರಲ್ಲೇ ಹೆಸರಾಂತ ರಾಜ ಆರನೇ ವಿಕ್ರಮಾದಿತ್ಯನ ಹಾಗೂ ಆ ಅರಸನಲ್ಲಿ ಮಂತ್ರಿಯಾಗಿದ್ದ ಕೊಂಡಗುಳಿ ಕೇಶಿರಾಜನ ಸಮಕಾಲೀನನಾಗಿದ್ದನು.

ಆತನು ದೃಢವಾದ ಮತ್ತು ಶ್ರದ್ಧಾಭಕ್ತಿಯುಳ್ಳ ವೀರಶೈವನಾಗಿದ್ದನು. ಆತನು ತೋರಿಸಿದ ಪವಾಡದ ಕಥೆಯನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಆತನು ಒಂದು ಬಾರಿ ಜೈನ ಧರ್ಮದವರ ಕಾರ್ಯ ಚಟುವಟಿಕೆಗಳ ಕೇಂದ್ರವಾಗಿದ್ದ ಅಬ್ಬಲೂರು ಗ್ರಾಮವನ್ನು ಸಂದರ್ಶಿಸಿದನು. ಶಿವನ ಮತ್ತು ಶೈವ ಧರ್ಮದ ಹಿರಿಮೆ, ಘನತೆಗಳನ್ನು ಎತ್ತಿ ಹಿಡಿದು, ಸಿದ್ಧಪಡಿಸಿ ತೋರಿಸುವ ಉದ್ದೇಶದಿಂದ ಆ ಊರಿನಲ್ಲಿರುವಾಗ ಮತ್ತು ಸಂದರ್ಭದ ಒತ್ತಡದಿಂದಾಗಿ ಜೈನರೊಡನೆ ವಿವಾದಕ್ಕಿಳಿಯಬೇಕಾಯಿತು. ಹಾಗೆ ತನ್ನ ನಿಲುವನ್ನು ಸಿದ್ಧಪಡಿಸುವ ಪ್ರಯತ್ನದಲ್ಲಿ, ತನ್ನ ಶಿರವನ್ನೇ ಕತ್ತರಿಸಿಕೊಂಡು ಅದನ್ನು ಆ ಊರಿನಲ್ಲಿದ್ದ ಶಿವದೈವಕ್ಕೆ (ಬ್ರಹ್ಮೇಶ್ವರ ದೇವಾಲಯದಲ್ಲಿರುವ ದೈವಮೂರ್ತಿಗೆ) ಅರ್ಪಿಸಬೇಕಾಯಿತು. ಏಳು ದಿನಗಳ ನಂತರ ಹಾಗೆ ಕಡಿದು ಅರ್ಪಿಸಿದ ತಲೆಯನ್ನೇ ಪುನಃ ಆತನ ಮುಂಡಕ್ಕೆ ಹತ್ತಿಸುವುದರೊಂದಿಗೆ ಆತನು ಜೀವ ತಳೆದು ಬಂದನು. ಹಾಗೆ ಒಂದು ಪವಾಡವನ್ನೇ ಮಾಡಿ ತೋರಿಸಿದನು. ಜೈನರನ್ನು ಸೋಲಿಸಿ ವೀರಶೈವ ಧರ್ಮದ ಮತ್ತು ಶಿವನ ಘನತೆ, ಮಹತ್ವಗಳನ್ನು ಸಾಧಿಸಿ ಪ್ರದರ್ಶಿಸಿದನು.

ಏಕಾಂತದ ರಾಮಯ್ಯನ ಹೆಸರು, ಆತನು ಸಾಧಿಸಿ ಪ್ರದರ್ಶಿಸಿದ ಪವಾಡವು ಮತ್ತು ಅದರ ವಿವರಗಳು ಕರ್ನಾಟಕದಲ್ಲೆಲ್ಲಾ ಜನಜನಿತವಾಗಿ ಎಲ್ಲೆಡೆ ಕೇಳಿಬಂದುವು. ಅವುಗಳು ಶಿಲಾಶಾಸನಗಳಲ್ಲಿ ಉಲ್ಲೇಖಿಸಲ್ಪಡುವಷ್ಟು ಪ್ರಧಾನತೆ ಮತ್ತು ಮಹತ್ವವನ್ನು ಪಡೆದು ಪ್ರಚಾರಕ್ಕೆ ಬಂದುವು. ಆ ವಿವರಗಳು ಒಂಬತ್ತು ಶಿಲಾಶಾಸನಗಳಲ್ಲಿ ಕಾಣಬರುತ್ತಿದ್ದು, ಕ್ರಿ.ಶ. 1184 ರಿಂದ ಕ್ರಿ.ಶ. 1208 ರೊಳಗೆ ಪ್ರಚಾರದಲ್ಲಿ ಬಂದವುಗಳಾಗಿವೆ. ಆ ಶಾಸನಗಳು ಈಗಿನ ಧಾರವಾಡ, ವಿಜಾಪುರ, ಬಳ್ಳಾರಿ, ಮಂಡ್ಯ, ಶಿವಮೊಗ್ಗ, ಮೈಸೂರು ಜಿಲ್ಲೆಗಳಲ್ಲಿ ದೊರೆತವುಗಳಾಗಿರುವುದರಿಂದ, ಆ ವದಂತಿಗಳ ವ್ಯಾಪ್ತಿ ಮತ್ತು ಜನಪ್ರಿಯತೆಗಳು ವೇದ್ಯವಾಗುತ್ತವೆ. ಅಷ್ಟಲ್ಲದೇ ಅಬ್ಬಲೂರಿನಲ್ಲಿ ಈಗಲೂ ಕಾಣಬರುವ ಬಹು ದೀರ್ಘವಾದ ಶಿಲಾ ಶಾಸನದಲ್ಲಿ ಮೇಲೆ ತಿಳಿಸಿದ ಏಕಾಂತದ ರಾಮಯ್ಯನ ಪವಾಡವನ್ನು ವಿವರವಾಗಿ ಪ್ರಸ್ತಾಪಿಸಲಾಗಿದೆ. ಅಲ್ಲದೇ ಅಲ್ಲಿಯೇ ಶಿಲೆಯಲ್ಲಿ ಕಂಡರಿಸಲಾದ ಪವಾಡಗಳ ದೃಶ್ಯಗಳೂ ಕಾಣಬರುತ್ತಿದ್ದು ಅವುಗಳ ಕೆಳಗೆ ವಿವರಣೆಗಳನ್ನು ತಿಳಿಸಿ ಹೇಳುವ, ಕನ್ನಡದಲ್ಲಿ ಲಿಖಿತ ಪಟ್ಟಿಗಳಿವೆ.



10. ಬೇಡರ ಕಣ್ಣಪ್ಪ



11. ಬೇಡರ ಕಣ್ಣಪ್ಪ

ಮೇಲೆ ವಿವರಿಸಿದ ಶಾಸನೋಕ್ತ ಆಧಾರಗಳಲ್ಲದೇ, ಏಕಾಂತದ ರಾಮಯ್ಯನ ನಂತರದ ಕಾಲದಲ್ಲಿ ರಚಿಸಲಾದ ವೀರಶೈವ ಸಾಹಿತ್ಯ ಗ್ರಂಥಗಳಲ್ಲಿಯೂ ಸಹಾ ಆತನು ನಡೆಯಿಸಿದ ಪವಾಡಗಳನ್ನು ಕುರಿತು ಅನೇಕ ಕಡೆ ಪ್ರಸ್ತಾಪ ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿತವಾಗಿರುವ 'ಬಸವ ಪುರಾಣ'ಗಳು, ಹಂಪೆಯ ಹರಿಹರದೇವ ಕವಿಯು ರಚಿಸಿರುವ 'ಏಕಾಂತ ರಾಮಿ ತಂದೆಗಳ ರಗಳೆ', ಯಳಂದೂರಿನ ಷಡಕ್ಷರದೇವನ 'ಬಸವರಾಜೀಯಮು' ಮುಂತಾದವುಗಳು. 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ', 'ಸಿಂಗಿರಾಜ ಪುರಾಣ', 'ಉತ್ತರ ದೇಶದ ಬಸವಲಿಂಗ ವಿರಚಿತ ಬಸವೇಶ್ವರ ಪುರಾಣದ ಕಥಾ ಸಾಗರ' ಮುಂತಾದವುಗಳಲ್ಲಿಯೂ ಅವುಗಳನ್ನು ಪ್ರಸ್ತಾಪ ಮಾಡಲಾಗಿವೆ.

ಹಾಗಾಗಿ, ಹಂಪೆ–ವಿಜಯನಗರಗಳಲ್ಲಿ ವೀರಶೈವ ಧರ್ಮದ ಪ್ರತಿಪಾದನೆ, ಪ್ರಚಾರ, ಸಾಹಿತ್ಯ ಕೃಷಿ, ಸಮಾಜದ ಶ್ರೇಯೋಭಿವೃದ್ಧಿಗಳಿಗೆ ಶ್ರಮಿಸುತ್ತಿದ್ದ ವಿವಿಧ ವರ್ಗಗಳ ವೀರಶೈವ ಧುರೀಣರು, ಏಕಾಂತದ ರಾಮಯ್ಯನ ಚರಿತ್ರೆ ಮತ್ತು ಪವಾಡಗಳಿಂದ ಸರಿಯಾಗಿ ಪ್ರಭಾವಿತರಾಗಿದ್ದರೆಂದೇ ಹೇಳಬಹುದು. ಮುಖ್ಯವಾಗಿ ವಿಜಯನಗರ ಸ್ಥಾಪನೆಗಿಂತಲೂ ಬಹು ಮೊದಲೇ, ಹಂಪೆಯಲ್ಲಿ ವಾಸಿಸುತ್ತಿದ್ದ ಶರಣ ಕವಿ ಹರಿಹರದೇವನೇ, ಒಂದು ರಗಳೆ ಕೃತಿಯನ್ನು ಏಕಾಂತದ ರಾಮಯ್ಯನನ್ನು ಕುರಿತಾಗಿ ರಚಿಸಿದ್ದಾನೆಂದ ಬಳಿಕ ಆತನ ವಿಷಯಗಳು ಹಂಪೆಯಲ್ಲಿ ಬಹು ಮೊದಲೇ ಜನಾದರಣೀಯವಾಗಿದ್ದುವೆಂದು ವೇದ್ಯವಾಗುತ್ತವೆ. ಹಾಗಿದ್ದಾಗಲೂ, ಹಂಪೆ–ವಿಜಯನಗರಕ್ಕೆ ಅತೀ ಸಮೀಪದಲ್ಲಿರುವ ಬುಕ್ಕಸಾಗರದಲ್ಲಿ ಮಾತ್ರ ಏಕಾಂತದ ರಾಮಯ್ಯನ ಪವಾಡವನ್ನು ನಿರೂಪಿಸುವ ಒಂದೇ ಒಂದು ಶಿಲ್ಪ ಮೂರ್ತಿಯು ಕಾಣಬರುತ್ತದೆ.

ಆ ದೃಶ್ಯದಲ್ಲಿ ಕಾಣಬರುವಂತೆ, ಏಕಾಂತದ ರಾಮಯ್ಯನು ತನ್ನ ತಲೆಯನ್ನು ಆಗಲೇ ಕತ್ತರಿಸಿಕೊಂಡಿದ್ದು, ತನ್ನ ಎರಡೂ ಕೈಗಳಲ್ಲಿ ಆ ರುಂಡವನ್ನು ಎತ್ತಿ ಹಿಡಿದುಕೊಂಡು, ಶಿವಲಿಂಗಕ್ಕೆ (ಅಬ್ಬಲೂರಿನ ಬ್ರಹ್ಮೇಶ್ವರ ಲಿಂಗಕ್ಕೆ) ಅರ್ಪಿಸುವಂತೆ ಕಡೆಯಲಾಗಿದೆ. ಅದೇ ಸಮಯದಲ್ಲಿ, ಸುಪ್ರೀತನಾದ ಶಿವನು ತನ್ನ ನಿಜರೂಪದಲ್ಲಿ ಶಿಲಾ ಲಿಂಗವನ್ನು ಭೇದಿಸಿಕೊಂಡು ಹೊರಬಂದು ಏಕಾಂತದ ರಾಮಯ್ಯನಿಗೆ ಅಭಯವನ್ನೀಯುತ್ತಿರುವಂತೆ ಕಂಡರಿಸಲಾಗಿದೆ. ನಿಜ ರೂಪದ ಶಿವನು ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಹಸ್ತಗಳಲ್ಲಿ ತ್ರಿಶೂಲ ಮತ್ತು ಡಮರುಗಗಳನ್ನು ಹಿಡಿದುಕೊಂಡಂತಿದ್ದರೆ, ಮುಂದಿನ ಬಲ ಹಸ್ತವು ಅಭಯ ಮುದ್ರೆಯಲ್ಲಿ ಮತ್ತು ಎಡ ಹಸ್ತವು ವರದ ಮುದ್ರೆಯಲ್ಲಿವೆ. ಅಬ್ಬಲೂರಿನಲ್ಲಿರುವಂತೆ, ಶಿಲ್ಪದ ಕೆಳಗೆ ಹೆಸರಿನ ಪಟ್ಟಿ ಇರುವುದಿಲ್ಲ.

ಶೈವ ಮತ್ತು ವೀರಶೈವ ಪುರಾಣಗಳಲ್ಲಿ, ಇನ್ನೂ ಅನೇಕ ಶಿವಭಕ್ತರು ತಮಗೆ ಉಚಿತ ಹಾಗೂ ಅವಶ್ಯಕವೆಂದು ಕಂಡು ಬಂದ ಸಂದರ್ಭಗಳಲ್ಲಿ ತಮ್ಮ ರುಂಡಗಳನ್ನು ಕತ್ತರಿಸಿಕೊಂಡು, ತಮ್ಮ ಆರಾಧ್ಯ ದೈವವಾಗಿರುತ್ತಿದ್ದ ಶಿವನಿಗೆ ಅರ್ಪಿಸುತ್ತಿದ್ದರೆಂಬ ವಿಷಯಗಳನ್ನು ನಿರೂಪಿಸುವ ಅನೇಕ ಉದಾಹರಣೆಗಳು ಕಾಣಸಿಗುತ್ತವೆ. ಹಾಗೆ ರುಂಡಗಳನ್ನರ್ಪಿಸಿ ಪ್ರಾಣಾರ್ಪಣೆ ಮಾಡುತ್ತಾ ತಮ್ಮ ಭಕ್ತಿಯ ನಿಷ್ಠೆಯನ್ನು ದೃಢೀಕರಿಸಿ ಸಾರುವುದು ಹಿಂದಿನ ಕಾಲದಲ್ಲಿ ವೀರಶೈವ ಭಕ್ತರಿಗೆ ಮಾನ್ಯವಾದ ಸಾಮಾನ್ಯ ವಿಷಯವಾಗಿತ್ತು. ಇಲ್ಲಿ ಬಹುವಾಗಿ ಪ್ರಚಾರದಲ್ಲಿದ್ದ ಏಕಾಂತದ ರಾಮಯ್ಯನ ಪವಾಡಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು, ಬುಕ್ಕಸಾಗರದಲ್ಲಿ ಕಾಣಬರುವ ಆ ಶಿಲ್ಪ ದೃಶ್ಯವನ್ನು ಗುರುತಿಸಲಾಗಿದೆ. ಆ ಶಿಲ್ಪದ ಕೆಳಗೆ ಹೆಸರಿನ ಅಥವಾ ಲಿಖಿತ ಪಟ್ಟಿ ಇಲ್ಲದಿರುವುದರಿಂದ ಹಾಗೆ ಸಾಂದರ್ಭಿಕ ಊಹೆಯಿಂದಲೇ ನಿರ್ಧರಿಸಬೇಕಾಗಿದೆ. ಈಗಾಗಲೇ ಸೂಚಿಸಿರುವಂತೆ ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಬರುವಷ್ಟರಲ್ಲಿ, ಶಿಲ್ಪಗಳ ಕೆಳಗೆ ಹೆಸರುಗಳನ್ನಾಗಲೀ, ಇತರ ವಿಷಯಗಳನ್ನಾಗಲೀ, ವಿವರಿಸುವ ಲಿಖಿತ ಪಟ್ಟಿಗಳನ್ನು ಕೊಡುವುದು ಅಷ್ಟಾಗಿ ರೂಢಿಯಲ್ಲಿರಲಿಲ್ಲ. ಹಾಗೆಯೇ, ವಿಜಯನಗರ ಕಾಲದ ವೀರಗಲ್ಲುಗಳು, ಸತೀ ಕಲ್ಲುಗಳು, ಮತ್ತಿತರ ಸ್ಮಾರಕ ಕಲ್ಲುಗಳ ನಿದರ್ಶನಗಳಲ್ಲೂ ಸಹ, ಪೂರ್ವದಲ್ಲಿ ಅನುಸರಿಸುತ್ತಿದ್ದ ಪದ್ಧತಿಯನ್ನು ನಿಲ್ಲಿಸಲಾಗಿತ್ತೆಂದು ಹೇಳಬಹುದು. ಆದರೂ ಅಲ್ಲೊಂದು ಇಲ್ಲೊಂದು ಲಿಖಿತ ಪಟ್ಟಿಗಳನ್ನು ಹೊಂದಿರುವ ಶಿಲ್ಪಗಳು ಅಪವಾದಗಳೆಂಬಂತೆ ಕಾಣಬರುತ್ತವೆ. ಈ ವರ್ಗಕ್ಕೆ ಸೇರಿದ ಮುಖ್ಯವಾದ ಉದಾಹರಣೆಗಳೆಂದರೆ, ತಿರುಪತಿಯಲ್ಲಿ ಕಾಣಬರುತ್ತಿರುವ ಕೃಷ್ಣದೇವ ಮಹಾರಾಯ ಮತ್ತು ಆತನ ಇಬ್ಬರು ಪಟ್ಟದರಸಿಯರಾಗಿದ್ದ ತಿರುಮಲಾದೇವಿ ಮತ್ತು ಚಿನ್ನಾದೇವಿ ಅವರುಗಳ ಕಂಚಿನ ವಿಗ್ರಹಗಳಾಗಿವೆ. ಇದೇ ರೀತಿ ಇನ್ನೂ ಹಲವು ಉದಾಹರಣೆಗಳನ್ನು ಹೇಳಬಹುದು.

10. ಗುಂಡ ಮತ್ತು ಬ್ರಹ್ಮಯ್ಯ (ಚಿತ್ರಗಳು 13–14)

ಗುಂಡ ಮತ್ತು ಬ್ರಹ್ಮಯ್ಯ ಎಂಬವರಿಬ್ಬರೂ ಅಸಾಧಾರಣ ನಿಷ್ಠೆಯ ಮತ್ತು ಕೆಚ್ಚೆದೆಯ ಧೀರರಾಗಿದ್ದ ವೀರಶೈವ ಭಕ್ತರು. ಅವರು ತಮ್ಮ ಪೂರ್ವದ ಜನ್ಮದಲ್ಲಿ ಜಗದೇವ ಮತ್ತು ಮಲ್ಲಿಬೊಮ್ಮ ಎಂಬ ಹೆಸರುಗಳಿಂದ ಹುಟ್ಟಿದ್ದರೆಂದೂ ಮತ್ತು ಆಗ ಕಲ್ಯಾಣದಲ್ಲಿದ್ದ ಬಸವೇಶ್ವರರ ಸಮಕಾಲೀನರಾಗಿದ್ದರು ಎಂಬ ವಿವರಗಳು ಹಲವು ಸಾಹಿತ್ಯ ಗ್ರಂಥಗಳಿಂದ ಮತ್ತು ಪರಂಪರಾಗತವಾಗಿ ಬಂದಿರುವ ವದಂತಿಗಳಿಂದ ತಿಳಿದುಬರುತ್ತವೆ. ಆ ಸಮಯದಲ್ಲಿ ಕಲ್ಯಾಣದಲ್ಲಿ ಜರುಗಿದ ಕ್ರಾಂತಿಯ ಕಾಲದಲ್ಲಿ, ಅವರೇ ಕಳಚೂರಿ ಬಿಜ್ಜಳ ಅರಸನನ್ನು ಕೊಲೆ ಮಾಡಿದರೆಂದು ಪ್ರತೀತಿ. ಆ ಕಾರಣದಿಂದಾಗಿಯೇ ಅವರಿಗೆ ಮರಣ ದಂಡನೆ ವಿಧಿಸಲ್ಪಟ್ಟು ಅವರನ್ನು ಶೂಲಕ್ಕೇರಿಸಲಾಯಿತೆಂಬುದು ಆ



12. ಏಕಾಂತದ ರಾಮಯ್ಯ

ಪ್ರತೀತಿಯ ಉಳಿದ ಭಾಗ. ಅನಂತರ ಅವರಿಬ್ಬರಿಗೂ ಗುಂಡ ಮತ್ತು ಬ್ರಹ್ಮಯ್ಯ ಎಂಬ ಹೆಸರುಗಳಿಂದ ತೆಲುಗು ದೇಶದಲ್ಲಿಯ ಗವಚರವೆಂಬ ಗ್ರಾಮದಲ್ಲಿ ಪುನರ್‌ಜನ್ಮವಾಯಿತು. ಆಗಲೂ ಕೂಡಾ, ಆರಾಧ್ಯ ದೈವವಾಗಿದ್ದ ಶಿವ ಮತ್ತು ವೀರಶೈವ ಧರ್ಮವನ್ನು ಕುರಿತು ಅವರ ನಿಷ್ಠೆ ಮತ್ತು ಭಕ್ತಿಗಳು ಅಸಾಧಾರಣ ಮತ್ತು ಅಸಾಮಾನ್ಯವಾದವುಗಳಾಗಿದ್ದುವು. ಅವುಗಳನ್ನು ಪ್ರದರ್ಶಿಸಲು ಯಾವಾಗಲೂ ಮತ್ತು ಯಾವ ಕಾರಣಕ್ಕೂ ಹಿಂಜರಿಯುತ್ತಿರಲಿಲ್ಲ. ತಮ್ಮ ನಿಷ್ಠೆ, ಭಕ್ತಿ ಮತ್ತು ಧ್ಯೇಯಗಳನ್ನು ಪ್ರಕಟಪಡಿಸಲೋಸುಗ, ಅವರಿಬ್ಬರೂ ಕಂಚಿನ ಕಹಳೆಗಳನ್ನೂದುತ್ತಾ, ಪ್ರಜೆಗಳ ಗಮನವನ್ನು ಸೆಳೆಯುತ್ತಿದ್ದರು. ಅನಂತರ ಶಿವನಲ್ಲಿ ಮತ್ತು ವೀರಶೈವ ಧರ್ಮದಲ್ಲಿ ಶ್ರದ್ಧೆ ಭಕ್ತಿಗಳುಳ್ಳವರು ಯಾರೇ ಆಗಿರಲಿ ಮತ್ತು ಯಾವುದೇ ಪ್ರಸಂಗವಿರಲಿ ಅಂಥವರಿಗೆ ಅವಶ್ಯಕವಿರುವ ರಕ್ಷಣೆಯನ್ನು ತಾವು ಕೊಡುವುದಾಗಿ ಸಾರಿ ಹೇಳುವ ಕಾಯಕವನ್ನು ಕೈಗೊಂಡಿದ್ದರು. ಅಂಥಹ ಶಿವಭಕ್ತರು ಪಾತಕಿಗಳೇ ಆಗಿರಲಿ, ಆಪಾದಿತರೇ ಆಗಿರಲಿ, ಘೋರ ಅಪರಾಧಿಗಳೇ ಆಗಿರಲಿ, ಅವರನ್ನು ಸಹ ರಕ್ಷಿಸುವುದಾಗಿ ಕಹಳೆಗಳನ್ನೂದುತ್ತಾ ಸಾರಿ ಹೇಳುತ್ತಿದ್ದರು. ಹಾಗೆ ರಕ್ಷಣೆಯನ್ನೊದಗಿಸುವಾಗ ತಮ್ಮ ಪ್ರಾಣಗಳನ್ನು ಅರ್ಪಿಸಲೂ ಹಿಂಜರಿಯುವುದಿಲ್ಲವೆಂದು ಅವರು ಸಾರಿ ಪ್ರಕಟಪಡಿಸುತ್ತಿದ್ದರು.

ಹೀಗಿರಲು, ಒಂದು ದಿನ ಅವರು ಕಹಳೆಯನ್ನೂದುತ್ತಾ ತಮ್ಮ ಧ್ಯೇಯ ಧೋರಣೆಗಳನ್ನು ಪ್ರಚಾರ ಪಡಿಸುತ್ತಿರುವುದನ್ನು ಅವರ ಆರಾಧ್ಯ ದೈವವಾದ ಶಿವನು ಕೇಳಿಸಿಕೊಂಡನು, ಮತ್ತು ಅವರನ್ನು ಪರೀಕ್ಷೆಗೊಳಪಡಿಸಬೇಕೆಂದೂ ನಿರ್ಧರಿಸಿದನು. ಆ ನಿರ್ಧಾರಕ್ಕನುಗುಣವಾಗಿ ಶಿವನು ಒಬ್ಬ ಕನ್ನಗಳ್ಳನ ವೇಷವನ್ನು ಧರಿಸಿಕೊಂಡು, ವೊರುಗಲ್ಲು ಮಹಾನಗರದ ಕಾಕತೀಯ ಅರಸ ಗಣಪತಿರಾಯನ ಅರಮನೆಗೆ ಕನ್ನ ಹಾಕಿ, ಒಳಗೆ ಹೋಗಿ ಅಲ್ಲಿದ್ದ ರಾಜ ಸಂಪತ್ತನ್ನು ಕೊಳ್ಳೆಹೊಡೆದು ಕೊಂಡುಹೋದನು. ಅರಮನೆಯಿಂದ ಹೊರಗೆ ಬಂದನಂತರ ತಲೆ ಮರೆಸಿಕೊಂಡು ಹೋಗಲು ಪ್ರಯತ್ನಿಸದೇ, ಅವನು ನೇರವಾಗಿ ಗುಂಡ ಮತ್ತು ಬ್ರಹ್ಮಯ್ಯರಿದ್ದಲ್ಲಿಗೆ ಹೋಗಿ ಸೇರಿದನು. ಅವರಿಗೆ, ತಾನು ರಾಜನ ಅರಮನೆಯಿಂದ ಕೊಳ್ಳೆ ಹೊಡೆದ ಸಮಾಚಾರವನ್ನು ಯಥಾವತ್ತಾಗಿ ನಿರೂಪಿಸಿದನು. ಆ ಗುಂಡ ಮತ್ತು ಬ್ರಹ್ಮಯ್ಯರು ಆ ಕನ್ನಗಳ್ಳನನ್ನು ಚರಲಿಂಗ (ಜಂಗಮ)ವೆಂದು ಪರಿಗಣಿಸಿ, ಆತನಿಗೆ ಅವಶ್ಯವಿದ್ದ ರಕ್ಷಣೆಯನ್ನು ಒದಗಿಸುವುದಾಗಿ ವಾಗ್ದಾನ ಮಾಡಿದರು. ಅವರು ಇನ್ನೂ ಮುಂದೆ ಹೋಗಿ ತಮ್ಮ ಪ್ರಾಣವನ್ನೇ ತೆರಬೇಕಾಗಿ ಬಂದರೂ, ಆಗಲೇ ಕೊಟ್ಟ ವಾಗ್ದಾನದಿಂದ ಹಿಂದೆ ಸರಿಯುವುದಿಲ್ಲವೆಂದು, ಮತ್ತು ಆ ಕಳ್ಳನನ್ನು ಎಂದಿಗೂ ರಾಜನಿಗೆ ಒಪ್ಪಿಸುವುದಿಲ್ಲವೆಂದು ಭರವಸೆಗಳನ್ನು ನೀಡಿದರು. ಮಾರನೆಯ ದಿನ ಆಳರಸನಿಗೆ ಆ ಕನ್ನಗಳ್ಳನ ವಿಷಯ ತಿಳಿಯಿತು ಮತ್ತು ಅವನು ಗುಂಡ ಮತ್ತು ಬ್ರಹ್ಮಯ್ಯ ಅವರುಗಳಲ್ಲಿ ಆಶ್ರಯ ಪಡಿದಿರುವನೆಂದೂ ತಿಳಿಯಿತು. ಆ ಕೂಡಲೇ ಅರಸನು ರಾಜಾಜ್ಞೆಯೊಂದನ್ನು ಹೊರಡಿಸಿ ಗುಂಡ ಮತ್ತು ಬ್ರಹ್ಮಯ್ಯ ಅವರುಗಳು ಆ ಕನ್ನಗಳ್ಳನನ್ನು ತಕ್ಷಣವೇ ತಂದೊಪ್ಪಿಸಬೇಕು, ತಪ್ಪಿದರೆ ಮರಣ ದಂಡನೆಯನ್ನು ಅನುಭವಿಸಬೇಕಾಗುತ್ತದೆಂದು ಆಜ್ಞಾಪಿಸಿದನು. ಅದನ್ನು ಕೇಳಿದ ಕಳ್ಳನ ವೇಷದಲ್ಲಿದ್ದ ಶಿವನು ಇವರನ್ನು ಕುರಿತು ತನ್ನನ್ನು ರಾಜನಿಗೆ ಒಪ್ಪಿಸಿ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಬೇಕೆಂದು ಬೇಡಿಕೊಂಡನು. ವಿಧವಿಧವಾಗಿಯೂ ಬೇಡಿಕೊಂಡನು. ಆದರೆ ಅವರು ತಮ್ಮ ಧ್ಯೇಯ ಧೋರಣೆಗಳ ಪ್ರತಿಪಾದನೆಯಲ್ಲಿ ಅಚಲಿತರಾಗಿದ್ದರಲ್ಲದೆ ಪ್ರಾಣ ತ್ಯಾಗಕ್ಕೂ ಸಿದ್ಧರಾಗಿದ್ದರು. ಹಾಗಾಗಿ ಅವರು ರಾಜಾಜ್ಞೆಯ ಪ್ರಕಾರ ಶೂಲಗಳನ್ನೇರಿ ತಮ್ಮ ಪ್ರಾಣಗಳನ್ನೇ ಆಹುತಿ ಕೊಡಬೇಕಾಯಿತೆಂಬುದು ಕಥಾಭಾಗ. (ಹಿಂದಿನ ಕಾಲದಲ್ಲಿ ಮರಣ ದಂಡನೆಯನ್ನು ವಿಧಿಸಬೇಕಾದಾಗ, ಆಪಾದಿತನನ್ನು ಹಾಗೆ ಶೂಲದ ಮೇಲೇರಿಸಿ ಪ್ರಾಣ ತೆಗೆಯುವುದು ಒಂದು ಸಾಮಾನ್ಯ ಪದ್ಧತಿಗಳಲ್ಲೊಂದಾಗಿತ್ತು.)

ಮೇಲೆ ವಿವರಿಸಿದ ಘಟನೆಗಳ ನಂತರ, ಗುಂಡ ಮತ್ತು ಬ್ರಹ್ಮಯ್ಯ ಅವರುಗಳ ಹೆಸರುಗಳು ಬಹುವಾದ ಪ್ರಸಿದ್ಧಿ ಮತ್ತು ಜನಾದರಣೀಯತೆಗಳನ್ನು ಪಡೆದು, ಚಾರಿತ್ರಿಕ ಸಾಹಸ ಪ್ರಸಂಗಗಳೋಪಾದಿಯಲ್ಲಿ ಜನ ಮನಗಳಲ್ಲಿ ಪ್ರಚಾರದಲ್ಲಿ ಬಂದುವು. ಅವುಗಳ ಜೊತೆಯಲ್ಲಿಯೇ ಶಿಲ್ಪ ಸಾದೃಶ್ಯಗಳೂ ಪ್ರಚಾರದಲ್ಲಿ ಬಂದುವು. ಹಾಗಾಗಿ, ಗುಂಡ ಮತ್ತು ಬ್ರಹ್ಮಯ್ಯ ಅವರಿಗೆ ಸಂಬಂಧಿಸಿದವುಗಳೆಂದು ಹೇಳಬಹುದಾದ ಶಿಲ್ಪಗಳನ್ನು ಹಾವೇರಿ, ಗುಂಡೇನಹಳ್ಳಿ, ಕುಸಕೂರು, ಚಿತ್ರದುರ್ಗ, ಬನವಾಸಿ, ನೀತಿಗೆರೆ, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ನೋಡಬಹುದು. ಇತ್ತೀಚೆಗೆ ಗುಂಡ ಮತ್ತು ಬ್ರಹ್ಮಯ್ಯರ ಶಿಲ್ಪವೊಂದನ್ನು ಮೈಸೂರು ಜಿಲ್ಲೆಯ ಟಿ. ನರಸೀಪುರದ ಆಗಸ್ತ್ಯೇಶ್ವರ ದೇವಸ್ಥಾನದಲ್ಲಿ ನೋಡಿ ಗುರುತಿಸಲಾಗಿದೆ. ಗುಂಡೇನಹಳ್ಳಿ ಎಂಬ ಗ್ರಾಮದಲ್ಲಿ ಗುಂಡ ಮತ್ತು ಬ್ರಹ್ಮಯ್ಯ ಅವರ ಮೂರ್ತಿಗಳಿಗೆ ವಾರ್ಷಿಕ ಜಾತ್ರೆಯನ್ನು ಜರುಗಿಸಲಾಗುತ್ತದೆ.

ಬುಕ್ಕಸಾಗರದಲ್ಲಿ ಮೇಲೆ ವಿವರಿಸಿದ ಕಥೆಗೆ ಸಂಬಂಧಿಸಿದ ಎರಡು ಶಿಲ್ಪ ದೃಶ್ಯಗಳನ್ನು ನೋಡಬಹುದು. ಮೊದಲನೇ ದೃಶ್ಯದಲ್ಲಿ ಇಬ್ಬರು ಪರಾಕ್ರಮಿ ವ್ಯಕ್ತಿಗಳು ವೀರಗಾಸಿಗಳನ್ನುಟ್ಟಿದ್ದು ಒಬ್ಬರಿಗೆ ಎದುರಾಗಿ ಇನ್ನೊಬ್ಬರಂತೆ ವೀರ ಭಂಗಿಯಲ್ಲಿ ನಿಂತಿದ್ದಾರೆ. ಅವರಿಬ್ಬರೂ ತಮ್ಮ ಕೈಗಳಲ್ಲಿ ಎರಡು ಬಿರುದಿನ ಕಹಳೆಗಳನ್ನು ಎತ್ತಿ ಹಿಡಿದಿದ್ದು, ತಮ್ಮ ಧ್ಯೇಯ ಧೋರಣೆಗಳನ್ನು ಕಹಳೆಗಳ ಮೂಲಕ ಊದಿ ಸಾರಿ ಪ್ರಕಟ ಪಡಿಸುತ್ತಿರುವರೆಂಬಂತೆ ಅವರನ್ನು ವೀರ ಭಂಗಿಯಲ್ಲಿ ತೋರಿಸಲಾಗಿದೆ. ಆ ಎರಡು ವ್ಯಕ್ತಿಗಳನ್ನು ಗುಂಡ ಮತ್ತು ಬ್ರಹ್ಮಯ್ಯರೆಂದು ಪಕ್ಕದಲ್ಲಿಯೇ ಕಾಣಬರುವ ಎರಡನೆಯ ಶಿಲ್ಪ ದೃಶ್ಯದ ಆಧಾರದಿಂದ ಗುರುತಿಸಬಹುದು. ಎರಡನೆಯ ಶಿಲ್ಪ ದೃಶ್ಯದ ವಿವರಗಳು ಹೀಗಿವೆ. ಮಧ್ಯದಲ್ಲಿ ಎರಡು



13. ಗುಂಡ ಮತ್ತು ಬ್ರಹ್ಮಯ್ಯ



14. ಗುಂಡ ಮತ್ತು ಬ್ರಹ್ಮಯ್ಯ

ಉದ್ದವಾದ ಶೂಲಗಳನ್ನು ನಿಲ್ಲಿಸಲಾಗಿದೆ. ಅವುಗಳ ಪಕ್ಕದಲ್ಲಿ ಒಂದೊಂದು ಕಡೆ ಒಬ್ಬೊಬ್ಬರಂತೆ ಇಬ್ಬರು ವೀರರು ಎದುರುಬದುರಾಗಿ ನಿಂತಿದ್ದಾರೆ. ಅವರೇ ಗುಂಡ ಮತ್ತು ಬ್ರಹ್ಮಯ್ಯರೆಂದು ತಿಳಿಯಬೇಕು. ಇಬ್ಬರೂ ಎಡಗೈಗಳಲ್ಲಿ ತಮ್ಮ ಇಷ್ಟ ಲಿಂಗಗಳನ್ನು ಹಿಡಿದುಕೊಂಡಿದ್ದಾರೆ. ಮತ್ತು ಅವರ ಬಲಗೈಗಳನ್ನು ಸ್ವಲ್ಪ ಮೇಲಕ್ಕೆತ್ತಿ ಹಿಡಿದಂತೆ ತೋರಿಸಲಾಗಿದೆ. ಬಹುಶಃ ತಮ್ಮ ಆರಾಧ್ಯ ದೈವವಾದ ಶಿವನನ್ನು, ಶಿವನ ಅಧಿಕ್ಯವನ್ನು ಸ್ತುತಿಸುತ್ತಾ ಕೈಯೆತ್ತಿ ಘೋಷಿಸುತ್ತಿರುವಂತೆ ಆ ಕೈಗಳನ್ನು ತೋರಿಸಲಾಗಿದೆ.

ಈ ಗುಂಡ ಮತ್ತು ಬ್ರಹ್ಮಯ್ಯರ ವಿಷಯವು ಕರ್ನಾಟಕದಲ್ಲೆಲ್ಲಾ ಬಹು ಜನಾದರಣೀಯವಾಗಿತ್ತೆಂದು ತಿಳಿದುಬರುತ್ತದೆ.

ಮೇಲೆ ವಿವರಿಸಿರುವಂತೆ ಶಿಲ್ಪಗಳ ಮುಖಾಂತರ ನಿರೂಪಿತವಾಗಿರುವ ಶೈವ/ವೀರಶೈವ ಶರಣರ/ಸಾಧಕರ ಜೀವನ ಚರಿತ್ರೆಗಳಿಂದ ಮತ್ತು ಘಟನಾವಳಿಗಳಿಂದ ನಾವು ತಿಳಿಯಬೇಕಾದ ಸಂಗತಿಗಳು ಹಲವಾರು ಇರುತ್ತವೆ. ಸಂಕ್ಷಿಪ್ತವಾಗಿ, ಶಿವಶರಣನಾದವನು ಜಗತ್ತಿನಲ್ಲಿಯೇ ಇದ್ದುಕೊಂಡು ಲಿಂಗಾಂಗ ಸಾಮರಸ್ಯವನ್ನು ಹೊಂದಬಹುದೆಂದು ಆ ಜೀವನ ಚರಿತ್ರೆಗಳು ಸಾರುತ್ತವೆ. ಭಕ್ತನು ತನ್ನಲ್ಲಿ ಹುದುಗಿರುವ ಭಕ್ತಿ ಮತ್ತು ಶಕ್ತಿಗಳನ್ನು, ತನ್ನ ನಿತ್ಯದ ಕಾಯಕ ಅಂದರೆ ಉದ್ಯೋಗದಲ್ಲಿ ನಿಷ್ಠೆಯಿಂದ ನಿರತನಾಗಿರುವುದರಿಂದಲೇ ಅವುಗಳನ್ನು ಹೆಚ್ಚಿಸಿಕೊಳ್ಳಬಹುದೆಂದು ಶಿವಶರಣರು ಬೋಧಿಸಿದರು. ಶಿವಶರಣರು ತಮ್ಮ ಕಾಯಕಗಳ ಮೂಲಕವೇ ಪರಮಾತ್ಮನನ್ನು ಮೆಚ್ಚಿಸಬಹುದೆಂಬುದನ್ನು ತೋರಿಸಿಕೊಟ್ಟಿರುವರು. ಉದ್ಯೋಗವು ಯಾವುದೇ ಆಗಿರಲಿ, ಅವುಗಳಲ್ಲಿ ಮೇಲಾದುದು, ಕೀಳಾದುದು ಎಂಬ ಭೇದಗಳಿರುವುದಿಲ್ಲ ಎಂಬುದನ್ನು ತೋರಿಸಿ ಕೊಟ್ಟಿರುವರು. ಉದ್ಯೋಗಗಳಿಗೆ ಪಾರಮಾರ್ಥಿಕ ಸ್ವರೂಪವನ್ನು ಕೊಟ್ಟವರು ವೀರಶೈವ ಶರಣರು ಮಾತ್ರ ಎಂಬುದು ಗಮನಿಸಬೇಕಾದ ಒಂದು ಮುಖ್ಯ ವಿಷಯವು. ವೀರಶೈವ ಸಮಾಜವು ಹೇಗೆ ಪಾರಮಾರ್ಥಕ್ಕೆ ಒಲಿದ ಸಮಾಜವಾಗಿದೆಯೋ ಹಾಗೆಯೇ ಅದು ಉದ್ಯೋಗಕ್ಕೆ ಅಷ್ಟೇ ಪ್ರಾಧಾನ್ಯತೆಯನ್ನು ಕೊಟ್ಟ ಸಮಾಜವಾಗಿದೆ. ಹಾಗಾಗಿ ಅವರೆಲ್ಲ ತಮ್ಮ ತಮ್ಮ ಕಾಯಕ ಮತ್ತು ಧ್ಯೇಯಗಳ ಮೂಲಕವೇ ಪರಮಾತ್ಮನನ್ನು ಮೆಚ್ಚಿಸಿದರು ಮತ್ತು ಪರಮಾತ್ಮನ ಕೃಪೆಗೆ ಪಾತ್ರರಾದರು. ಅವರು ನಂಬಿದ ತತ್ವಗಳಿಗೆ, ಆರಿಸಿಕೊಂಡ ಧ್ಯೇಯಗಳಿಗೆ ಅನುಗುಣವಾಗಿ ನಿಷ್ಠೆಯಿಂದ ನಡೆದುಕೊಂಡರು ಹಾಗೂ ಪರಮಾತ್ಮನನ್ನು ಮೆಚ್ಚಿಸುವಲ್ಲಿ ಶಕ್ತರಾದರು. ಯಾವುದೇ ಪಾತ್ರವಿರಲಿ, ನಿಷ್ಠೆಯು ಬಹು ಮುಖ್ಯವಾದ ಮತ್ತು ನಿಜವಾದ ಶಕ್ತಿಯೆಂದು ಸಿದ್ಧಪಡಿಸಿ ತೋರಿಸಿರುವರು.

ಮೇಲೆ ವಿವರಿಸಲಾದ ಹಲವು ಪವಾಡಗಳು ಅಥವಾ ಅದ್ಭುತಗಳ ಬಗ್ಗೆ ಹೇಳುವುದಾದರೆ ಅವು ಹಿಂದೂ ಸಮಾಜದ ವಿಚಾರ ಸರಣಿ, ಭಾವನೆ, ಕಲ್ಪನೆ, ನಂಬಿಕೆಗಳಿಗೆ ಅನುಗುಣವಾಗಿವೆ ಎಂದು ಹೇಳಬೇಕಾಗುತ್ತದೆ. ಅಂಥವುಗಳು ಬೌದ್ಧರಲ್ಲೂ, ಜೈನರಲ್ಲೂ ಕಾಣಬರುತ್ತವೆ. ಸಂಕ್ಷಿಪ್ತವಾಗಿ, ಹಿಂದುಗಳ ಪರಂಪಾರಗತ ವಿಷ್ಣುವಿನ ದಶಾವತಾರಗಳು, ಶಿವನ ಇಪ್ಪತ್ತೈದು ಲೀಲೆಗಳು, ರಾಮಾಯಣ, ಮಹಾಭಾರತ, ಅನೇಕ ಪುರಾಣಗಳು ಅವುಗಳಲ್ಲಿ ಅಂತರ್ಗತವಾಗಿರುವ ನೂರಾರು ಕಥೆಗಳು ಮತ್ತು ಉಪ ಕಥೆಗಳು ಎಷ್ಟು ಸುಸಂಬದ್ಧ, ಪ್ರಸಂಗೋಚಿತ ಮತ್ತು ಸಮಂಜಸವಾದುವುಗಳಾಗಿವೆಯೋ, ಹಾಗೆಯೇ ಮೇಲೆ ವಿವರಿಸಲಾಗಿರುವ ಪವಾಡಗಳೂ ಎಂದು ಗ್ರಹಿಸಬೇಕು. ಅವೆಲ್ಲವುಗಳ ಮೂಲ ಉದ್ದೇಶವು ಮಾನವನು ಪರಮಾತ್ಮನಲ್ಲಿ ದೃಢವಾದ ಭಕ್ತಿ ಮತ್ತು ನಂಬಿಕೆಗಳನ್ನಿರಿಸಿ, ಧರ್ಮನಿಷ್ಠನಾಗಿದ್ದು, ರುಜುಮಾರ್ಗದಲ್ಲಿ ಜೀವನ ನಡೆಯಿಸುವಂತೆ ಪ್ರೇರೆಪಿಸುವುದೇ ಆಗಿದೆ.

ಬುಕ್ಕಸಾಗರವು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಒಂದು ಪ್ರಮುಖ ಸ್ಥಳವಾಗಿದ್ದಿತಲ್ಲದೆ, ಶೈವ/ವೀರಶೈವ ಧರ್ಮದವರ ಚಟುವಟಿಕೆಗಳ ಕೇಂದ್ರಗಳಲ್ಲೊಂದಾಗಿತ್ತು. ಪ್ರೌಢದೇವರಾಯನ ಆಸ್ಥಾನದ ಮಹಾಪ್ರಧಾನರಲ್ಲೊಬ್ಬನಾಗಿದ್ದ ಲಕ್ಕಣ ದಂಡೇಶನು ತನ್ನ ಪ್ರಸಿದ್ಧ ಗ್ರಂಥವಾದ 'ಶಿವತತ್ವ ಚಿಂತಾಮಣಿ' ಯಲ್ಲಿ ಆ ಬುಕ್ಕಸಾಗರವನ್ನು ಕುರಿತು '..... ಶಿವಲಾಂಛನಕ್ಕೆ ವಂಚನೆಯಿಲ್ಲದುಳ್ಳದರಿದಿತ್ತು ..... ಸೋಮಭಾವ ಸನ್ನದ್ಧರಾಗಿ ನಿಸ್ಪೃಹತೆಯಿಂದ ಒಕ್ಕಲೂರಾಗಿ ಲೌಕಿಕರಂದದಲಿ ಮಡದಿ ಮಕ್ಕಳಂ ಕೂಡಿಕೊಂಡಿರುತ ಭವಹರರಾದ ಬುಕ್ಕಸಾಗರದ ಭಕ್ತ ಮಹೇಶ್ವರರ ಚರಣಾಂಬುಜಕ್ಕೆ ಶರಣು' ಎಂದು ಹೇಳಿರುತ್ತಾನೆ. ಎಂದರೆ, ಆ ಗ್ರಾಮವು ವೀರಶೈವ ಭಕ್ತ, ಮಹೇಶ್ವರರಿಂದ ನಿಬಿಡವಾದ, ಪ್ರಗತಿಪರವಾದ ಒಕ್ಕಲೂರು ಗ್ರಾಮವಾಗಿತ್ತು. ಅಲ್ಲದೆ ಹಂಪೆಯ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿತವಾಗಿರುವ, ಕ್ರಿ.ಶ. 1612 ರಲ್ಲಿ ಹೊರಡಿಸಲಾದ ತಾಮ್ರ ಪತ್ರಗಳ ಮೇಲೆ ಬರೆಯಲಾಗಿರುವ ದಾನ ಶಾಸನದ ಪ್ರಕಾರ '..... ಹಂಪೆಯ ಸಿಂಹಾಸನದ ಪಂಚಮಠ ಪಂಚಗೃಹದೊಳಗಾದ ಬುಕ್ಕಸಾಗರವು' ಆದಾಗಿತ್ತು. ಮತ್ತು ಅಲ್ಲಿ ವೀರಶೈವರ ಒಂದು ಶಾಖಾ ಮಠ, 'ಹಂಪೆಯ ಮಠ' ಇದ್ದುದಾಗಿ ವಿವರಿಸುತ್ತಾ ಆ ಶಾಖಾ ಮಠಕ್ಕೆ ಕರ್ತರಾಗಿದ್ದಂಥಾ ಸಿದ್ಧಬಸವರಾಜದೇವರಿಗೆ ಜಂಗಮಾರ್ಚನೆ ಹಾಗೂ ಅನ್ನ ದಾಸೋಹಕ್ಕಾಗಿ, ಕಲ್ಲುಗುಡಿ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟಿರುವ ವಿಷಯವನ್ನು ದಾಖಲಿಸುತ್ತದೆ. ಹೆಸರೇ ಸೂಚಿಸುವಂತೆ, ಆ ಗ್ರಾಮವು ಸಂಗಮ ವಂಶದ ಎರಡನೇ ಅರಸು, ಬುಕ್ಕರಾಜನ ಹೆಸರಿನಿಂದ ನಾಮಾಂಕಿತವಾಗಿರಲೂ ಸಾಕು. ಹಾಗೂ ಆ ಗ್ರಾಮಕ್ಕೆ ಸಮೀಪದಲ್ಲಿಯೇ ವಿಜಯನಗರದ ಸಂಗಮ ವಂಶದ ಅರಸರಿಂದ (ಬುಕ್ಕರಾಯನಿಂದ?) ತುಂಗಭದ್ರಾ ನದಿಗೆ ಅಡ್ಡವಾಗಿ ಕಟ್ಟಲಾದ ಅಣೆಕಟ್ಟಿನಿಂದ ನಿರ್ಮಾಣವಾದ ಜಲಾಶಯದ ಸಂಕೇತವಾಗಿ ಆ ಗ್ರಾಮವನ್ನು ಬುಕ್ಕಸಾಗರ (ಬುಕ್ಕ + ಸಾಗರ) (ಜಲಾಶಯ) ಎಂದು ಕರೆದಿರಬಹುದು.

ಆಕರ ಗ್ರಂಥಗಳು

ಹಿರೇಮಠ ಆರ್.ಸಿ. ಮತ್ತು ಸುಂಕಾಪುರ ಎಂ.ಎಸ್. (ಸಂ.), 1968, *ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ* (ಶಾಂತಲಿಂಗದೇಶಿಕ ವಿರಚಿತ), ಧಾರವಾಡ, ಭಾಗ 1 ಮತ್ತು 2.

ಉಮಾಪತಿ ಎಸ್. (ಸಂ.), 1979, *ಉತ್ತರ ದೇಶದ ಬಸವಲಿಂಗ ವಿರಚಿತ ಬಸವೇಶ್ವರ ಪುರಾಣ ಕಥಾ ಸಾಗರ,* ಮೈಸೂರು.

ಕೆಡಿಲಾಯ ಎ.ಎಸ್., 1974, *ಶೇಕ್ಕಿಳಾರನ ಪೆರಿಯ ಪುರಾಣ* (ಭಾಷಾಂತರ), ಮದ್ರಾಸು.

ಕಲಬುರ್ಗಿ ಎಂ.ಎಂ., 1988, *ಮಾರ್ಗ* ಭಾಗ 1 ಮತ್ತು 2, ಬೆಂಗಳೂರು.

– – 1978, *ಶಾಸನಗಳಲ್ಲಿ ಶಿವಶರಣರು,* ಗದಗ.

– – *ಅಬ್ಬಲೂರಿನ ಚರಿತೆ* (ಕರ್ನಾಟಕ ಭಾರತಿಯಲ್ಲಿ), ಧಾರವಾಡ.

ಹೀರೇಮಠ ಆರ್.ಸಿ. (ಸಂ.), 1968, *ಷಡಕ್ಷರ ದೇವನ ಬಸವರಾಜ ವಿಜಯಂ,* ಧಾರವಾಡ.

ಘೇವಾರಿ ಎಸ್.ಜೆ. ಮತ್ತು ಮರಾಠೆ ಆರ್. (ಸಂ.), 1983, *ಶಿವಶರಣರ ನಾಲ್ಕು ರಗಳೆಗಳು,* ಹೊಸಪೇಟೆ.

ದೇವೀರಪ್ಪ ಹೆಚ್. (ಸಂ.), 1950, *ಸಿಂಗಿರಾಜ ಪುರಾಣ,* ಮೈಸೂರು.

ಹಳಕಟ್ಟಿ ಫ.ಗು., 1944-1951, *ಶಿವಶರಣರ ಚರಿತೆಗಳು,* ಬಿಜಾಪುರ, ಭಾಗ 1, 2 ಮತ್ತು 3.

ಇಸ್ಮಾಯಿಲ್ ಡಿ., *ಏಕಾಂತದ ರಾಮಯ್ಯ,* ಚೆನ್ನುಡಿ ಪತ್ರಿಕೆಯಲ್ಲಿ, ಶಿವಮೊಗ್ಗ.

2. ವಿಜಯನಗರದ ಚಿತ್ರ ಶೈಲಿಯ ಕಿನ್ನಾಳದ ರೇಖಾ ಚಿತ್ರಗಳು

– ಆರ್.ಎಚ್. ಕುಲಕರ್ಣಿ

ಹಿನ್ನೆಲೆ:

ಚಿತ್ರಕಲೆಯಲ್ಲಿ ರೇಖಾ ಚಿತ್ರಗಳದು ಅತ್ಯಂತ ಮುಖ್ಯ ಪಾತ್ರ. ಯಾವುದೇ ಒಂದು ಆಕೃತಿಯ ರಚನೆ ಆಗಬೇಕಾದರೆ ರೇಖೆಗಳೆ ಅದನ್ನು ನಿರ್ದೇಶಿಸಬೇಕು. ರೇಖೆಗಳು ವಿವಿಧ ರೂಪಗಳೊಡನೆ, ಭಾವ-ಭಂಗಿಗಳೊಡನೆ ಲಾಲಿತ್ಯದಿಂದ ಕೂಡಿ ಆಕೃತಿಯನ್ನು ತಯಾರಿಸುತ್ತವೆ. ರೇಖೆಗಳಲ್ಲಿನ ಸತ್ವ ಮತ್ತು ಜೀವಂತಿಕೆ ಆಕೃತಿಗಳನ್ನು ಆಕರ್ಷಕವಾಗಿಸುವುದಲ್ಲದೇ ಅವುಗಳಲ್ಲಿ ಅಘಾದವಾದ ಚಾಲನೆಯನ್ನೂ ತುಂಬುತ್ತವೆ. ಆದುದರಿಂದ ರೇಖಾಚಿತ್ರಗಳು ಯಾವುದೇ ಆಕೃತಿಗಳ ಜೀವಾಳವಾಗಿವೆ. ಚಿತ್ರಕಲೆಯ ಯಾವುದೇ ಮಾಧ್ಯಮವಿರಲಿ, ಉದಾಹರಣೆಗೆ: ತೈಲ, ಜಲ, ಭಿತ್ತಿ, ಚಿಕಣಿ ಇತ್ಯಾದಿ - ಎಲ್ಲ ಮಾಧ್ಯಮಗಳಲ್ಲಿ ರಚಿತವಾಗುವ ಪ್ರತಿಯೊಂದು ಆಕೃತಿಗೂ ರೇಖಾ ಚಿತ್ರಗಳೇ ಮೂಲ ಆಧಾರ. ಹೀಗಾಗಿ ರೇಖೆಗೆ ರೇಖಾ ಚಿತ್ರಗಳ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ವೈಶಿಷ್ಟ್ಯತೆ ಇದೆ.

ಐತಿಹಾಸಿಕವಾಗಿ ಭಾರತದಲ್ಲಿ ಚಿತ್ರಕಲೆಯ ಬೆಳವಣಿಗೆಯನ್ನು ಗಮನಿಸಿದರೆ ಅವುಗಳಲ್ಲಿನ ವಿವಿಧ ಹಂತಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಪ್ರಾಚೀನ ಮಾನವನ ಗುಹಾಂತರ ಚಿತ್ರಗಳಿಂದ ಹಿಡಿದು ಅಜಂತಾ, ಭಾಗ್‌ನಲ್ಲಿಯ ಬೌದ್ಧ ಧರ್ಮದ ಚಿತ್ರಗಳು, ಬಾದಾಮಿ, ಎಲ್ಲೋರಾಗಳಲ್ಲಿನ ವೈದಿಕ ಸಂಪ್ರದಾಯದ ಭಿತ್ತಿ ಚಿತ್ರಗಳು, ದಕ್ಷಿಣದ ತಂಜಾವೂರು, ಚಿತ್ತನವಾಸಲ್ ಇತ್ಯಾದಿ ಸ್ಥಳಗಳ ಭಿತ್ತಿ ಚಿತ್ರಗಳಲ್ಲಿಯ ಆಕೃತಿಗಳೆಲ್ಲವೂ ರೇಖಾ ಪ್ರಧಾನವಾದವುಗಳೆ. ಇನ್ನು ನಂತರದ ಕಾಲದಲ್ಲಿಯ ಮೊಗಲ್, ರಾಜಸ್ಥಾನಿ, ಪಹಾಡಿ ಚಿಕಣಿ ಚಿತ್ರಗಳು ಮತ್ತು ಜೈನ ತಾಳೆಗರಿ ಹಸ್ತಪ್ರತಿಗಳಲ್ಲಿನ ಚಿತ್ರಗಳು ಹಾಗೂ ವಿಜಯನಗರ ಕಾಲದ ಹಂಪಿ, ಲೇಪಾಕ್ಷಿ ಮತ್ತು ತಾಡಪತ್ರಿಗಳಲ್ಲಿನ ಭಿತ್ತಿ ಚಿತ್ರಗಳೆಲ್ಲವೂ ರೇಖಾಪ್ರಧಾನವಾದ ಚಿತ್ರಗಳೆ. ಈ ಮೇಲೆ ಹೆಸರಿಸಿದ ಉದಾಹರಣೆಗಳಲ್ಲಿ ಆಕೃತಿಗಳ ಬಾಹ್ಯರೇಖೆಗಳಾಗಿ, ಅವುಗಳಲ್ಲಿನ ವಿವಿಧ ಅಂಶಗಳನ್ನು ತೋರಿಸುವ ಸಾಧನಗಳಾಗಿ ರೇಖೆಗಳೇ ಆಕೃತಿಗಳ ನಿರ್ದಿಷ್ಟ ರೂಪರೇಷೆಗಳನ್ನು ನಿರ್ದೇಶಿಸುತ್ತವೆ.

ಪ್ರಸ್ತುತ ಚರ್ಚೆಯಲ್ಲಿರುವ ರೇಖಾ ಚಿತ್ರಗಳು ಈ ಮೇಲಿನ ಬೆಳವಣಿಗೆಯ ಒಂದು ಅಂಗವಾಗಿವೆ. ವಿಜಯನಗರ ಕಾಲದಲ್ಲಿ ಭಿತ್ತಿಚಿತ್ರ ಪರಂಪರೆಯ ಪುನರುಜ್ಜೀವನಗೊಂಡ ಮೇಲೆ ಉಳಿದ ಪ್ರಕಾರದ ಕಲೆಗಳೂ ಕೂಡ ಈ ಕ್ರಿಯಾತ್ಮಕ ಚಟುವಟಿಕೆಗಳ ಭಾಗವಾಗಿ ಬೆಳೆಯಲು ಪ್ರಾರಂಭವಾದವು. ಅದರಲ್ಲೂ ಮುಖ್ಯವಾಗಿ ದೇವಸ್ಥಾನದ ಒಳಗೋಡೆಗಳ ಅಲಂಕರಣ, ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದ ಕಲಾವಿದರುಗಳಲ್ಲಿ ಚಿತ್ರ ರಚನೆ ಪರಂಪರಾಗತವಾಗಿ ಬೆಳೆದು ಬಂದಿತ್ತು. ಅದರ ಶಿಷ್ಟ ಬೆಳವಣಿಗೆ ಪ್ರೌಢಿಮೆಯತ್ತ ತಿರುಗಿ ವಿಜಯನಗರದ ಕಾಲದಲ್ಲಿ ಅದಕ್ಕೊಂದು ಸ್ಪಷ್ಟ ಸ್ಥಾನ ದೊರಕಿಸಲು ಸಾಧ್ಯವಾಯಿತು.

ಕಿನ್ನಾಳದ ರೇಖಾ ಚಿತ್ರಗಳು:

ಪ್ರಸ್ತುತ ರೇಖಾ ಚಿತ್ರಗಳನ್ನು ಕೊಪ್ಪಳ ಜಿಲ್ಲೆಯ ಕಿನ್ನಾಳದ ಚಿತ್ರಕಲಾವಿದರಲ್ಲಿ ಹಿಂದಿನಿಂದಲೂ ಉಳಿದುಕೊಂಡು ಬಂದಿರುವ ಅಭ್ಯಾಸ ಪುಸ್ತಕ (Sketch Book)ದಿಂದ ಆಯ್ದುಕೊಳ್ಳಲಾಗಿದೆ.[1] ಕಿನ್ನಾಳದ ಕಲಾವಿದರು ಈಗಲೂ 'ಚಿತ್ರಗಾರ' ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಾರೆ. ಅಂದರೆ ಪರಂಪರಾಗತವಾಗಿ ಚಿತ್ರರಚನೆ ಅಥವಾ ಇದಕ್ಕೆ ಸಂಬಂಧಿಸಿದ ಕೆಲಸಗಳನ್ನು ಅವರು ಮಾಡುತ್ತಲೆ ಬಂದಿದ್ದಾರೆ. ಕಿನ್ನಾಳದ ರೇಖಾಚಿತ್ರಗಳು ವೈವಿಧ್ಯಮಯವಾದ ವಿಷಯ ವ್ಯಾಪ್ತಿಯನ್ನು ಹೊಂದಿವೆ. ಸುಮಾರು 10 ಅಂಗುಲ ಉದ್ದ, 7 ಅಂಗುಲ ಅಗಲ ಅಳತೆಯಲ್ಲಿರುವ ಈ ಚಿತ್ರಗಳಲ್ಲಿ ದಶಾವತಾರ, ರಾಮಾಯಣ, ಮಹಾಭಾರತ, ರಾಜ-ರಾಣಿಯರ ಚಿತ್ರಗಳು, ದೈನಂದಿನ ಬದುಕಿನ ವಿವಿಧ ಮಜಲುಗಳನ್ನು ಬಿಂಬಿಸುವ ಚಿತ್ರಗಳು ಹಾಗೂ ಕಾಮ-ರತಿಯರ ಮತ್ತು ಬಿಡಿ-ಬಿಡಿಯಾಗಿ ಇನ್ನಿತರ ದೇವ ದೇವತೆಯರ ಚಿತ್ರಗಳೂ ರೇಖಾಕೃತಿಯಲ್ಲಿ ಮೂಡಿಬಂದಿವೆ. ಈ ಮೇಲಿನ ಚಿತ್ರಗಳು ಒಂದು ಭಾಗವಾದರೆ, ದೇವಾಲಯಗಳ ಗೋಡೆಗಳ, ಗರ್ಭಗೃಹದ ಬಾಗಿಲುಗಳ ಮತ್ತು ಉತ್ಸವ ಮೂರ್ತಿಗಳನ್ನು ಇಡುವ ಪಲ್ಲಕ್ಕಿಗಳ ಪಕ್ಕದ ಪಟ್ಟೆ ಹಲಗೆಗಳ ಮೇಲೆ ಅಲಂಕರಣಗಳಾಗಿ ಚಿತ್ರಣವಾಗಿವೆ. ರಾಮ-ಸೀತೆಯರ ಸಭಾ, ಶಿವಪಾರ್ವತಿ ಸಭಾ, ಅನಸೂಯ ತ್ರಿಮೂರ್ತಿಗಳಿಗೆ ಭಿಕ್ಷೆ ನೀಡುವ ದೃಶ್ಯಗಳು ಪ್ರಮುಖ ಉದಾರಹಣೆಗಳು. ಇವೆಲ್ಲ ಶೈಲಿಯಲ್ಲಿ ಕೊಂಚ ವಿಭಿನ್ನವಾಗಿವೆ. ಮೊದಲಿನ ಚಿತ್ರಗಳು ಚಿಕಣಿ ಚಿತ್ರಗಳ ಹಾಗೆ ಶಿಷ್ಟಶೈಲಿಯನ್ನು ಹೊಂದಿವೆ. ಆದರೆ ಈ ಚಿತ್ರಗಳು ಸಭಾ ಚಿತ್ರಗಳು. ಉದ್ದದ ಪಟ್ಟಿಯ ಮೇಲೆ ಈ ಚಿತ್ರಗಳು ಚಿತ್ರಿತವಾಗಿವೆ.

ಕಿನ್ನಾಳದ ಕಲಾವಿದರಲ್ಲಿ ಈ ಚಿತ್ರಗಳು ವಿಭಿನ್ನ ವಿಷಯ ಮತ್ತು ಆ ಕಾಲದ ಶೈಲಿಗಳನ್ನು ಹೊಂದಿ ಬೆಳೆದಿವೆ. ಈ ಕಲಾವಿದರ ಬಗ್ಗೆ ಸೂಕ್ಷ್ಮವಾಗಿ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಈ ಕಲಾವಿದರನ್ನು ಕುರಿತಂತೆ ತಿಳಿಯುವ ಪ್ರಯತ್ನ ಮಾಡಿದಾಗ ಅವರ ಪೂರ್ವಜರು ವಿಜಯನಗರ ಸಾಮ್ರಾಜ್ಯದಲ್ಲಿ ರಥಗಳ ನಿರ್ಮಾಣ, ದೇವಸ್ಥಾನಗಳ ಅಲಂಕರಣ, ಭಿತ್ತಿಚಿತ್ರಗಳ ರಚನೆ, ಮರದಲ್ಲಿ ಉತ್ಸವ (ದೇವರ ವಾಹನ) ಮೂರ್ತಿಗಳನ್ನು ನಿರ್ಮಿಸುವುದರಲ್ಲಿ ಹಾಗೂ ಗೌರಿಹಬ್ಬದ ಗೌರಿಯ ಮರದ ವಿಗ್ರಹ ಮಾಡುವುದರಲ್ಲೂ ನಿಷ್ಣಾತರಾಗಿದ್ದರು ಎಂದು ತಿಳಿದು ಬರುತ್ತದೆ. ಆದರೆ ಪೂರ್ವಜರು ಅಂದು ರಚಿಸಿದ, ಚಿತ್ರಿಸಿದ ಯಾವುದೇ ಕಲಾಕೃತಿಗಳ ಸ್ಪಷ್ಟ ದಾಖಲೆ ನಮಗೆ ದೊರೆಯುವುದಿಲ್ಲ. ಬಹುಶಃ ಆ ತರಹದ ದಾಖಲೆಗಳನ್ನು ಸಂರಕ್ಷಿಸುವುದು ಅವಶ್ಯಕವಾಗಿ ಕಂಡಿಲ್ಲವೆಂದೇ ತೋರುತ್ತದೆ. ಅವರ ಈಗಿನ ಕಲಾಕೃತಿಗಳನ್ನು ಮತ್ತು ಅವರಲ್ಲಿ ಸಂಗ್ರಹವಾಗಿರುವ ಕೆಲವೇ ಕೆಲವು ಕಲಾಕೃತಿಗಳನ್ನು ಗಮನಿಸಿದಾಗ ಮತ್ತು ಪ್ರಸ್ತುತವಾಗಿ ನಾವು ವಿಶ್ಲೇಷಣೆ ಮಾಡುತ್ತಿರುವ ರೇಖಾ ಚಿತ್ರಗಳನ್ನು ಅವುಗಳ ಶೈಲಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಜಯನಗರ ಕಾಲದ ಕಲಾತ್ಮಕ ಅಂಶಗಳನ್ನು ಸ್ಪಷ್ಟವಾಗಿ ಮೈಗೂಡಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಕಿನ್ನಾಳದಲ್ಲಿರುವ ಚಿತ್ರಗಾರ ಕುಟುಂಬದ ಕಲಾವಿದರು ಈಗಲೂ ಕೂಡ ಈ ಮೊದಲು ಚರ್ಚಿಸಿದ ಕೆಲಸಗಳನ್ನು ಮಾಡುತ್ತಾರೆ. ಅದೇ ಅವರ ತುತ್ತಿನ ಚೀಲ ತುಂಬಿಸುವ ಮುಖ್ಯ ಕಸಬೂ ಹೌದು.

ರೇಖಾ ಚಿತ್ರಗಳ ಚರ್ಚೆ:

ರೇಖಾ ಚಿತ್ರಗಳನ್ನು ಅಭ್ಯಸಿಸುವ ಮೊದಲು ಪ್ರಸ್ತುತ ಚಿತ್ರಗಳ ಕಲಾವಿದನ ಕುರಿತು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ಚಿತ್ರಗಳನ್ನು ರಚಿಸಿದ ಕಲಾವಿದನ ಹೆಸರು ಎಲ್ಲೂ ದಾಖಲಾಗಿಲ್ಲ. ಅಂದರೆ ನಾನು ನೋಡಿದ ಅಭ್ಯಾಸ ಪುಸ್ತಿಕೆಯಲ್ಲಿ (Sketch Book) ಎಲ್ಲೂ ಪ್ರಸ್ತುತ ರೇಖಾಚಿತ್ರಗಳ ಕಲಾವಿದನ ಹೆಸರು ಇರುವಂತೆ ಇಲ್ಲ. ಆದರೆ ಒಂದಂತೂ ನಿಜ, ಈ ಕಲಾಕೃತಿಗಳು ಮೂಲದಲ್ಲೇ ರಚಿತವಾದವು. ಈ ಪುಸ್ತಕ ಅವರ ಪೂರ್ವಜರರಿಂದ ತಮಗೆ ದೊರಕಿತೆಂದು ತಿಳಿಸುತ್ತಾರೆ ಶ್ರೀ ನಾರಾಯಣಪ್ಪ ಚಿತ್ರಗಾರ. ಪ್ರತಿಯೊಂದು ರೇಖಾಚಿತ್ರಗಳ ಗುಣಮಟ್ಟ ರೇಖಾವಿನ್ಯಾಸದ ಶೈಲಿಯನ್ನು ಗಮನಿಸಿದಾಗ ಇವು ವಿಜಯನಗರದ ಪತನದ ನಂತರದಲ್ಲಿ ರಚಿತವಾದವು ಎಂದು ಸ್ಪಷ್ಟವಾಗಿ ಹೇಳಬಹುದು. ಇವುಗಳಿಗೆ ಮೂಲವಾಗಿ ಅಂದು ರಚಿತವಾದ ಹಲವಾರು ಚಿತ್ರಗಳು ಇದ್ದಿರಲೇ ಬೇಕು. ಅವುಗಳ ಆಧಾರದ ಮೇಲೆ ಪ್ರಸ್ತುತ ರೇಖಾಚಿತ್ರಗಳು ರಚಿತವಾಗಿರಬೇಕೆಂದು ತೋರುತ್ತದೆ.

ಪ್ರಸ್ತುತ ರೇಖಾಚಿತ್ರಗಳು ಚಿಕಣಿ ಚಿತ್ರಗಳ (Miniature) ಮಾದರಿಯಲ್ಲಿವೆ. ನೀಳವಾದ, ಸ್ಪಷ್ಟವಾದ ಮತ್ತು ತೀಕ್ಷ್ಣವಾದ ರೇಖೆಗಳು ಆಕೃತಿಗಳನ್ನು ರಚಿಸುತ್ತವೆ. ರೇಖೆಗಳು ಲಯಬದ್ಧವಾಗಿ ನಾಣ್ಯದ ಮುದ್ರೆಯಂತೆ ಆಕೃತಿಗಳನ್ನು ನಿರ್ದೇಶಿಸುತ್ತವೆ. ನಯವಾದ ಮತ್ತು ಸೂಕ್ಷ್ಮವಾದ ರೇಖೆಗಳನ್ನು ಖಂಡರಿಸಿದಂತೆ ಸ್ಪಷ್ಟವಾಗಿ ವಿವಿಧ ಭಂಗಿಗಳನ್ನು, ರೂಪಗಳನ್ನು ಮತ್ತು ಅಂಗಗಳ ಭಾಗಗಳನ್ನು ಸಮರಸವಾಗಿ ನಿರ್ದೇಶಿಸುತ್ತವೆ. ಪ್ರಸ್ತುತ ರೇಖಾ ಚಿತ್ರಗಳು ಸೂಕ್ಷ್ಮವಾದ ಕುಂಚದಿಂದ ಅಥವಾ ಚೂಪಾದ ಲೇಖನಿಯಿಂದ ರಚಿತವಾಗಿವೆ.[2]

ಆಕೃತಿಗಳು ರೇಖಾಕೃತಿಗಳಾಗಿದ್ದರೂ ರೇಖೆಗಳ ಪರಿಪೂರ್ಣತೆ ಅವುಗಳಲ್ಲಿ ಘನತ್ವವನ್ನು ಮತ್ತು ಚಾಲನ ಶಕ್ತಿಯನ್ನು ತುಂಬುತ್ತದೆ. ಆಕೃತಿಗಳ ನೇರವಾದ ಸಂಯೋಜನೆ ಹಾವ-ಭಾವಗಳನ್ನು ತುಂಬಿ, ಒಂದಕ್ಕೊಂದು ಸಂಭಾಷಿಸುವಂತಿವೆ. ಸಂಯೋಜನೆಯಲ್ಲಿ ಕಂಡುಬರುವ ಚಾಲನೆಯ ಸ್ಥರವನ್ನು ಗುರುತಿಸುವ ಮತ್ತು ನಿಯಂತ್ರಿಸುವ ಶಕ್ತಿ, ಮತ್ತೊಂದು ಆಕೃತಿಯೊಂದಿಗಿನ ಸಂಬಂಧಗಳಲ್ಲಿ ಆಂತರಿಕ ಮತ್ತು ಬಾಹ್ಯವಾದ ನೇರ ಹೊಂದಾಣಿಕೆ ಕಂಡುಬರುತ್ತದೆ. ಈ ಒಂದು ಸಂಬಂಧ ಆಕೃತಿಗಳಲ್ಲಿ ನಾಟಕೀಯತೆಯನ್ನು ತುಂಬಿ ಒಟ್ಟಾರೆ ಸಂಯೋಜನೆಯನ್ನು ಅತ್ಯಂತ ಅರ್ಥಪೂರ್ಣವಾಗಿಸುತ್ತದೆ.

ರೇಖಾಕೃತಿಗಳ ರಚನೆಯಲ್ಲಿ ಕಲಾವಿದ ಅತ್ಯಂತ ಪ್ರಜ್ಞಾವಂತನಾಗಿ ತನ್ನ ಈ ರಚನೆಯಲ್ಲಿ ತನ್ನತನವನ್ನು ಅಭಿವ್ಯಕ್ತಪಡಿಸುತ್ತಾನೆ. ಆಕೃತಿಗಳ ಹಿಂಭಾಗ, ಮುಂಭಾಗ ಮತ್ತು ಪಕ್ಕದ ಭಾಗಗಳನ್ನು ತೋರಿಸುವ ಚಮತ್ಕಾರಿಕೆ ವಿಸ್ಮಯಗೊಳಿಸುವಂಥದ್ದು. ಸಾಮಾನ್ಯವಾಗಿ ಸಮನಾದ ಚಪ್ಪಟೆ ಮೇಲ್ಮೈಯಲ್ಲಿ ರಚಿಸುವ ಚಿತ್ರಗಳಿಗೆ ಅವುಗಳದೇ ಆದ ಹಿಡಿತವಿದೆ. ಘನಾಕೃತಿಗಳಲ್ಲಿರುವ ತಾವಿನ ಅವಕಾಶ ಮತ್ತು ಅದನ್ನು ಉಪಯೋಗಿಸಲು ಇರುವ ವಿವಿಧ ಮಾರ್ಗಗಳು ಚಿತ್ರಗಳಲ್ಲಿ ಆಗದು. ಈ ಘನತ್ವವನ್ನು ಹಾಳೆಗಳ ಮೇಲೆ ಕಣ್ಣೆಲೆಗಳ ವಿವಿಧ ಅಂಶಗಳನ್ನು ತುಂಬಿ ತನ್ನದೇ ಆದ ಸಂಯೋಜನೆಯಿಂದ ರಚಿಸುತ್ತಾನೆ. ಆಕೃತಿಗಳನ್ನು ವಿವಿಧ ಅಳತೆಗೆ ರಚಿಸಿ ಸ್ಥಳದ ಆ ವಾತಾವರಣದ ಭ್ರಮೆಯನ್ನು ಮೂಡಿಸುತ್ತಾನೆ. ಹಿನ್ನೆಲೆ ಮುನ್ನೆಲೆಗಳಿಗೆ ಸರಿಹೊಂದುವ ಆಕೃತಿಗಳ ರಚನೆ ಇದಕ್ಕೆ ಪೂರಕವಾಗಿ ನಡೆಯುತ್ತದೆ.[3] ಅವುಗಳ ಬಾಹ್ಯಲಕ್ಷಣಗಳು ಸ್ಪಷ್ಟವಾಗಿ ಸಮಕಾಲೀನ ಶಿಲ್ಪಗಳೊಂದಿಗೆ ಸಾಮ್ಯತೆ ಹೊಂದುತ್ತವೆ. ವಿಜಯನಗರ ಕಾಲದ ಶಿಲ್ಪ ಶೈಲಿ ಮತ್ತು ಭಿತ್ತಿ ಚಿತ್ರಗಳಲ್ಲಿನ ಆಕೃತಿಗಳಲ್ಲಿನ ಸಾಮ್ಯತೆಯನ್ನು ಹಂಪಿಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದ ಒಳಮಾಳಿಗೆಯಲ್ಲಿನ ಭಿತ್ತಿಗಳನ್ನು ಮತ್ತು ಲೇಪಾಕ್ಷಿಯ ಭಿತ್ತಿ ಚಿತ್ರಗಳನ್ನು ಉದಾಹರಣೆಯಾಗಿಟ್ಟುಕೊಂಡು ನೋಡಬಹುದು.[4]


ನರಸಿಂಹ ಅವತಾರ (ಚಿತ್ರ 1):

ಈ ಚಿತ್ರದಲ್ಲಿ ನರಸಿಂಹ ಕಂಬವನ್ನು ಸೀಳಿಕೊಂಡು ಹೊರಬರುವ ದೃಶ್ಯವನ್ನು ಚಿತ್ರಿಸಲಾಗಿದೆ. ನರಸಿಂಹನ ಬಲಗಡೆ ಹಿರಣ್ಯಕಶಿಪುವು ನರಸಿಂಹನೊಂದಿಗೆ ಯುದ್ಧಕ್ಕೆ ಹೊರಡುವಂತೆ ನಿಂತಿದ್ದಾನೆ. ಎಡಗಡೆಯಲ್ಲಿ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದ ತನ್ನ ಕರೆಗೆ ಓಗೊಟ್ಟು ಬಂದ ಸ್ವಾಮಿಯನ್ನು ವಿಸ್ಮಯನಾಗಿ ನೋಡುತ್ತ ಕೈಜೋಡಿಸಿ ನಿಂತಿದ್ದಾನೆ. ಚಿತ್ರದಲ್ಲಿ ನರಸಿಂಹ ದಶಭುಜ ಹೊಂದಿದ್ದು ಮುಂದಿನ ಎರಡು ಕೈಗಳನ್ನು ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆಯಲು ಕಂಬದೊಳಗಿನಿಂದಲೇ ಸನ್ನದ್ಧನಾಗಿ ಬರುವಂತಿದೆ. ಉಳಿದ ಕೈಗಳಲ್ಲಿ ಗದೆ, ಖಡ್ಗ, ಡಾಲು, ಬಿಲ್ಲು-ಬಾಣ, ಶಂಖ, ಚಕ್ರಗಳನ್ನು ತೋರಿಸಿದೆ. ಕಂಬವನ್ನು ಮಧ್ಯದಲ್ಲಿ ಕಲಾತ್ಮಕವಾಗಿ ಟಿಸಿಲುಗಳಾಗಿಸಿರುವ ರೀತಿ, ಅದರಲ್ಲಿಂದ ನರಸಿಂಹನ ಅರ್ಧ ಭಾಗವನ್ನು ತೋರಿಸಿರುವ ರೀತಿ ಅತ್ಯಂತ ಆಕರ್ಷಕವಾಗಿದೆ. ನರಸಿಂಹನ ಕಿರೀಟದ ಹಿಂಭಾಗದಲ್ಲಿ ಅಗ್ನಿಯ ಜ್ವಾಲೆಗಳನ್ನು ತೋರಿಸಿರುವುದು ಸಾಂಕೇತಿಕವಾಗಿ ಅವನು ಹೊರಬರುವ ರಭಸವನ್ನು ತೋರಿಸುತ್ತದೆ. ಇಲ್ಲಿ ನರಸಿಂಹನ ಮುಖದ ಭಾಗವನ್ನು ವಿಶೇಷವಾಗಿ ಮತ್ತು ಹಿರಣ್ಯಕಶಿಪುವಿನ ಮುಖದ ಭಾಗವನ್ನು ಗಮನಿಸಬೇಕು. ಇಲ್ಲಿ ನರಸಿಂಹನ ಮುಖ ವಿಜಯನಗರದ ಹಂಪೆಯ ಯಾವುದೇ ಪ್ರಮುಖ ದೇವಾಲಯಗಳಲ್ಲಿನ ನರಸಿಂಹನ ಶಿಲ್ಪದಂತೆಯೇ ಇದೆ. ದುಂಡನೆಯ ಕಣ್ಣುಗಳು, ಕಿರೀಟ, ಅಗಲವಾಗಿ ಮುಖವಾಡದಂತೆ ಕಾಣುವ ಮುಖ, ಬಾಯಿ, ಗಡ್ಡದ ಭಾಗಗಳು ಶಿಲ್ಪದ ಪ್ರತಿರೂಪದಂತೆ ಕಾಣುತ್ತವೆ.[5] ಇನ್ನು ಹಿರಣ್ಯಕಶಿಪುವಿನ ಮುಖವು ಆ ಕಾಲದ ರಾಜ ಮಹಾರಾಜರನ್ನು ತೋರಿಸುವ ಭಾವಾಕೃತಿಯಂತಿದೆ. ದಪ್ಪನೆಯ ಗುಂಡು ಹುರಿಹಾಕಿದ ಮೀಸೆ, ಅಗಲವಾದ ಮುಖ ಮತ್ತು ಕಣ್ಣುಗಳು ನಾಟಕೀಯವಾಗಿ ಶಿಲ್ಪದ ಪ್ರತಿಕೃತಿಯಂತೆ ಕಾಣುತ್ತವೆ. ಪ್ರಹ್ಲಾದನನ್ನು ಚಿಕ್ಕ ಬಾಲಕನಂತೆ ಲಂಗದಂತಹ ಉಡುಗೆ ಹಾಕಿ, ಒಂದೇ ಪಾರ್ಶ್ವದ ಮುಖಮಾಡಿದಂತೆ ರಚಿಸಿದೆ. ಈ ರೇಖಾಚಿತ್ರಗಳಿಗೆ ತಳಹದಿ ರೇಖೆಯಿಲ್ಲ. ಅಂದರೆ ಅವುಗಳು ನಿಂತ ಸ್ಥಳದ ಅನುಭವವಾಗುವುದಿಲ್ಲ. ಗಾಳಿಯಲ್ಲಿ ತೇಲುವಂತೆ ಆಕೃತಿಗಳನ್ನು ಚಿತ್ರಿಸಲಾಗಿದೆ. ಆದರೆ ನಾವು ತಲರೇಖೆಯನ್ನು ರಚಿಸಿದರೆ ಹಿರಣ್ಯಕಶಿಪು, ನರಸಿಂಹ, ಪ್ರಹ್ಲಾದ ಹೆಚ್ಚು ಕಡಿಮೆ ಒಂದೆ ತಲದ ಮೇಲೆ ಬರುತ್ತಾರೆ. ಈ ರೀತಿಯ ಸಂಯೋಜನೆ ಭಾರತದ ಚಿತ್ರಕಲೆಯಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಅಂದು ಜನಪ್ರಿಯತೆಯಲ್ಲಿದ್ದ ವಸ್ತುಗಳನ್ನೇ ಕಿನ್ನಾಳದ ಕಲಾವಿದ ತೆಗೆದುಕೊಂಡು ಅವುಗಳಿಗೆ ಒಂದು ಸ್ಪಷ್ಟರೂಪವನ್ನು ನೀಡಿದ್ದಾನೆ. ಸಂಯೋಜನೆಗಿಂತ ಆಕೃತಿಗಳ ನಿರ್ದೇಶನ ಕೆಲವೊಂದು ಬಾರಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ವಾಮನ ಅವತಾರ (ಚಿತ್ರ 2):

ಈ ಚಿತ್ರದಲ್ಲಿ ನಾಲ್ಕು ಆಕೃತಿಗಳನ್ನು ಒಂದೇ ತಲರೇಖೆಯ ಮೇಲೆ ನಿಂತಂತೆ ಇರುವ ಹಾಗೆ ಚಿತ್ರಿಸಿದ್ದಾನೆ. ವಾಮನರೂಪಿಯಾದ ವಿಷ್ಣು ಶುದ್ಧ ಬ್ರಾಹ್ಮಣನ ಹಾಗೆ ಛತ್ರವನ್ನು ಹಿಡಿದು ಮೂರು ಪಾದದಷ್ಟು ಭೂಮಿಯನ್ನು ಬಲಿ ಚಕ್ರವರ್ತಿಯಿಂದ ಪಡೆಯುತ್ತಿದ್ದಾನೆ. ಬಲಿ ಚಕ್ರವರ್ತಿಯು ಮುಂದೆ ಆಗುವ ಅನಾಹುತದ ಅರಿವಿದ್ದರೂ ತಾನು ಕೊಟ್ಟ ಮಾತಿನಂತೆ ಭೂದಾನ ನೀಡುವ ಸಂಕಲ್ಪವನ್ನು ಅರ್ಘ್ಯ ಬಿಡುವುದರೊಂದಿಗೆ ಮಾಡುತ್ತಿದ್ದಾನೆ. ಅವನ ಹಿಂದೆ ಅವನ ಹೆಂಡತಿ ಹಾಗೂ ಅವನ ಗುರು ಶುಕ್ರಾಚಾರಿಯನ್ನು ಚಿತ್ರಿಸಲಾಗಿದೆ. ವಾಮನಾಕೃತಿಗೆ ಅಂದಿನ ಸಂಪ್ರದಾಯಸ್ಥ ಬ್ರಾಹ್ಮಣನ ಹಾಗೆ ಅಗಲವಾದ ನಾಮ, ಚಂಡಿಕೆ ಮತ್ತು ಉತ್ತರೀಯಗಳಿಂದ ಚಿತ್ರಿಸಿದ್ದಾನೆ. ಬಲಿ ಚಕ್ರವರ್ತಿಯನ್ನು ಮೇಲಿನ ಚಿತ್ರದ ಹಿರಣ್ಯಕಶಿಪುವಿನ ಮುಖದ ಹಾಗೆ ಚಿತ್ರಿಸಿದ್ದು, ಇಲ್ಲಿ ಕೋರೆಹಲ್ಲುಗಳ ಚಿತ್ರವಿಲ್ಲ. ಬಲಿಯ ಹೆಂಡತಿಯ ಆಕೃತಿಯು ಉತ್ತರ ಕರ್ನಾಟಕದ ಸಂಪ್ರದಾಯಸ್ಥ ಸ್ತ್ರೀಯನ್ನು ಪ್ರತಿಬಿಂಬಿಸುವಂತಿದೆ. ಅವಳ ಸೀರೆ, ಮೂಗುತಿ, ಇವು ಸ್ಪಷ್ಟವಾಗಿ ಸ್ಥಳೀಯ ಅಂಶಗಳೆಂದು ಹೇಳಬಹುದು. ಆಕೃತಿಗಳ ಕಾಲುಗಳನ್ನು ಒಂದರ ಪಕ್ಕ ಒಂದು ಇರುವಂತೆ ಬಿಡಿಬಿಡಿಯಾಗಿ ಕೊಂಚ ಮುಂದೆ ಇರುವ ಹಾಗೆ ಚಿತ್ರಿಸಿ ಆಕೃತಿಗಳಲ್ಲಿ ಚಾಲನೆಯನ್ನು ಮೂಡಿಸುವ ಪ್ರಕ್ರಿಯೆ ಅತ್ಯಂತ ಆಕರ್ಷಕವಾದುದು. ವಾಮನ, ಬಲಿ, ಇಂದುಮತಿ ಮತ್ತು ಶುಕ್ರ ಹೀಗೆ ನಾಲ್ಕೂ ಆಕೃತಿಗಳಲ್ಲಿನ ಸಂಬಂಧ ಅವರವರ ಕೈಗಳ ಮುದ್ರೆಯಿಂದ ಸ್ಪಷ್ಟವಾಗುತ್ತದೆ. ಇದರಿಂದ ಆಕೃತಿಗಳಲ್ಲಿ ಕ್ರಿಯಾತ್ಮಕ ಸಂಬಂಧವನ್ನು ಕಲಾವಿದ ತೋರಿಸಲು ಇಂತಹ ಮಾರ್ಗೋಪಾಯವನ್ನು ಬಳಸುತ್ತಾನೆ. ರೇಖೆಗಳು ಈ ಆಕೃತಿಗಳಲ್ಲಿ ಉಡಿಗೆ ತೊಡಿಗೆಗಳ ಮಡಿಕೆಗಳನ್ನು ಮತ್ತು ದೇಹದ ರೂಪವನ್ನು ತೋರಿಸುವಲ್ಲಿ ಯಶಸ್ವಿಯಾಗಿವೆ ಎಂದು ಹೇಳಬೇಕು.

ರಾಮಾಯಣಕ್ಕೆ ಸಂಬಂಧಪಟ್ಟ ರಾಮ-ರಾವಣರ ಯುದ್ಧದ ಸನ್ನಿವೇಶವನ್ನು ತೋರಿಸುವ ಚಿತ್ರ ಬಹಳೇ ಮುಖ್ಯವಾದುದು (ಚಿತ್ರ 3). ದಶ ಮುಖ, ಇಪ್ಪತ್ತು ಕೈಗಳುಳ್ಳ ರಾವಣನು ಎಲ್ಲ ಕೈಗಳಲ್ಲೂ ಆಯುಧಗಳನ್ನು ಹಿಡಿದು ರಾಮನಿಗೆ ಎದುರಾಗಿ ಬಿಲ್ಲಿಗೆ ಬಾಣ ಹೂಡುತ್ತಿದ್ದಾನೆ. ರಾಮನೂ ಕೂಡ ಬಿಲ್ಲಿಗೆ ಹೆದೆ ಏರಿಸಿದ್ದಾನೆ. ಎರಡೂ ಆಕೃತಿಗಳು ಎರಡೂ ಕಡೆಯಿಂದ ಮುಮ್ಮುಖ ಚಾಲನೆಯಲ್ಲಿವೆ. ರಾವಣನಿಗಿಂತಲೂ ಕೊಂಚ ದೊಡ್ಡದಾಗಿ ರಾಮನ ಆಕೃತಿಯನ್ನು ಚಿತ್ರಿಸಿದ್ದು, ರಾಮನ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ರಾಮನು ಬಿಲ್ಲಿಗೆ ಬಾಣವನ್ನು ಹೂಡಿರುವ ವಿಧವನ್ನು ಕಲಾವಿದ ಅತ್ಯಂತ ಜಾಣ್ಮೆಯಿಂದ ತೋರಿಸಿದ್ದಾನೆ. ರಾಮನು ನಿಂತಿರುವ ಭಂಗಿಯನ್ನು ಗಮನಿಸಿದರೆ, ಬಲಗೈಯ್ಯಲ್ಲಿ ಬಿಲ್ಲು ಹಿಡಿದು ಎಡಗೈಯಿಂದ ಬಾಣ ಬಿಡಬೇಕಾಗುತ್ತದೆ. ಒಂದು ವೇಳೆ ಹಾಗೆ ಯಥಾವತ್ತಾಗಿ ಚಿತ್ರಿಸಿದರೆ ರಾಮನ ಕೈ ಮುಖದ ಭಾಗವನ್ನು ಭಾಗಶಃ ಮುಚ್ಚಿಬಿಡುತ್ತದೆ. ಅದಕ್ಕಾಗಿಯೇ ಈ ತೊಂದರೆಯನ್ನು ಸರಿದೂಗಿಸಲು ಅವನ ಕೈಯ್ಯನ್ನು ತಲೆಯ ಹಿಂಭಾಗದಿಂದ ಹಾಯಿಸಿ ಬಿಲ್ಲಿಗೆ



1. ನರಸಿಂಹ ಅವತಾರ



2. ವಾಮನ ಅವತಾರ

ಬಾಣಹೂಡಿದಂತೆ ಇದೆ.[6] ಇದು ಅತ್ಯಂತ ಅಸಹಜವಾದರೂ ಕಲಾವಿದನ ಕಲಾತ್ಮಕ ವಿಚಾರ ಸಾಧ್ಯವಾಗದ ಕೆಲಸವನ್ನು ಸಾಧ್ಯವಾಗಿಸುವ ಹೊಸ ವಿಧವೊಂದನ್ನು ಸೃಷ್ಟಿಸಿದೆ. ಇಲ್ಲಿ ರಾಮನಿಗೆ ಮೀಸೆಗಳಿವೆ. ನಾವು ಮೀಸೆಯಿಲ್ಲದ ಕ್ಯಾಲೆಂಡರ್‌ನಲ್ಲಿಯ ಸುಂದರ ಪುರುಷರನ್ನು ರಾಮನಾಗಿಸಿ ನೋಡಿ ಅದಕ್ಕೆ ಹೊಂದಿಕೊಂಡಿದ್ದೇವೆ. ಆದರೆ ಕಲಾವಿದನು ರಾಮನಿಗೂ ಮೀಸೆ ಅಂಟಿಸಿ ಅವನನ್ನು ಕ್ಷತ್ರಿಯ ಯೋಧನನ್ನಾಗಿ ಚಿತ್ರಿಸಿದ್ದಾನೆ. ಈ ಆಕೃತಿಗಳಲ್ಲಿ ಕಲಾವಿದನ ಸಮಯಪ್ರಜ್ಞೆ ಅವನೊಳಗಿನ ನಿಜವಾದ ಕಲಾವಿದನನ್ನು ನಮಗೆ ಪರಿಚಯಿಸುತ್ತದೆ.

ಯುದ್ಧದ ಚಿತ್ರಗಳಿಗೆ ಸೇರುವ ಮಹಾಭಾರತ ಯುದ್ಧದ ಚಿತ್ರ (ಚಿತ್ರ 4) ಬಹುಶಃ ಈ ಚಿತ್ರಗಳ ಗುಂಪಿನಲ್ಲೇ ಮುಖ್ಯವಾದುದು. ಏಕೆಂದರೆ ಈ ಚಿತ್ರದಲ್ಲಿ ಅತ್ಯಂತ ಮುಖ್ಯವಾದ ಕಥಾವಸ್ತು ಇದೆ. ಆ ವಸ್ತುವಿಗೆ ಸಂಬಂಧಿಸಿದಂತೆ ಆಕೃತಿಗಳ ಹೊಂದಾಣಿಕೆ ಮತ್ತು ಪ್ರತಿಯೊಂದು ಮುಖ್ಯ ಆಕೃತಿಗಳನ್ನು ಅವರ ಹೆಸರಿನಿಂದ ಗುರುತಿಸಿರುವುದು ಇನ್ನೊಂದು ಮುಖ್ಯ ಅಂಶ.[7] 'ಕೃಷ್ಣ-ಭೀಷ್ಮ' ಎಂದು ಹೆಸರಿಸುವ ಆಕೃತಿಗಳ ಸಂಯೋಜನೆ ಈ ಯುದ್ಧದ ಚಿತ್ರಣದಲ್ಲಿ ಪ್ರಾಯಶಃ ಇಡೀ ಚಿತ್ರದ ಕೇಂದ್ರವಸ್ತುವಾಗುತ್ತದೆ ಮತ್ತು ಅತ್ಯಂತ ಪ್ರಮುಖ ಸನ್ನಿವೇಶವನ್ನು ಅದು ಚಿತ್ರಿಸುತ್ತದೆ.

ಆಯತಾಕಾರದ ಸಂಯೋಜನೆಯಲ್ಲಿ ಚಿತ್ರದ ಬಲಬದಿಯಲ್ಲಿ ಅರ್ಜುನ ಕೃಷ್ಣ ಸಾರಥಿಯಾದ ರಥದಲ್ಲಿ ನಿಂತು ಯುದ್ಧ ಮಾಡುತ್ತಿದ್ದಾನೆ. ಅವನಿಗೆ ಎದುರಾಗಿ ಕೌರವ ಎಂದು ಬರೆದಿರುವ ಕಡೆಗೆ ಭೀಷ್ಮ ಯುದ್ಧ ಮಾಡುತ್ತಿದ್ದಾನೆ. ಎರಡೂ ರಥಗಳಿಗೆ ಜೋಡಿ ಅಶ್ವಗಳು ಯುದ್ಧದ ಆರ್ಭಟದಲ್ಲಿ ಭಾಗವಹಿಸಿದಂತೆ ಮುಂಗಾಲುಗಳನ್ನು ಮೇಲಕ್ಕೆತ್ತಿ ಹೂಂಕರಿಸುತ್ತಿವೆ. ಕೌರವನ ರಥದ ಕೆಳಭಾಗದಲ್ಲಿ ಈರ್ವರು ಕತ್ತಿಗಳಿಂದ ಯುದ್ಧ ಮಾಡುತ್ತಿದ್ದಾರೆ. ಇನ್ನು ಭೀಷ್ಮ ಕೃಷ್ಣರ ಆಕೃತಿಗಳನ್ನು ಗಮನಿಸೋಣ. ಕೃಷ್ಣ ಬಲಗೈಯ್ಯಲ್ಲಿ ಸುದರ್ಶನವನ್ನು ಪ್ರಯೋಗ ಮುದ್ರೆಯಲ್ಲಿ ಹಿಡಿದು ಪಾಂಚಜನ್ಯವನ್ನು ಊದುತ್ತಾ ರಥದಿಂದ ಜಿಗಿದು ತಾನೇ ಯುದ್ಧ ಮಾಡಲು ತನ್ನೆಲ್ಲ ವೇಗದಿಂದ ಇಳಿದು ಬರುವಂತಿದೆ. ಆದರೆ ಆ ವೇಗಕ್ಕೆ ಕಡಿವಾಣ ಹಾಕಿದಂತೆ, ಭೀಷ್ಮ ತನ್ನೆರಡು ಕೈಗಳನ್ನು ಮಡಿಚಿ ಕೃಷ್ಣನಿಗೆ ತಲೆಬಾಗಿ ನಿಂತಿದ್ದಾನೆ.

ಆಕೃತಿಗಳಲ್ಲಿನ ಆಂತರಿಕ ಸಂಬಂಧ ಮತ್ತು ಚಾಲನೆ ಅವುಗಳಲ್ಲಿ ಅತ್ಯಂತ ತೀವ್ರತೆಯನ್ನು ತುಂಬುತ್ತದೆ. ಒಂದೇ ಪಾರ್ಶ್ವದ ಮುಖಗಳು ಮುಂದಿನಿಂದ ನೋಡಿದಾಗ ಕಾಣುವಂತೆ ಚಿತ್ರಿಸಲಾಗಿದೆ. ಚಿತ್ರದ ಮೇಲಿನ ಸ್ತರದಲ್ಲಿ ಮೊದಲು ಬಾಣಗಳನ್ನು ಗಮನಿಸಬೇಕು. ಬಾಣಗಳು ಅರ್ಧ ಅರ್ಜುನನ ಕಡೆಗೆ ಇದ್ದರೆ ಇನ್ನರ್ಧ ಕೌರವ (ಭೀಷ್ಮ)ನ ಕಡೆ ಮುಖ ಮಾಡಿವೆ. ಇದರಲ್ಲಿ ಅರ್ಜುನನ ಮತ್ತು ಭೀಷ್ಮನ ಬಾಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಭೀಷ್ಮನು ಬಾಣ ಬಿಡುವ ರೀತಿ, ರಾಮ-ರಾವಣರ ಯುದ್ಧ (ಚಿತ್ರ 3) ದಲ್ಲಿನ ರಾಮನ ಹಾಗೆ ಚಿತ್ರಿಸಲಾಗಿದೆ.

ಇನ್ನು ಕೃಷ್ಣ-ಭೀಷ್ಮರ ಆಕೃತಿಗಳ ಮಹತ್ವವನ್ನು ಸ್ವಲ್ಪದರಲ್ಲಿ ನೋಡಬಹುದು. ಪ್ರಸ್ತುತ ಚಿತ್ರದ ದೃಶ್ಯ ಮಹಾಭಾರತ 'ಭೀಷ್ಮಪರ್ವಕ್ಕೆ' ಸಂಬಂಧಪಡುತ್ತದೆ. ಮಹಾಭಾರತದ ಯುದ್ಧದಲ್ಲಿ ಕೌರವರ ಸೇನೆಯ ಸೇನಾಧಿಪತಿಯಾಗಿ ಭೀಷ್ಮ ಅತ್ಯಂತ ಭಯಂಕರವಾಗಿ ಯುದ್ಧ ಮಾಡುತ್ತಾನೆ. ಮೊದಲೆರಡು ದಿನದ ಯುದ್ಧದಲ್ಲಿ ಸಾಕಷ್ಟು ಪಾಂಡವ ಸೇನೆ ಭೀಷ್ಮನ ಕೈಯಲ್ಲಿ ಧೂಳೀಪಟವಾಗಿ, ಮೂರನೇ ದಿನದ ಯುದ್ಧದಲ್ಲಿ ಅರ್ಜುನ ಭೀಷ್ಮನಿಗೆ ಎದುರಾಗಿ ಅವನ ಮೇಲಿನ ಗೌರವದಿಂದ ಕೊಂಚ ಮೃದುವಾಗಿಯೇ ಯುದ್ಧ ಮಾಡುತ್ತಿರಲು ಇದರಿಂದ ಆತಂಕಗೊಂಡ ಕೃಷ್ಣ "ಈ ಅರ್ಜುನ ಇಂದು ಹೀಗೇಕೆ ಯುದ್ಧ ಮಾಡುತ್ತಿದ್ದಾನೆ" ಎಂದು ಅಂದುಕೊಳ್ಳುತ್ತಾನೆ. ಯುದ್ಧ ತೀವ್ರವಾದಾಗ ತಾನೇ ಸ್ವತಃ ಒಂದು ನಿರ್ಧಾರಕ್ಕೆ ಬಂದು "ಈ ಅರ್ಜುನ ಬಲವಾದ ಏಟುಗಳು ಬೀಳುತ್ತಿದ್ದರೂ ಭೀಷ್ಮನ ಮೇಲಣ ಗೌರವದಿಂದ ತನ್ನ ಕರ್ತವ್ಯವನ್ನು ಅರಿಯದೇ ಮೃದುವಾಗಿ ಯುದ್ಧ ಮಾಡುತ್ತಿದ್ದಾನೆ. ಪಾಂಡವರ ಸೇನೆ ಹಿಮ್ಮೆಟ್ಟಿದೆ. ಹೀಗಾದರೆ ಒಪ್ಪತ್ತಿನಲ್ಲಿ ಪಾಂಡವರನ್ನು ಅವರ ಬಲವನ್ನೂ ಸವರಿ ಬಿಡುತ್ತಾನೆ. ಆದುದರಿಂದ ಇಂದು ನಾನೇ ಭೀಷ್ಮನನ್ನು ಕೊಂದು ಪಾಂಡವರ ಹೊರೆ ಇಳಿಸುತ್ತೇನೆ" ಎಂದು ಆಲೋಚಿಸಿ ಕೃಷ್ಣ ತನ್ನ ಚಕ್ರವನ್ನು ಹಿಡಿದು ಭೀಷ್ಮನಿಗೆ ಇದಿರಾಗಿ ಹೊರಾಡುತ್ತಾನೆ.[8]

ಈ ಸನ್ನಿವೇಶ ಕಲಾವಿದನಿಗೆ ಹೇಗೆ ಹೊಳೆಯಿತು ಮತ್ತು ಕಥೆಗೆ, ಆ ಸನ್ನಿವೇಶಕ್ಕೆ ಹೊಂದಿಕೊಂಡಂತೆ ಆಕೃತಿಗಳನ್ನು ಸಂಯೋಜಿಸಿ ಅವುಗಳಲ್ಲಿ ಕಥೆಯ ನಿಜವಾದ ತಿರುಳನ್ನು ತಂದಿರುವ ಕೆಲಸ ತುಂಬಾ ವಿಸ್ಮಯಗೊಳಿಸುವಂಥದ್ದು. ಇದರಿಂದ ಪ್ರಸ್ತುತ ರೇಖಾಚಿತ್ರಗಳ ಕಲಾವಿದ ಒಬ್ಬ ಸಾಮಾನ್ಯ ಕಲಾವಿದನಾಗಿರಲು ಸಾಧ್ಯವಿಲ್ಲ. ಮಹಾಭಾರತದಂತಹ ಬೃಹತ್‌ಗ್ರಂಥಗಳಲ್ಲಿನ ಕಥೆಯ ಒಂದು ಭಾಗವನ್ನು ದೃಶ್ಯರೂಪವಾಗಿ ರೇಖೆಗಳಲ್ಲಿ ಸ್ಥಾಪಿಸುವ ಪ್ರಕ್ರಿಯೆ ಅತ್ಯಂತ ಮುಖ್ಯವಾದುದು. ಅಂದಿನ ಸಾಹಿತ್ಯ ಕೃತಿ ಅಥವಾ ಯಾವುದೇ ಕೃತಿಯನ್ನು ಕೇಳಿ, ಓದಿ ಅದಕ್ಕೆ ಅನುಗುಣವಾಗಿ ಚಿತ್ರರಚನೆ ಮಾಡುವುದು ನುರಿತ ಕಲಾವಿದನಿಗೆ ಮಾತ್ರ ಸಾಧ್ಯ. ಇದರಿಂದ ಚಿತ್ರದ ಸಾರವನ್ನು ದೃಶ್ಯವನ್ನಾಗಿಸಿ ಅದಕ್ಕೆ ಜೀವಂತಿಕೆಯನ್ನು ತರುವ ಕೆಲಸ ಇಂತಹ ಕಲಾವಿದನಿಂದ ಮಾತ್ರ ಸಾಧ್ಯ.

ವಸಂತೋತ್ಸವವನ್ನು (ಚಿತ್ರ 5) ತೋರಿಸುವ ಚಿತ್ರದಲ್ಲಿ ಕಾಮ-ರತಿಯರು ಕಬ್ಬಿನ ಬಿಲ್ಲುಗಳನ್ನು ಮತ್ತು ಅವಕ್ಕೆ ಹೂಬಾಣಗಳನ್ನು ಹೂಡಿ ಎದುರುಬದಿರಾಗಿ ವಸಂತೋತ್ಸವದ ಆಚರಣೆಗೆ ನಿಂತಿದ್ದಾರೆ. ಕಾಮನು ರಥಾರೂಢನಾಗಿದ್ದು, ರಥವನ್ನು ಅವನ ವಾಹನ 'ಗಿಳಿ' ಎಳೆಯುತ್ತಿದೆ. ಆಕೃತಿಗಳಲ್ಲಿನ ಮುಮ್ಮುಖ ಚಾಲನೆ ಸಂಯೋಜನೆಯಲ್ಲಿ ತೀವ್ರಕರವಾದ ಚಟುವಟಿಕೆಯೊಂದನ್ನು ಮೂಡಿಸುತ್ತದೆ. ರತಿಯು ಬಾಣ ಹೂಡುವ



3. ರಾಮ-ರಾವಣರ ಯುದ್ಧ



4. ಕುರುಕ್ಷೇತ್ರ ಯುದ್ಧ



5. ಕಾಮ-ರತಿ



6. ತ್ರಿಪುರಸುಂದರಿ



7. ರಾಜ-ರಾಣಿ (?)

ಶೈಲಿ, ರಾಮ-ಭೀಷ್ಮರ ಆಕೃತಿಗಳನ್ನು ನೆನಪಿಗೆ ತರುತ್ತದೆ. ಹೋಳಿಹಬ್ಬದ ಸಂದರ್ಭದಲ್ಲಿ ಕಿನ್ನಾಳದ ಕಲಾವಿದರು ಕಾಮನ ವಿಗ್ರಹ (ಮುಖವಾಡ) ಅಥವಾ ಆಕೃತಿಗಳನ್ನು ಮಾಡುವ ಪರಿಪಾಠ ಇನ್ನೂ ಇದೆ. ಅವರ ಈ ಆಕೃತಿಗಳು ಹೊರ ರಾಜ್ಯವಾದ ಮಹಾರಾಷ್ಟ್ರದಲ್ಲೂ ಮಾರಾಟವಾಗುತ್ತವೆ.


ಮೇಲೆ ಚರ್ಚಿಸಿದ ರೇಖಾ ಚಿತ್ರಗಳ ಶೈಲಿಯಲ್ಲೇ ಇರುವ ತ್ರಿಪುರಸುಂದರಿಯ (ಚಿತ್ರ 6) ಚಿತ್ರವನ್ನು ಗಮನಿಸಬಹುದು. ನೀಳವಾದ ರೇಖೆಗಳು ಕೊಂಚ ಅಪಕ್ವ ಎನಿಸುವ ರಚನಾ ಶೈಲಿ, ಅವಸರದಲ್ಲಿ ರಚಿಸಿದ ಹಾಗೆ ಇದೆ. ತ್ರಿಪುರಸುಂದರಿ ದೇವಿಯು ಪುರುಷನ ಮೇಲೆ ಕುಳಿತಿದ್ದು, ಅವನು ಬಹುಶಃ ಶಿವನಿರಬೇಕು. ಪಾಶ, ಅಂಕುಶ, ಬಿಲ್ಲು ಮತ್ತು ಹೂವಿನ ಗೊಂಚಲಿನ ಹಾಗೆ ಇರುವ ಆಯುಧ ಮತ್ತು ದೇವಿಯು ಕುಳಿತ ಆಸನ ತೂಗು ಮಂಚದಂತೆ ಇದ್ದು, ಅದನ್ನು ಚಿತ್ರದಲ್ಲಿ ಎರಡೂ ಬದಿಗೆ ಆಸನಕ್ಕೆ ಹೊಂದಿಕೊಂಡಂತೆ ಹಗ್ಗ ಕಟ್ಟಿ ಹಾಕಿದಂತೆ ರಚಿಸಲಾಗಿದೆ. ಈ ಚಿತ್ರಗಳ ಕೊನೆಯ ಉದಾಹರಣೆಯಾದ ರಾಜ-ರಾಣಿಯರು (ಚಿತ್ರ 7) ಕುರ್ಚಿಯಂತಹ ಆಸನದ ಮೇಲೆ ಕುಳಿತಿದ್ದಾರೆ. ಈರ್ವರೂ ಎದುರುಬದುರಾಗಿ ಕುಳಿತಿದ್ದು ಸಂಯೋಜನೆಯಲ್ಲಿ ನಾಟಕೀಯವಾದ ಅಂಶಗಳನ್ನು ಅವರ ಭಾವ ಮತ್ತು ಕೈಗಳ ಮುದ್ರೆಗಳಲ್ಲಿ ನೋಡಬಹುದು. ಈ ಆಕೃತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಿನ್ನಾಳದ ದೇಸಾಯರ ಮತ್ತು ಅವರ ಪತ್ನಿಯ ಚಿತ್ರಗಳಿರಬಹುದೆಂದೆನಿಸುತ್ತದೆ. ವಿಜಯನಗರದ ಪತನದ ನಂತರ ಮತ್ತು ಮೊದಲಿನಿಂದಲೂ ಈ ಕಲಾವಿದರು ಕಿನ್ನಾಳದಲ್ಲೇ ಇದ್ದು ತಮ್ಮ ಕರಕುಶಲ ಕೆಲಸ ಮಾಡುತ್ತಿದ್ದು ಇವರಿಗೆ ಕಿನ್ನಾಳದ ಪ್ರಮುಖರಾದ ದೇಸಾಯರ ಸಹಾಯಹಸ್ತ ಮತ್ತು ಪೋಷಣೆ ಇದ್ದೇ ಇತ್ತು. ಹೀಗಾಗಿ ಈ ಆಕೃತಿಗಳು ಅವರದೇ ಇರಬಹುದೆಂದು ಊಹಿಸಬಹುದಾಗಿದೆ.

ಇದುವರೆಗೂ ಈ ಮೇಲೆ ಚರ್ಚಿಸಿದ ಚಿತ್ರಗಳು ಶೈಲಿಯಿಂದ ಮತ್ತು ಲಕ್ಷಣಗಳಿಂದ ಒಂದೇ ಗುಂಪಿಗೆ ಸೇರಿದವು. ಅವುಗಳಲ್ಲಿನ ರೇಖಾ ವಿನ್ಯಾಸ ಸಂಯೋಜನೆ ಆಕೃತಿಗಳಲ್ಲಿನ ಸಾಮ್ಯತೆಗಳು ಒಂದಕ್ಕೊಂದು ಪೂರಕವಾಗಿಯೇ ಇವೆ. ಹಲವು ಬಾರಿ ಪುರುಷ ಆಕೃತಿ ಎಲ್ಲ ಚಿತ್ರಗಳಲ್ಲೂ ಹಿಂದೆ ಮುಂದೆ ತಿರುಗಿಸಿ ಅದನ್ನೆ ಮರು ಉಪಯೋಗ ಮಾಡಿದಂತೆ ಇದೆ. ಕೊಂಚ ಕುಳ್ಳ ಎನಿಸುವ ಆಕೃತಿಗಳು ರಚನೆಯಲ್ಲಿ ಒಂದೆ ತೆರನಾಗಿವೆ. ದೇಹದ ರೇಖೆಗಳು ವಿಶಾಲವಾಗಿ ವಕ್ರವಾಗಿ ದುಂಡು ಎನಿಸುವಂತೆ ಆಕೃತಿಯನ್ನು ರೂಪಿಸುತ್ತವೆ. ದೇಹದ ಹಿಂಭಾಗದ ರೇಖೆ ನೀಳವಾಗಿ, ವಕ್ರವಾಗಿ, ಉಬ್ಬು ತಗ್ಗುಗಳನ್ನು ಕೊಂಚ ಹಿಗ್ಗಿಸಿ ಸ್ವಲ್ಪ ಹೆಚ್ಚು ಎನಿಸುವ ಹಾಗೆ ಚಿತ್ರಿಸಿದ್ದಾರೆ. ಉಡುಗೆಗಳಲ್ಲಿನ ಮಡಿಕೆಗಳನ್ನು ಆಯಾ ಭಾಗಗಳ ರೇಖೆಗಳಿಂದ ವಿಭಾಗಿಸಿರುವ ರೀತಿ ಎಲ್ಲ ಆಕೃತಿಗಳಲ್ಲೂ ಒಂದೇ ಆಗಿದೆ. ಸ್ತ್ರೀಪುರುಷ ಆಕೃತಿಗಳು ಹಾಕಿರುವ ಕಿರೀಟದ ಶೈಲಿ ಅತ್ಯಂತ ಸಾಮಾನ್ಯವಾಗಿದ್ದು ಅಂದಿನ ಶಿಲ್ಪಗಳನ್ನು ಜ್ಞಾಪಕಕ್ಕೆ ತರುತ್ತದೆ. ಒಂದೇ ತಳರೇಖೆಯ (Ground Line) ಮೇಲೆ ಇರುವ ಆಕೃತಿಗಳು ಅಂದಿನ ಸಮಕಾಲೀನ ಭಿತ್ತಿಚಿತ್ರಗಳಾದ ಲೇಪಾಕ್ಷಿ, ಹಂಪಿಯ ಉದಾರಹಣೆಗಳಿಗೆ ಸಮಾನವಾಗುತ್ತವೆ. ಈ ಶೈಲಿಯೇ ವಿಜಯನಗರದ ಪತನದ ನಂತರ ವಿವಿಧ ಭಾಗಗಳಿಗೆ ಹರಡಿ ಅಲ್ಲಿನ ಶೈಲಿಗಳೊಂದಿಗೆ ಸಮೀಕರಿಸಿಕೊಂಡು ಹೊಸ "ವಿಜಯನಗರದ ನಂತರದ" (Post-Vijayanagara Style) ಶೈಲಿಯನ್ನು ರೂಪಿಸಿತು.

ಪ್ರಸ್ತುತ ರೇಖಾ ಚಿತ್ರಗಳನ್ನು ಗಮನಿಸಿದರೆ ಎಲ್ಲ ಚಿತ್ರಗಳ ಕಲಾವಿದ ಒಬ್ಬನೆ ಎಂದು ಹೇಳಬಹುದು. ಆಕೃತಿಗಳ ಸಂಯೋಜನೆಯ ಮತ್ತು ವಿವಿಧ ಅಂಶಗಳನ್ನು ಗಮನಿಸಿ ಇದನ್ನು ರುಜುವಾತು ಪಡಿಸಬಹುದು. ಕಿನ್ನಾಳದ ಶೈಲಿ ವಿಜಯನಗರದ ಕಾಲದಲ್ಲೇ ಅದರ ಉಪಶೈಲಿಯಾಗಿ (Contributory Style) ಇದ್ದಿರಬಹುದು. ಯಾವುದೇ ಒಂದು ಶಿಷ್ಟ ಶೈಲಿ ಬೆಳೆಯಬೇಕಾದರೆ ಅದಕ್ಕೆ ಪುಷ್ಟಿ ನೀಡುವ ಸಹಾಯಕ ಶೈಲಿಯ ಬೆಳವಣಿಗೆ ಶಿಷ್ಟ ಶೈಲಿಯ ಬೆಳವಣಿಗೆಯಲ್ಲಿ (Evolution of the Style) ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ಕಿನ್ನಾಳದ ಕಲಾವಿದರು ಚಿತ್ರಕಲಾ ಪರಿಸರದಲ್ಲಿ ಹೊಸ ಆಯಾಮವನ್ನು ರೂಪಿಸಿಕೊಂಡು ತಮ್ಮದೇ ಆದ ವಿವಿಧ ಆವಿಷ್ಕಾರಗಳನ್ನು ಮಾಡುತ್ತ ಅಂದಿನ ಚಿತ್ರಶೈಲಿಯಲ್ಲಿ ತಮ್ಮತನವನ್ನು ಗುರುತಿಸಿಕೊಂಡಿದ್ದಾರೆ. ಅಂದರೆ ವಿಜಯನಗರ ಚಿತ್ರ ಶೈಲಿಯನ್ನು ಬೆಳೆಸಲು ಸಹಾಯಕವಾಗುವ ಒಂದು ಚಿತ್ರಶೈಲಿಯನ್ನು ಬೆಳೆಸಿದರು ಎಂದು ನಾವು ಸ್ಪಷ್ಟವಾಗಿ ಹೇಳಬಹುದು.

ಅಭ್ಯಾಸ ಪುಸ್ತಕದಲ್ಲಿನ ಆಕೃತಿಗಳು:


ರೇಖಾಚಿತ್ರಗಳು ಶಿಷ್ಟಶೈಲಿಯನ್ನು ಹೊಂದುವ ಮೊದಲು ಕಲಾವಿದ ಹಲವಾರು ಮೂಲಕೃತಿಗಳನ್ನು ತನ್ನ ದೃಷ್ಟಿಯಲ್ಲಿ ವಿವಿಧ ರೀತಿಯಿಂದ ಅಭ್ಯಾಸ ಮಾಡಬೇಕಾಗುತ್ತದೆ. ಇದರಿಂದ ರೇಖೆಗಳ ಮೇಲೆ ಪ್ರಭುತ್ವ ಬರುತ್ತದೆ, ಪಕ್ವತೆ ತುಂಬುತ್ತದೆ. ಇದರಿಂದ ರೇಖಾಕೃತಿಗಳು ಅತ್ಯಂತ ಆಕರ್ಷಕವಾಗಿ ಕಾಣುತ್ತವೆ. ರೇಖಾಕೃತಿಗಳು ಯಾವುದೇ ಚಿತ್ರಗಳಿಗೆ ಮೂಲಭೂತವಾದ ಆಕೃತಿಗಳು ಎಂದು ಈ ಮೊದಲೇ ಹೇಳಿದ್ದೇವೆ. ಪ್ರಸ್ತುತ ಅಭ್ಯಾಸದ ಪುಸ್ತಕದಲ್ಲಿನ ಗರುಡ ಮತ್ತು ಅರ್ಜುನ ಮತ್ಸ್ಯಯಂತ್ರದ (ಚಿತ್ರ 8-9) ಆಕೃತಿಗಳನ್ನು ಗಮನಿಸಬೇಕು. ಮನುಷ್ಯ ರೂಪಿಯಾದ ಗರುಡ ಬಲಗೈಯಲ್ಲಿ ನಾಗಸರ್ಪವನ್ನು ಹಿಡಿದಿದ್ದು, ಎಡಗೈಯನ್ನು ಮೇಲಕ್ಕೆತ್ತಿ ವಿಜಯದ ಸಂಕೇತವೆಂಬಂತೆ ಹಿಡಿದಿದ್ದಾನೆ. ದೇಹವನ್ನು ವಿವಿಧ ರೇಖೆಗಳಿಂದ ಚಿತ್ರಿಸಿದ ರೀತಿಯಲ್ಲಿ ಕೊಂಚ ಜಡತ್ವ ಇದ್ದರೂ ಕೂಡಾ ಸರಳತೆ ಕಂಡುಬರುತ್ತದೆ. ಅರ್ಜುನ ಮತ್ಸ್ಯಯಂತ್ರದಲ್ಲಿ ಕಲಾವಿದ



8. ಗರುಡ



9. ಅರ್ಜುನ ಮತ್ಸ್ಯಯಂತ್ರ



10. ದೈನಂದಿನ ಬದುಕಿನ ಚಿತ್ರ

ನೇರವಾಗಿ ಮತ್ಸ್ಯಕ್ಕೆ ಬಾಣಬಿಟ್ಟ ಅರ್ಜುನ, ಕೆಳಗೆ ಅದರ ಪ್ರತಿಬಿಂಬವನ್ನು ನೋಡುವಂತೆ ನಿಂತಿದ್ದಾನೆ ಎನ್ನುವಂತೆ ಚಿತ್ರಿಸಿದ್ದಾನೆ. ಮೀನು, ಬಿಲ್ಲು ಬಾಣಗಳ ನಡುವಿನ ಅಂತರ ಸಂಯೋಜನೆಯಲ್ಲಿ ಸರಳತೆಯನ್ನು ಸೃಷ್ಟಿಸುವ ಕಲಾತ್ಮಕ ಅಭಿವ್ಯಕ್ತ ರೂಪವಾಗಿದೆ. ಇಂದಿಗೂ ಕೂಡ ಅರ್ಜುನ ಮತ್ಸ್ಯಯಂತ್ರದ ಚಿತ್ರ ಬಹು ಜನಪ್ರಿಯವಾದ ಚಿತ್ರವಾಗಿ ಉಳಿದುಕೊಂಡು ಬಂದಿದೆ.

ದೈನಂದಿನ ಬದುಕಿನ ವಿವಿಧ ಮಜಲುಗಳನ್ನು ತೋರಿಸುವ ಚಿತ್ರ (ಚಿತ್ರ 10)ದಲ್ಲಿ, ಕ್ಷೌರಿಕ, ಮಗುವಿಗೆ ಹಾಲುಣಿಸುತ್ತಿರುವ ಸ್ತ್ರೀ, ಬೇಟೆಗಾರ, ಪೇಟವನ್ನು ಸುತ್ತುತ್ತಿರುವ ಪುರುಷ, ಜಿಂಕೆ, ಗಿಳಿ(ನವಿಲು ?) ಮತ್ತು ವ್ಯಾಳದ ಪುರುಷಾಕೃತಿ (Composite Mythical Figure)ಗಳು ಚಿತ್ರಿತವಾಗಿವೆ. ಕಲಾವಿದನ ನೇರ ಸ್ಪಂದನೆ ಆಕೃತಿಗಳಲ್ಲಿ ಜೀವತುಂಬಿದೆ. ನೇರವಾಗಿ ಕುಂಚದಿಂದ ಅಭ್ಯಾಸಕ್ಕಾಗಿ ಚಿತ್ರಿಸಿದ ಚಿತ್ರಗಳಿವು.

'ಸಭಾ' ಚಿತ್ರಗಳು :

ಈ ಮೇಲೆ ಚರ್ಚಿಸಿದ ಚಿತ್ರಗಳನ್ನು ಒಟ್ಟಾರೆಯಾಗಿ ನೋಡಿದಾಗ ಒಂದೆ ಗುಂಪಿನಲ್ಲಿ ಬೆಳೆದ ಚಿತ್ರಗಳಂತೆ ತೋರುತ್ತವೆ. ಇವುಗಳಿಗೆ ಕೊಂಚ ವಿಭಿನ್ನವಾಗಿರುವ 'ಸಭಾ' ಚಿತ್ರಗಳು ದೇವಸ್ಥಾನದ ಅಲಂಕಾರಕ್ಕಾಗಿಯೇ ರಚಿಸಿದಂತಹವುಗಳು.[9] ಅವುಗಳ ಆಕೃತಿ ಆಕಾರಗಳು ಇದಕ್ಕೆ ಪುಷ್ಟಿ ನೀಡುತ್ತವೆ. ಉದ್ದದ ಪಟ್ಟಿಯಾಕಾರದ ಅವಕಾಶದಲ್ಲಿ ಒಂದೇ ಸಾಲಿನಲ್ಲಿ ರಚನೆಗೊಂಡ ಈ ಆಕೃತಿಗಳ ಮಧ್ಯಭಾಗದಲ್ಲಿ ವಿಷಯದ ಕೇಂದ್ರವಸ್ತುವಾದ ರಾಮ-ಸೀತೆ ಇತ್ಯಾದಿಗಳು ಇರುತ್ತಾರೆ. ಸಂಯೋಜನೆಯಲ್ಲಿ ಆಕೃತಿಗಳನ್ನು ಸಮಾನಾಂತರವಾದ ವಿಂಗಡನೆ ಮಾಡಿ ಕೇಂದ್ರದ ಆಕೃತಿಗಳ ಎರಡೂ ಬದಿಗೆ ಅದಕ್ಕೆ ಹೊಂದಿಕೊಂಡಂತೆ ಇರುವುದು ಮತ್ತು ಆ ಸ್ಥಳದ ಅಳತೆಗೆ ತಕ್ಕಂತೆ ಆಕೃತಿಗಳನ್ನು ಸರಿಹೊಂದಿಸುವ ರೀತಿ ಈ ಚಿತ್ರಗಳಲ್ಲಿ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ.

ಈ 'ಸಭಾ' ಚಿತ್ರಗಳು ಶ್ರೀರಾಮಸಭಾ, ಶಿವಸಭಾ ಎರಡು ಚಿತ್ರಗಳಿವೆ. 'ಸಭಾ' 'ಸಭೆ' ಎರಡು ಒಂದೇ ಅರ್ಥ ಕೊಡುತ್ತವೆ. ರಾಮನಿಗೆ, ಶಿವನಿಗೆ ಸಂಬಂಧಿಸಿದ ಆಕೃತಿಗಳನ್ನು ಕೇಂದ್ರ ಆಕೃತಿಗಳಿಗೆ ಪೂರಕವಾಗಿ ಚಿತ್ರಿಸುವುದೆ 'ಸಭೆ' ಯಾಗಿದೆ. ಉದಾಹರಣೆಗೆ: ಶಿವಸಭಾ (ಚಿತ್ರ 11) ಚಿತ್ರವನ್ನು ನೋಡಬಹುದು. ಸಂಯೋಜನೆಯ ಮಧ್ಯದಲ್ಲಿ ಸಿಂಹಾಸನದ ಮೇಲೆ ಶಿವನು, ಪಾರ್ವತಿ-ಗಣೇಶರ ಸಮೇತನಾಗಿ ಕುಳಿತಿದ್ದಾನೆ. ಬಲಬದಿಯಲ್ಲಿ ನಂದಿಯು ಅರ್ಧ ಮಾನುಷ ರೂಪಿಯಾಗಿ ತಬಲಾ ಬಾರಿಸುತ್ತ, ತುಂಬುರನೂ ತಂಬೂರಿ ಮೀಟುತ್ತಾ ಹಾಡುತ್ತಾ ಇರುವಂತೆ ಕುಳಿತಿದ್ದಾರೆ. ಬಲಕೊನೆಯಲ್ಲಿ ಕಾಮಧೇನುವು ಇದೆ. ಎಡಗಡೆಯ ಭಾಗದಲ್ಲಿ ರಾಕ್ಷಸರೂಪದಂತಹ ಶಿವಗಣ, ತ್ರಿಪಾದಭೃಂಗಿ ಮತ್ತು ನಾರದರು ಇದ್ದಾರೆ. ನಾಟಕದಲ್ಲಿನ ಪರದೆಯಂತೆ ಕಾಣುವ ಕಲಾತ್ಮಕವಾಗಿ ಹಿನ್ನೆಲೆಯಲ್ಲಿ ಬಿಟ್ಟ ಬಟ್ಟೆ ಪೂರ್ಣವಾಗಿ ಚಿತ್ರಕ್ಕೆ ಒಂದು ಚೌಕಟ್ಟನ್ನು ರೂಪಿಸುತ್ತದೆ.

ಶ್ರೀರಾಮಸಭಾ (ಚಿತ್ರ 12)ದಲ್ಲೂ ಶಿವಸಭಾದ ಹಾಗೆಯೇ ಸಂಯೋಜನೆ ಇದೆ. ಶ್ರೀರಾಮ-ಸೀತೆಯರು ಲವ-ಕುಶರ ಹೆಗಲ ಮೇಲೆ ಕೈಹಾಕಿ ಸಿಂಹಾಸನದ ಮೇಲೆ ಕುಳಿತಿದ್ದಾರೆ. ಬಲಭಾಗದಲ್ಲಿ ಅಂಜಲಿ ಮುದ್ರೆಯಲ್ಲಿ ಹನುಮಂತ ಮೊಳಕಾಲೂರಿ ಕುಳಿತಿದ್ದಾನೆ. ಅವನ ನಂತರದ ಆಕೃತಿ ಲಕ್ಷ್ಮಣನಿರಬೇಕು. ಕೊನೆಯಲ್ಲಿ ಮಾಂಡಲಿಕನಂತಿರುವ ವ್ಯಕ್ತಿ 'ನಜರ್' ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಎಡಬದಿಯಲ್ಲಿ ಭರತ, ಶತ್ರುಘ್ನರು ಕೂಡಾ ಕುಳಿತಿದ್ದು ನಂತರದಲ್ಲಿಯ ರಾಕ್ಷಸನಂತಹ ಆಕೃತಿ ಬಹುಶಃ ವಿಭೀಷಣನಿರಬೇಕು. ಹನುಮಂತನಂತೆ ಭಕ್ತಿಯಿಂದ ಕೈ ಜೋಡಿಸಿ ಮೊಳಕಾಲ ಮೇಲೆ ಕುಳಿತಿದ್ದಾನೆ.

ಈ ಮೇಲೆ ಸ್ವಲ್ಪದರಲ್ಲಿ ಚರ್ಚಿಸಿದ ಆಕೃತಿಗಳಲ್ಲಿ ಅತ್ಯಂತ ಸಾಮ್ಯತೆ ಇದೆ. ರೇಖಾ ವಿನ್ಯಾಸದಲ್ಲಿ ಮೊಟ್ಟಮೊದಲು ನೋಡಿದ ಚಿತ್ರಗಳ ನೈಜತೆ ಇವುಗಳಲ್ಲಿ ಇಲ್ಲದೇ ಹೋದರೂ ಸ್ಪಷ್ಟವಾದ ಬಾಹ್ಯ ಲಕ್ಷಣಗಳು ಮತ್ತು ಆಕೃತಿಗಳನ್ನು ನೋಡಿದಾಗ ಕಲಾತ್ಮಕತೆ ಎದ್ದು ಕಾಣುತ್ತದೆ. ಶಿವಸಭಾದ ಪಾರ್ವತಿ, ರಾಮಸಭಾದ ಸೀತಾ ಈ ಆಕೃತಿಗಳನ್ನು ಒಂದಕ್ಕೊಂದು ಹೋಲಿಸಿದಾಗ ಎರಡೂ ಶೈಲಿಯಲ್ಲಿ ಕುಳಿತ ಭಂಗಿ, ಮುಖಗಳ ಭಾವ, ಲಕ್ಷಣಗಳಲ್ಲಿ ಸ್ಪಷ್ಟ ಸಾಮ್ಯತೆ ಎದ್ದು ಕಾಣುತ್ತದೆ. ಹೀಗಾಗಿ ಆಕೃತಿಗಳಲ್ಲಿ ಯಾವುದಕ್ಕೆ ಬೇಕಾದರೂ ಹೊಂದಿಕೊಳ್ಳುವ ಶಕ್ತಿಯನ್ನು ಕಲಾವಿದ ತನ್ನ ಸಮಯೋಚಿತ ವಿಚಾರದಿಂದ ನಿರೂಪಿಸುತ್ತಾನೆ. ಇದೇ ರೀತಿಯ ಹಲವಾರು ಚಿತ್ರಗಳು ಇನ್ನೂ ಇವೆ. ಅನುಸೂಯಳು ತ್ರಿಮೂರ್ತಿಗಳಿಗೆ ಭಿಕ್ಷೆ ನೀಡುವ ದೃಶ್ಯ (ಚಿತ್ರ 13) ಇತ್ಯಾದಿ. ಪ್ರಸ್ತುತ ಚಿತ್ರವೂ ಕೂಡ ಈ ಮೇಲೆ ಚರ್ಚಿಸಿದ ಸಂಯೋಜನೆಯ ಮಾದರಿಯಲ್ಲಿದ್ದು, ಆಶ್ರಮದ ಮತ್ತು ಪ್ರಕೃತಿ ಚಿತ್ರಣ; ಪರ್ಣಕುಟೀರ, ಮರಗಳು, ಹೂಬಳ್ಳಿಗಳು ಆಶ್ರಮದ ಚಿತ್ರಣವನ್ನು ನೀಡುತ್ತವೆ. ಬ್ರಹ್ಮ, ವಿಷ್ಣು ಮತ್ತು ಶಿವರ ಆಕೃತಿಗಳಲ್ಲಿ ಪ್ರತಿಯೊಂದು ಅಂಶಗಳಲ್ಲಿನ ಸಾಮ್ಯತೆ, ಕಲಾವಿದ ಹೆಚ್ಚಿನದನ್ನು ಚಿತ್ರಿಸಲು ಪ್ರಯತ್ನಿಸದೇ ತನ್ನದೇ ಆದ ಛಾಪನ್ನು ಇದರಲ್ಲಿ ತುಂಬಿದ್ದಾನೆ. ಇದಕ್ಕೆ ಕಲಮ್ 'ಶೈಲಿ' ಅಥವಾ 'ಸ್ಟೈಲ್' ಎಂದು ಚಿತ್ರಕಲಾ ಇತಿಹಾಸದಲ್ಲಿ ಹೇಳುವುದು. ಇದು ಕಿನ್ನಾಳದ 'ಕಲಮ್' ಎಂದು ಕರೆಯುವುದರಲ್ಲಿ ಯಾವ ತೊಂದರೆಯೂ ಇಲ್ಲ.



11. ಶಿವ-ಪಾರ್ವತಿ ಸಭಾ (11x95 ಸೆಂ.ಮೀ.)



12. ರಾಮ-ಸೀತಾ ಸಭಾ (11x95 ಸೆಂ.ಮೀ.)



13. ಮಹಾಸತಿ ಅನಸೂಯ ತ್ರಿಮೂರ್ತಿಗಳಿಗೆ ಭಿಕ್ಷೆ ನೀಡುತ್ತಿರುವುದು (11x40 ಸೆಂ.ಮೀ.)

ಉಪಸಂಹಾರ:

ಕಿನ್ನಾಳದ ಪ್ರಸ್ತುತ ರೇಖಾ ಚಿತ್ರಗಳು ಶುದ್ಧ ಶಿಷ್ಟ ಸಂಪ್ರದಾಯ ಮತ್ತು ಶೈಲಿಯಲ್ಲಿ ಬೆಳೆದಿವೆ. ಮೊದಲು ಚರ್ಚಿಸಿದ ಪೌರಾಣಿಕ ಕಥಾವಸ್ತುಗಳನ್ನುಳ್ಳ ಚಿತ್ರಗಳ ಕಲಾವಿದ ನಂತರ ಚರ್ಚಿಸಿದ 'ಸಭಾ'ಗಳ ಕಲಾವಿದ ಬೇರೆ ಬೇರೆಯಾಗಿದ್ದಾರೆ. ಈ ಎರಡೂ ಗುಂಪುಗಳು ಚಿತ್ರಿತವಾದ ಕಾಲವೂ ಕೂಡ ಬೇರೆ ಬೇರೆಯಾಗಿದೆ. ಮೊದಲಿನ ಚಿತ್ರಗಳು ವಿಜಯನಗರದ ಕಾಲದಲ್ಲೇ ಆಗಲಿ ಅಥವಾ ಕೊಂಚ ನಂತರದಲ್ಲಿ ಆಗಿರಬಹುದೆಂದು ಕೇವಲ ಊಹಿಸಿಯೇ ತಿಳಿಯಬೇಕು. ಏಕೆಂದರೆ ಇವುಗಳ ಕಾಲವನ್ನು ನಿರ್ಧರಿಸುವ ದಾಖಲೆಗಳು ಇದುವರೆಗೂ ದೊರೆತಿಲ್ಲ. ಶೈಲಿಯ ಆಕೃತಿಗಳ ಅಭ್ಯಾಸ ಮತ್ತು ಸಮಕಾಲೀನ ಕಲಾಕೃತಿಗಳೊಂದಿಗೆ ಇವುಗಳಿಗಿರುವ ಸಾಮ್ಯತೆ ಲಕ್ಷಣ ಮತ್ತು ಇತರೆ ಅಂಶಗಳನ್ನು ಗಮನಿಸಿಯೇ ನಿರ್ಧರಿಸಬೇಕಾಗುತ್ತದೆ. ಉದಾಹರಣೆಗೆ, ಪ್ರಸ್ತುತ ರೇಖಾ ಚಿತ್ರಗಳಲ್ಲಿನ ಆಕೃತಿಗಳು ರಾಜಸ್ಥಾನಿ ಮಿನಿಯೇಚರ್ ಶೈಲಿಯ ಮಾಳ್ವ ಮೇವಾರ ಶೈಲಿಯ ಚಿತ್ರಗಳಲ್ಲಿ ಮತ್ತು ಬಿಲ್ಹಣ ಕವಿಯ 'ಚೌರಪಂಚಾಸಿಕ' ಕಥೆಗಳ ಚಿತ್ರಣಗಳಲ್ಲೂ ಇರುವ ಕೆಲವೊಂದು ಆಕೃತಿಗಳಿಗೆ ಶೈಲಿಯಲ್ಲಿ ಹೋಲುತ್ತವೆ. ಈ ರೀತಿಯ ಶೈಲಿಯ ಹೊಂದಾಣಿಕೆ ಕ್ರಿ.ಶ. 1500 ರಿಂದ[10] ನಂತರದಲ್ಲಿ ರಚಿತವಾದ ಬಹುತೇಕ ಎಲ್ಲ ಚಿತ್ರ ಪರಂಪರೆಯಲ್ಲಿ ಕಂಡುಬರುತ್ತವೆ. ಅದರ ಪ್ರಭಾವ ಇತ್ತೀಚಿನ ಮೈಸೂರು, ತಂಜಾವೂರು ಶೈಲಿಯ ಚಿತ್ರಗಳಲ್ಲಿ ನಾವು ಗಮನಿಸಬಹುದು. ಇದರಿಂದ ಕಿನ್ನಾಳದ ಈ ರೇಖಾ ಚಿತ್ರಗಳ ಕಲಾವಿದ ಸಮಕಾಲೀನ ಕಾಲದ ಚಿತ್ರ ಶೈಲಿಗಳ ಅರಿವನ್ನು ಪ್ರಾಯಶಃ ಹೊಂದಿರುವಂತೆ ಕಾಣುತ್ತದೆ. ದಖ್ಖನಿ ಚಿಕಣಿ ಚಿತ್ರ ಶೈಲಿಯಂತೂ ಪಕ್ಕದ ಬಿಜಾಪುರ, ಗೋಲ್ಕೊಂಡ ಮತ್ತು ಅಹಮದ್‌ನಗರಗಳಲ್ಲಿ ಬೆಳೆಯಿತು.[11] ಆದರೆ ಬಿಜಾಪುರ ಅದರ ಕೇಂದ್ರಸ್ಥಾನವೆಂಬುದನ್ನು ಮರೆಯುವಂತಿಲ್ಲ. ಕಿನ್ನಾಳದ ಕಲಾವಿದನಿಗೆ ಕೊನೆಯ ಪಕ್ಷ ಬಿಜಾಪುರದ ದಖ್ಖನಿ ಚಿಕಣಿ ಚಿತ್ರಶೈಲಿಯ ಕಲ್ಪನೆಯು ಜೊತೆಗೆ ವಿಜಯನಗರದ ಕಾಲದವೇ ಆದ ಲೇಪಾಕ್ಷಿ, ಹಂಪಿ, ತಾಡಪತ್ರಿಗಳಲ್ಲಿನ ಉದಾಹರಣೆಗಳು ಅತ್ಯಂತ ಮುಖ್ಯವಾದ ಪ್ರಭಾವವನ್ನು ಬೀರುತ್ತವೆ. ಕಿನ್ನಾಳದ ರೇಖಾ ಚಿತ್ರಗಳನ್ನು ಗಮನಿಸಿದರೆ ಅವುಗಳು ಕೇವಲ ರೇಖಾಚಿತ್ರಗಳಾಗೇ ಉಳಿಯದೆ ವರ್ಣಸಂಯೋಜನೆಯ ಹಂತದ ಕೆಲಸವನ್ನು ಹೊಂದಿವೆ. ಪ್ರಾಯಶಃ ಇದೇ ಉದ್ದೇಶಕ್ಕಾಗಿ ರಚಿಸಿ ಸಂರಕ್ಷಿಸಿರುವ ಕೃತಿಗಳಿವು ಎಂದು ತೋರುತ್ತದೆ. ಒಟ್ಟಿನಲ್ಲಿ ವಿಜಯನಗರದ ರಾಜ್ಯ ಪತನದ ನಂತರ ಪ್ರವರ್ಧನಗೊಂಡ ಸುರಪುರ ಶೈಲಿಯ ಚಿತ್ರಗಳು ಮೈಸೂರು ಶೈಲಿಯ ಚಿತ್ರಗಳ ಸಮಕಾಲೀನವಾಗಿ ಕಿನ್ನಾಳದಲ್ಲಿ ಈ ಚಿತ್ರಗಾರ ಕುಟುಂಬಗಳು ಚಿತ್ರ ರಚನೆಯಲ್ಲಿ ತೊಡಗಿ ಇಂತಹ ಹಲವಾರು ಕಲಾಕೃತಿಗಳನ್ನು ರಚಿಸಿದರು ಎಂದು ತಿಳಿಯಬಹುದು ಮತ್ತು ಇದು ವಿಜಯನಗರದ ಪರಿಸರದಲ್ಲೇ ಇರುವುದರಿಂದ ವಿಜಯನಗರ ಚಿತ್ರ ಶೈಲಿಯ ಮುಂದುವರಿದ ಶೈಲಿ ಎಂದು ಹೇಳಬಹುದು.

ಟಿಪ್ಪಣಿಗಳು

1. ಪ್ರಸ್ತುತ ರೇಖಾ ಚಿತ್ರಗಳನ್ನು ಕಿನ್ನಾಳದ ಶ್ರೀ ನಾರಾಯಣಪ್ಪ ಚಿತ್ರಗಾರ ಅವರ ಬಳಿಯಲ್ಲಿರುವ ಒಂದು ರೇಖಾಚಿತ್ರದ ಹಸ್ತಪ್ರತಿ ಪುಸ್ತಕದಿಂದ ಆರಿಸಿ ಕೊಳ್ಳಲಾಗಿದೆ. ಈ ರೇಖಾ ಚಿತ್ರಗಳಲ್ಲಿ ಕೆಲವು ಈಗಾಗಲೇ ನನ್ನ 'ಕಿನ್ನಾಳದ ಚಿತ್ರಕಲೆ' ಲಲಿತಕಲಾ ಅಕಾಡೆಮಿ, ಬೆಂಗಳೂರು 1992ರಲ್ಲಿ ಪ್ರಕಟವಾಗಿವೆ. ಶ್ರೀ ನಾರಾಯಣಪ್ಪ ಅವರಿಗೆ ನಾನು ಕೃತಜ್ಞ.
2. ತಾಂತ್ರಿಕವಾಗಿ ರೇಖಾ ಚಿತ್ರಗಳ ರಚನೆಯಲ್ಲಿ ಉತ್ತಮ ಗುಣಮಟ್ಟದ ಲೇಖನಿಯನ್ನು ಬಳಸುವುದು ಹೆಚ್ಚು ಸೂಕ್ತ. ಆದರೆ ಕುಂಚದಿಂದ ರಚಿಸಿದಾಗ ರೇಖೆಗಳಲ್ಲಿ ಕೆಲವೊಂದು ಬಾರಿ ವ್ಯತ್ಯಾಸವಾಗುವುದುಂಟು.
3. ಚಿತ್ರಗಳ ಶೈಲಿಯ ವಿಶ್ಲೇಷಣೆಯಲ್ಲಿ ನಾವು ಸ್ಪಷ್ಟವಾಗಿ ಬಾಹ್ಯ ಲಕ್ಷಣಗಳನ್ನು ಗಮನಿಸಬೇಕಾಗುತ್ತದೆ. ಇಲ್ಲಿ ನಾನು ಕಲಾ ಇತಿಹಾಸದ ಕೆಲವು ಚರ್ಚೆಯನ್ನು ಉಪಯೋಗಿಸಿದ್ದೇನೆ. ಇಲ್ಲಿ ನೋಡಿ: Wolffin H., 1929, *Principles of Art History*.
4. ಇವುಗಳನ್ನು ಕುರಿತು ಹೆಚ್ಚಿನ ಮಾಹಿತಿಗೆ ನೋಡಿ: Kramrisch Stella, 1937 (R.P. 1983), *A Survey of Painting in Deccan.*
5. ಹಂಪಿಯ ಯಾವುದೇ ದೇವಸ್ಥಾನದಲ್ಲಿ ನರಸಿಂಹ ಶಿಲ್ಪದ ಮುಖದ ಭಾಗವನ್ನು ಗಮನವಿಟ್ಟು ನೋಡಿ. ಪ್ರಸ್ತುತ ರೇಖಾ ಚಿತ್ರದ ನೆನಪು ಆಗ ಬಾರದೆ ಇರುವುದಿಲ್ಲ.
6. ಚಿತ್ರಗಳಲ್ಲಿ ಈ ತರಹದ 'Adjustment' (ಹೊಂದಾಣಿಕೆ) ಸಾಮಾನ್ಯವಾಗಿವೆ. ಘನಾಕೃತಿಯಲ್ಲಿನ ಅವಕಾಶ ಇಲ್ಲಿ ಇರದು. ಆದ್ದರಿಂದ ಕಲಾವಿದನು ತನಗೆ ಪ್ರಮುಖ ಎನಿಸಿದ ಭಾಗವನ್ನು ತೋರಿಸಲು ನಿರ್ಧರಿಸಿದಾಗ ಇಂತಹ ಜಾಣ್ಮೆಯನ್ನು-ಪ್ರದರ್ಶಿಸುತ್ತಾನೆ.
7. ಕಿನ್ನಾಳದ ಬಹುತೇಕ ರೇಖಾಚಿತ್ರಗಳಲ್ಲಿ ಆಕೃತಿಗಳನ್ನು ಹೆಸರಿನಿಂದ ಗುರುತಿಸಲಾಗಿದೆ.
8. ಇಂತಹ ಚಿತ್ರಣಗಳಲ್ಲಿ 'ಕಥೆ'ಯ ಭಾಗ ಅತ್ಯಂತ ಪ್ರಮುಖವಾಗುತ್ತದೆ. ಇದನ್ನೆ 'ಐಕನಾಲಜಿ' ಎನ್ನುವುದು. ಹೆಚ್ಚಿನ ಮಾಹಿತಿಗೆ: Panofsky Irwin, 1972, *'Studies in Iconology' Humanistic themes in Renaissance Art*, First Icon Edition, London (Originally Published in 1939 by Oxford University Press, London). ಇದರಲ್ಲಿ, ಕಲಾಕೃತಿಯನ್ನು ಅರ್ಥ

ಮಾಡಿಕೊಳ್ಳಲು 'ಐಕನಾಲಜಿಯ' ಮಹತ್ವವನ್ನು ಕುರಿತು ಅತ್ಯಂತ ಮನೋಜ್ಞವಾಗಿ ಚರ್ಚಿಸಿದೆ. ಈ ಆಕೃತಿಯ ಪ್ರಾಮುಖ್ಯತೆಯನ್ನು ಕುರಿತು ನನ್ನ ಗಮನಸೆಳೆದ ಡಾ. ಎಂ.ಎಸ್. ಕೃಷ್ಣಮೂರ್ತಿ ಮತ್ತು ಇದರ ಬಗ್ಗೆ ವಿಚಾರ ಸಂಕಿರಣದಲ್ಲಿ ಮಾಹಿತಿಯೊದಗಿಸಿದ ಶ್ರೀ ಸೀತಾರಾಮ ಜಾಗೀರದಾರ ಅವರಿಗೆ ನನ್ನ ಕೃತಜ್ಞತೆಗಳು. ಇಲ್ಲಿ ಉಪಯೋಗಿಸಿದ ಮಾಹಿತಿ ಕೃಷ್ಣಶಾಸ್ತ್ರಿ ಎ.ಆರ್., 1989, (11ನೇ ಮುದ್ರಣ), "ವಚನ ಭಾರತ", ಮೈಸೂರು, ಪುಟ 257, ಭೀಷ್ಮ ಪರ್ವದಿಂದ ಸಂಗ್ರಹಿಸಲಾಗಿದೆ.

9. ಇವುಗಳನ್ನು ವರ್ಣಚಿತ್ರಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಅಂತಹ ಉದಾರಹಣೆ ಶ್ರೀ ಅರ್.ಎಂ. ಹಡಪದ, ಕಲಾವಿದರು, ಕೆನ್‌ಕಲಾ ಶಾಲೆ, ಶೇಷಾದ್ರಿಪುರಂ, ಬೆಂಗಳೂರು ಇವರ ಸಂಗ್ರಹದಲ್ಲಿವೆ. ವರ್ಣಚಿತ್ರಕ್ಕಾಗಿ ನೋಡಿ: ಕುಲಕರ್ಣಿ ಆರ್.ಎಚ್., 1992, "ಕಿನ್ನಾಳದ ಚಿತ್ರಕಲೆ" ಬೆಂಗಳೂರು.

10. ಕ್ರಿ.ಶ. 1500ರ ಕಾಲವನ್ನು ಭಾರತದಲ್ಲಿ ಮಿನಿಯೇಚರ್ ಶೈಲಿಯ ಬೆಳವಣಿಗೆಯ ಪ್ರಾರಂಭದ ಹಂತವೆಂದು ತಿಳಿಯಲಾಗುತ್ತದೆ. ನೋಡಿ: (1) Krishna Chaitanya, 1982, *A History of Indian Painting, "Rajasthani Traditions"*, New Delhi. (2) Barret Douglos & Basil Gray, 1972, *Indian Painting*, Albert Skira, London,

11. ದಖ್ಖನಿ ಚಿಕಣಿ ಚಿತ್ರಗಳ ಚರ್ಚೆಗೆ ನೋಡಿ: Zebrowski Mark, 1983, *Daccani Painting*, London. (ಈ ಲೇಖನದಲ್ಲಿ ಉಪಯೋಗಿಸಿದ ಚಿತ್ರಗಳನ್ನು ಕುರಿತು ಡಾ. ಎಂ.ಎಸ್. ಕೃಷ್ಣಮೂರ್ತಿ, ಪ್ರೊಫೆಸರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರೊಂದಿಗೆ ಹಲವಾರು ಬಾರಿ ಚರ್ಚಿಸಿದ್ದೇನೆ. ಅವರು ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ಈ ಲೇಖನದ ಬರವಣಿಗೆಯ ಸಮಯದಲ್ಲಿ ಚಿತ್ರಗಳ ಅಭ್ಯಾಸದ ಸಮಯದಲ್ಲಿ ಸ್ನೇಹಿತ ಶ್ರೀ ಎನ್.ವಿ. ಜೋಷಿ, ಸಹಾಯಕ ನಿರ್ದೇಶಕರು, ರಾಜ್ಯ ಪುರಾತತ್ವ ಇಲಾಖೆ, ಮೈಸೂರು ಇವರೂ ಕೂಡಾ ಹಲವಾರು ಸಲಹೆಗಳನ್ನು ನೀಡಿದ್ದಾರೆ. ಈರ್ವರಿಗೂ ನನ್ನ ಧನ್ಯವಾದಗಳು.)

3. ಲಕ್ಷ್ಮೇಶ್ವರದಲ್ಲಿ ವಿಜಯನಗರ ಕಾಲದ ವಾಸ್ತುಶಿಲ್ಪ ಬೆಳವಣಿಗೆ

– ರು.ಮ. ಷಡಕ್ಷರಯ್ಯ

ಇಂದಿನ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಪ್ರಮುಖ ಪಟ್ಟಣವೆನಿಸಿದ ಲಕ್ಷ್ಮೇಶ್ವರವು ಪ್ರಾಚೀನವಾಗಿ ಪುರಿಗೆಜೆ, ಪುಲಿಗೆಜೆ, ಪುಲಿಕರನಗರವೆಂದು ಕರೆಸಿಕೊಂಡಿದ್ದು ಅದು ಪುಲಿಗೆಜೆ-300 ಎಂಬ ಆಡಳಿತ ಕೇಂದ್ರದ ರಾಜಧಾನಿ ಪಟ್ಟಣವೆನಿಸಿತ್ತು. ಸಾಹಿತ್ಯ ಮತ್ತು ಶಾಸನಗಳು ಈ ಪಟ್ಟಣದ ಸೊಬಗನ್ನು ರಂಜನೀಯವಾಗಿ ವರ್ಣಿಸಿದ್ದು ಅದನ್ನು ಒಂದರಲ್ಲಿ ಪುಲಿಕರ ಪಟ್ಟಣವು ಇಂದ್ರನ ಅಮರಾವತಿಯಂತಿದ್ದಿತೆಂದು ಹೇಳಲಾಗಿದೆ.[1] ಕರ್ನಾಟಕದ ಪ್ರಾಚೀನ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಗೆ ಈ ಸ್ಥಳವು ತನ್ನದೇ ಆದ ಕೊಡುಗೆಯನ್ನು ನೀಡಿದೆ. ಈ ಪಟ್ಟಣದ ಚರಿತ್ರೆ ಶಾತವಾಹನರ ಕಾಲದಿಂದ ಆರಂಭವಾಗಿದ್ದನ್ನು ತಿಳಿಯಲಾಗಿದೆ. ಬಾದಾಮಿ ಚಾಲುಕ್ಯರಿಂದ ವಿಜಯನಗರ ಕಾಲದವರೆಗೆ ಈ ಸ್ಥಳದಲ್ಲಿ ಅನೇಕ ವೈವಿಧ್ಯಮಯ ಸ್ಮಾರಕಗಳಾದ ವಿವಿಧ ಧರ್ಮದ ದೇವಾಲಯಗಳು, ಬಸದಿಗಳು ನಿರ್ಮಾಣಗೊಂಡವು ಮತ್ತು ಕಾಲಕಾಲಕ್ಕೆ ಅವು ಜೀರ್ಣೋದ್ಧಾರಗೊಂಡವು ಹಾಗೂ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಯಿತು. ಇದಲ್ಲದೆ ಬಾವಿ, ಪುಷ್ಕರಿಣಿ, ಕೋಟೆ ಮುಂತಾದ ಕಟ್ಟಡಗಳು ನಿರ್ಮಾಣಗೊಂಡವು.

ವಿಜಯನಗರ ಕಾಲದಲ್ಲಿ ಜೈನ-ಶೈವರ ನಡುವೆ ಭೂವಿವಾದಗಳು ಸಂಭವಿಸಿದವು. ಈ ಕಾಲದ ಪೂರ್ವದಲ್ಲಿ ಸ್ಥಳೀಯ ಪ್ರಮುಖ ಶೈವ ದೇವಾಲಯವಾದ ಸೋಮೇಶ್ವರ ಮೂಲತಃ ಜೈನ ಬಸದಿಯಾಗಿದ್ದಿತೆಂದು, ಆದಯ್ಯನೆಂಬುವನು ಸೌರಾಷ್ಟ್ರದಿಂದ ತಂದ ಸೋಮನಾಥನನ್ನು ಅಲ್ಲಿ ಪ್ರತಿಷ್ಠಾಪಿಸಿದನೆಂಬ ವಿವಾದಾತ್ಮಕ ಸಂಗತಿಗಳು ಕೆಲವು ಕೃತಿಗಳಲ್ಲಿವೆ. ವಿಜಯನಗರ ಆಳ್ವಿಕೆಯಲ್ಲಿ ಬಹಮನಿಯರು ಕೆಲಕಾಲ ಈ ಪ್ರದೇಶವನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರು. ಅವರ ಕಾಲದ ಅಲ್ಲಿಯ ಸಾಂಸ್ಕೃತಿಗ ಚರಿತ್ರೆ ಇನ್ನೂ ರಚನೆ ಆಗಿಲ್ಲ. ಇಲ್ಲಿಯವರೆಗೆ ಅನೇಕ ಸಂಶೋಧಕರು ಈ ಸ್ಥಳದ ಸಾಂಸ್ಕೃತಿಕ ಚರಿತ್ರೆಯ ರಚನೆಯ ಬಗ್ಗೆ ಪ್ರಯತ್ನ ಪಟ್ಟಿದ್ದುಂಟು. ಆದರೆ ವಿಜಯನಗರ ಕಾಲದ ಅಲ್ಲಿಯ ದೇವಾಲಯಗಳ ಮತ್ತು ಶಿಲ್ಪಗಳ ಬಗ್ಗೆ ಅಧ್ಯಯನ ನಡೆಸಿದ್ದು ವಿರಳ. ಈ ಹಿನ್ನೆಲೆಯಲ್ಲಿ ಅಲ್ಲಿಯ ಈ ಕಾಲದ ವಾಸ್ತುಶಿಲ್ಪ ಕುರಿತ ಅಧ್ಯಯನ ಇದಾಗಿದೆ.

ಅಲ್ಲಿ ಶೈವ ಮತ್ತು ಜೈನ ಧರ್ಮಗಳು ವಿಜಯನಗರ ಕಾಲದಲ್ಲೂ ಪ್ರಾಮುಖ್ಯತೆಯನ್ನು ಪಡೆದಿದ್ದವು. ಈ ಧರ್ಮಗಳ ಕೆಲ ಸ್ಮಾರಕಗಳು ಈ ಕಾಲದಲ್ಲಿ ಜೀರ್ಣೋದ್ಧಾರಗೊಂಡ ಸ್ಥೂಲ ವಿಷಯಗಳು ಅಲ್ಲಿಯ ಕೆಲ ಶಾಸನಗಳಲ್ಲಿವೆ. ಶೈವ ಧರ್ಮದ ಸೋಮೇಶ್ವರ, ಮುದ್ದೇಶ್ವರ, ಲಕ್ಷ್ಮಣೇಶ್ವರ, ಸಿದ್ದೇಶ್ವರ, ಮರುಳ ಸಿದ್ದೇಶ್ವರ, ಸಹಸ್ರಲಿಂಗ, ಹೊಬೇಶ್ವರ, ಸಿದ್ದೇಶ್ವರ, ಬಲಬೇಶ್ವರ, ರಾಮೇಶ್ವರ ದೇವಾಲಯಗಳು ಮತ್ತು ಜೈನ ಧರ್ಮದ ಶಂಖಬಸದಿ, ಶಂಖ ತೀರ್ಥ, ಧವಳ ಜಿನಾಲಯ, ಪೆರ್ಮಾಡಿ ಬಸದಿ ಇತ್ಯಾದಿ ಪ್ರಮುಖವೆನಿಸಿವೆ. ಈ ಸ್ಥಳದಲ್ಲಿ ರಾಮಚಂದ್ರ ದೇವಾಲಯವೊಂದೇ ವೈಷ್ಣವ ಧರ್ಮದ್ದಾಗಿದೆ.

ಶೈವ ದೇವಾಲಯುಗಳು :

ಈ ಕಾಲದ ಸ್ಥಳೀಯ ಪ್ರಮುಖ ಶೈವ ದೇವಾಲಯಗಳ ವಾಸ್ತುಶಿಲ್ಪ ಬೆಳವಣಿಗೆಯ ಸ್ಥೂಲ ವಿವರಗಳನ್ನು ಇಲ್ಲಿ ನೀಡಲಾಗಿದೆ.

1. ಸೋಮೇಶ್ವರ ದೇವಾಲಯ :

ಸೋಮೇಶ್ವರ ದೇವಾಲಯವು ಈ ಪಟ್ಟಣದ ಮಧ್ಯದಲ್ಲಿದ್ದು ಅದು ಸುಮಾರು ಕ್ರಿ.ಶ. 11ನೇ ಶತಮಾನದ ಆರಂಭದಲ್ಲಿ ನಿರ್ಮಾಣಗೊಂಡಿದ್ದು, ಮುಂದೆ ಕ್ರಿ.ಶ. 16ನೇ ಶತಮಾನದವರೆಗೆ ಮೂರು ಸಲ ಜೀರ್ಣೋದ್ಧಾರಗೊಂಡಿದೆ. ಅಲ್ಲಿಯ ಕಿ.ಶ. 16ನೇ ಶತಮಾನದವರೆಗಿನ 30 ಶಾಸನಗಳಲ್ಲಿ ಈ ದೇವಾಲಯಕ್ಕೆ ದತ್ತಿ-ದಾನ ನೀಡಿದ ಉಲ್ಲೇಖಗಳಿವೆ. ಈ ದೇವಾಲಯದ ಮೂಲ ಹೆಸರು ಸುರಹೊನ್ನಬಸದಿಯೆಂದು ಕ್ರಿ.ಶ. 13ನೇ ಶತಮಾನದ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಹೇಳಲಾಗಿದೆ. ಹರಿಹರನ ಆದಯ್ಯರಗಳೆಯಲ್ಲಿ ಆದಯ್ಯನು ಸೌರಾಷ್ಟ್ರದ ಸೋಮನಾಥನ ಮಾದರಿಯಲ್ಲಿ ನಂದಿ ಸವಾರಿ ಮಾಡುವ ಶಿವಪಾರ್ವತಿಯರ ಶಿಲ್ಪವನ್ನು ಪ್ರತಿಷ್ಠಾಪಿಸಿದನೆಂಬ ಪ್ರಬಲವಾದವಾದ ಇದೆ.[2]

ಅನೇಕ ಸಾಹಿತ್ಯ ಕೃತಿಗಳಾದ ಸೋಮನಾಥನ ಪಂಡಿತಾರಾಧ್ಯ ಚರಿತ್ರೆ ಮತ್ತು ಬಸವ ಪುರಾಣ, ಭೀಮಕವಿಯ ವೀರಶೈವಾಮೃತ ಪುರಾಣ, ಲಕ್ಷ್ಮಣ ದಂಡೇಶನ ಶಿವತತ್ವ ಚಿಂತಾಮಣಿ, ರಾಘವಾಂಕನ ಸೋಮನಾಥ ಚರಿತ್ರೆಗಳಲ್ಲಿ ಈ ದೇವರ ಬಗ್ಗೆ ವಿವರಗಳಿವೆ. ಕ್ರಿ.ಶ. 1096ರಲ್ಲಿ ಈ ದೇವರಿಗೆ ದತ್ತಿ ನೀಡಿದ ಶಾಸನ ಪ್ರಾಚೀನದ್ದೆನಿಸಿದೆ.[3]

ಸೋಮೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಅದರ ಸುತ್ತ ಕೋಟೆಯಂತಹ ಎತ್ತರದ ಪ್ರಾಕಾರಗೋಡೆ-ದ್ವಾರಗಳಿವೆ. ಅವುಗಳ ಒಳಗಡೆ ಅನೇಕ ಚಿಕ್ಕ ಗುಡಿಗಳಿವೆ. ಈ ದೇವಾಲಯದ ಪಶ್ಚಿಮಕ್ಕೆ ಒಂದು ವಿಶಾಲವಾದ ಪುಷ್ಕರಿಣಿಯಿದೆ. ದೇವಾಲಯ ಮತ್ತು ಪ್ರಾಕಾರದ ಮಧ್ಯದ ನೆಲಕ್ಕೆ ಹಾಸು ಬಂಡೆಗಳನ್ನು ಹಾಕಲಾಗಿದೆ. ಅದರ ಉತ್ತರ ಮತ್ತು ದಕ್ಷಿಣದ ಪ್ರವೇಶಗಳ ಬದಿಗಳಲ್ಲಿ ವಿಶಾಲವಾದ ತೆರೆದ ಮಂಟಪಗಳಿದ್ದು ಅವುಗಳಿಗೆ ಅಲ್ಲಲ್ಲಿ ಮೆಟ್ಟಿಲುಗಳಿವೆ. ಉತ್ತರ ಪ್ರವೇಶದಲ್ಲಿ ಎರಡು ದ್ವಾರಗಳಿವೆ.

ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾಮಂಟಪಗಳಿವೆ (ಚಿತ್ರ 1). ಗರ್ಭಗೃಹದ ಮಧ್ಯ ನಂದಿ ಸವಾರಿ ಮಾಡುವ ಶಿವಪಾರ್ವತಿಯರ ಶಿಲ್ಪವಿದೆ. ಗರ್ಭಗೃಹ ಮತ್ತು ಅಂತರಾಳ ದ್ವಾರ ಫಲಕಗಳಲ್ಲಿ ಚಿತ್ರಾಲಂಕಾರವನ್ನು ವಿರೂಪಗೊಳಿಸಲಾಗಿದೆ. ಸಭಾಮಂಟಪದ ಪಾರ್ಶ್ವದಲ್ಲಿ ಮುಖಮಂಟಪಗಳಿವೆ. ಅದರ ಮೂರು ದ್ವಾರ ಚೌಕಟ್ಟುಗಳು ಎರಡು ಮಾದರಿಯಲ್ಲಿದ್ದು ದಕ್ಷಿಣದ ದ್ವಾರ ಚೌಕಟ್ಟು ವಿಭಿನ್ನವೆನಿಸಿದೆ. ಅದರ ಉತ್ತರಾಂಗದಲ್ಲಿ ಕಮಲ ಸರೋವರದ ಮಧ್ಯ ಗಜಲಕ್ಷ್ಮಿಯ ಚಿತ್ರವಿದೆ. ಅದರ ಶಾಖೆ ಮತ್ತು ಚಿತ್ರಗಳು ಇನ್ನಿತರವುಗಳಿಂದಲೂ ಭಿನ್ನವೆನಿಸಿವೆ. ಶೈಲಿಯಿಂದ ಈ ದಕ್ಷಿಣದ ಬಾಗಿಲು ಚೌಕಟ್ಟಿನ ಕಾಲ ಸುಮಾರು ಕ್ರಿ.ಶ. 10ನೇ ಶತಮಾನ. ಉಳಿದೆರಡು ಚೌಕಟ್ಟುಗಳ ಕಾಲ ಸುಮಾರು 11ನೇ ಶತಮಾನ. ಉತ್ತರ ಮತ್ತು ದಕ್ಷಿಣ ಮುಖಮಂಟಪಗಳ ಕಾಲ ಸುಮಾರು ಕ್ರಿ.ಶ. 15ನೇ ಶತಮಾನ. ಸಭಾಮಂಟಪದ ಮುಂದಿನ ಮುಖಮಂಟಪಕ್ಕೆ ಹೊಂದಿ ಒಂದು ಮಹಾಮಂಟಪವಿದೆ. ಈ ಎರಡರ ಜೋಡಣೆಯ ಬದಿಗಳಲ್ಲಿ ಕಿರು ದ್ವಾರಗಳಿವೆ. ಈ ಮಹಾಮಂಟಪದ ಬದಿ ಗೋಡೆಗಳಲ್ಲಿ ಮತ್ತು ಎದುರಿಗೆ (ಪೂರ್ವಕ್ಕೆ) ದ್ವಾರಗಳಿವೆ. ಅದರ ಒಳಗಡೆ ಆರು ಸಾಲಿನಲ್ಲಿ 44 ಕಂಬಗಳು, ಕ್ರಮವಾಗಿ 4, 8x4 ಮತ್ತು 6 ಇವೆ. ಅದರ ಸುತ್ತ ಕಕ್ಷಾಸನವಿದೆ. ಅದರ ಕಟ್ಟೆ ಮತ್ತು ಭಿತ್ತಿಗೆ ಹೊಂದಿ ಕಂಬಗಳಿವೆ. ಮಹಾಮಂಟಪದ ಕಂಬಗಳು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರ ಕಾಲಗಳ ಶೈಲಿಯಲ್ಲಿರುವುದು ಗಮನೀಯ. ವಿಜಯನಗರ ಕಾಲದ ಕಂಬಗಳನ್ನು ಕಕ್ಷಾಸನದ ಮೇಲೆ ಭಿತ್ತಿಗೆ ಹೊಂದಿಸಿ ನಿಲ್ಲಿಸಲಾಗಿದೆ.


ಈ ದೇವಾಲಯದ ಅಧಿಷ್ಠಾನ ಮತ್ತು ಭಿತ್ತಿ ಭಾಗಗಳಲ್ಲಿ ಎರಡು-ಮೂರು ಕಾಲಗಳಲ್ಲಿ ನಿರ್ಮಿಸಿದ ಲಕ್ಷಣಗಳಿವೆ (ಚಿತ್ರ 1). ಗರ್ಭಗೃಹದಿಂದ ಸಭಾಮಂಟಪದವರೆಗೆ ಅಧಿಷ್ಠಾನ ಮತ್ತು ಭಿತ್ತಿಗಳು ಒಂದೇ ಮಾದರಿಯಲ್ಲಿದ್ದು ಕಲ್ಯಾಣ ಚಾಲುಕ್ಯರ ಕಾಲದ ಎರಡು ಕಾಲ ಘಟ್ಟಗಳಲ್ಲಿ ನಿರ್ಮಾಣ ಮತ್ತು ಜೀರ್ಣೋದ್ಧಾರದ ಸಂಕೇತಗಳಿವೆ. ವೇಸರ ಮಾದರಿಯ ಶಿಖರವು ಈ ಕಾಲಕ್ಕೆ ಸೇರಿದೆ. ಸಭಾಮಂಟಪದ ಮುಂಭಾಗವಾದ ಮಹಾಮಂಟಪದ ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಆದರೆ ಭಿತ್ತಿ ಸರಳವಾಗಿದ್ದು ಅಲ್ಲಲ್ಲಿ ನಕ್ಷತ್ರಾಕಾರ ಮತ್ತು ಇನ್ನಿತರ ಮಾದರಿಯ ಕಿಟಕಿಗಳಿವೆ. ಗರ್ಭಗೃಹದಿಂದ ಮಹಾಮಂಟಪದವರೆಗಿನ ಕೈಪಿಡಿ ಗೋಡೆಯ ರಚನೆಯು ಒಂದೇ ಮಾದರಿಯದ್ದಾಗಿದೆ. ಆದರೆ ಅದರ ಶಿಲ್ಪಕಲೆಯ ಶೈಲಿಯು ಕ್ರಿ.ಶ. 12ನೇ ಶತಮಾನದ್ದಾಗಿದೆ.

ಈ ದೇವಾಲಯದ ಸುತ್ತಲಿನ ಪ್ರಾಕಾರ ಗೋಡೆಯನ್ನು ಗ್ರಾನೈಟ್ ಶಿಲೆಯಿಂದ ಎತ್ತರವಾಗಿ ಮತ್ತು ಬಲಿಷ್ಠವಾಗಿ ಕೋಟೆಗೋಡೆಯಂತೆ ನಿರ್ಮಿಸಲಾಗಿದೆ. ಈ ಮಾದರಿಯ ಪ್ರಾಕಾರ ಗೋಡೆಗಳು ಬಳ್ಳಾರಿ ಜಿಲ್ಲೆಯ ಉಜ್ಜಿನಿ ಮರುಳಸಿದ್ಧೇಶ್ವರ ದೇವಾಲಯ ಇತ್ಯಾದಿಗಳಲ್ಲಿವೆ. ಈ ಗೋಡೆಗಳಿಗೆ ಹೊಂದಿ ಭವ್ಯವಾದ ದ್ವಾರಗಳು ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿವೆ. ಆದರೆ ಉತ್ತರ ಭಾಗಕ್ಕೆ ಎರಡು ಕಿರು ದ್ವಾರಗಳು, ಪೂರ್ವ ಮತ್ತು ದಕ್ಷಿಣ ದ್ವಾರಗಳಲ್ಲಿ ಎತ್ತರದ ಬಾಗಿಲುಗಳಿವೆ. ಅವುಗಳ ಒಳಮಗ್ಗಲಲ್ಲಿ ಎತ್ತರವಾದ ಕಟ್ಟೆಗಳಿವೆ. ದಕ್ಷಿಣ ದ್ವಾರದ ಎಡ-ಬಲಗಳಲ್ಲಿ ಕೆಲವು ಶಿಲ್ಪಗಳನ್ನು ಖಂಡರಿಸಲಾಗಿದೆ. ಈ ದ್ವಾರಗಳ ಫಲಕಗಳು ಎತ್ತರವಾಗಿದ್ದು ಅವುಗಳಲ್ಲಿ ಬಾಲಕಿಯರನ್ನು ಲತಾಸುರುಳಿ ಅಲಂಕಾರ ಮಧ್ಯ ಚಿತ್ರಿಸಲಾಗಿದೆ. ಈ ಪ್ರವೇಶ ದ್ವಾರಗಳನ್ನು ಶಿಷ್ಟ್ ಮತ್ತು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಗೊಡೆಗಳ ಮೇಲೆ ಸಾಲಾಗಿ ಕಮಾನಿನಾಕಾರದ ತೆನೆಗಳಿವೆ.

ಸೋಮೇಶ್ವರ ದೇವಾಲಯದ ಪಶ್ಚಿಮಕ್ಕೆ ವಿಶಾಲವಾದ ಒಂದು ಪುಷ್ಕರಿಣಿಯಿದ್ದು ಅದರ ಪ್ರವೇಶದಲ್ಲಿ ನೆಲಮಾಳಿಗೆಯ ಕೋಣೆಗಳಿವೆ. ಅವಕ್ಕೆ ಇಳಿಯಲು ಮೆಟ್ಟಿಲುಗಳುಂಟು. ಈ ಪುಷ್ಕರಿಣಿಯಲ್ಲಿ ಸದಾ ನೀರು ಇರುತ್ತದೆ. ಅದರ ಸಂಕೀರ್ಣದಲ್ಲಿ ಹಾಳು ಸುರಿದಿದೆ.

ಈ ದೇವಾಲಯದ ಪೂರ್ವ ದ್ವಾರದ ಹೊರಗೋಡೆಯ ಮಗ್ಗಲುಗಳಲ್ಲಿ ಎತ್ತರದ ಮಂಟಪದ ಕಟ್ಟೆಗಳಿವೆ. ಈ ಕಟ್ಟೆಗಳಿಗೆ ಅಲ್ಲಲ್ಲಿ ಮೆಟ್ಟಿಲುಗಳಿವೆ. ಈ ಕಟ್ಟೆಗಳನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಈ ದೇವಾಲಯದ ಉತ್ತರದ ಎರಡು ಕಿರು ಪ್ರವೇಶದ್ವಾರಗಳ ಮಧ್ಯ ವಿಶಾಲವಾದ ತೆರೆದ ಸ್ಥಳವಿದೆ. ಈ ಸ್ಥಳದ ಬಲಗಡೆ (ಪೂರ್ವಕ್ಕೆ) ಮಂಚಬಂಧ ಮಾದರಿಯ ಕಟ್ಟೆ (ಉತ್ತರ-ದಕ್ಷಿಣ) ಉಳಿದಿದೆ. ಅದಕ್ಕೂ ಮುಂಭಾಗದಲ್ಲಿ ಅಲ್ಲಲ್ಲಿ ಮೆಟ್ಟಿಲುಗಳಿವೆ. ದೇವಾಲಯದ ಪ್ರವೇಶಗಳಿಗೆ ಹೊಂದಿರುವ ಮಂಟಪಗಳಲ್ಲಿ ಅಂಗಡಿಗಳನ್ನಿಡಲು ನಿರ್ಮಿಸಿರುವ ಸಾಧ್ಯತೆ ಹೆಚ್ಚು. ಈಗ ಅವುಗಳ ಮೇಲಿನ ಕಟ್ಟಡಗಳು ಭಗ್ನಗೊಂಡಿವೆ.

ಸೋಮೇಶ್ವರ ದೇವಾಲಯದ ಮಹಾಮಂಟಪ ಪ್ರವೇಶದ್ವಾರಗಳ ಅಧಿಷ್ಠಾನ ಮತ್ತು ಹೊರಗಿನ ಪೌಳಿಕಟ್ಟೆಗಳ ಅಧಿಷ್ಠಾನಗಳು ಮಂಚಬಂಧ ಮಾದರಿಯಲ್ಲಿ ಮತ್ತು ಒಂದೇ ಮಾದರಿಯ ಶಿಲೆಯಿಂದ ನಿರ್ಮಿತವಾಗಿರುವುದರಿಂದ ಇವುಗಳು ಏಕಕಾಲದ ಕಟ್ಟಡಗಳೆಂದು



1. ಸೋಮೇಶ್ವರ ದೇವಾಲಯ, ಲಕ್ಷ್ಮೇಶ್ವರ

ವರ್ಗೀಕರಿಸಬಹುದು. ಹಾಗೂ ಈ ದೇವಾಲಯದ ಪೌಳಿಗಳು ಸುತ್ತಲಿನ ಎತ್ತರದ ಪ್ರಾಕಾರಗೋಡೆ ಮತ್ತು ಪುಷ್ಕರಿಣಿಗಳು ಈ ಕಾಲದಲ್ಲಿ ನಿರ್ಮಿತಗೊಂಡವೆಂದು ತರ್ಕಿಸಬಹುದು. ಈ ಅಭಿಪ್ರಾಯವನ್ನು ಸ್ಥಳೀಯ ಶಿಲಾಶಾಸನಗಳು ತಕ್ಕಮಟ್ಟಿಗೆ ಸ್ಪಷ್ಟೀಕರಿಸುತ್ತವೆ. ಈ ಶಿಲಾಶಾಸನಗಳಲ್ಲಿ ಸೋಮೇಶ್ವರ ದೇವಾಲಯವನ್ನು ವಿವಿಧ ಕಾಲಗಳಲ್ಲಿ ಜೀರ್ಣೋದ್ಧಾರಮಾಡಿದ ಉಲ್ಲೇಖಗಳಿವೆ. ಅದನ್ನು ಕ್ರಿ.ಶ. 1353ರಲ್ಲಿ ಚಿಕ್ಕಕೆರೆಯ ನಾಯಕನಿಂದ ಜೀರ್ಣೋದ್ಧಾರ ಮಾಡಲಾಯಿತು.[4] ನಂತರ ಭೈರವದೇವನಿಂದ ಕ್ರಿ.ಶ.1392(?)ರಲ್ಲಿ ಈ ದೇವಾಲಯದ ದಕ್ಷಿಣ ದ್ವಾರವನ್ನು ಜೀರ್ಣೋದ್ಧಾರ ಮಾಡಲಾಯಿತು. ಈ ಕಾಲದ ಅಂದರೆ ಸುಮಾರು ಕ್ರಿ.ಶ.14ನೇ ಶತಮಾನದ ಶಿಲ್ಪಿಗಳಾದ ಶಿವರಾಮ ಒಡೆಯ, ಸೋಮನಾಥದೇವ ಮತ್ತು ಪೂಜಾರಿ ಚಿಕಣ ಮತ್ತು ಗಜಳ ಪರಿಸುನಾಯಕರನ್ನು ಖಂಡರಿಸಲಾಗಿದೆ. ಈ ಶಿವರಾಮ ಒಡೆಯನು ಸೋಮೇಶ್ವರದೇವರ ಆಚಾರ್ಯನೆಂದು ಅಲ್ಲಿಯ ಕ್ರಿ.ಶ. 1412ರ ಶಾಸನದಿಂದ ತಿಳಿದುಬರುತ್ತದೆ.[5] ಇವನಿಗೂ ಮತ್ತು ಅಲ್ಲಿಯ ಶಂಖಬಸದಿಯ ಜೈನ ಆಚಾರ್ಯರಿಗೂ ಭೂವಿವಾದ ನಡೆದ ಉಲ್ಲೇಖಗಳು ಕುತೂಹಲವೆನಿಸಿವೆ. ಈ ರೀತಿಯ ವ್ಯಾಜ್ಯ ಪುನಃ 126 ವರ್ಷಗಳ ನಂತರ (ಕ್ರಿ.ಶ.1538) ತಲೆದೋರಿದ ಉಲ್ಲೇಖವಿದೆ. ಮೊದಲನೇ ವ್ಯಾಜ್ಯ ಜೈನರ ಪರವಾಗಿ ನಂತರದ ವ್ಯಾಜ್ಯ ಶೈವರ ಪರವಾಗಿ ಲಭಿಸಿತೆಂದು ಉಕ್ತವಾಗಿದೆ.

ಗೊಲ್ಲಾಳೇಶ್ವರ ದೇವಾಲಯ:

ಗೊಲ್ಲಾಳೇಶ್ವರ ದೇವಾಲಯವು ಸೋಮೇಶ್ವರ ದೇವಾಲಯಕ್ಕೆ ಸಮೀಪವಿದ್ದು ಅದರ ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮಹಾಮಂಟಪಗಳಿವೆ. ಸಭಾಮಂಟಪಕ್ಕೆ ಎರಡು ಮತ್ತು ಮಹಾಮಂಟಪಕ್ಕೆ ಮೂರು ಪ್ರವೇಶದ್ವಾರಗಳು ಇವೆ. ಮಹಾಮಂಟಪದ ಮುಂದೆ ತೆರೆದ ಮುಖಮಂಟಪದ ಅಧಿಷ್ಠಾನ ಉಳಿದಿದೆ (ಚಿತ್ರ 2). ಸಭಾಮಂಟಪದಲ್ಲಿ ನಾಲ್ಕು ಮತ್ತು ಮಹಾಮಂಟಪದಲ್ಲಿ ಹದಿನಾರು ಕಂಬಗಳಿದ್ದು ಅವುಗಳು ಕ್ರಮವಾಗಿ ಕ್ರಿ.ಶ. 12 ಮತ್ತು ಕ್ರಿ.ಶ. 10ನೇ ಶತಮಾನಕ್ಕೆ ಸೇರಿವೆ. ಈ ದೇವಾಲಯದ ವಾಸ್ತು ವಿನ್ಯಾಸದಲ್ಲಿ ಗರ್ಭಗೃಹದ ಮೇಲಿನ ಫಾಂಸನ (ಕದಂಬ ನಾಗರ) ಶಿಖರ ಮತ್ತು ಮಹಾಮಂಟಪ ಭಾಗದಿಂದ ಮುಂದಿನ ಭಾಗದ ಅಧಿಷ್ಠಾನ ಮಂಚಬಂಧದಲ್ಲಿವೆ, ಭಿತ್ತಿ ಸರಳವಿರುತ್ತದೆ. ಈ ಭಾಗಗಳನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಈ ಭಾಗಗಳು ಸೋಮೇಶ್ವರ ದೇವಾಲಯದ ಮಹಾಮಂಟಪದ ಅಧಿಷ್ಠಾನವನ್ನು ಹೋಲುವುದರಿಂದ ಅದನ್ನು ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಳಿಸಲಾಯಿತೆಂದು ತರ್ಕಿಸಬಹುದು. ಆ ದೇವಾಲಯದ ಗರ್ಭಗುಡಿಯಲ್ಲಿರುವ ಪಾರ್ವತಿ ವಿಗ್ರಹ ಈ ಕಾಲದ್ದಾಗಿದೆ.


ಲಕ್ಷ್ಮಣೇಶ್ವರ ದೇವಾಲಯ:

ಲಕ್ಷ್ಮಣೇಶ್ವರ ದೇವಾಲಯವು ಪೂರ್ವಕ್ಕೆ ಮುಖಮಾಡಿದ್ದು ಹಳೆಯ ತಾಲೂಕ ಕಛೇರಿಯ ಸಮೀಪವಿದೆ. ಅದು ತ್ರಿಕೂಟ ಮಾದರಿಯಲ್ಲಿದೆ. ಅದಕ್ಕೆ ಮೂರು ಗರ್ಭಗೃಹ, ಮೂರು ಅಂತರಾಳ ಮತ್ತು ಒಂದು ಸಭಾಮಂಟಪವಿದ್ದು ಸಭಾಮಂಟಪಕ್ಕೆ ಹೊಂದಿ ಒಂದು ವಿಶಾಲವಾದ ಮಹಾಮಂಟಪವನ್ನು ಜೋಡಿಸಲಾಗಿದೆ (ಚಿತ್ರ 3). ಈ ಮಹಾಮಂಟಪದಲ್ಲಿ 36 ಕಂಬಗಳಿವೆ. ಈ ಕಂಬಗಳು ಸುಮಾರು ಕ್ರಿ.ಶ. 10 ರಿಂದ 13ನೇ ಶತಮಾನಗಳದ್ದಾಗಿವೆ. ಅವುಗಳು ಕ್ರಮವಾಗಿ 2, 4, 6, 6, 6, 6, 4 ಮತ್ತು 2 ಇವೆ. ಅದರ ಭಿತ್ತಿನಲ್ಲಿ ಕ್ರಿ.ಶ. 11ನೇ ಶತಮಾನದ ಒಂದು ವೀರಗಲ್ಲು ಮತ್ತು ಕ್ರಿ.ಶ.13ನೇ ಶತಮಾನದ ದೇವಾಲಯದ ಅವಶೇಷಗಳನ್ನು ಬೆರೆಸಿದ್ದು ಗೋಚರಿಸುತ್ತದೆ. ಈ ಮಹಾಮಂಟಪಕ್ಕೆ ಮೂರು ಕಡೆಗಳಲ್ಲಿ ದ್ವಾರಗಳಿವೆ.

ಈ ದೇವಾಲಯ ವಾಸ್ತುವಿನ್ಯಾಸದಲ್ಲಿ ಮಹಾಮಂಟಪದ ಅಧಿಷ್ಠಾನ ಮಾತ್ರ ಮಂಚಬಂಧ ಮಾದರಿಯದ್ದಾಗಿದೆ. ಭಿತ್ತಿ ಸರಳವಾಗಿದೆ. ಈ ಭಾಗದ ಅಧಿಷ್ಠಾನ ಮತ್ತು ಭಿತ್ತಿ ಅಲ್ಲಿಯ ಸೋಮೇಶ್ವರ ಮತ್ತು ಗೊಲ್ಲಾಳೇಶ್ವರಗಳ ಮಹಾಮಂಟಪ ಭಾಗಗಳನ್ನು ಹೋಲುವುದರಿಂದ ಅದನ್ನು ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿರುವ ಸಾಧ್ಯತೆ ಹೆಚ್ಚು.

ಈಶ್ವರ ದೇವಾಲಯ :

ಈ ಪಟ್ಟಣದಿಂದ ಪಶ್ಚಿಮಕ್ಕೆ ಹಾಳುಹೊಲದಲ್ಲಿ ಪೂರ್ವಕ್ಕೆ ಮುಖಮಾಡಿದ ಈಶ್ವರ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಅದಕ್ಕೆ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಅದರ ಗರ್ಭಗೃಹದ ಶಿಖರವು ಕದಂಬ ಮಾದರಿ (ಫಾಂಸನ) ಶೈಲಿಯಲ್ಲಿದೆ. ಅದರ ಅಧಿಷ್ಠಾನವು ಮಂಚಬಂಧ ಮಾದರಿ. ಭಿತ್ತಿಯು ಸರಳವಾಗಿದೆ. ಈ ದೇವಾಲಯ ವಿಜಯನಗರ ಶೈಲಿಯಲ್ಲಿದೆ.



2. ಗೊಲ್ಲಾಳೇಶ್ವರ ದೇವಾಲಯ, ಲಕ್ಷ್ಮೇಶ್ವರ

ಈಶ್ವರ ದೇವಾಲಯ :

ಈ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಒಂದು ಈಶ್ವರ ದೇವಾಲಯವಿದ್ದು ಅದು ಪೂರ್ವಕ್ಕೆ ಮುಖಮಾಡಿದೆ. ಅದರ ತಳಪಾಯದ ರಚನೆಯು ಈ ಮೇಲೆ ತಿಳಿಸಿದ ಈಶ್ವರ ದೇವಾಲಯವನ್ನು ಹೋಲುತ್ತದೆ.

ವೀರಭದ್ರ ದೇವಾಲಯ :

ಈ ಪಟ್ಟಣದ ಹಳೆ ಬಸ್ ನಿಲ್ದಾಣದ ಹತ್ತಿರ ವೀರಭದ್ರೇಶ್ವರ ದೇವಾಲಯವಿದೆ. ಅದರ ವಾಸ್ತುವಿನ್ಯಾಸ ವಿಜಯನಗರ ಕಾಲದ ನಂತರದ್ದಾಗಿದೆ. ವಿಗ್ರಹ ಮಾತ್ರ ವಿಜಯನಗರ ಕಾಲದ್ದು. ಅದರ ಪೀಠದಲ್ಲಿ ಗರುಡನ ಚಿತ್ರವಿದೆ. ಆ ಪೀಠದಲ್ಲಿ ಸುಮಾರು ಕ್ರಿ.ಶ. 12-13ನೇ ಶತಮಾನದ ಶಾಸನವಿದ್ದು ಅದರಲ್ಲಿ ಚೌಂಡರಾಯನಿಂದ ಲಕ್ಷ್ಮೀನಾರಾಯಣ ವಿಗ್ರಹ ಸ್ಥಾಪನೆಯ ವಿಷಯ ತಿಳಿಯುತ್ತದೆ. ಈ ಪೀಠದ ಮೇಲಿರುವ ವೀರಭದ್ರನ ವೇಷ ಭೂಷಣಗಳ ಶೈಲಿ ಸುಮಾರು ಕ್ರಿ.ಶ 16ನೇ ಶತಮಾನದ್ದಾಗಿದೆ.

ಸಹಸ್ರಲಿಂಗ ದೇವಾಲಯ :

ಈ ಪಟ್ಟಣದಲ್ಲಿರುವ ಹಾಳಾದ ಸಹಸ್ರಲಿಂಗ ದೇವಾಲಯ ಸಾಧಾರಣ ಕಟ್ಟಡವಾಗಿದ್ದು ಅದನ್ನು ಗ್ರಾನೈಟ್‌ನಿಂದ ಕಟ್ಟಲಾಗಿದೆ. ಅದರ ಗರ್ಭಗೃಹದಲ್ಲಿ ಒಂದು ಶಿವಲಿಂಗವಿದ್ದು ಅದರಲ್ಲಿ 999 ಕಿರು ಶಿವಲಿಂಗಗಳನ್ನು ಕೊರೆಯಲಾಗಿದೆ. ಶೈಲಿಯಿಂದ ಅದರ ಕಾಲ ಸುಮಾರು ಕ್ರಿ.ಶ. 15ನೇ ಶತಮಾನ.

ಶೈವ ಮಠಗಳು :

ವಿಜಯನಗರ ಕಾಲದ ಶೈವ ಧರ್ಮದ ಎರಡು ಮಠಗಳಿದ್ದವು. ಅವು ಓಲೆ ಮಠ ಮತ್ತು ಮಹಂತ ಮಠ. ಆ ಮಠಗಳ ಕಟ್ಟಡಗಳು ಹಾಳಾಗಿವೆ. ಅವುಗಳಲ್ಲಿ ವಿಜಯನಗರ ಕಾಲದ ಮಂಟಪಗಳು, ಗೋಡೆಗಳು ಉಳಿದುಕೊಂಡಿವೆ.

ವೈಷ್ಣವ ದೇವಾಲಯ :


ಸ್ಥಳೀಯವಾಗಿ ವೈಷ್ಣವ ದೇವಾಲಯಗಳು ವಿರಳ. ಈ ಕಾಲದ ರಾಮಚಂದ್ರ ದೇವಾಲಯ ಪ್ರಮುಖವೆನಿಸಿದ್ದು. ಅಲ್ಲಿ ಹೇಳಿಕೊಳ್ಳುವ ಅವಶೇಷಗಳು ಉಳಿದಿರುವುದಿಲ್ಲ.

ಜೈನ ಬಸದಿಗಳು :


ಈ ಪಟ್ಟಣದಲ್ಲಿ ಅನೇಕ ಜೈನ ಧರ್ಮದ ಬಸದಿಗಳು ಇದ್ದವು. ಅವುಗಳಲ್ಲಿ ಶಂಖ ಬಸದಿ, ತೀರ್ಥ ಬಸದಿ, ಮರುದೇವಿ ಬಸದಿ, ಧವಲ ಜಿನಾಲಯ, ಗರಿಗೆ ಕಂದರ್ಪ ಬಸದಿ, ಜಿನ ಮಂದಿರ, ಗಂಗ ಪೆರ್ಮಾಡಿ ಬಸದಿ, ಚೈತ್ಯಾಲಯ, ಶ್ರೀವಿಜಯ ಬಸದಿ, ಗೊಗ್ಗಿಯ ಬಸದಿ, ಆನೆಸಜ್ಜ ಬಸದಿ, ಶಾಂತಿನಾಥ ಬಸದಿಗಳು[4] ಸ್ಥಳೀಯ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಈ ಧರ್ಮದ ಬಸದಿಗಳ ಪ್ರಾಚೀನತೆ ಬಾದಾಮಿ ಚಾಲುಕ್ಯರ ಕಾಲಕ್ಕೆ ಹೋಗುತ್ತದೆ. ಈ ಪಟ್ಟಣದ ಹಲವಾರು ಬಸದಿಗಳಲ್ಲಿ ಪ್ರಮುಖವಾಗಿ ಎರಡು ಬಸದಿಗಳು ಕಾಣುತ್ತವೆ: (1) ಶಂಖ ಬಸದಿ ಮತ್ತು (2) ಅನಂತನಾಥ ಬಸದಿ.

ಶಂಖ ಬಸದಿ :


ಈ ಪಟ್ಟಣದಲ್ಲಿ ಶಂಖ ಬಸದಿಯು ಮಹತ್ವದ್ದೆನಿಸಿದೆ. ಈ ಬಸದಿಯು ವಿವಿಧ ಕಾಲಗಳಲ್ಲಿ ಜೀರ್ಣೋದ್ಧಾರಗೊಂಡಿದ್ದು ಅದರ ಮೂಲ ಚಿತ್ರ ಅಸ್ಪಷ್ಟವೆನಿಸಿದೆ. ಅದರ ಇಂದಿನ ತಳಪಾಯದಲ್ಲಿ ಗರ್ಭಗೃಹ, ಎರಡು ನವರಂಗಗಳು ಮತ್ತು ಒಂದು ಮಹಾಮಂಟಪ ಮತ್ತು ಮುಖಮಂಟಪಗಳಿವೆ (ಚಿತ್ರ 4). ಈ ಬಸದಿಗೆ ಮಹಾಮಂಟಪದ ಸೇರ್ಪಡೆ ಮತ್ತು ಜೀರ್ಣೋದ್ಧಾರ ಸುಮಾರು ಕ್ರಿ.ಶ. 13 ಮತ್ತು 14ನೇ ಶತಮಾನಗಳಲ್ಲಿ ನಡೆದ ಸಂಕೇತಗಳಿವೆ. ಕ್ರಿ.ಶ. 13ನೇ ಶತಮಾನದವರೆಗಿನ ವಾಸ್ತು ಅವಶೇಷಗಳು ಗರ್ಭಗೃಹದಿಂದ ಎರಡನೇ ನವರಂಗವಲ್ಲದೆ, ಮಹಾಮಂಟಪದ ಭಿತ್ತಿ ಭಾಗದ ಶಿಲ್ಪಗಳನ್ನು ಒಳಗೊಂಡಿವೆ.



3. ಲಕ್ಷ್ಮೇಶ್ವರ ದೇವಾಲಯ, ಲಕ್ಷ್ಮೇಶ್ವರ



4. ಶಂಖ ಬಸದಿ, ಲಕ್ಷ್ಮೇಶ್ವರ



5. ಅನಂತನಾಥ ಬಸದಿ, ಲಕ್ಷ್ಮೇಶ್ವರ

ಮಹಾಮಂಟಪದಲ್ಲೂ ಕ್ರಿ.ಶ. 12ನೇ ಶತಮಾನದ 16 ಕಂಬಗಳಿವೆ. ಈ ಬಸದಿಯ ಅಧಿಷ್ಠಾನವು ಗರ್ಭಗೃಹದಿಂದ ನವರಂಗದವರೆಗೆ ಒಂದು ರೀತಿ ಮತ್ತು ನವರಂಗದಿಂದ ಮಹಾಮಂಟಪದವರೆಗೆ ಇನ್ನೊಂದು ರೀತಿಯಿದೆ. ಗರ್ಭಗೃಹ ಭಾಗದಿಂದ ನವರಂಗ ಭಾಗದವರೆಗಿನ ಅಧಿಷ್ಠಾನದ ಶೈಲಿಯು ಸುಮಾರು ಕ್ರಿ.ಶ. 12ನೇ ಶತಮಾನದ್ದಾಗಿದೆ (ಚಿತ್ರ 4). ಆದರೆ ಮಹಾಮಂಟಪದ ಅಷ್ಟೇ ಎತ್ತರದ ಅಧಿಷ್ಠಾನದಲ್ಲಿ ತ್ರಿಪಟ್ಟ ಕುಮುದ, ತರಪಟ್ಟಗಳನ್ನು ಸೇರಿಸಲಾಗಿದೆ. ಅದು ಪದ್ಮಬಂಧದಲ್ಲಿದೆ. ಈ ಕುಮುದ ಫಲಕಗಳ ಪ್ರಾಚೀನತೆ ಸುಮಾರು ಕ್ರಿ.ಶ. 8-9ನೇ ಶತಮಾನಕ್ಕೆ ಹೋಗುತ್ತದೆ. ಇದರಿಂದ ಈ ಬಸದಿಯ ಮಹಾಮಂಟಪದ ಕಾಲವು ಗರ್ಭಗೃಹ ಭಾಗಕ್ಕಿಂತ ಹಿಂದೆ ಹೋಗುತ್ತದೆ. ಏಕೆಂದರೆ ಈ ಬಸದಿಯ ತಳವಿನ್ಯಾಸವನ್ನೂ ಸುಮಾರು ಕ್ರಿ.ಶ. 15ನೇ ಶತಮಾನದಲ್ಲಿ ಸಂಪೂರ್ಣವಾಗಿ ಮಾರ್ಪಡಿಸಲಾಗಿದೆ. ಅಲ್ಲಿ ಗಚ್ಚು ಮತ್ತು ಗ್ರಾನೈಟ್ ಶಿಲೆಯನ್ನು ಉಪಯೋಗಿಸಿದ ಸಂಕೇತಗಳಿರುವುದರಿಂದ ಪ್ರಾಯಶಃ ವಿಜಯನಗರ ಕಾಲದಲ್ಲಿ ಅದು ಜೀರ್ಣೋದ್ಧಾರಗೊಂಡಿರುವ ಸಾಧ್ಯತೆ ಹೆಚ್ಚು.

ವಿಜಯನಗರ ಕಾಲದಲ್ಲಿ ಈ ಬಸದಿಯ ಆಚಾರ್ಯರಿಗೂ ಮತ್ತು ಸೋಮೇಶ್ವರ ದೇವಾಲಯದ ಆಚಾರ್ಯರಿಗೂ ಭೂವಿವಾದ ನಡೆದ ಸಂಗತಿಗಳನ್ನು ಈ ಮೇಲೆ ನೀಡಲಾಗಿದೆ.

ಅನಂತನಾಥ ಬಸದಿ :

ಈ ಪಟ್ಟಣದ ಅನಂತನಾಥ ಬಸದಿಯು ಸೋಮೇಶ್ವರ ದೇವಾಲಯದ ಸಮೀಪವಿದೆ. ಅದರ ತಳವಿನ್ಯಾಸವು ತ್ರಿಕೂಟ ಮಾದರಿಯಲ್ಲಿದ್ದು ಅದಕ್ಕೆ ಮೂರು ಗರ್ಭಗೃಹ, ಮೂರು ಅಂತರಾಳ ಮತ್ತು ಒಂದು ನವರಂಗಗಳಿವೆ. ನವರಂಗದ ಮುಂದೆ ವಿಶಾಲವಾದ ಮಹಾಮಂಟಪವಿದೆ (ಚಿತ್ರ 5). ಅದರಲ್ಲಿ 24 ಕಂಬಗಳಿವೆ. ಅದಕ್ಕೆ ಉತ್ತರ ಮತ್ತು ಪಶ್ಚಿಮಕ್ಕೆ ಎರಡು ದ್ವಾರಗಳಿವೆ. ಪಶ್ಚಿಮ ದ್ವಾರಕ್ಕೆ ಹೊಂದಿ ಒಂದು ಕೋಣೆಯನ್ನು ಕಟ್ಟಲಾಗಿದೆ. ಈ ಮಹಾಮಂಟಪದ ಅಧಿಷ್ಠಾನ ಮತ್ತು ಭಿತ್ತಿ ಭಾಗಗಳು ಮಾತ್ರ ವಿಜಯನಗರ ಶೈಲಿಯಲ್ಲಿವೆ. ಅಧಿಷ್ಠಾನ ಮಂಚಬಂಧ ಮಾದರಿಯಲ್ಲಿದೆ ಮತ್ತು ಭಿತ್ತಿ ಸರಳವಾಗಿದೆ.

ಲಕ್ಷ್ಮೇಶ್ವರದ ಈ ಎಲ್ಲಾ ದೇವಾಲಯ ಮತ್ತು ಬಸದಿಗಳ ವಾಸ್ತುವೈವಿಧ್ಯದಲ್ಲಿ ವಿಜಯನಗರ ಕಾಲದ ಅನೇಕ ಕುರುಹುಗಳು ಕಂಡು ಬರುತ್ತವೆ. ಅವುಗಳಲ್ಲಿ ಅನೇಕ ಕಂಬಗಳುಳ್ಳ ಮಹಾಮಂಟಪಗಳನ್ನು ಜೋಡಿಸಿದ್ದು ಎದ್ದು ಕಾಣುತ್ತದೆ. ಈ ಮಹಾಮಂಟಪಗಳಲ್ಲಿರುವ ಕಂಬಗಳು ಪ್ರಮುಖವಾಗಿ ಕ್ರಿ.ಶ. 10ನೇ ಶತಮಾನದಿಂದ ಕ್ರಿ.ಶ. 13ನೇ ಶತಮಾನದವರೆಗಿನ ಕಾಲಕ್ಕೆ ಸೇರಿವೆ. ಇವುಗಳೆಲ್ಲ ಕಪ್ಪು ಶಿಷ್ಟ್ ಶಿಲೆಯದ್ದಾಗಿವೆ. ಆದರೆ ಅಲ್ಲಿಯ ಅನೇಕ ಶೈವ ದೇವಾಲಯಗಳು ಮತ್ತು ಅನಂತನಾಥ ಬಸದಿಯ ಭಿತ್ತಿ ಮತ್ತು ಅಧಿಷ್ಠಾನಗಳು ಗ್ರಾನೈಟ್ ಶಿಲೆಯದ್ದಾಗಿವೆ ಹಾಗೂ ಭಿತ್ತಿಗಳು ಸರಳವಾಗಿವೆ. ಅಧಿಷ್ಠಾನಗಳು ಮಂಚಬಂಧ ಮಾದರಿಯಲ್ಲಿವೆ. ಆದರೆ ಶಂಖ ಬಸದಿಯ ಮಹಾಮಂಟಪದ ಅಧಿಷ್ಠಾನ (ಪದ್ಮಬಂಧ) ಭಿನ್ನವೆನಿಸಿದೆ. ಯಾವ ಕಾರಣಕ್ಕಾಗಿ ಅಲ್ಲಿ ಹೆಚ್ಚಿನ ಸಂಖ್ಯೆಯ ಬಸದಿಗಳಿಗೆ ಮತ್ತು ಶೈವ ದೇವಾಲಯಗಳಿಗೆ ಮಹಾಮಂಟಪವನ್ನು ಏಕಕಾಲದಲ್ಲಿ ಜೋಡಿಸಲಾಯಿತು ? ಇದರ ನೆಲೆ ಹಿನ್ನೆಲೆ ಏನಿರಬಹುದೆಂಬ ಪ್ರಶ್ನೆಗಳು ಸಾಮಾನ್ಯವಾಗಿ ಉದ್ಭವಿಸುತ್ತವೆ. ಈ ಧರ್ಮಗಳಿಗೆ ಸೀಮಿತವಾದ ಶಾಸನಗಳ ಉಲ್ಲೇಖದಿಂದ ಅಲ್ಲಿಯ ಶೈವ ಮತ್ತು ಜೈನ ಧರ್ಮಗಳ ಆಚಾರ್ಯರ ನಡುವೆ ಇದ್ದ ವಿವಾದಗಳ ಸನ್ನಿವೇಶಗಳು ನೆನಪಾಗುತ್ತವೆ. ಬಹುಶಃ ಈ ಎರಡು ಬಣಗಳ ತೃಪ್ತಿಗಾಗಿ ಕೇವಲ ಭೂವಿವಾದಗಳನ್ನು ಬಗೆ ಹರಿಸುವುದಲ್ಲದೆ ಅಲ್ಲಿಯ ಎರಡೂ ಧರ್ಮಗಳ ಸ್ಮಾರಕಗಳ ಜೀರ್ಣೋದ್ಧಾರಕ್ಕೆ ಸಮಾನ ಪ್ರೋತ್ಸಾಹ ನೀಡಿರಬಹುದೆಂದು ತರ್ಕಿಸಬಹುದು.

ಶಿಲ್ಪಗಳು :

ವಿಜಯನಗರ ಕಾಲದ ಶಿಲ್ಪಗಳು ಕಡಿಮೆ ಸಂಖ್ಯೆಯಲ್ಲಿವೆ. ಅವುಗಳಲ್ಲಿ ಪಾರ್ವತಿ (ಗೊಲ್ಲಾಳೇಶ್ವರ ಗುಡಿ), ಸೋಮೇಶ್ವರ ದೇವಾಲಯದ ದಕ್ಷಿಣ ದ್ವಾರದಲ್ಲಿ ಶಿವರಾಮ ಒಡೆಯ, ಸೋಮನಾಥ ದೇವರು ಮತ್ತು ಪೂಜಾರಿ ಚಿಕಣ, ಅಲ್ಲಿಯ ಗಣೇಶ ಇತ್ಯಾದಿ ಶಿಲ್ಪಗಳು ಈ ಕಾಲದ್ದಾಗಿವೆ.

ಕೃತಜ್ಞತೆಗಳು :

ನನ್ನ ಸಂಶೋಧನಾ ವಿದ್ಯಾರ್ಥಿಯಾದ ಡಾ. ಸಿ.ಎಸ್. ಹಸಬಿ ಅವರು ಲಕ್ಷ್ಮೇಶ್ವರದ ದೇವಾಲಯ ಮತ್ತು ಬಸದಿಗಳ ನಕ್ಷೆಯನ್ನು ಕೃಪೆಮಾಡಿದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು.

ಟಿಪ್ಪಣಿಗಳು

1. *ಸೌಇಂಇ.,* X, ಪು. 354.
2. ಕನವಳ್ಳಿ ಸದಾನಂದ, *ಪುಲಿಗೆರೆ.*
3. *ಎಕ,* VII, ಶಿಕಾರಿಪುರ, 114.
4. *ಸೌಇಂಇ,* XX, 331.
5. *ಅದೇ,* XX, 232
6. ಹಸಬಿ ಸಿ.ಎಸ್., 1997, *ಪುಲಿಗೆರೆ ನಾಡು ಥ್ರೂ ದ ಏಜಸ್,* ಪಿಹೆಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

4. ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆ ಹಾಗೂ ರಾಯಚೂರು ಕೋಟೆಯ ನವರಂಗ ದರವಾಜ

– ಸುಜಾತ ಮಲ್ಲನಗೌಡ

ಪ್ರಸ್ತಾವನೆ:

ವಿಜಯನಗರ ಅರಸರಲ್ಲಿ ಅತ್ಯಂತ ಪ್ರಬಲನೂ, ವೀರನೂ ಆಗಿದ್ದ ಕೃಷ್ಣದೇವರಾಯನು ತನ್ನದೇ ಆದ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ್ದನೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಒಬ್ಬ ಅರಸನ ವ್ಯಕ್ತಿತ್ವವನ್ನು ಅವನ ಯುದ್ಧ ಸಾಮರ್ಥ್ಯ ಅಥವಾ ವೀರತ್ವದಿಂದ ಅಳೆಯುವುದು ಒಂದು ಅಂಶವಾಗಿದೆ. ಇದು ಕೃಷ್ಣದೇವರಾಯನಿಗೂ ಅನ್ವಯಿಸುತ್ತದೆ. ಅವನ ವೀರತ್ವವನ್ನು ಯುದ್ಧ ಪ್ರಸಂಗಗಳಿಂದ ಪರಿಶೀಲಿಸಬಹುದು. ರಾಯಚೂರು ದಂಡಯಾತ್ರೆಗಿಂತ ಮೊದಲು ಅವನು ಕೊಂಡವೀಡು, ಉದಯಗಿರಿ ಮತ್ತು ಗೋಲ್ಕಂಡಗಳ ಮೇಲೆ ದಿಗ್ವಿಜಯ ಸಾಧಿಸಿದ್ದನು.

ರಾಯಚೂರು ದಂಡಯಾತ್ರೆ:

ಕೃಷ್ಣದೇವರಾಯನು ಕ್ರಿ.ಶ. 1510ರಲ್ಲಿ ವಿಜಯನಗರದ ಸಿಹಾಸನವನ್ನೇರಿದಮೇಲೆ ಬುಕ್ಕರಾಯನ ಕಾಲದಿಂದಲೂ ತಮಗೆ ಪ್ರತಿಷ್ಠಿತವಾಗಿದ್ದ ರಾಯಚೂರನ್ನು ವಶಪಡಿಸಿಕೊಳ್ಳುವುದು ಆದ್ಯಕರ್ತವ್ಯವಾಗಿತ್ತು. ಆ ಹೊತ್ತಿಗೆ ರಾಯಚೂರು ಪ್ರದೇಶವು ಬಿಜಾಪುರದ ಇಸ್ಮಾಯಿಲ್ ಆದಿಲ್‌ಶಾಹನ ಬಿಗಿ ಮುಷ್ಠಿಯಲ್ಲಿತ್ತು. ಕ್ರಿ.ಶ. 1520ರಲ್ಲಿ ಕೃಷ್ಣದೇವರಾಯನು ಯುದ್ಧಕ್ಕೆ ಸಿದ್ಧನಾದನು. ಈ ಪಟ್ಟಣದ ಮುತ್ತಿಗೆಗೆ ಅಭೂತಪೂರ್ವವಾದ ಸಿದ್ಧತೆ ನಡೆದಿರುವಂತೆ ಕಾಣುತ್ತದೆ. ಪೋರ್ಚುಗೀಸ ಪ್ರವಾಸಿ ನ್ಯೂನಿಜನು ಈ ದಂಡಯಾತ್ರೆಯ ಸಂಪೂರ್ಣ ವಿವರವನ್ನು ಬರೆದಿಟ್ಟಿದ್ದಾನೆ. ಕೃಷ್ಣದೇವರಾಯನ ಸೇನೆಯಲ್ಲಿ ಪದಾತಿಗಳು 7ಲಕ್ಷ 30 ಸಾವಿರ, ರಾವುತರು 32 ಸಾವಿರ ಮತ್ತು ಆನೆಗಳು 551 ಇದ್ದವೆಂದು ದಾಖಲಿಸುತ್ತಾನೆ. ಸಾಗರೋಪಾದಿಯ ಈ ಬೃಹತ್ ಸೇನೆ ರಾಯಚೂರಿನ ಸಮೀಪಕ್ಕೆ ಬಂದು ಮಲಯಬಾದ ಎಂಬ ಗ್ರಾಮದ ಬಳಿ ಠಾಣೆ ಹೂಡಿತು. ಈ ಸಮಯಕ್ಕೆ ಬಿಜಾಪುರದಿಂದ ಇಸ್ಮಾಯಿಲ್ ಆದಿಲ್‌ಶಾಹ ತನ್ನ ಸೇನೆಯನ್ನು ತೆಗೆದುಕೊಂಡು ರಾಯಚೂರಿನ ಬಿಡುಗಡೆಗಾಗಿ ಬಂದ. ಅವನ ಸೇನೆಯಲ್ಲಿ ಪದಾತಿಗಳು 1 ಲಕ್ಷ 20 ಸಾವಿರ, ರಾವುತರು 18 ಸಾವಿರ ಮತ್ತು ಆನೆಗಳು 151 ಇದ್ದವೆಂದು ನ್ಯೂನಿಜ್ ವಿವರಿಸುತ್ತಾನೆ. ಕೃಷ್ಣದೇವರಾಯನ ಸೇನೆಯ ಆರನೆಯ ಒಂದು ಭಾಗದಷ್ಟು ಆದಿಲ್‌ಶಾಹನ ಸೇನೆಯಾಗಿತ್ತು. ಒಟ್ಟಿನಲ್ಲಿ ಕೃಷ್ಣದೇವರಾಯನಿಗೂ, ಇಸ್ಮಾಯಿಲ್ ಆದಿಲ್‌ಶಾಹನಿಗೂ ಭೀಕರ ಹೋರಾಟ ನಡೆದು, ಅದರಲ್ಲಿ ಕೃಷ್ಣದೇವರಾಯನು ದಿಗ್ವಿಜಯ ಸಾಧಿಸಿದನು ಎಂದು ನ್ಯೂನಿಜ್ ಬಣ್ಣಿಸಿದ್ದಾನೆ.

ರಾಯಚೂರು ಕೋಟೆ:

ರಾಯಚೂರು ಕೋಟೆ ಎರಡು ಸುತ್ತುಗಳನ್ನು ಒಳಗೊಂಡಿದೆ. ಹಿಂದೂ ಶೈಲಿಯ ಒಳಕೋಟೆಯನ್ನು ಕಾಕತಿಯರ ಕಾಲದಲ್ಲಿ ಕ್ರಿ.ಶ. 1294ರಲ್ಲಿ ನಿರ್ಮಿಸಲಾಯಿತು. ಈ ಕೋಟೆಗೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಎರಡು ಬಾಗಿಲುಗಳಿವೆ. ಹಿಂದೂ ಮತ್ತು ಮುಸ್ಲಿಮ್ ಶೈಲಿಯಲ್ಲಿರುವ ಹೊರಕೋಟೆಯನ್ನು ವಿಜಯನಗರ, ಬಹಮನಿ ಮತ್ತು ಆದಿಲ್‌ಶಾಹಿ ಅರಸರ ಕಾಲದಲ್ಲಿ ಕಟ್ಟಲಾಯಿತು. ಈ ಕೋಟೆಯ ನಾಲ್ಕು ದಿಕ್ಕಿಗೆ ನಾಲ್ಕು ಮತ್ತು ನೈರುತ್ಯ ದಿಕ್ಕಿನಲ್ಲಿ ಮತ್ತೊಂದು, ಹೀಗೆ ಐದು ಬಾಗಿಲುಗಳಿವೆ.

ನವರಂಗ ದರವಾಜ:

ಹೊರಕೋಟೆಗೆ ಉತ್ತರದಿಂದ ಪ್ರವೇಶವನ್ನು ಕಲ್ಪಿಸಿಕೊಡುವ ಬಾಗಿಲನ್ನು ನವರಂಗ ದರವಾಜ ಎಂದು ಕರೆಯಲಾಗುತ್ತಿದೆ. ಇದು ಹಿಂದೂ-ಮುಸ್ಲಿಮ್ ಶೈಲಿಯ ಲಕ್ಷಣಗಳಿಂದ ಕೂಡಿದ ದ್ವಾರವಾಗಿದ್ದು, ತುಂಬಾ ಆಕರ್ಷಿತವಾಗಿದೆ ಹೊರನೋಟಕ್ಕೆ ಮುಸ್ಲಿಮ್ ಕಟ್ಟಡದಂತೆ ಕಂಡರೂ ಕಟ್ಟಡದ ಮೇಲೆ ಪೌರಾಣಿಕ ಪ್ರಸಂಗಗಳನ್ನು ಬಿಂಬಿಸುವ ಹಿಂದೂ ಶಿಲ್ಪಗಳಿವೆ. ಕಲಾತ್ಮಕ ಶಿಲ್ಪಗಳು, ದ್ವಾರಗಳು, ಕೋಟೆಯ ಸುತ್ತ ಕಾವಲು ಪಡೆಯ ಸುತ್ತಾಟಕ್ಕಾಗಿ ಇರುವ ಗುಪ್ತ ದ್ವಾರಗಳು, ಸೋಪಾನಗಳು ಪ್ರೇಕ್ಷಕರನ್ನು ಕಿನ್ನರ ಲೋಕಕ್ಕೆ ಒಯ್ಯುತ್ತವೆ. ನವರಂಗ ದರವಾಜ ಸಂಕೀರ್ಣದಲ್ಲಿ ನಾಲ್ಕು ಬಾಗಿಲುಗಳು ಮತ್ತು ಮೂರು ಅಂಗಳಗಳಿವೆ. ಬಾಗಿಲುಗಳು ಬೇರೆ ಬೇರೆ ದಿಕ್ಕುಗಳಲ್ಲಿರುವುದರಿಂದ ಪ್ರವೇಶವು


ನವರಂಗ ದರವಾಜ, ರಾಯಚೂರು



1. ಕೊತ್ತಳಗಳ ನಡುವೆ ಎರಡನೆಯ ಬಾಗಿಲು




2. ಎರಡನೆಯ ಬಾಗಲು



3. ಮೂರನೆಯ ಬಾಗಿಲು



4. ಚೌಕಾಕಾರದ ಅಂಗಳದ ಕೈಸಾಲೆ



5. ಸಿಂಹಾಸನದ ಮೇಲೆ ಕುಳಿತ ರಾಜ



6. ಚೌಕಾಕಾರದ ಅಂಗಳದ ಕೈಸಾಲೆ ಮತ್ತು ಮೂರನೆಯ ಬಾಗಿಲು



7. ನಾಲ್ಕನೆಯ ಬಾಗಿಲು

ನೇರವಾಗಿರದೆ ಅಂಕುಡೊಂಕಾಗಿದೆ. ಹೊರಗಿನಿಂದ ಪ್ರವೇಶ ಕಲ್ಪಿಸುವ ಮೊದಲನೆಯ ಬಾಗಿಲು ಪೂರ್ವಾಭಿಮುಖವಾಗಿದೆ. ಮುಂದೆ ಹೋದಾಗ ದೊಡ್ಡ ಅಂಗಳ ಎದುರಾಗುತ್ತದೆ. ಈ ಅಂಗಳದ ದಕ್ಷಿಣಕ್ಕೆ ಎರಡನೆಯ ಬಾಗಿಲಿದೆ. ಉತ್ತರಾಭಿಮುಖವಾಗಿರುವ ಈ ಬಾಗಿಲು ವೃತ್ತಾಕಾರದ ಎರಡು ಕೊತ್ತಳಗಳ ಮಧ್ಯದಲ್ಲಿ ರಕ್ಷಣೆ ಪಡೆದಿದೆ (ಚಿತ್ರ 1). ಕಾಕತಿಯರ ಶೈಲಿಯ ಕಂಬ, ಬೋದಿಗೆ, ತೊಲೆ ಮತ್ತು ತೋರಣಗಳನ್ನು ಬಳಸಿ ಕಮಾನಿನಾಕಾರದಲ್ಲಿ ಕಟ್ಟಲಾಗಿದೆ (ಚಿತ್ರ 2). ತೋರಣ ಮತ್ತು ಕಮಾನಿನ ಮಧ್ಯದ ಭಾಗವನ್ನು ಮೂರು ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಶಂಖ, ಚಕ್ರ ಮತ್ತು ನಾಮಗಳಿವೆ. ಮಧ್ಯದ ಪಟ್ಟಿಕೆಯಲ್ಲಿ ರಾಮ, ಲಕ್ಷ್ಮಣ, ಸೀತೆ ಮತ್ತು ವಾನರರಿದ್ದಾರೆ. ಕೆಳಗಿನ ಪಟ್ಟಿಕೆಯಲ್ಲಿ ನೃತ್ಯಗಾರರು, ಮಹಿಳೆಯ ಅಂಗಾಲಿನಿಂದ ಮುಳ್ಳನ್ನು ತೆಗೆಯುತ್ತಿರುವ ಪುರುಷ, ಹನುಮಂತ-ಗರುಡ ಮತ್ತು ವಾಲಿ-ಸುಗ್ರೀವರಿದ್ದಾರೆ. ಕಟ್ಟಡದ ಮೇಲ್ಭಾಗದಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಚಾಚಿಕೊಂಡಿರುವ ಉದ್ದವಾದ ಶಿಲ್ಪಪಟ್ಟಿಕೆಯಿದೆ. ಈ ಪಟ್ಟಿಕೆಯಲ್ಲಿ ಗಣೇಶ, ವಾಮನ, ನೃತ್ಯಗಾರರು, ಸಂಗೀತಗಾರರು, ಬೇಟೆಗಾರರು ಮತ್ತು ಪ್ರಾಣಿ-ಪಕ್ಷಿಗಳ ಶಿಲ್ಪಗಳಿವೆ. ಬಾಗಿಲ ಒಳಗಡೆ ಚೌಕಾಕಾರದ ದಪ್ಪ ಕಂಬಗಳಿವೆ. ಕಂಬಗಳನ್ನು ಆನೆ ಅಥವಾ ಮನುಷ್ಯನ ಮೇಲೆ ಕುಳಿತ ಸಿಂಹ, ಗೋಪಿಕೆಯ ವಸ್ತ್ರಗಳನ್ನು ಅಪಹರಿಸಿ ಮರದ ಮೇಲೆ ಕುಳಿತ ಕೃಷ್ಣ, ನರ್ತನ, ಬೇಟೆಯ ದೃಶ್ಯ ಮತ್ತು ಹಾವನ್ನು ಹಿಡಿದುಕೊಂಡ ಮಂಗನ ಶಿಲ್ಪಗಳಿಂದ ಅಲಂಕರಿಸಲಾಗಿದೆ.

ಎರಡನೆಯ ಬಾಗಿಲಿನಿಂದ ಒಳಗೆ ಹೋದಾಗ ಚೌಕಾಕಾರದ ದೊಡ್ಡ ಅಂಗಳ ಎದುರಾಗುತ್ತದೆ. ಈ ಅಂಗಳದ ಸುತ್ತಲೂ ಕಮಾನುಗಳುಳ್ಳ ಕೈಸಾಲೆಯಿದೆ (ಚಿತ್ರ 4). ಕಮಾನುಗಳ ಮೇಲ್ಭಾದಲ್ಲಿ ಸುತ್ತಲೂ ಶಿಲ್ಪಪಟ್ಟಿಕೆಗಳಿವೆ. ಇನ್ನೂ ಮೇಲೆ ಮುಂದೆ ಚಾಚಿಕೊಂಡಿರುವ ಕಿಟಕಿಗಳಿದ್ದವು. ಇವುಗಳನ್ನು ಹೊತ್ತುನಿಂತ ಬೋದಿಗೆಗಳು ಮಾತ್ರ ಈಗ ಉಳಿದಿವೆ. ಬೋದಿಗೆಗಳನ್ನು ಸಿಂಹ ಮತ್ತು ವಿವಿಧ ಭಂಗಿಗಳಲ್ಲಿ ನಿಂತಿರುವ ಸ್ತ್ರೀಯರ ಶಿಲ್ಪಗಳಿಂದ ಅಲಂಕರಿಸಲಾಗಿದೆ. ಕೆಲವು ಬೋದಿಗೆಗಳ ಪಾರ್ಶ್ವಭಾಗವನ್ನು ಯೋಧರ ಶಿಲ್ಪಗಳಿಂದ ಅಲಂಕರಿಸಲಾಗಿದೆ.

ಶಿಲ್ಪ ಪಟ್ಟಿಕೆಗಳಲ್ಲಿರುವ ಸುಂದರ ಶಿಲ್ಪಗಳು ನವರಂಗ ದರ್ವಾಜದ ಮುಖ್ಯ ಆಕರ್ಷಣೆಯಾಗಿವೆ. ಈ ಶಿಲ್ಪಗಳಲ್ಲಿ ವಿಷ್ಣುವಿನ ಅವತಾರಗಳು, ಕೃಷ್ಣನ ಬಾಲಲೀಲೆಗಳು, ರಾಮಾಯಣದ ದೃಶ್ಯಗಳು, ಗರುಡ-ಹನುಮಂತ ಸ್ತ್ರೀ-ಪುರುಷರು ಮತ್ತು ಪ್ರಾಣಿ-ಪಕ್ಷಿಗಳನ್ನು ಕಾಣಬಹುದು. ವಿಷ್ಣುವಿನ ಅವತಾರಗಳಲ್ಲಿ ಶೇಷಶಾಯಿ ವಿಷ್ಣು, ಮತ್ಸ್ಯ, ವರಾಹ, ನರಸಿಂಹ, ವಾಮನ ಮತ್ತು ರಾಮನ ಅವತಾರಗಳಿವೆ. ವಾಮನ ಅವತಾರದಲ್ಲಿ ಒಂದು ದೃಶ್ಯದಲ್ಲಿ ಬಲಿಚಕ್ರವರ್ತಿಯಿಂದ ದಾನ ಪಡೆಯುವ ವಾಮನನನ್ನು ಮತ್ತು ಇನ್ನೊಂದು ದೃಶ್ಯದಲ್ಲಿ ತ್ರಿವಿಕ್ರಮನನ್ನು ಚಿತ್ರಿಸಲಾಗಿದೆ. ಇನ್ನೊಂದು ಕಡೆ ನರಸಿಂಹ ಅವತಾರದ ಎರಡು ದೃಶ್ಯಗಳಿವೆ. ಮೊದಲನೆಯ ದೃಶ್ಯದಲ್ಲಿ ಹಿರಣ್ಯಕಶಿಪು ಖಡ್ಗದಿಂದ ಕಂಬಕ್ಕೆ ಹೊಡೆದಾಗ ಅದರೊಳಗಿನಿಂದ ನರಸಿಂಹ ಹೊರಬರುತ್ತಾನೆ. ಎರಡನೆಯ ದೃಶ್ಯದಲ್ಲಿ ನರಸಿಂಹನು ಹಿರಣ್ಯಕಶಿಪುವನ್ನು ಕೊಲ್ಲುತ್ತಾನೆ. ಪಕ್ಕದಲ್ಲಿ ಪ್ರಹ್ಲಾದ ಕೈಮುಗಿದು ನಿಂತಿದ್ದಾನೆ. ಕೃಷ್ಣ ಲೀಲೆಗಳಲ್ಲಿ ವೇಣುಗೋಪಾಲ, ಗೋವರ್ಧನಧಾರಿ ಕೃಷ್ಣ, ಬೆಣ್ಣೆ ಕೃಷ್ಣ, ಕಾಳಿಂಗಮರ್ದನ ಕೃಷ್ಣ, ಗೋಪಿಕಾಸ್ತ್ರೀಯರ ವಸ್ತ್ರಾಪಹರಣ, ಯಶೋದೆಯಿಂದ ಶಿಕ್ಷಿಸಲ್ಪಡುವ ಕೃಷ್ಣ ಮುಂತಾದ ದೃಶ್ಯಗಳಿವೆ. ರಾಮಾಯಣಕ್ಕೆ ಸಂಬಂಧಿಸಿದಂತೆ ರಾಮ ಮತ್ತು ಹನುಮಂತನ ಭೇಟಿ, ವಾಲಿ-ಸುಗ್ರೀವರ ಯುದ್ಧ, ರಾಮ ಹನುಮಂತನಿಗೆ ಮುದ್ರೆಯುಂಗುರ ಕೊಡುವುದು, ಹನುಮಂತ ಅಶೋಕವನದಲ್ಲಿ ಸೀತೆಯನ್ನು ಭೇಟಿಯಾಗುವುದು, ವಾನರರು ಸಮುದ್ರಕ್ಕೆ ಸೇತುವೆ ಕಟ್ಟುವುದು ಮತ್ತು ರಾಮ-ರಾವಣರ ಯುದ್ಧದ ದೃಶ್ಯಗಳಿವೆ. ಶಿವನಿಗೆ ಸಂಬಂಧಿಸಿದಂತೆ ಹಸುವೊಂದು ಲಿಂಗಕ್ಕೆ ಕ್ಷೀರಾಭಿಷೇಕ ಮಾಡುವ ಮತ್ತು ಬೇಡರ ಕಣ್ಣಪ್ಪನು ಲಿಂಗಕ್ಕೆ ತನ್ನ ಕಣ್ಣುಗಳನ್ನು ಅರ್ಪಿಸುವ ದೃಶ್ಯಗಳಿವೆ. ರಾಜರಿಗೆ ಸಂಬಂಧಿಸಿದ ಎರಡು ದೃಶ್ಯಗಳಿವೆ. ಒಂದರಲ್ಲಿ ರಾಜನು ಸಿಂಹಾಸನದ ಮೇಲೆ ಕುಳಿತು ದರ್ಬಾರ್ ನಡೆಸುತ್ತಿದ್ದರೆ ಮತ್ತೊಂದರಲ್ಲಿ ಸಿಂಹಾಸನದ ಮೇಲೆ ಕುಳಿತು ಸೇವಕಿಯರಿಂದ ಸೇವೆಯನ್ನು ಅನುಭವಿಸುತ್ತ ತನ್ನ ರಾಣಿಯರೊಂದಿಗೆ ಸಂವಾದದಲ್ಲಿ ತೊಡಗಿದ್ದಾನೆ (ಚಿತ್ರ 5). ಇವಲ್ಲದೆ ಖಡ್ಗಯುದ್ಧ, ಆನೆ ಬೇಟೆ, ಹುಲಿ ಬೇಟೆ, ನೃತ್ಯ, ಸಂಗೀತ, ಕೋಲಾಟದ ದೃಶ್ಯಗಳಿವೆ. ಪ್ರಣಯಾಸಕ್ತ ದಂಪತಿಗಳು, ರತಿಕ್ರೀಡೆಯಲ್ಲಿ ತೊಡಗಿದ ಸ್ತ್ರೀ-ಪುರುಷರು, ಸಿಂಹದ ಮೇಲೆ ಕುಳಿತ ಪುರುಷ, ಮಗುವನ್ನು ಎತ್ತಿಕೊಂಡು ನಿಂತ ಸ್ತ್ರೀ ಮುಂತಾದವರೂ ಇದ್ದಾರೆ. ಪ್ರಾಣಿ-ಪಕ್ಷಿ ಸಮೂಹದಲ್ಲಿ ಹಣ್ಣು ತಿನ್ನುವ ಮಂಗ, ಒಂದು ತಲೆ-ಎರಡು ದೇಹದ ಸಿಂಹ ಮತ್ತು ಒಂದು ಕಡೆಯಿಂದ ಆನೆ ಮತ್ತೊಂದು ಕಡೆಯಿಂದ ಎತ್ತಿನಂತೆ ಕಾಣುವ ಶಿಲ್ಪಗಳು ಗಮನಾರ್ಹವಾಗಿವೆ.

ಚೌಕಾಕಾರದ ಅಂಗಳದ ಪಶ್ಚಿಮಕ್ಕೆ ಮೂರನೆಯ ಬಾಗಿಲಿದೆ (ಚಿತ್ರ 6). ಇದೂ ಸಹ ಕಮಾನಿನಾಕಾರದಲ್ಲಿದ್ದು, ಮೇಲ್ಭಾಗದಲ್ಲಿಯ ಮುಂದೆ ಚಾಚಿದ ಕಿಟಕಿಯು ಸುಸ್ಥಿತಿಯಲ್ಲಿದೆ (ಚಿತ್ರ 3). ಮೂರನೆಯ ಬಾಗಿಲು ಒಳಗಿನ ಆಯತಾಕಾರದ ಅಂಗಳಕ್ಕೆ ಪ್ರವೇಶ ನೀಡುತ್ತದೆ. ಈ ಅಂಗಳದ ದಕ್ಷಿಣಕ್ಕೆ ಕಮಾನಿನಾಕಾರದ ನಾಲ್ಕನೆಯ ಮತ್ತು ಕೊನೆಯ ಬಾಗಿಲಿದೆ (ಚಿತ್ರ 7).

ನವರಂಗ ದರವಾಜ ಯಾರು ನಿರ್ಮಿಸಿದ್ದರೆಂಬುದಕ್ಕೆ ಖಚಿತವಾದ ಆಧಾರಗಳು ಇದುವರೆಗೂ ದೊರಕಿಲ್ಲವಾದರೂ ಕೂಡ ಈ ಮಹಾದ್ವಾರದಲ್ಲಿನ ಸುಂದರ ಶಿಲ್ಪಗಳನ್ನು ಗಮನಿಸಿದಾಗ ಇದನ್ನು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣಮಾಡಿರಬಹುದೆಂದು ಹೇಳಬಹುದು. ಏಕೆಂದರೆ ಇದಕ್ಕೆ ಪೂರಕವಾಗಿ ಆಂಧ್ರದ ಅನಂತಪುರ ಜಿಲ್ಲೆಯ ಗೋರಂಟ್ಲು ಗ್ರಾಮದ ಒಂದು ಅಮ್ಮವಾರಿ ದೇವಸ್ಥಾನದ ದ್ವಾರದಲ್ಲಿಯ ವೇಣುಗೋಪಾಲ, ಕಾಳಿಂಗಮರ್ದನ, ಅನಂತಶಯನ, ವಿಷ್ಣು, ಶ್ರೀಕೃಷ್ಣಲೀಲಾ ದೃಶ್ಯಗಳು ಹೆಚ್ಚು ಕಡಿಮೆ ನವರಂಗ ದರವಾಜದಲ್ಲಿನ ಶಿಲ್ಪಗಳನ್ನು

ಹೋಲುತ್ತವೆ. ಅಲ್ಲದೆ ಹಂಪೆಯ ಹಜಾರರಾಮ ದೇವಸ್ಥಾನ ಹಾಗೂ ಮಹಾನವಮಿದಿಬ್ಬದ ಮೇಲಿನ ಸಿಂಹಾಸನಾರೂಢ ರಾಜರ ದೃಶ್ಯಗಳು ನವರಂಗ ದರ್ವಾಜದ ರಾಜರ ಶಿಲ್ಪಗಳಿಗೆ ಹೋಲುತ್ತವೆ. ಗೋರಂಟ್ಲು ಗ್ರಾಮದ ದೇವಿಯ ಗುಡಿಯನ್ನು ಕೃಷ್ಣದೇವರಾಯನ ಪಟ್ಟದರಸಿ ಚಿನ್ನಾಂಬದೇವಿ ನಿರ್ಮಿಸಿದ್ದಾಳೆಂದು ಈಗಲೂ ಅಲ್ಲಿನ ಸ್ಥಳೀಕರು ಹೇಳುತ್ತಾರೆ. ರಾಯಚೂರು ಕೋಟೆಯನ್ನು ಜಯಿಸಿದ ನೆನಪಿಗಾಗಿ ಕೃಷ್ಣದೇವರಾಯನು ಈ ಮಹಾದ್ವಾರವನ್ನು ನಿರ್ಮಿಸಿರುವ ಸಾಧ್ಯತೆ ಇದೆ.

ಆಧಾರ ಗ್ರಂಥಗಳು

1. ದೀಕ್ಷಿತ್ ಜಿ.ಎಸ್., 1997, ರಾಮಸ್ವಾಮಿ ಬಿ. ಮತ್ತು ಭಾರ್ಗವಿ ಶಿವಯ್ಯ, *ಶ್ರೀಕೃಷ್ಣದೇವರಾಯ – ಜೀವನ, ಸಾಧನೆಗಳು.*

2. ಕನವಳ್ಳಿ ಸದಾನಂದ, *ಮರೆತು ಹೋದ ಸಾಮ್ರಾಜ್ಯ.*

3. ಪಾಟೀಲ ಚನ್ನಬಸಪ್ಪ ಎಸ್., "ರಾಯಚೂರು ಕೋಟೆ", *ದಿಕ್ಸೂಚಿ,* ಮಾಸಪತ್ರಿಕೆ, ಅಕ್ಟೋಬರ್ 1993, ಪು. 28-30.

5. ಹಂಪಿಯ ರತ್ನಕೂಟ ಪರ್ವತದಲ್ಲಿನ ಶಾಸನಗಳ ಅಧ್ಯಯನ

– ಟಿ.ಯಂ. ಮಂಜುನಾಥಯ್ಯ

ರತ್ನಕೂಟ ಪರ್ವತವು ಹಂಪಿಯ ವಿರೂಪಾಕ್ಷ ತೇರು ಬೀದಿಯ ದಕ್ಷಿಣ ಭಾಗದಲ್ಲಿದ್ದು ಹೇಮಕೂಟ ಮತ್ತು ಮತಂಗ ಪರ್ವತಗಳ ಮಧ್ಯದಲ್ಲಿದೆ (ಚಿತ್ರ 1). ಪ್ರಸ್ತುತ ಈ ಪ್ರದೇಶವನ್ನು ಶ್ವೇತಾಂಬರ ಜೈನ ಮಠದವರು ಆಕ್ರಮಿಸಿದ್ದಾರೆ (ಚಿತ್ರ 2). ಈ ಪರ್ವತವು ಹೇಮಕೂಟ, ಮತಂಗ, ಋಷ್ಯಮುಖ, ಗಂಧ ಮಾದನ, ಮಾಲ್ಯವಂತ ಪರ್ವತಗಳಂತೆ 'ರಜತಗಿರಿ' ಎಂಬ ಹೆಸರಿನಿಂದ ಪ್ರಖ್ಯಾತಗೊಂಡಿತ್ತೆಂದು ಇಲ್ಲಿ ದೊರೆತಿರುವ ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ. ಸ್ಥಳೀಯ ಜನರು ಹೇಮಕೂಟ ಪರ್ವತಕ್ಕೆ ಬಂಗಾರದ ಬೆಟ್ಟವೆಂದೂ, ರತ್ನಕೂಟ ಪರ್ವತಕ್ಕೆ ಬೆಳ್ಳಿಯ ಬೆಟ್ಟವೆಂದೂ ಈಗಲೂ ಕರೆಯುತ್ತಾರೆ.

ಹಂಪಿಯ ವಿರೂಪಾಕ್ಷ ದೇವಾಲಯದ ಬಳಿಯಿರುವ ದುರ್ಗಾ ದೇವಾಲಯದಲ್ಲಿರುವ ಶಾಸನವು[1] ರತ್ನಕೂಟ (ರಜತಗಿರಿ)ಗೆ ಸಂಬಂಧಿಸಿದಂತೆ ಪ್ರಮುಖ ಆಧಾರವಾಗಿದೆ. ಈ ಶಾಸನದ ಕಾಲ ಶಕ ವರ್ಷ 1121ನೇ ಸಿದ್ಧಾರ್ಥಿ ಸಂವತ್ಸರ (ಸುಮಾರು ಕ್ರಿ.ಶ. 1199)ದಲ್ಲಿ ಕುರುಗೋಡನ್ನು ಆಳುತ್ತಿದ್ದ ಸಿಂದ ಅರಸ ವೀರ ಕಲಿದೇವರಸನು ಈ ಪ್ರಾಂತ್ಯವನ್ನು ರಾಜ್ಯಭಾರ ಮಾಡುತ್ತಿದ್ದು, ಪಂಪಾಕ್ಷೇತ್ರದ ವಿರೂಪಾಕ್ಷ ತೀರ್ಥದ ರಕ್ಷಣಾರ್ಥವಾಗಿ ಸಾಮಂತ ಮಾದೆಯ ನಾಯಕನನ್ನು ನೇಮಿಸಿದ್ದು, ಅವನು ಮತಂಗ ಪರ್ವತದಿಂದ ಪ್ರತಿಪಾಳಿಸುತ್ತಿದ್ದನೆಂದು ತಿಳಿಸುತ್ತದೆ. ದೊರವದಿನಾಡಿನಲ್ಲಿರುವ ಪಂಪಾತೀರ್ಥವು ಪವಿತ್ರವಾದ ಗಂಗಾ ನದಿಯಿಂದಲೂ, ಹಲವಾರು ತೀರ್ಥಗಳಿಂದಲೂ, ಉತ್ತಮವಾದ ದೇವಾಲಯಗಳಿಂದಲೂ ಕೂಡಿದ್ದು, ಮಾನವ ಜನ್ಮದ ಪಾಪವನ್ನು ಕಳೆಯುವಂತಹುದಾಗಿದ್ದು, ಪುಣ್ಯೋದಯ ಜನ್ಮಭೂಮಿ, ಗಿಡ, ಮರ, ಬಳ್ಳಿಗಳಿಂದ ಕಂಗೊಳಿಸುತ್ತಿದ್ದು, ಭಕ್ತರಿಗೆ ಇಚ್ಛಿಸಿದ ಸುಖವನ್ನು ನೀಡುವಂತಹ ಪವಿತ್ರ ಕ್ಷೇತ್ರವಾಗಿತ್ತೆಂದೂ ಬಣ್ಣಿಸುತ್ತದೆ.

ರತ್ನಕೂಟ (ರಜತಗಿರಿ)ಯಲ್ಲಿರುವ ಹಲವಾರು ತೀರ್ಥಗಳನ್ನು ಗುರುತಿಸಲು ಸಹಾಯಕವಾಗುವ ಕೆಲವು ಶಾಸನಗಳು ದೊರೆತಿವೆ.

ಆಧುನಿಕ ಪ್ರಾರ್ಥನಾ ಮಂದಿರದ ಪಶ್ಚಿಮಕ್ಕಿರುವ ಗುಂಡಿನ ಮೇಲಿನ ಶಾಸನ (ಚಿತ್ರ 3)

1 ಶ್ರೀಮತು ರಜತಗಿರಿ ಪರ್ವತದೇವಿ ಪಾ

2 ತಾಳ ಗಂಗಾ ಪರಮೇಶ್ವರಿ ಸಿದ್ಧೆದೆ ಮಾ

3 ದೆಯವರ ಸ್ವಪ್ನದಲ್ಲಿ ಬಂದು ಪ್ರಸಂನೆಯಾ

4 ದಳು ಆ ಗಂಗಾ ಪರಮೇಶ್ವರಿಯನು ಆ ಸಿ

5 ದ್ಧೆದೆ ಮಾದೆಯರು ಪ್ರಸಿದ್ಧವ ಮಾಡಿದರಾ

6 ಗಿ ಆ ಪತ್ರಲು ಜಂಗಮಕ್ಕೆ ಸಲುಉದು

13–14ನೇ ಶತಮಾನದ ಈ ಶಾಸನದ ಮೇಲ್ಭಾಗದಲ್ಲಿ ಲಿಂಗ ಮತ್ತು ನಂದಿಯ ಚಿತ್ರಗಳಿವೆ. ಈಗ ಶಾಸನವನ್ನು ಜೈನ ಆಶ್ರಮದವರು ಸಿಮೆಂಟಿನಿಂದ ಮುಚ್ಚಿದ್ದಾರೆ (1992ರಲ್ಲಿಯೇ ಅಧ್ಯಯನ ನಡೆಸಲಾಗಿದೆ). ಶಾಸನವು ಶ್ರೀಮತು ರಜತಗಿರಿ ಎಂದು ಪ್ರಾರಂಭವಾಗಿದ್ದು ಈ ಸ್ಥಳದ ಹೆಸರನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ಸ್ಥಳೀಯರು ಇದನ್ನು ಬೆಳ್ಳಿ ಬೆಟ್ಟವೆಂದು ಕರೆಯುವುದು ಅನ್ವಯಿಸುತ್ತದೆ. ಸಿದ್ಧೆದೆ ಮಾದೆಯರು ಎಂಬುದು ಮಾದೆಯ ನಾಯಕನ ಅರಸಿಯ ಹೆಸರು ಆಗಿರುವ ಸಾಧ್ಯತೆಗಳಿವೆ.

ದೇವರನ್ನು ಸೂಚಿಸುವ ಶಾಸನಗಳು (14–15ನೇ ಶತಮಾನ)


1. ಗಣೇಶ ದೇವಾಲಯದ ಮುಂದಿನ ಶಾಸನ (ಚಿತ್ರಗಳು 4-6)

ಶ್ರೀ ಮಹಾಲಿಂಗ ದೇವರು

ಈ ಶಾಸನವು ಗಣೇಶ ದೇವಾಲಯದ ಮುಂದಿರುವ ನೈಸರ್ಗಿಕ ಶಿಲಾ ಗುಹೆಯ ಮುಂಭಾಗದಲ್ಲಿದೆ. ಗುಹೆಯಲ್ಲಿ ಶಿವಲಿಂಗವಿದೆ. ಈ ಲಿಂಗವನ್ನು ಮಹಾಲಿಂಗ ದೇವರೆಂದು ಶಾಸನವು ಉಲ್ಲೇಖಿಸುತ್ತದೆ. ಶಿವಲಿಂಗ ಮತ್ತು ಶಾಸನಗಳು ಸುಸ್ಥಿತಿಯಲ್ಲಿವೆ.



1. ರತ್ನಕೂಟ ಪರ್ವತ, ಹಂಪಿ



2. ರತ್ನಕೂಟ ಪರ್ವತದ ಮೇಲಿನ ಆಧುನಿಕ ಕಟ್ಟಡಗಳು




3. "ಶ್ರೀಮತು ರಜತಗಿರಿ ಪರ್ವತದೇವಿ" ಶಾಸನ



4. "ಮಹಾಲಿಂಗದೇವರು" ಶಾಸನ ಮತ್ತು ಲಿಂಗ




5. "ಮಹಾಲಿಂಗದೇವರು" ಲಿಂಗ



6. "ಮಹಾಲಿಂಗದೇವರು" ಶಾಸನ



7. "ಶ್ರೀ ಮಾಲ್ಯವಂತ ಪರ್ವತದ ಶ್ರೀ ಮೈಲಾರದೇವರು" ಶಾಸನವಿರುವ ಸ್ಥಳ



8. "ಶ್ರೀ ಮಾಲ್ಯವಂತ ಪರ್ವತದ ಶ್ರೀ ಮೈಲಾರದೇವರು" ಶಾಸನ

2. ನಂದಿ ದೇವಾಲಯದ ಉತ್ತರಕ್ಕಿರುವ ಶಾಸನ (ಚಿತ್ರಗಳು 7-8)

ಶ್ರೀ ಮಾಲ್ಯವಂತ ಪರ್ವತದ
ಶ್ರೀ ಮೈಲಾರ ದೇವರು

ಈ ಶಾಸನವು ನಂದಿ ದೇವಾಲಯದ ಉತ್ತರ ದಿಕ್ಕಿನ ಬಂಡೆಯ ಮೇಲಿದೆ. ಇದು ಮಾಲ್ಯವಂತ ಪರ್ವತದ ಮೈಲಾರ ದೇವರನ್ನು ಉಲ್ಲೇಖಿಸುತ್ತದೆ. ಪ್ರಸ್ತುತ ಮಾಲ್ಯವಂತ ರಘುನಾಥ ದೇವಾಲಯದ ಪಶ್ಚಿಮ ಭಾಗದಲ್ಲಿರುವ ಶಿವಾಲಯವೊಂದರ ಎಡ ಬದಿಯಲ್ಲಿ ದೊಡ್ಡದಾಗಿರುವ ತೀರ್ಥವೊಂದಿದ್ದು, ತೀರ್ಥದ ಎರಡೂ ಬದಿಗಳಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪಗಳನ್ನು ಕೆತ್ತಲಾಗಿದ್ದು, ಶಿವಾಲಯದ ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿಯೂ ಸಹ ಶಿವಲಿಂಗಗಳನ್ನು ಬಂಡೆಯ ಮೇಲೆ ಕೆತ್ತಲಾಗಿದೆ. ರಘುನಾಥ ದೇವಾಲಯದ ಮುಂದಿರುವ ಎತ್ತರದ ಬಂಡೆಯ ಮೇಲೆ ಪಂಚಲಿಂಗಗಳನ್ನು ಕೆತ್ತಲಾಗಿದೆ. ಇದರ ಪಕ್ಕದಲ್ಲಿ ನಂತರದ ಸಮಯದಲ್ಲಿ ಚಿಕ್ಕ ವೈಷ್ಣವ ದೇವಾಲಯವನ್ನು ಕಟ್ಟಿದ್ದಾರೆ. ಮಾಲ್ಯವಂತ ಪರ್ವತವು ರಘುನಾಥ ದೇವಾಲಯದ ನಿರ್ಮಾಣಕ್ಕಿಂತಲೂ ಮೊದಲು ಅದೊಂದು ಸುಪ್ರಸಿದ್ಧ ಶೈವ ಕ್ಷೇತ್ರ ಆಗಿದ್ದಿರಬಹುದು. ಈ ಮಾಲ್ಯವಂತ ಪರ್ವತದಲ್ಲಿ ಆ ಕಾಲಕ್ಕೆ ಮೈಲಾರ ದೇವರ ದೇವಾಲಯವಿದ್ದು ಅದರ ಹೆಸರಿನಲ್ಲಿಯೇ ರಜತಗಿರಿಯಲ್ಲೊಂದು ಮೈಲಾರ ದೇವರನ್ನು ಸ್ಥಾಪಿಸಿರಬಹುದು. ಈಗ ಮೈಲಾರ ದೇವರಿರುವ ದೇವಾಲಯ ಅಥವಾ ಲಿಂಗ ಇರುವುದಿಲ್ಲ. ಆದರೆ ಮೈಲಾರ ದೇವರ ಶಿಲ್ಪವನ್ನು ಮಾಲ್ಯವಂತ ಪರ್ವತದಲ್ಲಿನ ಬಂಡೆಯ ಮೇಲೆ ಕೆತ್ತಲಾಗಿದೆ.

3. ಗುಹೆಯ ಮುಂಭಾಗದಲ್ಲಿಯ ಶಾಸನ (ಚಿತ್ರಗಳು 9-11)

ಶ್ರೀ ಶಾಂತಿನಾತ ದೇವರು

ಈ ಶಾಸನವು ಬಂಡೆಯ ಮೇಲಿನ ಗುಹೆಯ ಮುಂಭಾಗದಲ್ಲಿದ್ದು ಈಗಿನ ಜೈನ ಪ್ರಾರ್ಥನಾ ಮಂದಿರದ ಪೂರ್ವ ದಿಕ್ಕಿನಲ್ಲಿದೆ ಮತ್ತು ಮತಂಗ ಪರ್ವತದ ದಾರಿಯ ಪಶ್ಚಿಮಕ್ಕಿದೆ. ಗುಹೆಯಲ್ಲಿ ಶಿವಲಿಂಗವಿದ್ದು, ಲಿಂಗದ ಸ್ವಲ್ಪ ಭಾಗ ಭಗ್ನವಾಗಿದೆ. ಮುಂಭಾಗದಲ್ಲಿರುವ ಶಾಸನ ಶಿವಲಿಂಗದ ಹೆಸರನ್ನು ಶಾಂತಿನಾಥ ದೇವರು ಎಂದು ಉಲ್ಲೇಖಿಸುತ್ತದೆ.

ತೀರ್ಥಗಳನ್ನು ಸೂಚಿಸುವ ಶಾಸನಗಳು (14–15ನೇ ಶತಮಾನ)

ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ಪವಿತ್ರವಾದ ತೀರ್ಥಗಳು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿವೆ. ಇಂತಹ ತೀರ್ಥಗಳಲ್ಲಿ ಮಿಂದಲ್ಲಿ ಅಥವಾ ತೀರ್ಥದ ನೀರನ್ನು ಕುಡಿದಲ್ಲಿ ಮಾನವನು ತನ್ನ ಜೀವಿತ ಕಾಲದಲ್ಲಿ ಮಾಡಿರುವ ಪಾಪಗಳೆಲ್ಲ ಪರಿಹಾರವಾಗಿ, ಪುನೀತನಾಗಿ, ಶಾಪವಿಮೋಚನೆಗಳು ಆಗುತ್ತವೆಂದು ಧರ್ಮಶಾಸ್ತ್ರಗಳು ಉಲ್ಲೇಖಿಸುತ್ತವೆ. ಈ ನಿಟ್ಟಿನಲ್ಲಿ ಪಂಪಾ ಮಹಾತ್ಮೆಯಲ್ಲಿ ವಿವಿಧ ಪುಣ್ಯ ತೀರ್ಥಗಳ ಮಹತ್ವದ ಬಗ್ಗೆ ಸಾಕಷ್ಟು ವಿವರಣಾತ್ಮಕವಾಗಿ ಸಂಬಂಧಿಸಿದ ಪುರಾಣ ಕಥೆಗಳನ್ನು ವಿವರಿಸಲಾಗಿದೆ. ಅಂತಹ ತೀರ್ಥಗಳನ್ನು ಸೂಚಿಸುವ ಹಲವಾರು ಶಾಸನಗಳು ರಜತಗಿರಿ (ರತ್ನಗಿರಿ)ಯಲ್ಲಿ ಅನ್ವೇಷಣೆಯ ಸಮಯದಲ್ಲಿ ದೊರಕಿವೆ.

1. ಜೈನ ಮಂದಿರದ ಪಶ್ಚಿಮಕ್ಕೆ ಕೊಳದ ಬದಿಯಲ್ಲಿನ ಶಾಸನ


ಶ್ರೀ ಪಾಪ ವಿನಾಸಿಯ ತೀರ್ತದ ಸೇವೆ
ಹೆಗ್ಗಡತಿ ಉಮಾದೇವಿಯರ ಧರ್ಮ

ಈ ಶಾಸನವು ಕೊಳದ ಬದಿಯಲ್ಲಿನ ಬಂಡೆಯ ಮೇಲಿದ್ದು ಈಗಿನ ಜೈನ ಮಂದಿರದ ಪಶ್ಚಿಮ ದಿಕ್ಕಿನಲ್ಲಿದೆ. ಇದೊಂದು ದೊಡ್ಡ ನೈಸರ್ಗಿಕ ಕೊಳವಾಗಿದ್ದು, ಬಂಡೆಗಲ್ಲುಗಳಿಂದಾವೃತವಾಗಿದೆ. ಈ ತೀರ್ಥಕ್ಕೆ ಶಿಲಾದ್ವಾರವಿದ್ದು, ಇಳಿದು ಹೋಗಲು ಸೋಪಾನಗಳಿವೆ. ಈ ತೀರ್ಥವನ್ನು ಹೆಗ್ಗಡತಿ ಉಮಾದೇವಿಯು ಧರ್ಮಾರ್ಥವಾಗಿ ಮಾಡಿಸಿದ್ದಾಳೆ. ಇದನ್ನು ಪಾಪ ವಿನಾಸಿಯ ತೀರ್ಥವೆಂದು ಕರೆಯಲಾಗಿದೆ. ಮಾಡಿರುವ ಪಾಪಕರ್ಮಗಳನ್ನು ತೊಲಗಿಸಿ ಮುಕ್ತಿಯನ್ನು ದೊರಕಿಸುವಂತಹ ಶಕ್ತಿಯು ಈ ತೀರ್ಥಕ್ಕೆ ಇರುವುದೆಂದು ಇದರ ಹೆಸರಿನಿಂದ ವ್ಯಕ್ತವಾಗುತ್ತದೆ.


ಪಂಪಾ ಮಹಾತ್ಮೆಯು ಪಾಪ ವಿನಾಶನ ತೀರ್ಥದ ಬಗ್ಗೆ ಮಾಹಿತಿಯನ್ನು ತಿಳಿಸುತ್ತಾ ಯಾವ ಮಾನವನು ಪಾಪ ವಿನಾಶನ ತೀರ್ಥದಲ್ಲಿ ಸ್ನಾನ ಮಾಡಿ ದೇವ – ಋಷಿ – ಪಿತೃಗಳನ್ನು ತೃಪ್ತಿಪಡಿಸುವನೋ ಅವನು ಬ್ರಹ್ಮಹತ್ಯಾದಿ ಪ್ರಾಯಶ್ಚಿತ್ತವನ್ನು ಹೊಂದುತ್ತಾನೆ ಮತ್ತು ಪರರ



9. "ಶ್ರೀ ಶಾಂತಿನಾತ ದೇವರು" ಶಾಸನ ಮತ್ತು ಲಿಂಗವಿರುವ ಗುಹೆ



10. "ಶ್ರೀ ಶಾಂತಿನಾತ ದೇವರು" ಲಿಂಗ



11. "ಶ್ರೀ ಶಾಂತಿನಾತ ದೇವರು" ಶಾಸನ

ಅನ್ನವನ್ನು ಉಣ್ಣುವವನಾಗಿರಲಿ, ಶೂದ್ರ ಸ್ತ್ರೀಸಂಗ ಮಾಡಿದವನಾಗಿರಲಿ ಒಮ್ಮೆ ಆ ತೀರ್ಥದಲ್ಲಿ ಸ್ನಾನ ಮಾಡಿದರೆ ಆ ಪಾಪಗಳಿಂದ ಬಿಡುಗಡೆ ಹೊಂದುತ್ತಾನೆಂದು ಉಲ್ಲೇಖಿಸುತ್ತದೆ.[2]

ಈಗ ಜೈನ ಆಶ್ರಮದವರು ಈ ತೀರ್ಥಕ್ಕೆ ಬಚ್ಚಲು ನೀರನ್ನು ಬಿಟ್ಟಿರುತ್ತಾರೆ. ಇದರ ಮೇಲ್ಭಾಗದಲ್ಲಿರುವ ಪುರಾತನ ದೇವಾಲಯ ಅಥವಾ ಮಂಟಪವನ್ನು ವಸತಿ ಗೃಹವನ್ನಾಗಿ ಮಾರ್ಪಾಡು ಮಾಡಿದ್ದು, ಅಲ್ಲಿಂದ ಕೊಳಚೆ ನೀರು ಕೊಳವೆಗಳ ಮೂಲಕ ಈ ತೀರ್ಥದೊಳಕ್ಕೆ ಹರಿದು ಬರುತ್ತಿದೆ.

2. ಜೈನ ಪ್ರಾರ್ಥನಾ ಮಂದಿರದ ಪಶ್ಚಿಮಕ್ಕಿರುವ ಶಾಸನ

ಶ್ರೀ ಮೈಲಾರ ದೇವರ ತೀರ್ಥ . . . . .

. . . .

ಎರಡು ಸಾಲುಗಳ ಈ ಶಾಸನವು ತೀರ್ಥದ ಬದಿಯ ಬಂಡೆಯ ಮೇಲಿದೆ. ಜೈನ ಪ್ರಾರ್ಥನಾ ಮಂದಿರದ ಪಶ್ಚಿಮ ದಿಕ್ಕಿನಲ್ಲಿದೆ. ಈ ಶಾಸನದ ಇನ್ನೊಂದು ಸಾಲು ಹೊಸದಾಗಿ ಕಟ್ಟಿರುವ ಗೋಡೆಯ ಬದಿಯಲ್ಲಿದೆ. ತೀರ್ಥವಿರುವ ಸ್ಥಳವು ಸುಮಾರು 12 ಅಡಿಗಳಷ್ಟು ಕೆಳಗಿದೆ. ಈ ತೀರ್ಥವು ಮೈಲಾರ ದೇವರ ಹೆಸರನ್ನು ಹೊಂದಿದೆ.

3. ನಂದಿ ದೇವಾಲಯದ ಹಿಂಭಾಗದಲ್ಲಿರುವ ಶಾಸನ

ಶ್ರೀ ಮಾಲ್ಯವಂತ ತೀರ್ಥ

ಈ ಶಾಸನವು ಹಾಸು ಬಂಡೆಯ ಮೇಲೆ ಇಳಿಜಾರಿನಲ್ಲಿ ನಂದಿ ದೇವಾಲಯದ ಹಿಂಭಾಗದಲ್ಲಿದೆ. ಈ ಶಾಸನ ಮತ್ತು ತೀರ್ಥವಿರುವ ಸ್ಥಳದ ಮಧ್ಯದಲ್ಲಿ ಜೈನ ಆಶ್ರಮದವರು ಮೂರು ಅಂತಸ್ತುಗಳುಳ್ಳ ಆಧುನಿಕ ಕಟ್ಟಡವನ್ನು ನಿರ್ಮಿಸಿದ್ದಾರೆ. ಶ್ರೀ ಮಾಲ್ಯವಂತ ತೀರ್ಥವು ಆಕಾರದಲ್ಲಿ ಬಹಳಷ್ಟು ದೊಡ್ಡದಿದ್ದು, ಹಾಸುಗಲ್ಲಿನಲ್ಲಿ ನೈಸರ್ಗಿಕವಾಗಿ ನಿರ್ಮಿತವಾಗಿದೆ. ಮಾಲ್ಯವಂತ ಪರ್ವತವು ಮಹತ್ವದ ಪಾತ್ರವನ್ನು ವಹಿಸಿದ್ದು ಅದರ ಹೆಸರನ್ನು ಈ ತೀರ್ಥಕ್ಕೆ ಕೊಟ್ಟಿದ್ದಾರೆ.

4. ಮಾಲ್ಯವಂತ ತೀರ್ಥದ ಹತ್ತಿರವಿರುವ ಶಾಸನ (ಚಿತ್ರ 12)

ಶ್ರೀ ಮಾಲ್ಯವಂತ ತೀರ್ಥ

ಈ ಶಾಸನವೂ ಸಹ ಮೇಲೆ ತಿಳಿಸಿರುವ ಶ್ರೀ ಮಾಲ್ಯವಂತ ತೀರ್ಥದ ಸಮೀಪದಲ್ಲಿದೆ.

5. ನಂದಿ ದೇವಾಲಯದ ಪಶ್ಚಿಮಕ್ಕಿರುವ ಶಾಸನ (ಚಿತ್ರಗಳು 13-14)

ಶ್ರೀ ಸಾಲಗ್ರಾಮ ತೀರ್ಥ


ಈ ಶಾಸನವು ನಂದಿ ದೇವಾಲಯದ ಪಶ್ಚಿಮ ದಿಕ್ಕಿನ ಹಾಸು ಬಂಡೆಗಲ್ಲಿನ ಇಳಿಜಾರಿನಲ್ಲಿದೆ. ಸಾಲಿಗ್ರಾಮವೆಂಬ ದುಂಡಾಗಿರುವ ಕಪ್ಪು ಬಣ್ಣದ ಶಿಲೆಗಳು ನೇಪಾಳ ಮತ್ತು ಉತ್ತರ ಪ್ರದೇಶದಲ್ಲಿ ಹರಿಯುವ ಗಂಡಕಿ ನದಿಯಲ್ಲಿ ದೊರೆಯುತ್ತವೆ. ಸಾಲಿಗ್ರಾಮವನ್ನು ಪೂಜಿಸುವುದು ಅತ್ಯಂತ ಪವಿತ್ರವೆಂದು ಭಾವಿಸಲಾಗಿದೆ. ಇದರಲ್ಲಿ ಅನೇಕ ಬಗೆಯ ಸಾಲಿಗ್ರಾಮಗಳು ಇರುವುವು. ಅವುಗಳು ಶಿವ ಸಾಲಿಗ್ರಾಮ, ನೃಸಿಂಹ ಸಾಲಿಗ್ರಾಮ, ವಿಷ್ಣು ಸಾಲಗ್ರಾಮ ಮುಂತಾದವುಗಳು. ಈ ಹಿನ್ನೆಲೆಯಲ್ಲಿ ಈ ತೀರ್ಥವನ್ನು ಸಾಲಿಗ್ರಾಮ ತೀರ್ಥವೆಂದು ಕರೆದಿರಬಹುದು. ಈ ತೀರ್ಥವೂ ಸಹ ಶಾಸನದ ಬಳಿಯಲ್ಲಿಯೇ ಇದೆ. ಸಾಲಿಗ್ರಾಮ ಲಿಂಗ ಪೂಜೆಯು ಕೋಟಿ ಲಿಂಗ ಪೂಜೆಗೆ ಸಮಾನವಾಗಿದೆಯೆಂದೂ, ಸಾಲಿಗ್ರಾಮ ತೀರ್ಥದ ಸ್ನಾನ, ಪಾನ, ಪ್ರೋಕ್ಷಣೆಯೂ ಸಹ ಕೋಟಿ ತೀರ್ಥಗಳಷ್ಟು ಪವಿತ್ರವೆಂದು ವರಾಹ, ಪದ್ಮ, ಮತ್ಸ್ಯ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.[3]

6. ಗಣೇಶ ದೇವಾಲಯದ ದಕ್ಷಿಣಕ್ಕಿರುವ ಶಾಸನ

ಶ್ರೀ ಋಣ ವಿಮೋಚನ ತೀರ್ಥ

ಈ ಶಾಸನವು ಗಣೇಶ ದೇವಾಲಯದ ದಕ್ಷಿಣ ದಿಕ್ಕಿನಲ್ಲಿ ಬಂಡೆಯ ಮೇಲಿದ್ದು ಬದಿಯಲ್ಲಿ ತೀರ್ಥವೂ ಸಹ ಇದೆ.


ಈ ಋಣ ವಿಮೋಚನಾ ತೀರ್ಥವು ಋಣತ್ರಯಗಳಾದ ದೇವರುಣ, ಪಿತೃರುಣ ಮತ್ತು ಋಷಿರುಣಗಳನ್ನು ಕಳೆಯುವಂತಹ ಶಕ್ತಿಯನ್ನು ಕೊಡುವುದೆಂದು ಪಂಪಾ ಮಹಾತ್ಮೆಯಲ್ಲಿ ಉಲ್ಲೇಖವಿದೆ. ಶಾಸನವಿರುವ ಸ್ಥಳದ ಬದಿಯಲ್ಲಿ ತೀರ್ಥವೂ ಸಹ ಇದೆ.



12. "ಶ್ರೀ ಮಾಲ್ಯವಂತ ತೀರ್ಥ" ಶಾಸನ



13. "ಶ್ರೀ ಸಾಲಗ್ರಾಮ ತೀರ್ಥ" ತೀರ್ಥ ಮತ್ತು ಶಾಸನ



14. "ಶ್ರೀ ಸಾಲಗ್ರಾಮ ತೀರ್ಥ" ಶಾಸನ

7. ಗಣೇಶ ದೇವಾಲಯದ ದಕ್ಷಿಣದಿಕ್ಕಿಗಿರುವ ಶಾಸನ

ಶ್ರೀ ಚಕ್ರ ತೀರ್ತ

ಈ ಶಾಸನವು ಗಣೇಶ ದೇವಾಲಯದ ದಕ್ಷಿಣ ದಿಕ್ಕಿನ ಬಂಡೆಯ ಮೇಲೆ ರುಣ ವಿಮೋಚನಾ ತೀರ್ಥದ ಸಮೀಪದಲ್ಲಿದೆ. ಈ ಶಾಸನದ ಅಕ್ಷರಗಳು ಸಾಮಾನ್ಯ ಗಾತ್ರಕ್ಕಿಂತ ದೊಡ್ಡದಾಗಿವೆ. ಶಾಸನದ ಕೆಳಭಾಗದಲ್ಲಿ ಬಂಡೆಗಲ್ಲುಗಳಿಂದ ಕೂಡಿದ ನೈಸರ್ಗಿಕವಾದ ತೀರ್ಥವಿದೆ. ಪಂಪಾ ಮಹಾತ್ಮೆಯಲ್ಲಿ ಈ ತೀರ್ಥದ ಮಹತ್ವವನ್ನು ವಿರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ.[4] ಹಿಂದೆ ಮುರನೆಂಬ ದೈತ್ಯನು ಜಗತ್ತಿಗೆ ದುಃಖವನ್ನುಂಟು ಮಾಡುತ್ತಿದ್ದು, ದೇವರ್ಷಿಗಳು ಮಾಡುವ ಯಜ್ಞಕಾರ್ಯಗಳಿಗೆ ತೊಂದರೆಗಳನ್ನುಂಟು ಮಾಡುತ್ತಿದ್ದನು. ದೇವರ್ಷಿಗಳು ಬ್ರಹ್ಮನಲ್ಲಿ ಮೊರೆಹೋಗಿ, ಬ್ರಹ್ಮನು ವಿಷ್ಣುವನ್ನು ಪ್ರಾರ್ಥಿಸಿ ಮುರನನ್ನು ಸಂಹರಿಸುವಂತೆ ಅರಿಕೆ ಮಾಡಿಕೊಳ್ಳಲು, ವಿಷ್ಣುವು ಶಿವನಿಂದ ಸಾವಿರ ಅಲಗುಗಳುಳ್ಳ ಸುದರ್ಶನ ಚಕ್ರವನ್ನು ಪಡೆದು ರಾಕ್ಷಸ ಮುರನನ್ನು ಕೊಂದು, ದೇವರ್ಷಿಗಳು ಮಾಡುವ ಯಜ್ಞಕಾರ್ಯಗಳು ನಿರಾತಂಕವಾಗಿ ನೆರವೇರುವಂತೆ ಮಾಡಿದನು.

8. ಚಕ್ರತೀರ್ಥದ ಬಂಡೆಯ ಮೇಲ್ಭಾಗದ ಗಣೇಶ ದೇವಾಲಯದ ದಕ್ಷಿಣಕ್ಕಿರುವ ಶಾಸನ (ಚಿತ್ರ 15)

ಶ್ರೀ ಪುಜಾದನು ತೀರ್ತ

ಈ ಶಾಸನವು ಚಕ್ರತೀರ್ಥವಿರುವ ಬಂಡೆಯ ಮೇಲ್ಭಾಗದಲ್ಲಿ ಗಣೇಶ ದೇವಾಲಯದ ದಕ್ಷಿಣ ಭಾಗದಲ್ಲಿದೆ. ಈ ತೀರ್ಥವು 1 ಮೀ. ನಷ್ಟು ಅಗಲ ಮತ್ತು ಸುಮಾರು 20 ಮಿ. ನಷ್ಟು ಉದ್ದವಾಗಿದೆ. ಇದರಲ್ಲಿ ಯಾವಾಗಲೂ ನೀರು ಇರುತ್ತದೆ. ಈ ತೀರ್ಥವು ಉತ್ತಮ ಸ್ಥಿತಿಯಲ್ಲಿದೆ. ಈ ತೀರ್ಥದ ನೀರನ್ನು ಪೂಜೆಗಾಗಿ ಬಳಸುತ್ತಿದ್ದಿರಬಹುದು. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಧನು ತೀರ್ಥವನ್ನು ಉಲ್ಲೇಖಿಸಲಾಗಿದೆ. ಧನು ಎಂದರೆ ಧನಸ್ಸು ಎಂದು ಅರ್ಥೈಸಬಹುದು. ಬಿಲ್ಲಿನಾಕಾರದಲ್ಲಿರುವುದರಿಂದ ಈ ತೀರ್ಥಕ್ಕೆ ಪುಜಾಧನು ತೀರ್ಥವೆಂದು ಕರೆದಿರಬಹುದು ಅಥವಾ ಶ್ರೀ ರಾಮ ಧನಸ್ಸಿನ ಅರ್ಥ ಬರುವಂತೇನಾದರೂ ಈ ತೀರ್ಥಕ್ಕೆ ಹೆಸರಿಸಿರಬಹುದು.

9. ಪುಜಾದನು ತೀರ್ಥದ ಉತ್ತರಕ್ಕಿರುವ ಕೊಳದ ಬದಿಯಲ್ಲಿರುವ ಶಾಸನ (ಚಿತ್ರ 16)

ಶ್ರೀ ಪದ್ಮದಳ ತೀರ್ತ

ಈ ಶಾಸನವು ಶ್ರೀ ಪೂಜಾದನು ತೀರ್ಥದ ಸಮೀಪ ಮೇಲ್ಭಾಗದಲ್ಲಿ ಉತ್ತರ ದಿಕ್ಕಿನ ಬಂಡೆಯ ಮೇಲೆ ಕೊಳದ ಬದಿಯಲ್ಲಿರುವ ಗಣೇಶ ದೇವಾಲಯದ ದಕ್ಷಿಣ ದಿಕ್ಕಿನಲ್ಲಿದೆ.

ನಾಗರಿ ಲಿಪಿಯಲ್ಲಿರುವ ಒಂದು ಶಾಸನವನ್ನು ಜೈನ ಆಶ್ರಮದವರು ಸಿಮೆಂಟಿನಿಂದ ಮುಚ್ಚಿದ್ದಾರೆ (ಚಿತ್ರ 19).


ದೇವರಕೊಂಡಾರೆಡ್ಡಿಯವರ "ಹಂಪೆಯ ಇನ್ನೊಂದು ಮಾಲ್ಯವಂತ" ಎಂಬ ಪ್ರಬಂಧದಲ್ಲಿ ಪ್ರಕಟವಾದ ಶಾಸನಗಳು 1) "ಶ್ರೀ ಮಾಲ್ಯ" 2) "ಶ್ರೀ ಮಾಲ್ಯವಂತ" 3) "ಶ್ರೀ ಮಾಲ್ಯವಂತದ ಮೈಲಾರ ದೇವರು" ಎಂದು ಇವೆ.[5] ಆದರೆ ಈ ಶಾಸನಗಳು ಕೆಳಗಿನಂತಿವೆ.

1) ಶ್ರೀ ಮಾಲ್ಯವಂತ ತೀರ್ತ
2) ಶ್ರೀ ಮಾಲ್ಯವಂತ ತೀರ್ತ
3) ಶ್ರೀ ಮಾಲ್ಯವಂತ ಪರ್ವತದ
   ಶ್ರೀ ಮೈಲಾರ ದೇವರು

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಶ್ರೀ ಮಾಲ್ಯವಂತ ಪರ್ವತದ ಶ್ರೀ ಮೈಲಾರ ದೇವರು. ಮಾಲ್ಯವಂತ ಪರ್ವತದಲ್ಲಿರುವ ಮೈಲಾರ ದೇವರನ್ನು ಈ ಸ್ಥಳದಲ್ಲಿಯೂ ಪ್ರತಿಷ್ಠಾಪಿಸಿದ್ದಿರಬಹುದು. ಇದೇ ಅರ್ಥದಲ್ಲಿ ಮೈಲಾರ ದೇವರ ತೀರ್ತ, ಮಾಲ್ಯವಂತ ತೀರ್ತ, ಚಕ್ರ ತೀರ್ತ, ಸಾಲಗ್ರಾಮ ತೀರ್ತ ಮುಂತಾದವು ಇಲ್ಲಿ ಇರುವುದು ಒಂದು ವಿಶೇಷ. ಲಕ್ಷ್ಮೀಧರನ ಶಾಸನದ ಕಾಲಮಾನ ಕ್ರಿ.ಶ. 1410.[6] ಅದಕ್ಕಿಂತ ಮೊದಲು ಹರಿಹರರಾಯನ ಸುಮಾರು ಕ್ರಿ.ಶ. 1380ರ ಶಾಸನದಿಂದ ಈಗಿರುವ ಮಾಲ್ಯವಂತ ಪರ್ವತದ ಆಚೆಯವರೆಗೂ ವಿಜಯನಗರ ಪಟ್ಟಣದ ಕೋಟೆಯ ನಿರ್ಮಾಣವಾಗಿದ್ದುದು ತಿಳಿಯುತ್ತದೆ.[7] ಸಾಹಿತ್ಯ ಕೃತಿಗಳು, ಶಿಲಾ ಶಾಸನಗಳು ಮತ್ತು ಮಾಲ್ಯವಂತ ರುಘುನಾಥ ಪರ್ವತದಲ್ಲಿರುವ ಶಿವಲಿಂಗ ಮತ್ತು ನಂದಿ ವಿಗ್ರಹಗಳ ಸಮೂಹಗಳು, ಅಲ್ಲದೆ ಅಲ್ಲಲ್ಲಿ ಬಿಡಿ ಬಿಡಿಯಾಗಿ ಇರುವ ಶಿವಲಿಂಗಗಳು, ಶಿವ ದೇವಾಲಯ, ವೀರಭದ್ರ, ಕಾಳಹಸ್ತಿಲಿಂಗ, ಭೈರವ, ಮೈಲಾರ ದೇವರು, ತೀರ್ಥಗಳು ಮುಂತಾದ ಅಂಶಗಳನ್ನು ಅವಲೋಕಿಸಿದಾಗ ಮಾಲ್ಯವಂತ ರಘುನಾಥ ಪರ್ವತವು ಶೈವಕ್ಷೇತ್ರವಾಗಿತ್ತೆಂಬುದನ್ನು ಅಲ್ಲಗಳೆಯುವಂತಿಲ್ಲ.



15. "ಶ್ರೀ ಪೂಜಾದನು ತೀರ್ಥ" ತೀರ್ಥ ಮತ್ತು ಶಾಸನ




16. ಶ್ರೀ ಪದ್ಮದಳ ತೀರ್ಥ" ತೀರ್ಥ ಮತ್ತು ಶಾಸನ



17. ಬಾಲಕೃಷ್ಣ ದೇವಾಲಯದ ಮುಂದಿರುವ ಗುಹೆ



18. ಬಾಲಕೃಷ್ಣ ದೇವಾಲಯದ ಮುಂದಿರುವ ಗುಹೆಯ ಮುಂದಿನ ಮಂಟಪ



19. ನಾಗರಿ ಲಿಪಿಯಲ್ಲಿರುವ ಶಾಸನವನ್ನು ಸಿಮೆಂಟ್‌ನಿಂದ ಮುಚ್ಚಿರುವುದು

ಬಾಲಕೃಷ್ಣ ದೇವಾಲಯದ ಮುಂದಿರುವ ಗುಹೆಯನ್ನು ಮಹಾಗವ್ವರವೆಂದು ಮತ್ತು ಈ ಗುಹೆಯಲ್ಲಿ ಹೇರಂಬ ಗಣೇಶನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿತ್ತೆಂದು ದೇವರಕೊಂಡಾರೆಡ್ಡಿಯವರು ಅಭಿಪ್ರಾಯಪಡುತ್ತಾರೆ. ಆದರೆ ಈ ಗುಹೆಯಲ್ಲಿರುವ ಸ್ತಂಭಗಳಲ್ಲಿ ಸಂಗಮ ವಂಶದ ಕಾಲದ ದೇವಾಲಯಗಳ ಸ್ತಂಭ ಶೈಲಿ ಕಂಡು ಬರುತ್ತಿಲ್ಲ (ಚಿತ್ರಗಳು 17-18). ಈ ರೀತಿಯಲ್ಲಿರುವ ಅನೇಕ ಗುಹಾ ಮಂಟಪಗಳ ಲಕ್ಷಣಗಳು ಅದೇ ಕಾಲದ ಮಠಗಳಲ್ಲಿ ಕಂಡು ಬರುತ್ತವೆ. ಉದಾಹರಣೆಗೆ ಪರಮೇಶ್ವರ ಮಠ,[8] ಮತ್ತೊಂದು ಮಠ,[9] ಆನೇಗೊಂದಿಯಲ್ಲಿರುವ ಶ್ರೀ ಆನಂದ ಸಿದ್ಧದೇವನ ಮಠ ಮುಂತಾದವುಗಳು. ಆದ್ದರಿಂದ ಈ ಎಲ್ಲಾ ಅಂಶಗಳ ಅವಲೋಕನದಿಂದ ಬಾಲಕೃಷ್ಣ ದೇವಾಲಯದ ಮುಂದಿರುವ ಗುಹೆಯೂ ಒಂದು ಮಠವಾಗಿದ್ದಿರಬಹುದೆಂದು ವ್ಯಕ್ತವಾಗುತ್ತದೆ. ಈ ಗುಹೆಯಲ್ಲಿ ಗಣೇಶನ ವಿಗ್ರಹವಿಲ್ಲ.

ಅಡಿ ಟಿಪ್ಪಣಿಗಳು

1. *ಸೌಇಂಇ,* IV, ಸಂ. 260.
2. ಶ್ರೀ ಗುರು ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು (ಸಂ.), *ಪಂಪಾ ಮಹಾತ್ಮೆ,* ಅಧ್ಯಾಯ 47, ಪು. 196, ಅಧ್ಯಾಯ 32, ಪು. 663.
3. ಗೋವಿಂದಾಚಾರ್ ಸಿ., 1990, "ಸಾಲಗ್ರಾಮ ಮಹಿಮೆ", *ಸಪ್ತಗಿರಿ* ಮಾಸ ಪತ್ರಿಕೆ, ತಿರುಪತಿ ತಿರುಮಲ ದೇವಸ್ಥಾನ, ಪು. 5-6.
4. *ಪಂಪಾ ಮಹಾತ್ಮೆ,* ಅಧ್ಯಾಯ 76, ಪು. 362-267.
5. ದೇವರಕೊಂಡಾರೆಡ್ಡಿ, 1997, "ಹಂಪೆಯ ಇನ್ನೊಂದು ಮಾಲ್ಯವಂತ", *ವಿಜಯನಗರ ಅಧ್ಯಯನ,* ಸಂ. 2, (ಸಂ.) ಎಂ.ಎಲ್. ಶಿವಶಂಕರ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಪು. 113.
6. *ಸೌಇಂಇ,* IV, ಸಂ. 267.
7. ದೇವರಾಜ್ ಡಿ.ವಿ. ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ.), 1991, *ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ 1984-87,* ಪು. 49-50.
8. ನಾಗರಾಜರಾವ್ ಎಂ.ಎಸ್. (ಸಂ.), 1985, *ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ 1983-84,* ಪು. 39-40.
9. ದೇವರಾಜ್ ಡಿ.ವಿ. ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ.), 1991, *ವಿಜಯನಗರ : ಪ್ರೋಗ್ರೆಸ್ ಆಫ್ ರೀಸರ್ಚ್ 1984-87,* ಪು. 49.
10. *ಅದೇ,* ಪು. 68-69.

6. ವಿಜಯನಗರ ಕಾಲದ ಕರಾವಳಿ ಕರ್ನಾಟಕ ಶಾಸನಗಳು - ಸಾಂಸ್ಕೃತಿಕ ಅಧ್ಯಯನದ ಹಿನ್ನೆಲೆಯಲ್ಲಿ ಸಮೀಕ್ಷೆ

– ಕೆ.ಜಿ. ವಸಂತಮಾಧವ

ಪೀಠಿಕೆ :

ಕರಾವಳಿ ಕರ್ನಾಟಕದಲ್ಲಿ ವಿಪುಲ ಶಾಸನಗಳು ಇವೆ. ಇನ್ನೂ ಹೆಚ್ಚಿನ ಶಾಸನಗಳು ಲಭ್ಯವಾಗುವ ಅವಕಾಶವಿದೆ. ಶಿಲಾ, ತಾಮ್ರ ಮತ್ತು ಸ್ತಂಭಗಳಲ್ಲಿ ಈ ಶಾಸನಗಳನ್ನು ಕೆತ್ತಿಸಿದ್ದಾರೆ. ಭಾಷೆ ಹೆಚ್ಚಾಗಿ ಕನ್ನಡ ಮತ್ತು ಲಿಪಿ ಇದೇ ಭಾಷೆಯದಾಗಿದೆ. ಕೆಲವು ಕಡೆಗಳಲ್ಲಿ ದೇವನಾಗರಿಯ ಲಿಪಿಯನ್ನು ಉಪಯೋಗಿಸಿದ್ದಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಕೆಲವು ಭಾಷೆಗಳ ಸಮ್ಮಿಳನಗಳನ್ನು ಕೆಲವು ಶಾಸನಗಳಲ್ಲಿ ನೋಡಬಹುದು. ತುಳು ಲಿಪಿಯಲ್ಲಿ ಬರೆದ ಶಾಸನಗಳು ಕೆಲವೇ ಇವೆ. ಇವುಗಳ ಸಂಖ್ಯೆ ಬಹಳ ಕಡಿಮೆ. ಈ ಶಾಸನಗಳನ್ನೆಲ್ಲಾ ಅಧ್ಯಯನ ದೃಷ್ಟಿಯಿಂದ ಪ್ರಾಚೀನ ಕರ್ನಾಟಕ (10ನೇ ಶತಮಾನದವರೆಗೆ), ಮಧ್ಯಕಾಲೀನ ವಿಜಯನಗರ ಮತ್ತು ವಿಜಯನಗರ ನಂತರದ ಶಾಸನಗಳೆಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ. ಇಲ್ಲಿನ ಶಾಸನಗಳ ಅಧ್ಯಯನದಲ್ಲಿ ವಿಜಯನಗರ ಕಾಲದ ಶಾಸನಗಳಿಗೆ ವಿಶೇಷ ಮಹತ್ವವಿದೆ.[1]

ಶಾಸನಗಳ ಸ್ವರೂಪ ರಚನೆ ವೈಖರಿ :

ಕ್ರಿ.ಶ. 1343 ರಿಂದ 1610ರವರೆಗೆ ವಿಜಯನಗರದ ಅರಸರುಗಳನ್ನು ಉಲ್ಲೇಖಿಸುವ ಶಾಸನಗಳು ವಿಪುಲವಾಗಿ ಸಿಕ್ಕಿವೆ. ಆದರೆ ಕ್ರಿ.ಶ. 1551ರ ನಂತರ ಈ ಅರಸುಗಳ ಆಡಳಿತ ಇಲ್ಲ. ಅಪ್ರತ್ಯಕ್ಷ (ಹೆಸರಿಗೆ ಮಾತ್ರ) ಸಿಕ್ಕಿದ ಶಾಸನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಿಂಹಪಾಲು. 307 ಶಾಸನಗಳು ದಕ್ಷಿಣ ಕನ್ನಡದಲ್ಲೂ, 100 ಶಾಸನಗಳು ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಪ್ರದೇಶದಲ್ಲಿ ಸಿಕ್ಕಿವೆ.[2] ಇನ್ನು ಹೆಚ್ಚಿನ ಶಾಸನಗಳು ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿಗುವ ಅವಕಾಶವಿದೆ. ಗಮನಿಸುವ ಇನ್ನೊಂದು ಸಂಗತಿಯೇನೆಂದರೆ ವಿಜಯನಗರದ ಹೆಚ್ಚು ಕಡಿಮೆ ಎಲ್ಲಾ ಅರಸುಗಳ ಶಾಸನಗಳು ಇಲ್ಲಿ ಸಿಕ್ಕಿವೆ. ಸಿಕ್ಕಿದ ಶಾಸನಗಳು ಶಿಲೆಯಲ್ಲೂ, ಸ್ತಂಭಗಳಲ್ಲೂ, ವಿಗ್ರಹಗಳಲ್ಲೂ ಮತ್ತು ತಾಮ್ರ ಪಟಗಳಲ್ಲೂ ಇವೆ. ಶಾಸನಗಳು ವಿವಿಧಮಯ. ಹೆಚ್ಚಿನವು ದಾನ ಶಾಸನಗಳಾಗಿದ್ದರೂ ಒಡಂಬಡಿಕೆ, ವೀರ, ಸತಿ, ನಿಷಿಧಿ, ಧಾರ್ಮಿಕ ಸಂಸ್ಥೆಯ ಸ್ಥಾಪನೆಗಳ ವಿವರಗಳನ್ನು ತಿಳಿಸುವ ಕೆಲವು ದಾಖಲೆಗಳಿವೆ. ಶಾಸನಗಳ ಬರಹ ಹೆಚ್ಚಾಗಿ ಕನ್ನಡ ಲಿಪಿ ಮತ್ತು ಅದೇ ಭಾಷೆ. ಲಿಪಿಕಾರನ ಹೆಸರು, ಇವರೊಂದಿಗೆ ಸಾಕ್ಷಿದಾರರು, ಇವರ ಕುಲ ಗೋತ್ರಗಳನ್ನು ಹೆಚ್ಚಿನ ಶಾಸನಗಳು ತಿಳಿಸುತ್ತವೆ. ಇದಕ್ಕೆ ಉದಾಹರಣೆ ಪೊಳಲಿ ದೇವಸ್ಥಾನದ ಶಕ 1387ರ ಶಿಲಾ ಶಾಸನ, ಕಿರಿಮಂಜೇಶ್ವರದ ತಾಮ್ರ ಶಾಸನ ಶಕ 1302, ಶಿವಪುದರ ಶಿಲಾಶಾಸನ[3] (ಕಾಲ ಶಕ 1333). ಹೆಚ್ಚಿನ ವಿಜಯನಗರ ಶಾಸನಗಳಲ್ಲಿ ಅಕ್ಷರ ತಪ್ಪುಗಳು ಬಹಳ ಇವೆ. ನಾಣ್ನುಡಿ ಮತ್ತು ಸ್ಥಳೀಯ ಭೌಗೋಳಿಕ ಮತ್ತು ವಿಶಿಷ್ಟ ಪ್ರದೇಶಗಳ ವರ್ಣನೆಗಳನ್ನು ಶಾಸನಗಳು ಅಲಕ್ಷಿಸಲಿಲ್ಲ. ಉದಾರಹಣೆಗೆ ಶಿವಪುರದ ಶಿಲಾಶಾಸನಗಳಲ್ಲಿ ಈ ಪ್ರದೇಶದ ವೈಶಿಷ್ಟ್ಯಗಳಾದ 'ಕೊಳಂಬೆ' 'ಕೋಡಿ' 'ಹಳ್ಳ' 'ಒಡಿಯ ಹಳ್ಳ' ಇತ್ಯಾದಿಗಳನ್ನು ಗುರುತಿಸಿವೆ.[4] ಸಾಹಿತ್ಯ ದೃಷ್ಟಿಯಿಂದ ವಿಜಯನಗರದ ಶಾಸನಗಳು ಅಧ್ಯಯನಕ್ಕೆ ಅರ್ಹವಾಗಿವೆ. ಗದ್ಯ ಪದ್ಯವುಳ್ಳ ಕಂದ ಉತ್ಪಲ ಮಾಲೆ, ಮತ್ತೇಭವಿಕ್ರೀಡಿತ, ಚಂಪಕಮಾಲೆ ಇತ್ಯಾದಿ ಲಕ್ಷಣಗಳುಳ್ಳ ಶಾಸನಗಳು ವಿಪುಲವಾಗಿ ಸಿಕ್ಕಿವೆ. ಇಂತಹ ಶಾಸನಗಳಲ್ಲಿ ವ್ಯಕ್ತಿ ಚಿತ್ರ, ದೇಶ, ನಾಡು, ನದಿ, ಗ್ರಾಮಗಳ ಚಿತ್ರಣಗಳನ್ನು ಸುಂದರವಾಗಿ ಅಭಿಮಾನಪೂರ್ವಕವಾಗಿಯಾದರೂ ವಾಸ್ತವವಾದ ವರ್ಣನೆಗಳು ಇವೆ. ಇಂತಹವುಗಳು ಜೈನ ಕ್ಷೇತ್ರಗಳಾದ ಸಂಗೀತಪುರ, ಕಾಯ್ಕಿಣಿ, ಭಟ್ಕಳ, ಮೂಡಬಿದ್ರೆ ಮತ್ತು ಕಾರ್ಕಳದಲ್ಲಿವೆ.[4]

ವೀರಗಲ್ಲುಗಳ ಶಾಸನಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ವಿರಳ. ಆದರೆ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾಕಷ್ಟು ಸಿಕ್ಕಿವೆ. ಇವುಗಳು ಹೆಚ್ಚಾಗಿ ಕಾಯ್ಕಿಣಿ, ಭಟ್ಕಳ, ಹಾಡುವಳ್ಳಿ, ಗೇರಸೊಪ್ಪೆ, ಹೊನ್ನಾವರ, ಹಳದಿಪುರ, ಚಂದಾವರ, ಬಾಡ, ಸದಾಶಿವಘಡ ಇತ್ಯಾದಿ ಸ್ಥಳಗಳಲ್ಲಿವೆ. ಇವುಗಳಲ್ಲಿ ಸಾಹಿತ್ಯಾಂಶಗಳು ಬಹಳ ಕಡಿಮೆ. ಆದರೆ ಅಲ್ಲಲ್ಲಿ ಕಾವ್ಯದ ಮಿಂಚು ಹೊಳೆದಿವೆ. ಉದಾ: ಹಾಡುವಳ್ಳಿ ಮತ್ತು ಕಾಯ್ಕಿಣಿಯ ನಿಷಧಿ ಶಾಸನಗಳು.[5] ವಿಜಯನಗರ ಕಾಲದ ಕರಾವಳಿ ಕರ್ನಾಟಕದ ಶಾಸನಗಳು ಇಲ್ಲಿನ ನೈಸರ್ಗಿಕ ಅನಾಹುತ ಮತ್ತು ಅದರಿಂದಾದ ಪರಿಸರ ಬದಲಾವಣೆಗಳನ್ನು ಅಲ್ಲಲ್ಲಿ ಉಲ್ಲೇಖಿಸಿವೆ. ಉದಾ: ಕುಂದಾಪುರ ಕೋರ್ಟಿನ ಅಂಗಣದಲ್ಲಿ ಸಿಕ್ಕಿದ (ಕ್ರಿ.ಶ. 1413) ಶಾಸನವು ನದಿ ಹರಿದ ನಷ್ಟವನ್ನು ಸೂಚಿಸಿದೆ.[6]

ಶಾಸನಗಳ ಸಾಂಸ್ಕೃತಿಕ ಸ್ವರೂಪ :

ಈ ಕಾಲದ ಶಾಸನಗಳಲ್ಲಿ ವಿವಿಧ ಸಾಂಸ್ಕೃತಿಕ ಮುಖಗಳು ಹೊರಹೊಮ್ಮಿವೆ. ಸ್ಥಳೀಯ ಪದ್ಧತಿ, ಧಾರ್ಮಿಕ ಸಂಸ್ಥೆಗಳು, ಸಾಮಾಜಿಕ ರೂಢಿ ನಿಯಮಗಳು, ಆರ್ಥಿಕ ಚಟುವಟಿಕೆ ಪರಿಸರ ವರ್ಣನೆಗಳನ್ನು ಈ ಶಾಸನಗಳಲ್ಲಿ ವೀಕ್ಷಿಸಬಹುದು. ಇನ್ನೊಂದು ಗಮನಾರ್ಹ

ಸಂಗತಿಯೇನೆಂದರೆ ಹಲವು ದೇವತೆಗಳನ್ನು ಒಟ್ಟಾಗಿ ಸ್ತುತಿಸುವ ಶಾಸನಗಳು ಇಲ್ಲಿವೆ. ಉದಾ: ಶಕವರ್ಷ 1333 ಮತ್ತು 1441ರ ಶಿವಪುರ ಮತ್ತು ಬಸ್ರೂರಿನ ಶಾಸನಗಳಲ್ಲಿ (ಅನುಕ್ರಮವಾಗಿ) ಗಣಪತಿ, ಸರಸ್ವತಿ ಮತ್ತು ಗುರುಸ್ತುತಿಗಳಿವೆ.[7] ಹಟ್ಟಿಯಂಗಡಿ ಜಟ್ಟಿಗರಾಯನ ಗುಡಿಯ ಎದುರು ಇರುವ ಶಾಸನ (ಶಕ 1311), ಗಮನಿಸಬೇಕಾದ್ದು. ಏಕೆಂದರೆ ಈ ಶಾಸನವು ಅಕ್ಕಪಕ್ಕ ಊರುಗಳಲ್ಲಿ ಮುಖ್ಯವಾಗಿ ಹಟಕುದ್ರು, ಸಾತೂರು ಕೋಟೇಶ್ವರಗಳಲ್ಲಿ ಶಾಸನ ಇದ್ದುದು ತಿಳಿಸಿದೆ. ಇದು ಶಾಸನ ಸೂಚಿಯಂತಿದೆ.[8] ಇಂತಹ ಶಾಸನಗಳು ಬಹಳ ವಿರಳವೆನ್ನಬಹುದು.

ಕರಾವಳಿಯಲ್ಲಿ ಸಿಕ್ಕಿದ ವಿಜಯನಗರ ಕಾಲದ ಶಾಸನಗಳಲ್ಲಿ ಇಲ್ಲಿನ ವೈಶಿಷ್ಟ್ಯಮಯವಾದ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸಂಗತಿಗಳು ವ್ಯಕ್ತವಾಗಿವೆ. ಉದಾ: ಹುಂಬಚ್ಚ ಬಸದಿಯಲ್ಲಿನ ಅಪ್ರಕಟಿತ ತಾಮ್ರ ಶಾಸನವು ಕರ್ನಾಟಕದ ವ್ಯಾಪಾರ ಇತಿಹಾಸ ತಿಳಿಯಲು ಉಪಯುಕ್ತವಾಗಿದೆ. ಶಕ 1312ರ (ಕ್ರಿ.ಶ. 1390) ಈ ಶಾಸನವು ಭೋಜ ಸಂಘುಗಳ ಮಗ ಅಜಸಾಹು ಗುಜರಾಥ, ಕಾಂಭೋಜ ಮತ್ತು ದ್ವೀಪಾಂತರಗಳ ಜಲಯಾನ ಮಾಡಿ ಬಾರಕೂರಿನಲ್ಲಿ ನೆಲಸಲು ಇವನಿಗೆ ವಿಜಯನಗರದ ಬಾರಕೂರು ರಾಜ ಪ್ರತಿನಿಧಿ ಸ್ಥಳವನ್ನು ಕೊಟ್ಟದ್ದು ಹೇಳಿದೆ. ಇದರಿಂದ ವಿಜಯನಗರ ಕಾಲದಲ್ಲಿ ವ್ಯಾಪಾರ ವಿಸ್ತಾರ ಸಾಗರೋತ್ತರವಾಗಿತ್ತೆಂದು ತಿಳಿದುಬರುತ್ತದೆ. ಈ ಸಾಗರಯಾನದಲ್ಲಿ 'ಮರಕಾಲ'ರು ಆಸಕ್ತಿವಹಿಸಿದ್ದರೆಂದು ಇದೇ ಶಾಸನವು ಹೇಳಿದೆ.[9]

ಕೃಷಿಯ ವಿಸ್ತಾರ ಮತ್ತು ಇದರ ಪದ್ಧತಿಗಳ ವಿವರಗಳು ಇಲ್ಲಿನ ಹೆಚ್ಚಿನ ಶಾಸನಗಳಲ್ಲಿವೆ. ಉದಾ: ಉಡುಪಿ ಕೃಷ್ಣಮಠದ ಉತ್ತರ ದಿಕ್ಕಿನ ಶಿಲಾಶಾಸನವು (ಶಕ 1317) ಇಲ್ಲಿನ ಕೃಷಿ ವಿಸ್ತಾರದ ದೃಷ್ಟಿಯಿಂದ ಅಧ್ಯಯನಕ್ಕೆ ಸೂಕ್ತವಾಗಿದೆ. ಇದರಲ್ಲಿ ಕಲ್ಲು, ಹೊಯಿಗೆ ಗುಡ್ಡೆ, ಹೆದ್ದಾರಿಯ ಜಾಗ, ಗುಂಡಿಸ್ಥಳ ಇತ್ಯಾದಿಗಳನ್ನು ಕೃಷಿ ಭೂಮಿಯಾಗಿ ಪರಿವರ್ತಿಸಿದ್ದು ಹೇಳಿದೆ. ಈ ಕೃಷಿ ಭೂಮಿಯ ವಿಸ್ತಾರ ಮಾನ್ಯ ಕೊಯಿಲುಗಳಾಗಿತ್ತು.[10] ಇದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ವಿಶಿಷ್ಟ ಗದ್ದೆಯೆನ್ನಲಾದ ಕೊಳಂಬೆ, ಜೋಡಿಯ, ಪಾಂಬರದ, ಕೋಡಿಯ ಹಳ್ಳಗದ್ದೆ ಇತ್ಯಾದಿಗಳ ಮಾಹಿತಿಯು ಶಿವಪುರದ ಶಿಲಾಶಾಸನದಲ್ಲಿ ದಾಖಲಾಗಿದೆ. ಕೃಷಿ ಭೂಮಿಯಲ್ಲಿ ಎಲ್ಲಾ ಜಾತಿಯವರು ಒಟ್ಟೊಟ್ಟಾಗಿ ಬೇಸಾಯ ನಡೆಸುತ್ತಿದ್ದುದು ಕೆಲವು ಶಾಸನಗಳಲ್ಲಿದೆ. ಕರಾವಳಿಯಲ್ಲಿ ಸಿಕ್ಕಿದ ವಿಜಯನಗರ ಕಾಲದ ಶಾಸನಗಳು ಕೃಷಿ ಭೂಮಿ ವಿಂಗಡಣೆ, ಭೂಮಿಗೆ ಸಂಬಂಧಿಸಿದ ಜನರ ವರ್ಗೀಕರಣ, ಹೊರೆಯಾಳು, ಹೆಣ್ಣಾಳು ಮತ್ತು ಗಂಡಾಳು ಇವರುಗಳ ಪಾತ್ರಗಳನ್ನು ದಾಖಲಿಸಿದ್ದು ಗಮನಾರ್ಹ. ಹೊರೆಯಾಳು, ಮಣ್ಣಾಳುಗಳೆಂಬ ಕೃಷಿ ಜೀತದಾಳುಗಳ ಮಾರಾಟ ನಡೆಯುತ್ತಿದ್ದುದು ಕೆಲವು ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ.[11] ಭೂಹಿಡುವಳಿ ಪದ್ಧತಿಯಲ್ಲಿ ದೇವಸ್ಥಾನದವರು ಪ್ರಾಬಲ್ಯ ಹೊಂದಿದ್ದರು. ಈ ಭೂಮಿಯ ಕೃಷಿಯಲ್ಲಿ ಬ್ರಾಹ್ಮಣ ಮತ್ತು ಮೇಲ್ಜಾತಿ ಶೂದ್ರರೊಳಗೆ ಹೊಂದಾಣಿಕೆ ಇದ್ದಿತ್ತೆಂದು ಸೂಚಿಸುವ ಶಾಸನಗಳು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಸಮೀಪದ ಮುಂಡೋಳಿ, ಬಪ್ಪನಾಡು, ಪದು ಪಣಂಬೂರು, ಎರ್ಮಾಳ (ದ.ಕ.)ಗಳಲ್ಲಿವೆ.[12] ಕರಾವಳಿ ಕರ್ನಾಟಕದಲ್ಲಿ ಸಿಕ್ಕಿದ ಇನ್ನೂ ಕೆಲವು ಶಾಸನಗಳು ಭೂವ್ಯವಹಾರ ಮತ್ತು ತೀರ್ಮಾನಗಳ ಮಾಹಿತಿಗಳನ್ನು ನೀಡುತ್ತವೆ. ಇಂತಹ ಶಾಸನಗಳಲ್ಲಿ ಗಮನಾರ್ಹವಾದದ್ದು ಸೀಮಂತೂರಿನ ಜನಾರ್ದನ ದೇವಸ್ಥಾನದ ಎದುರು ಇರುವ ಶಾಸನ. ಇದರ ಕಾಲ ಕ್ರಿ.ಶ. 1411 ಆಗಿರುತ್ತದೆ. ಇದರಂತೆ ಕೋಟ್ಯಾನ ಹೆಗ್ಗಡೆ ಸಹೋದರ ಬಾಚಿಸೆಟ್ಟಿ ಮತ್ತು ಹರಿಸೆಟ್ಟರು ತಮ್ಮ ತಮ್ಮೊಳಗಿನ ಕೃಷಿ ಭೂಮಿಯ ಗಡಿಗಳ ವಿವಾದಗಳನ್ನು ಜನಾರ್ದನ ದೇವರ ಸಮ್ಮುಖದಲ್ಲಿ ತೀರ್ಮಾನಿಸಿಕೊಂಡರು.[13] ಬಾರಕೂರಿನ ಮೂಡುಕೇರಿ ಸೋಮನಾಥ ದೇವಾಲಯದಲ್ಲಿ ವಸಂತ ಶೆಟ್ಟರಿಂದ ಪತ್ತೆಯಾದ ತಾಮ್ರಶಾಸನವು ಪಿತ್ರಾರ್ಜಿತ ಆಸ್ತಿಯನ್ನು ಕುಟುಂಬದವರು ಪಾಲು ಮಾಡಿಕೊಂಡ ವಿವರಗಳನ್ನು ತಿಳಿಸುತ್ತದೆ. ಹದಿನೈದನೆ ಶತಮಾನಕ್ಕೆ ಸರಿಹೊಂದುವ ಈ ತಾಮ್ರ ಶಾಸನವು ಉಂಗುಪಳ್ಳಿ, ಮುಕ್ಕಾಲಟ್ಟಿ ಕುಂಜರಣ್ಣ ಮತ್ತು ಆಲಂಜ ಚಾಂತಾರದ ಮಧ್ಯಸ್ಥರಾದ ಈಶ್ವರ ಸಮ್ಮುಖದಲ್ಲಿ ಚೊಮಣ್ಣಸೆಟ್ಟಿಯ ಮಗ ರುದ್ರಪ್ಪಸೆಟ್ಟಿ, ಜೋಗಾರು ಯೆಕ್ಕಿಸೆಟ್ಟಿಯರು, ಹೆದ್ದಾರಿಯ ಮಂಗಿ ಸೆಟ್ಟಿಯ ಮಗ ಮಾದಪ್ಪಸೆಟ್ಟಿ ವಿಠಲಸೆಟ್ಟಿಯ ಮಗ ನಾಗಪ್ಪಸೆಟ್ಟಿ ಇವರುಗಳು ತಮ್ಮ ಆಸ್ತಿಯನ್ನು ಪಾಲು ಮಾಡಿಕೊಂಡರು. ಇದನ್ನು ದಾಖಲಿಸಿದವ ಬೆಚ್ಚಪ್ಪಗಳ ಮಗ ದೇವಣ್ಣ. ಈ ಪಾಲು ಪಟ್ಟಿಕೆಯ ಸಾಕ್ಷಿಗಳು ದೇವ, ದೈವ, ದೇವಿಯರು, ಮಠಪಾಡಿ ವೀರಭದ್ರ, ಶ್ರೀಮಹಾದೇವ, ಶ್ರೀಕೃಷ್ಣ ಮತ್ತು ಕಾಳಿಕಾದೇವಿ.[14] ವಿಜಯನಗರ ಕಾಲದಲ್ಲಿ ಕರಾವಳಿ ಕರ್ನಾಟಕದಲ್ಲಿ ಸಿಕ್ಕಿದ ಕೆಲವು ಶಾಸನಗಳು ಭೂದಾನವಲ್ಲದೆ ಕಾವ್ಯಕ್ಕೆ ಪ್ರೋತ್ಸಾಹ ಮತ್ತು ಗ್ರಂಥಾಲಯದ ರಕ್ಷಣೆಗೆ ನೀಡಿದ ಸಹಾಯವನ್ನು ದಾಖಲಿಸಿವೆ. ಕುಂದಾಪುರದಲ್ಲಿ ದೊರೆತ ಶಕ 1335ರ ಶಾಸನವು ಕೋಟಿನಾಥ ಪುರಾಣ ರಚಿಸಿದ ರಾಜಾಧಿತೀರ್ಥ ಶ್ರೀ ಪಾದಂಗಳಿಗೆ ವಿಜಯನಗರ ಚಕ್ರವರ್ತಿ ಇಮ್ಮಡಿ ಹರಿಹರನು ದಾನ ಮಾಡಿದ್ದನ್ನು ಹೇಳಿದೆ.[15] ವಾಂಟ್ಯಳ (ಪೆರಡೂರು ಉಡುಪಿ ತಾಲ್ಲೋಕ)ದ ಶಾಸನದಲ್ಲಿ (ಶ.ಕ. 1328 ಸಂದು 1329) ಇಲ್ಲಿಯ ಶೃಂಗೇರಿ ಮಠದ ಗ್ರಂಥಾಲಯವಿದ್ದು ಇದನ್ನು ನೋಡಿಕೊಳ್ಳುತ್ತಿರುವ ಕೃಷ್ಣಭಟ್ಟರಿಗೆ ವಿಜಯನಗರ ಆರಸ ಇಮ್ಮಡಿ ಬುಕ್ಕನು ಬ್ರಹ್ಮಾವರ ಗ್ರಾಮದಿಂದ ಧರ್ಮವನ್ನು ಬಿಟ್ಟನು. ಇದನ್ನು ಶಿವಪುರ (ಕಾರ್ಕಳ ತಾಲ್ಲೋಕು) ಗ್ರಾಮದ ಸಮಸ್ತ ಜನನಿ ಮತ್ತು ಇಲ್ಲಿನ ಮಾಹಾದೇವ ಒಪ್ಪಿದರು.[16]

ಈ ಕಾಲದಲ್ಲಿ ಸಿಕ್ಕಿದ ವೀರಗಲ್ಲುಗಳು ಆಗಿನ ಸಮಾಜದ ಕೆಲವು ಕಟ್ಟು ಕಟ್ಟಳೆಗಳ ಮಾಹಿತಿಯನ್ನು ಒದಗಿಸುತ್ತವೆ. ಇಂತಹ ಶಾಸನಗಳು ಶಿರೂರು ತ್ರಾಸಿಯಲ್ಲಿ ಪತ್ತೆಯಾಗಿವೆ. ಇದಲ್ಲದೆ ಭಟ್ಕಳದಲ್ಲಿ ಸಿಕ್ಕಿದ ವೀರಗಲ್ಲು ಕೆಲವು ಸಾಂಸ್ಕೃತಿಕ ಮಾಹಿತಿಗಳನ್ನು ತಿಳಿಸುತ್ತದೆ. ಶಕ 1360 (ಕ್ರಿ.ಶ. 1437) ರ ಶಿರೂರು ವೀರಸತಿಗಲ್ಲಿನ ಶಾಸನವು ಇಮ್ಮಡಿ ದೇವರಾಯನ ಆಜ್ಞೆಯಿಂದ ಹೊನ್ನಾವರ ರಾಜ್ಯಪಾಲಕ ಅಣ್ಣಪ್ಪ ಒಡೆಯ ನಗರಿಯ ಭೈರಪ್ಪ ಒಡೆಯರ ಮೇಲೆ ದಂಡೆತ್ತಿ ಹೋಗಿದ್ದನ್ನು ತಿಳಿಸುವಾಗ, ಅಳಿಯ ಮತ್ತು ಮಕ್ಕಳ ಸಂತಾನಗಳ ಪದ್ಧತಿ ಇಲ್ಲಿ ರೂಢಿಯಿದ್ದುದ್ದನ್ನು

ತಿಳಿಸುತ್ತದೆ. ಊರ ಪರಿವಾರ, ಸೈನ್ಯ ಹೊನ್ನಾವರ ಹೊಳೆ ದಾಟಿ ಮಂಕಿಯಲ್ಲಿ ಠಾಣ್ಯ ಹೂಡಿದ್ದು, ಮತ್ತು ಈ ವೀರಗಲ್ಲಿನ ಎಡಪಾರ್ಶ್ವದಲ್ಲಿ ಸತಿಯಾದ ಚಿತ್ರ ಕೊರೆದದ್ದು ಈ ವೀರಗಲ್ಲು ಶಾಸನದ ವೈಶಿಷ್ಟ್ಯ.[17] ನಾಲ್ಕು ಅಂಕಣವಿರುವ ತ್ರಾಸಿ ವೀರಗಲ್ಲು ಶಕ 1468, ಕ್ರಿ.ಶ. 1546ರ ಕಾಲದ್ದು. ಇದರಲ್ಲಿ ಪಡುಕೋಣನಾಡ ಹಾಲೆಯ ಬಳಿ ನಾಯಕ ಕಪಿತರೊಡನೆ (ಪೋರ್ಚುಗೀಜರು) ಕಾದಿ ಅಸುನೀಗಿದನೆಂದು ತಿಳಿಸಿ ಇವರ ಸ್ಮಾರಕವಾಗಿ ಬಸವಕ್ಕ ನಾಯಕತಿ ವೀರಗಲ್ಲನ್ನು ನೆಟ್ಟಳೆಂದು ಹೇಳಿದೆ. ಈ ಶಾಸನದಲ್ಲಿ ತಿಳಿಸಿದ ಆಗಿನ ಸಾಮಾಜಿಕ ಸಂಗತಿಗಳಾವುವೆಂದರೆ ಬಳಿ ಪದ್ಧತಿ, ಸ್ತ್ರೀಯರು ವೀರಗಲ್ಲು ಸ್ಥಾಪಿಸುವ ಪದ್ಧತಿ ಮತ್ತು ಸತಿ ಪದ್ಧತಿ.[18]

ಭಟ್ಕಳ ಭಂಡ ಬಸ್ತಿಯ ಶಕ 1465ರ ವೀರಗಲ್ಲು ಪೋರ್ಚುಗೀಜರು ಈ ನಗರದ ಮೇಲೆ ಧಾಳಿಯಿಟ್ಟು ಕೊಳ್ಳೆ ಹೊಡದದ್ದನ್ನು ತಿಳಿಸಿ ಇದನ್ನು ಯೆಂಕಟಪ್ಪ ನಾಯಕನು ಎದುರಿಸಿ ಅಸು ನೀಗಿದನು ಎಂದು ಹೇಳಿದೆ. ಇವನ ಸಂತತಿಯವನಾದ ನಾರಾಯಣ ನಾಯಕನಿಗೆ ವಿಜಯನಗರ ಚಕ್ರವರ್ತಿ ಅಚ್ಯುತರಾಯನ ಮಹಾಮಂಡಳೇಶ್ವರರಾದ ಚೆನ್ನಾದೇವಿ ಅಮ್ಮನವರು ಕುಳವ ಕಡಿದು ದಾನನೀಡಿದ್ದು ಈ ವೀರಗಲ್ಲುಗಳಲ್ಲಿ ದಾಖಲಿಸಿದೆ. ಈ ದಾನ ಭೂಮಿಯನ್ನು ದಾನ ಪಡೆದವನ ಸಂತತಿಯವರು "ಹೆಣ್ಣಿಗೆ ದಾನ ಗಂಡಿಗೆ ಮೂಲ"ದಂತೆ ನಡೆದುಕೊಳ್ಳುವ ರೂಢಿ ಇದ್ದದ್ದು ಇದೇ ಶಾಸನವು ತಿಳಿಸಿದ್ದು ಗಮನಾರ್ಹ.[19]

ಕರಾವಳಿ ಕರ್ನಾಟಕದಲ್ಲಿ ದೊರೆತ ವಿಜಯನಗರ ಅರಸರ ಕಾಲದ ಶಾಸನಗಳು ಇಲ್ಲಿನ ಜಾತಿ-ಜಾತಿ, ವಿವಿಧ ಮತಗಳ ಸಂಘರ್ಷಕೆ ಬಂದದ್ದು, ಇವುಗಳ ಪರಿಹಾರ ಮತ್ತು ಇಲ್ಲಿನ ಧಾರ್ಮಿಕ ಪದ್ಧತಿಗಳ ವೈಶಿಷ್ಟ್ಯಗಳನ್ನು ತಿಳಿಸಿವೆ. ಇವುಗಳಿಗೆ ಕೆಲವು ಉದಾಹರಣೆಗಳನ್ನು ಇಲ್ಲಿ ಹೇಳಲಾಗಿದೆ. ಕೆರ್ಗಾಲು ಗ್ರಾಮ (ಕುಂದಾಪುರ ತಾಲ್ಲೋಕು) ಭಗವತಿ ದೇವಸ್ಥಾನದ ಶಿಲಾ ಶಾಸನದಲ್ಲಿ (ಕ್ರಿ.ಶ. 1347) ಹುಣಸಿ ಮನೆ ಗೋವಿಂದ ಮತ್ತು ಕುಯ್ಯಲು ಮನೆ ಕೃಷ್ಣರು ಇಲ್ಲಿ ನಡೆದ ಕಲಹದಲ್ಲಿ ಯಾವುದೋ ಕಾರಣಕ್ಕಾಗಿ ಬ್ರಾಹ್ಮಣನೊಬ್ಬನನ್ನು ಕೊಂದದ್ದನ್ನು ದಾಖಲಿಸಿದೆ. ಕೊನೆಗೆ ಇದು ತಪ್ಪೆಂದು ಇವರಿಗೆ ಮನವರಿಕೆಯಾಗಿ ಇಲ್ಲಿರುವ ತ್ರಿಮೂರ್ತಿ ದೇವಾಲಯಕ್ಕೆ ಪ್ರಾಯಶ್ಚಿತ್ತವಾಗಿ ದಾನ ಮಾಡಿದ್ದು ಇದೇ ಶಾಸನದಲ್ಲಿ ನಮೂದಿಸಿದೆ. ಶಕ 1341 (ಕ್ರಿ.ಶ. 1419)ರ ಮಂಗಳೂರಿನ ಶಾಸನದಂತೆ ಇಲ್ಲಿನ ಹಂಜಮಾನರ ಪೂರ್ವ ಮರಿಯಾದೆ ಚ್ಯುತಿಯಾಗಿ ಇವರಿದ್ದ ಹಳ್ಳಿ ಮತ್ತು ಪಟ್ಟಣಗಳು ಸುಟ್ಟುಹೋದವು. ಇವರ ಪೂರ್ವ ಮರಿಯಾದೆಯನ್ನು ಚ್ಯುತಿಗೊಳಿಸಿದವ ಮಂಗಳೂರಿನ ರಾಜಪಾಲಕ ತಿಮ್ಮಣ್ಣ ಒಡೆಯ. ಇದು ವಿಜಯನಗರ ಅರಸ ದೇವರಾಯನಿಗೆ ತಿಳಿದು ಇದನ್ನು ಬಗೆಹರಿಸಲು ಬೆಚ್ಚಯ್ಯ ದಂಡನಾಯಕನಿಗೆ ಆಜ್ಞಾಪಿಸಿದ. ಇವನು ನಖರಹಂಜಮಾನರ ವಿರುದ್ಧ ನಡೆಸುತ್ತಿದ್ದ ಕಾರ್ಯಗಳನ್ನು ನಿಲ್ಲಿಸಿ ಇವರ ಒಕ್ಕಲುತನ ಮತ್ತು ಸ್ಥಾನಮಾನಗಳನ್ನು ಹಿಂದೆ ಕೊಡುವಂತೆಯೂ ಈ ಹಂಜಮಾನರಿಗೆ ಆದ ನಷ್ಟಗಳಿಗೆ ಪರಿಹಾರ ನೀಡುವಂತೆ ಆಜ್ಞಾಪಿಸಿದ. ಈ ಆಜ್ಞೆಯನ್ನು ರಾಜಪಾಲಕ ತಿಮ್ಮಣ್ಣ ಒಡೆಯ ತನ್ನ ಪ್ರಧಾನಿ, ಬಂಗ, ಚೌಟ, ಅಜಿಲ ಮುಂತಾದ ಸಮಸ್ತ ಕಟ್ಟಳೆಯವರ ಸಮ್ಮುಖದಲ್ಲಿ ಜಾರಿಗೆ ತಂದ.[20]

ಉಡುಪಿ ಕೃಷ್ಣ ಮಠದಲ್ಲಿದ್ದ ಒಂದು ಶಾಸನವು ಬಾರಕೂರಿನ ರಾಜ್ಯಪಾಲಕ ಅಣ್ಣಪ್ಪ ಒಡೆಯರು ಶಿವಳ್ಳಿ ಗ್ರಾಮದ ಮೇಲೆ ಧಾಳಿ ನಡೆಸಿದಾಗ ಇಲ್ಲಿನ ಕೃಷ್ಣದೇವರ ಮೂರ್ತಿ ಚಲನೆಯಾಗಿ ಎಲ್ಲಿಗೋ ಹೋಯಿತೆಂದು ಹೇಳುತ್ತದೆ. ಇದರಿಂದ ಇಲ್ಲಿನ ಪೂಜಾ ಮತ್ತು ಕಟ್ಟಳೆಗಳು ನಡೆಯದೆ ಹೋಯಿತು. ಇದು ಇಲ್ಲಿನ ಕಟ್ಟಳೆಯವರಿಗೆ ಮನನೋಯಿಸಿತು. ಇವರು ಇದನ್ನು ಅರಸನಿಗೆ ತಿಳಿಸಿದರು. ಇವನು ಇಲ್ಲಿ ಪೂಜಾ ವ್ಯವಸ್ಥೆಯು ಸಾಂಗವಾಗಿ ನಡೆಯುವಂತೆ ಏರ್ಪಾಡು ಮಾಡಿದನು. ಇದೆಲ್ಲಾ ಶಕ 1359 (ಕ್ರಿ.ಶ. 1436)ರ ವರ್ಷದೊಳಗೆ ನಡೆಯಿತು.[21]

ಇನ್ನೊಂದು ಕಲಹವು ಕ್ರಿ.ಶ. 1455ರಂದು ವಾಣಿಜ್ಯ ನಗರವಾದ ಬಸ್ರೂರಿನಲ್ಲಿ ನಡೆದದ್ದು ಇಲ್ಲಿ ದೊರಕಿದ ಶಾಸನದಿಂದ ತಿಳಿದುಬರುತ್ತದೆ. ಇದು ನಡೆದದ್ದು ಇಲ್ಲಿನ ದುರ್ಗಾದೇವಿಗೆ ಕುರಿ ಮತ್ತು ಹರಕೆಗಳನ್ನು ಕಾಣಿಕೆ ಕೊಡುವಾಗ ಇಲ್ಲಿನ ಮೂರು ಕೇರಿಯ ಹಲರು ಮತ್ತು ಪಡುವ ಕೇರಿಯ ಹಲರೊಳಗೆ ವಾದ ವಿವಾದಗಳು ನಡೆದು ಕೊನೆಗೆ ಈ ಎರಡು ಸಂಘಗಳೊಳಗೆ ತೀವ್ರ ರೀತಿಯ ಹೊಡೆದಾಟವಾಯಿತು. ಕೊನೆಗೆ ಇದನ್ನು ಈ ಪಂಗಡಗಳು ರಾಜಿಯಿಂದ ತಿರ್ಮಾನ ಬಗೆಹರಿಸಿಕೊಂಡರು.[22] ಇನ್ನೊಂದು ಘರ್ಷಣೆಗೆ ಕೋಟೇಶ್ವರದ ಕೊಡಿ ಹಬ್ಬದ ಸಮಯದಲ್ಲಿ ತುಳು ರಾಜ್ಯದ ಜನರೇ ಇಲ್ಲಿ ಕೂಡಿದಲ್ಲಿ ಈ ಜನರೊಳಗೆ ಕಾದಾಟವಾಯಿತು. ಇದರ ಪರಿಣಾಮವಾಗಿ ಬ್ರಾಹ್ಮಣ ಮತ್ತು ಶೂದ್ರರ ಹೆಣಗಳು ಬಿದ್ದು ಈ ದೇವಸ್ಥಾನದ ಪೂಜಾ ವ್ಯವಸ್ಥೆಗಳು ನಿಂತು ಹೋದವು. ಇದನ್ನು ಆಗಿನ ಬಾರಕೂರ ರಾಜ್ಯಪಾಲಕ ಏಕದಳಖಾನ್ ತೀರ್ಮಾನಿಸಿ ಇಲ್ಲಿನ ದೇವಸ್ಥಾನದ ಕಟ್ಟಳೆ ಮತ್ತು ಪೂಜೆಗಳನ್ನು ನಡೆಯುವಂತೆ ಕ್ರಿ.ಶ. 1551ರಲ್ಲಿ ನಡೆಸಿದನು.[23] ಕರಾವಳಿ ಕರ್ನಾಟಕದಲ್ಲಿ ದೊರೆತ ವಿಜಯನಗರ ಶಾಸನಗಳಲ್ಲಿ ಇಲ್ಲಿನ ವೈಶಿಷ್ಟ್ಯಮಯವಾದ ಧಾರ್ಮಿಕ ಸಂಗತಿಗಳು ವ್ಯಕ್ತವಾಗಿವೆ. ಉದಾಹರಣೆಗೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಶಿಲಾಶಾಸನ (ಕ್ರಿ.ಶ.1388) ಸುಬ್ರಹ್ಮಣ್ಯ ಮತ್ತು ಶೇಷದೇವತೆ (ನಾಗ) ಹೊಂದಾಣಿಕೆ, ಮಂಗಳೂರಿನ ಸಮೀಪದ ಚಿತ್ರಾಪುವಿನಲ್ಲಿ ಪುಳುಪಿನ ದೇವರು ಸ್ಥಳೀಯ ದುರ್ಗಾದೇವಿಯೊಂದಿಗೆ ಹೊಂದಾಣಿಕೆ (ಶಾಸನ ಕಾಲ 1398), ಕುಂದಾಪುರದಲ್ಲಿ ಕುಂದೇಶ್ವರನೊಂದಿಗೆ ಸ್ಥಳೀಯ ಬೆಟ್ಟದೇವರು, ಆನೆ (ಗುಡ್ಡೆಯ ಗಣಪತಿ?) ಚಿಕ್ಕದೇವರು, ಚಿಕ್ಕಮದೇವರುಗಳ ಹೊಂದಾಣಿಕೆ (ಶಾಸನ ಕಾಲ 1406), ಬೈಂದೂರಿನಲ್ಲಿ ಪಾರ್ಶ್ವನಾಥ ತೀರ್ಥಂಕರರೊಂದಿಗೆ ಬ್ರಹ್ಮನ ಆರಾಧನೆ (ಶಾಸನ ಕಾಲ 1449), ಉದಿಯಾವರದಲ್ಲಿ ವೀರಭದ್ರ, ವಿನಾಯಕ ಮತ್ತು ಬಲಿ ಪೂಜೆ ಕೊಂಬ ನಂದಳಿಕೆ ದೈವಗಳ ಸಂಮಿಳನ (1513), ಬಾರಕೂರಿನಲ್ಲಿ ಬೊಬ್ಬರಯ್ಯನಿಗೆ ಕೊಟ್ಟಿಗೆ ಕಟ್ಟಿಸಿದ್ದು ಇತ್ಯಾದಿ.[24]

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಕರಾವಳಿಯಲ್ಲಿ ವಿದ್ಯಾಸಂಸ್ಥೆಗಳು ಇದ್ದದ್ದನ್ನು ತಿಳಿಸುವ ಶಾಸನಗಳಿವೆ. ಇವುಗಳ ಅಧ್ಯಯನದಿಂದ ತಿಳಿದುಬರುವ ಸಂಗತಿಯೇನೆಂದರೆ ಜೈನ ಕ್ಷೇತ್ರಗಳಾದ ಕಾರ್ಕಳ, ಮೂಲ್ಕಿಯ ಸಮೀಪದ ಪಡುವ ಪಣಂಬೂರ್ ಮತ್ತು ವೈದಿಕ ಕೇಂದ್ರಗಳಾದ ಗುಜ್ಜಾಡಿಯ ಗುಹೇಶ್ವರ ಮತ್ತು ಬೈಲೂರಿನ ಮಡಕೇಶ್ವರ[25] (ಹೊನ್ನಾವರ ತಾ. ಉತ್ತರ ಕನ್ನಡ) ದೇವಾಲಯಗಳು.

ಉಪಸಂಹಾರ :

1. ವಿಜಯನಗರ ಅರಸುಗಳ ಕಾಲದ ಅವಧಿಯಲ್ಲಿ ಕರಾವಳಿಯಲ್ಲಿ ದೊರೆತ ಶಾಸನಗಳು ಇಲ್ಲಿನ ವೈವಿಧ್ಯಮಯ ಮತ್ತು ಬಹುಮುಖ ಸಂಸ್ಕೃತಿಯನ್ನು ಬೆಳಕಿಗೆ ತಂದಿವೆ. ಈ ಶಾಸನಗಳಲ್ಲಿ ಮೂಡಿ ಬಂದ ಸಾಂಸ್ಕೃತಿಕ ಜೀವನ ಮುಖ್ಯವಾಗಿ ಗ್ರಾಮೀಣವಾಗಿದೆ, ಶಾಸನಗಳು ಅದರ ನೈಜ ಚಿತ್ರಗಳನ್ನು ನೀಡುತ್ತವೆ.

2. ಕೃಷಿ ವಿಸ್ತಾರದೊಂದಿಗೆ ಜಾತಿ ಪದ್ಧತಿಯ ನಿಕಟ ಸಂಪರ್ಕ, ಸಾಮಾಜಿಕ ರೂಢಿ ಪದ್ಧತಿಗಳ ಬೆಳವಣಿಗೆ, ಜಾತಿ ಮತ್ತು ಧಾರ್ಮಿಕ ಕಲಹ ಮತ್ತು ತೀರ್ಮಾನ ಮತ್ತು ದೇವ ದೇವಿಯರೊಂದಿಗೆ ಸ್ಥಳೀಯ ದೇವ, ದೈವಿ, ದೈವ ಮತ್ತು ಭೂತಗಳ ಹೊಂದಾಣಿಕೆ ಇತ್ಯಾದಿಗಳ ಮಾಹಿತಿಗಳು ಈ ಕಾಲದ ಶಾಸನಗಳಲ್ಲಿ ವ್ಯಕ್ತವಾಗಿವೆ.

3. ಕೆಲವು ಶಾಸನಗಳಲ್ಲಿ ಇಲ್ಲಿನ ಉಪ ಸಂಸ್ಕೃತಿಯ ಮಾಹಿತಿ ಮತ್ತು ಅಗೋಚರವಾದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗಳ ಬದಲಾವಣೆಗಳು ನಡೆದ ಮಾಹಿತಿಗಳು ಇವೆ. ಒಟ್ಟಿನಲ್ಲಿ ವಿಜಯನಗರ ಕಾಲದ ಸಾಂಸ್ಕೃತಿಕ ಜೀವನ ಸುವರ್ಣಯುಗವಲ್ಲವೆಂದು ಈ ಶಾಸನಗಳು ತಿಳಿಸುತ್ತವೆ.

ಅಡಿ ಟಿಪ್ಪಣಿಗಳು

1. ಕೆ.ವಿ. ರಮೇಶ ಮತ್ತು ಎಂ.ಜೆ. ಶರ್ಮ, *ತುಳುನಾಡಿನ ಶಾಸನಗಳು* (ಉಡುಪಿ 1978), ಪೀಠಿಕೆ.
ವಿಜಯನಗರ ಶಾಸನಗಳ ಅಧ್ಯಯನದ ಕೆಲವು ಸಂಗತಿಗಳನ್ನು ಬಾಲಕೃಷ್ಣ ಸಾಮಗರು ಮಾಡಿದ್ದಾರೆ. "ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರ ಕಾಲೀನ ಶಾಸನಗಳು" *ಸುದರ್ಶನ* (ಡಾ. ತೊನ್ಸೆ ಮಾಧವ, ಅನಂತ ಪೈ ಯವರ ಅಭಿನಂದನ ಗ್ರಂಥ), ಮೂಲ್ಕಿ, 1977, ಪು. 66-70.

2. S. Vasudevan, "Distribution Pattern of Vijayangara Inscriptions" *Journal of Epigraphical Society of India, JES,* 1995, pp. 32-36.

3. *ಸೌಇಂಇ,* IX ii, 406. ಕಿರಿಮಂಜೇಶ್ವರ ಮತ್ತು ಶಿವಪುರದ ಶಾಸನಗಳು ಅಪ್ರಕಟಿತ. ಈ ಎರಡು ಶಾಸನಗಳು ಡಾ. ಜಿ. ಪ್ರಕಾಶ ಕೊಡಂಚ, ಕಂಬದ ಕೋಣೆ ಮತ್ತು ಡಾ. ಪಿ.ಎನ್. ನರಸಿಂಹಮೂರ್ತಿ ಅನುಕ್ರಮವಾಗಿ ಸಹಕಾರದಿಂದ ಸಿಕ್ಕಿವೆ.

4. *ಕಇ,* I, ಪು. 113; *ಅದೇ,* III, ನಂ. 7, 8, 14, 15; *ಸೌಇಂಇ.,* VII, 196, 202.

5. *ಕಇ,* I, ಪು. 113.

6. ಈ ಶಾಸನವನ್ನು ಡಾ. ಬಿ. ವಸಂತಶೆಟ್ಟರು ಪತ್ತೆಹಚ್ಚಿದ್ದಾರೆ. ನೋಡಿ *ಸಾಧನೆ* (1978 ಜುಲೈ-ಸೆಪ್ಟೆಂಬರ್, ಬೆಂಗಳೂರು), ಪು. 78-80.

7. *ಸೌಇಂಇ,* IX, ii, ನಂ. 511, *ಸಗ್ಗುಣ, ಸೆಪ್ಟೆಂಬರ್* 1993, ಪು. 29-31.

8. ಈ ಶಾಸನವು ಅಪ್ರಕಟಿತವಾಗಿದ್ದು, ದಿ: ವಸಂತಶೆಟ್ಟಿ ಮತ್ತು ಡಾ. ಜಗದೀಶಶೆಟ್ಟರ ಸಹಕಾರದಿಂದ ಇದರ ಪಾಠವನ್ನು ತೆಗೆಯಲಾಗಿದೆ.

9. ಇದು ಅಪ್ರಕಟಿತ ಶಾಸನ. ಇದು ಹುಂಬಚ್ಚ ಮಠದ ಜಗದ್ಗುರು ಶ್ರೀ ಶ್ರೀ ದೇವೇಂದ್ರಕೀರ್ತಿ ಭಟ್ಟಾಕರರಿಂದ ದೊರೆತಿದೆ.

10. *ಸೌಇಂಇ,* VII, 299.

11. *ಕಇ,* I, 1939ರ 58; *ಸೌಇಂಇ,* VII, No. 259, 262, 288, 321; *ಅದೇ,* IX ii, ನಂ. 444, 621, 632, 655, 659.

12. *ಕಇ,* I, 1939ರ 58, *ಅದೇ,* ಪು. 126-124; *ಸೌಇಂಇ,* VII, No. 259, 262, 269; ಬಿ. ವಸಂತಶೆಟ್ಟಿ, *ಬ್ರಹ್ಮಾವರದ ಇತಿಹಾಸ,* ಪು. 15, 36, 39.

13. *ಆರಿಸೌಇಂಎ*, 1931, ನಂ. 339. ಇದರ ಪಾಠವನ್ನು ಈ ಲೇಖಕರು ಪಡೆದಿದ್ದಾರೆ.

14. ಬಿ. ವಸಂತಶೆಟ್ಟಿ, *ಪೂರ್ವೋಕ್ತ*, ಪು. 15, 39. ಈ ಶಾಸನಗಳ ಕೆಲವು ಶಬ್ದಗಳು 'ತುಳು ಲಿಪಿ' (ತಿಗಳಾರಿ)ಯಲ್ಲಿವೆ. ಈ ದಾಖಲೆಯಲ್ಲಿ ತಿಳಿಸಿದ ಸೆಟ್ಟರು ವೈಶ್ಯರು.

15. *ಸಾಧನೆ* (ಬೆಂಗಳೂರು, ಜುಲೈ–ಸೆಪ್ಟೆಂಬರ್), 1978, ಪು. 78-79. ಶಾಸನ ಕಾಲದಲ್ಲಿ ವಿಜಯನಗರ ಅರಸ ದೇವರಾಯ. ಈ ಶಾಸನದ ಸಂಶೋಧಕರಾದ ವಸಂತಶೆಟ್ಟರ ಅಭಿಪ್ರಾಯದಂತೆ ಇಮ್ಮಡಿ ಹರಿಹರನು ಸಿಂಹಾಸನವನ್ನು ತ್ಯಜಿಸಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದನು.

16. *ಆರಿಸೌಇಂಎ*, 1937, ನಂ. 283. ಈ ಶಾಸನದ ಪಾಠವನ್ನು ಈ ಲೇಖಕರು ಸಂಪಾದಿಸಿದ್ದಾರೆ.

17. ಇದು ಅಪ್ರಕಟಿತ. ಶ್ರೀ ಜೆ. ಅಚ್ಯುತ ಹೆಬ್ಬಾರ ಕೆರ್ನಾಲ ಇವರ ಸಹಕಾರದಿಂದ ಈ ಶಾಸನವನ್ನು ಪತ್ತೆ ಹಚ್ಚಿ ಓದಲಾಗಿದೆ. ಹೆಚ್ಚಿನ ವಿವರ ಕೆ.ಜಿ. ವಸಂತಮಾಧವ "A Note on Siruru Hero Stone and Masti Stone" *JES*, 1996, ಪು. 80.

18. ಇದು ಅಪ್ರಕಟಿತ ವೀರಗಲ್ಲು ಶಾಸನವಾಗಿದೆ. ಇದನ್ನು ಭಾರತ ಶಾಸನ ಇಲಾಖೆಯವರು ಗುರುತಿಸಿದ್ದಾರೆ. ನೋಡಿ *ಆರಿಸೌಇಂಎ*, 1931, ನಂ. 363.

19. *ಕಇ*, III, ಭಾಗ, I, ನಂ. 12, 13, ಪು. 37-40. ಈ ಶಾಸನ ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡದಲ್ಲಿದೆ.

20. *ಸೌಇಂಇ*, VII, ನಂ. 182. ಇಲ್ಲಿ ತಿಳಿಸಿದ ಹಂಜಮಾನ ಮುಸ್ಲೀಂರ ವ್ಯಾಪಾರ ಸಂಘ. ಬಂಗ, ಚೌಟ ಮತ್ತು ಅಜಿಲರು ದಕ್ಷಿಣ ಕನ್ನಡದ ಮಂಗಳೂರು, ಕಾರ್ಕಳ, ಬಂಟವಾಳ, ಪುತ್ತೂರು ತಾಲ್ಲೋಕುಗಳಲ್ಲಿ ಆಳಿಕೊಂಡಿದ್ದ ತುಂಡರಸುಗಳು.

21. *ಸೌಇಂಇ*, VI, 296.

22. *ಸೌಇಂಇ*, X, ಭಾಗ I, ನಂ. 457.

23. *ಅದೇ*, ನಂ. 627. ಕೋಡಿಹಬ್ಬ, ಕೋಟೇಶ್ವರ ದೇವರ ರಥೋತ್ಸವ. ಇಲ್ಲಿ ಉಲ್ಲೇಖಿಸಿದ ಬಾರಕೂರು ರಾಜ್ಯಪಾಲಕ ಇಸ್ಲಾಂ ಧರ್ಮದವ.

24. *ಮೈಆರಿ*, 1943, ನಂ. 46; *ಆರಿಸೌಇಎ*, 1929, ನಂ. 469. ಈ ಶಾಸನದ ಪಾಠ ದಿ: ವೆಂಕಟಾಚಾರ್ಯ ಸುರತ್ಕಲ್ ಇವರಿಂದ ಸಿಕ್ಕಿದೆ. ಇಲ್ಲಿ ತಿಳಿಸಿದ ಪುಳುಪಿನ ದೇವರು ಸ್ಥಳೀಯ ಗ್ರಾಮ ದೇವತೆ. ಕ್ರಮೇಣ ಈ ದೇವತೆ ದುರ್ಗಾದೇವಿಯಾಗಿ ಪರಿಣಮಿಸಿತು. *ಸೌಇಂಇ*, IX, ಭಾಗ II, 430; *ಅದೇ*, VII. 290; *ಅದೇ*, ನಂ. 366; *ಅದೇ*, IX, ಭಾಗ II, 620. ಚಿಕ್ಕಮ್ಮ ದೇವರು ಸ್ಥಳೀಯ ಗ್ರಾಮದೇವಿ.

25. *ಸೌಇಂಇ*, IX, ಭಾಗ II, ನಂ. 243, 263; *ಕಇ*, I, 1939-40ರ ನಂ. 53, 54, 55, ಪು. 127-134.

ಈ ಲೇಖನ ತಯಾರಿಸುವಲ್ಲಿ ಅತ್ಯಂತ ಆಸಕ್ತಿಯಿಂದ ಸಹಕರಿಸಿದ ದಿ: ವಿ. ವಸಂತಶೆಟ್ಟಿ ಮತ್ತು ದಿ: ಸುರತ್ಕಲ್ ವೆಂಕಟ್ರಾಯಾಚಾರ್ಯರಿಗೆ ಈ ಲೇಖಕರು ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತಾರೆ.

7. ವಿಜಯನಗರ ಅರಸರ ನಾಣ್ಯ ಸಂಪತ್ತು

– ಎಂ.ಎಚ್. ಶಂಕರನಾರಾಯಣ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲವು ವೈಭವ ಯುಗವೆನಿಸಿದೆ. ಸರ್ವತೋಮುಖವಾದ ರಾಜಕೀಯ – ಸಾಂಸ್ಕೃತಿಕ ಸಾಧನೆಗಳಿಂದ ಈ ಕಾಲವು ಇಡೀ ಭಾರತದ ಚರಿತ್ರೆಯಲ್ಲಿಯೂ ಪ್ರಮುಖ ಘಟ್ಟವೆನಿಸಿದೆ. ವಿಜಯನಗರ ಕಾಲದ ಶ್ರೀಮಂತಿಕೆಯ ಶಿಲ್ಪಕಲೆ, ವರ್ಣಚಿತ್ರಕಲೆ, ವಾಸ್ತುಕಲೆ ಮುಂತಾದುವುಗಳ ಜೊತೆಗೆ ನಾಣ್ಯ ಮುದ್ರಣದಲ್ಲಿಯೂ ತನ್ನದೇ ಆದ ಸ್ಥಾನಗಳಿಸಿದೆ. ಈ ಕಾಲವು ಸಮೃದ್ಧವಾಗಿದ್ದಿತೆಂದು ಆ ಕಾಲದಲ್ಲಿ ನಮ್ಮ ದೇಶದಲ್ಲಿ ಸಂಚರಿಸಿದ ವಿದೇಶಿ ಇತಿಹಾಸಕಾರರಿಂದ ವರ್ಣಿತವಾಗಿದೆ. ಈ ಮಾತನ್ನು ವಿಜಯನಗರ ಕಾಲದ ಚಿನ್ನದ ನಾಣ್ಯಗಳು ಸಮರ್ಥಿಸುತ್ತವೆ. ಹತ್ತಾರು ನಮೂನೆಯ ಚಿನ್ನದ, ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ವಿವಿಧ ಮೌಲ್ಯಗಳಲ್ಲಿ ಅಚ್ಚಾಗಿವೆ. ನಾಣ್ಯಗಳ ಮೇಲಿನ ಬರಹದಲ್ಲಿಯೂ ಮತ್ತು ಅವುಗಳ ಮೇಲೆ ಮುದ್ರಿತವಾದ ದೇವತೆಗಳ ಚಿತ್ರದಲ್ಲಿಯೂ ವಿಶೇಷ ವೈವಿಧ್ಯತೆ ಕಾಣಬರುತ್ತದೆ. ವಿಜಯನಗರದ ನಾಣ್ಯಗಳು ಜನಾನುರಾಗಿಯಾಗಿದ್ದುದಲ್ಲದೆ ಅವು ಕರ್ನಾಟಕದ ಮುಂದಿನ ಪೀಳಿಗೆಯ ನಾಣ್ಯಗಳಿಗೆ ಮಾದರಿಯಾಗಿಯೂ ಉಳಿದಿವೆ. ನಾಯಕರುಗಳು, ಪಾಳೆಗಾರರು, ಹೈದರ್, ಟಿಪ್ಪುಸುಲ್ತಾನ್ ಮುಂತಾದವರ ನಾಣ್ಯಗಳು ವಿಜಯನಗರದ ನಾಣ್ಯಗಳಿಂದ ವಿಶೇಷವಾಗಿ ಪ್ರಭಾವಿತಗೊಂಡಿದ್ದುವು. ಈ ಎಲ್ಲ ಕಾರಣಗಳಿಂದಾಗಿ ವಿಜಯನಗರ ಅರಸರ ಆಳ್ವಿಕೆಯ ಕಾಲವನ್ನು ಕರ್ನಾಟಕದ ಇತಿಹಾಸದ ವೈಭವ ಯುಗದ ಕಾಲವೆಂದು ಸಂಶಯವಿಲ್ಲದೆ ಕರೆಯಬಹುದು.

ನಾಣ್ಯ ಮುದ್ರಣ ಪದ್ಧತಿಯಲ್ಲಿ ವಿಶೇಷವಾದ ಸುಧಾರಣೆಗಳನ್ನು ವಿಜಯನಗರದರಸರು ಮಾಡಿದರು. ಪ್ರಾಚೀನ ಕಾಲದಿಂದಲೂ ಕಪ್ಪಕಾಣಿಕೆ, ತೆರಿಗೆಗಳನ್ನು ನಾಣ್ಯರೂಪದಲ್ಲಿಯೂ ಮತ್ತು ಅದಕ್ಕಿಂತ ವಿಶೇಷವಾಗಿ ಧಾನ್ಯರೂಪದಲ್ಲಿ ಕೊಡುವ ಪದ್ಧತಿಯು ಬಳಕೆಯಲ್ಲಿದ್ದಿತು. ಹರಿಹರ ರಾಜನು ಇದನ್ನು ತಪ್ಪಿಸಿ ತೆರಿಗೆಗಳನ್ನು ನಾಣ್ಯರೂಪದಲ್ಲಿಯೇ ಸರಕಾರಕ್ಕೆ ಪಾವತಿ ಮಾಡಬೇಕೆಂದು ವಿಧಿಸಿದನು. ಇದಕ್ಕೆ ತಕ್ಕಂತೆ ಹೊಸಮೌಲ್ಯದ ನಾಣ್ಯಗಳನ್ನು ಟಂಕಸಾಲೆಯಲ್ಲಿ ಮುದ್ರಿಸುವುದು ಅವಶ್ಯಕವೆನಿಸಿತು. ನಾಣ್ಯಗಳನ್ನು ಖಚಿತವಾದ ರೂಪ ಮತ್ತು ತೂಕದಲ್ಲಿ ಮುದ್ರಿಸುವುದು, ಅವುಗಳ ಮೇಲಿನ ಬರಹ ಮತ್ತು ಚಿಹ್ನೆಗಳ ಮೇಲೆ ಹತೋಟಿ ಹೊಂದಿರುವುದು ಅವಶ್ಯಕವಾಯಿತು. ಇದರಿಂದ ನಾಣ್ಯಗಳಲ್ಲಿ ಏಕರೂಪವಾದ ಚಿತ್ರ, ತೂಕ ಹೊಂದಿರುವುದು ಸಾಧ್ಯವಾಯಿತು. ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆಯಲ್ಲಿ ಅನೇಕ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಈ ಎಲ್ಲ ಕ್ರಮಗಳಿಂದ ನಾಣ್ಯ ಮುದ್ರಣದಲ್ಲಿ ಸುಧಾರಣೆ ಉಂಟಾಯಿತು.

ವಿಜಯನಗರದ ಇತಿಹಾಸದಲ್ಲಿ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ರಾಜಮನೆತನಗಳು ರಾಜ್ಯಭಾರಮಾಡಿದವು. ಪ್ರತಿಯೊಂದು ವಂಶದ ಅರಸರೂ ತಮ್ಮ ಅಭಿಮಾನ ದೇವತೆಗಳ ಚಿತ್ರಗಳನ್ನು ತಮ್ಮ ನಾಣ್ಯಗಳ ಮೇಲೆ ಅಚ್ಚುಹಾಕಿಸಿದರು.

ಸಂಗಮ ವಂಶದ ಅರಸರುಗಳು ತಮ್ಮ ನಾಣ್ಯದಲ್ಲಿ ಹನುಮಂತ, ಗರುಡ, ನಂದಿ, ಆನೆ, ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಬ್ರಹ್ಮ ಸರಸ್ವತಿ ಮತ್ತು ನರಸಿಂಹ ದೇವರುಗಳ ಚಿತ್ರಗಳನ್ನು ಮುದ್ರಿಸಿದ್ದಾರೆ. ಸಾಳುವ ವಂಶದ ಅರಸರುಗಳು ತಮ್ಮ ನಾಣ್ಯಗಳಲ್ಲಿ ಮುದ್ರಿಸಿರುವ ಚಿತ್ರಗಳು ಕಂಡುಬಂದಿಲ್ಲ. ತುಳುವ ವಂಶದ ರಾಜರುಗಳು ತಮ್ಮ ನಾಣ್ಯಗಳ ಮೇಲೆ ಸಿಂಹ, ವೆಂಕಟೇಶ್ವರ, ಬಾಲಕೃಷ್ಣ, ಉಮಾಮಹೇಶ್ವರ, ನಂದಿ, ಗಂಡಭೇರುಂಡ, ಗರುಡ, ಲಕ್ಷ್ಮೀನಾರಾಯಣ ಮುಂತಾದ ದೇವರುಗಳ ಚಿತ್ರದ ನಾಣ್ಯಗಳನ್ನು ಮುದ್ರಿಸಿದ್ದಾರೆ. ಆರವೀಡು ವಂಶಾವಳಿಯ ರಾಜರುಗಳು ತಮ್ಮ ನಾಣ್ಯಗಳ ಮೇಲೆ ಶ್ರೀರಾಮ, ಶಂಖ, ಚಕ್ರ, ಗರುಡ, ವರಾಹ, ನಂದಿ, ಹನುಮಂತ, ವೆಂಕಟೇಶ ಮುಂತಾದ ದೇವತೆಗಳ ಚಿತ್ರಗಳನ್ನು ಬಳಸಿಕೊಂಡಿದ್ದಾರೆ. ಈ ಎಲ್ಲ ನಾಲ್ಕು ವಂಶಾವಳಿಯ ವಿಜಯನಗರದರಸರು ಧಾರ್ಮಿಕ ಮತಾವಲಂಬನೆಯಲ್ಲಿ ಸಮಾನತೆ ತೋರಿ ಶೈವ–ವೈಷ್ಣವ ದೇವತೆಗಳ ಚಿತ್ರ ಬಳಸುವುದರಲ್ಲೂ, ಪಂಪಾಪತೀಶ್ವರನ ಹಾಗೂ ವಿಜಯವಿಠ್ಠಲನ ದೇವಾಲಯಗಳನ್ನು ತಮ್ಮ ರಾಜಧಾನಿಯಲ್ಲಿ ಕಟ್ಟಿಸಿ ಸಮಾನಭಾವದಿಂದ ಪ್ರೋತ್ಸಾಹ ನೀಡುತ್ತಿದ್ದರೆಂದು ತಿಳಿದುಬಂದಿದೆ.

ವಿಜಯನಗರದರಸರ ನಾಣ್ಯಗಳ ಹಿಂಭಾಗದಲ್ಲಿ ಕಂಡುಬರುವ ಬರಹಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಸಾಮಾನ್ಯವಾಗಿ ಈ ನಾಣ್ಯಗಳ ಮೇಲೆ ಕನ್ನಡ, ತೆಲುಗು ಮತ್ತು ದೇವನಾಗರಿ ಲಿಪಿಯಲ್ಲಿ ಬರಹಗಳನ್ನು ನೋಡುತ್ತೇವೆ. ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಮೊದಲನೆ ಹರಿಹರ ಮತ್ತು ಬುಕ್ಕರಾಯರು ತಮ್ಮ ನಾಣ್ಯಗಳ ಮೇಲೆ ಕನ್ನಡ ಲಿಪಿಯಲ್ಲಿ ಮುದ್ರಿಸಿರುವುದು ಕಂಡು ಬಂದಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪಕರಿಗೆ ಕನ್ನಡದ ಅಭಿಮಾನ, ಅಪರೂಪ ಆಸಕ್ತಿ ಇತ್ತೆಂದು ತಿಳಿಯುತ್ತದೆ. ವಿಜಯನಗರ ಸ್ಥಾಪನೆ ಕನ್ನಡಿಗರಿಂದಲೇ ಎನ್ನುವ ಅಂಶ ಇದನ್ನು ಸಮರ್ಥಿಸುತ್ತದೆ. ಹರಿಹರ ಮತ್ತು ಇಮ್ಮಡಿ ಬುಕ್ಕರಾಯರ ನಾಣ್ಯಗಳ ಮೇಲೆ ನಂದಿ ನಾಗರಿ ಲಿಪಿಯ ಬರಹಗಳಿವೆ. ದೇವರಾಯನ ತಾಮ್ರ ನಾಣ್ಯಗಳ ಮೇಲೆ ಕನ್ನಡ ಲಿಪಿಯೂ ಚಿನ್ನದ ನಾಣ್ಯಗಳ ಮೇಲೆ ನಾಗರಿ ಲಿಪಿ ಬರಹವೂ ಇದೆ. ಕೃಷ್ಣದೇವರಾಯನ ನಾಣ್ಯಗಳ ಮೇಲೆ ಕನ್ನಡ ಮತ್ತು ನಾಗರಿ ಲಿಪಿಗಳ ಬರಹಗಳಿವೆ. ವಿಜಯನಗರದ ಕೊನೇ ಅರಸರ ನಾಣ್ಯಗಳ ಮೇಲೆ ತೆಲುಗು ಲಿಪಿ ಬರಹಗಳಿರುವುದು ಕಂಡುಬಂದಿದೆ.

ವಿಜಯನಗರದರಸರ ಆಳ್ವಿಕೆಯಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರಗಳ ವಿವಿಧ ಮೌಲ್ಯದ ನಾಣ್ಯಗಳು ಬಳಕೆಯಲ್ಲಿದ್ದವು. ಆ ಕಾಲದ ಸಾಹಿತ್ಯ ಗ್ರಂಥಗಳಿಂದ ಮತ್ತು ಶಾಸನಗಳಿಂದ ಇವುಗಳ ವಿವರ ತಿಳಿದುಬರುತ್ತದೆ. ಅನೇಕ ರೀತಿಯ ಚಿನ್ನದ ನಾಣ್ಯಗಳಿದ್ದವು. ಅವುಗಳನ್ನು ಗದ್ಯಾಣ, ವರಾಹ, ಪೊನ್ ಅಥವಾ ಹೊನ್ನು, ಪ್ರತಾಪ, ಕಾಟಿ, ಪಣ ಮತ್ತು ಹಾಗತಾಳ್ ಎಂಬುದಾಗಿಯೂ ಕರೆಯುತ್ತಿದ್ದರು. ತಾರ್ ಎಂಬುದು ಬೆಳ್ಳಿಯ ನಾಣ್ಯ, ಪಣ, ಜಿತರ್ ಮತ್ತು ಕಾಸು ಎಂಬುವು ತಾಮ್ರದ ನಾಣ್ಯಗಳು.

ವಿಜಯನಗರವು ತನ್ನ ವೈಭವದ ಸರ್ವೋಚ್ಚತೆಯನ್ನು ಪಡೆದು ಮೆರೆಯುತ್ತಿದ್ದಾಗ ಅಬ್ದುರ್‌ರಜಾಕ್ ಎಂಬ ಇತಿಹಾಸಕಾರನು ತನ್ನ ಬರವಣಿಗೆಯಲ್ಲಿ ಈ ಕಾಲದ ವಿವಿಧ ನಾಣ್ಯಗಳ ವಿಷಯ ಮತ್ತು ಮೌಲ್ಯಗಳನ್ನು ನಿರೂಪಿಸಿದ್ದಾನೆ. ಅದರಂತೆ ಗದ್ಯಾಣ ಮತ್ತು ವರಾಹ ಸಮಾನ ಬೆಲೆಯವು. ಪ್ರತಾಪ ನಾಣ್ಯಕ್ಕೆ ಅರ್ಧ ವರಾಹ ಸಮವೆಂದೂ, ಪ್ರತಾಪ ನಾಣ್ಯಕ್ಕೆ 10 ಪಣ ನಾಣ್ಯಗಳು ಸಮವೆಂದೂ, 1 ಪಣಕ್ಕೆ 6 ತಾರ್ (ಬೆಳ್ಳಿ ನಾಣ್ಯ) ಸಮವೆಂದೂ ನಿರೂಪಿಸಿದ್ದಾನೆ. ಈ ನಾಣ್ಯಗಳಲ್ಲದೆ ಘಟ್ಟಿ ವರಾಹ, ಶುದ್ಧ ವರಾಹ, ದೊಡ್ಡ ವರಾಹ ಎಂಬ ನಾಣ್ಯಗಳ ಹೆಸರು ಶಾಸನಗಳಲ್ಲಿ ಕಂಡು ಬಂದಿವೆಯೇ ಹೊರತು ಆ ನಾಣ್ಯಗಳ ಪರಿಚಯ ನಮಗಾಗಿಲ್ಲ.

ಮೊದಲನೆ ಹರಿಹರ ಮತ್ತು ಬುಕ್ಕರಾಯರ ನಾಣ್ಯಗಳಲ್ಲಿ ಹನುಮಂತನ ಚಿತ್ರಗಳಿವೆ ಮತ್ತು ಶ್ರೀವೀರ ಬುಕ್ಕರಾಯ ಎಂಬ ಕನ್ನಡ ಲಿಪಿಯ ಚಿನ್ನದ ನಾಣ್ಯಗಳು ದೊರಕಿವೆ. ಇಮ್ಮಡಿ ಹರಿಹರನು ಅಚ್ಚುಹಾಕಿಸಿದ ನಾಣ್ಯಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಈತನ ಹೆಸರಿನಲ್ಲಿ ಐದು ವಿಧದ ನಾಣ್ಯಗಳನ್ನು ಕಾಣಲಾಗಿದೆ. ಹಿಂಭಾಗದಲ್ಲಿ ಶ್ರೀಪ್ರತಾಪ ಹರಿಹರ ಎಂಬ ಬರಹವಿದೆ. ಮುಂಬದಿಯಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಬ್ರಹ್ಮ ಸರಸ್ವತಿ, ಲಕ್ಷ್ಮೀ ನರಸಿಂಹ ಮತ್ತು ನಂದಿಯ ಚಿತ್ರಗಳಿವೆ. ಉಮಾಮಹೇಶ್ವರರ ಚಿನ್ನದ ನಾಣ್ಯಗಳು ಎಲ್ಲಕ್ಕಿಂತ ಬಲು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಮೊದಲನೆ ದೇವರಾಯನ ನಾಣ್ಯಗಳಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ನಂದಿ ಮುಂತಾದ ಚಿತ್ರಗಳುಳ್ಳ ನಾಣ್ಯಗಳು ಕಂಡು ಬಂದಿವೆ. ಎರಡನೆ ದೇವರಾಯನ ನಾಣ್ಯಗಳಲ್ಲಿ ಆನೆಯ ಚಿತ್ರವನ್ನು ಹೊಂದಿರುವ ನಾಣ್ಯಗಳೇ ವಿಶೇಷವಾಗಿ ಕಂಡುಬರುತ್ತವೆ. ಶ್ರೀಪ್ರತಾಪ ದೇವರಾಯ ಎಂಬ ಬರಹವನ್ನೂ ಹೊಂದಿರುವ ಇವನ ನಾಣ್ಯಗಳಲ್ಲಿ ಅಲಂಕೃತವಾದ ಆನೆಯ ಚಿತ್ರವಿದೆ. "ರಾಯಗಜ ಗಂಡಭೇರುಂಡ" ಎಂಬ ಇವನ ನಾಣ್ಯವು ಬಹಳ ಸುಂದರವಾದ ನಾಣ್ಯವೆನಿಸಿದೆ.

ಕೃಷ್ಣದೇವರಾಯನ ನಾಣ್ಯಗಳು ಕಲಾತ್ಮಕವಾಗಿಯೂ ವೈವಿಧ್ಯಪೂರ್ಣವಾಗಿಯೂ ಇವೆ. ಈತನು ಎರಡು ವರಾಹ, ವರಾಹ, ಅರ್ಧವರಾಹ, ಕಾಲುವರಾಹ, ಹಣ ಮೊದಲಾದ ಚಿನ್ನದ ನಾಣ್ಯಗಳನ್ನು, ತಾರ್ ಎಂಬ ಬೆಳ್ಳಿಯ ನಾಣ್ಯಗಳನ್ನು, ಜಿತರ್ ಕಾಸು ಎಂಬ ತಾಮ್ರದ ನಾಣ್ಯಗಳನ್ನು ಮುದ್ರಿಸಿದನು. ಕೃಷ್ಣದೇವರಾಯನು ವೆಂಕಟೇಶ್ವರ, ಶಿವ ಪಾರ್ವತಿ, ಬಾಲಕೃಷ್ಣ ವೃಷಭ (ನಂದಿ) ಮತ್ತು ಗರುಡ ಈ ದೇವತೆಗಳ ಚಿತ್ರಗಳುಳ್ಳ ನಾಣ್ಯಗಳನ್ನು ಮುದ್ರಿಸಿದನು. ಈತನ ಕಾಲದಲ್ಲಿ ತಿರುಪತಿ ವೆಂಕಟೇಶನ ದೇವಾಲಯವು ಪುನರುಜ್ಜೀವನಗೊಂಡು ವಿಶೇಷ ಖ್ಯಾತಿಗೆ ಬಂದಿತು. ಕೃಷ್ಣದೇವರಾಯನು ಈ ದೇವಾಲಯಕ್ಕೆ ಅನೇಕ ದತ್ತಿಗಳನ್ನು ಕೊಟ್ಟನು. ಕಿರೀಟಧಾರಿಯಾದ ವೆಂಕಟೇಶನು ಕೈಯಲ್ಲಿ ಶಂಖ-ಚಕ್ರಗಳನ್ನು ಧರಿಸಿ ನಿಂತಿರುವ ನಾಣ್ಯವು ಆತನ ಎಲ್ಲಾ ನಾಣ್ಯಗಳಲ್ಲಿ ಬಹಳ ಜನಾನುರಾಗಿಯಾಯಿತು. ಈ ನಾಣ್ಯವು ಸುಂದರವಾಗಿ ರೂಪಿತವಾಗಿದೆ. ಈ ನಾಣ್ಯಗಳ ಹಿಂಭಾಗದಲ್ಲಿ ಕೃಷ್ಣದೇವರಾಯ ಎಂಬ ಬರಹವಿದೆ. ಬಾಲಕೃಷ್ಣನ ನಾಣ್ಯವೂ ಕೂಡ ಬಹಳ ಜನಾನುರಾಗಿಯಾಯಿತು. ಅಂಬೆಗಾಲಿಡುತ್ತಿರುವ ಬಾಲಕೃಷ್ಣನ ಚಿತ್ರವನ್ನು ಬಹಳ ಸುಂದರವಾಗಿ ಮುದ್ರಿಸಿದೆ. ಇಕ್ಕೇರಿ ನಾಯಕರುಗಳು, ಚಿತ್ರದುರ್ಗದ ಪಾಳೆಯಗಾರರು ಮತ್ತು ಇಕ್ಕೇರಿ ಸದಾಶಿವ ನಾಯಕರ ನಾಣ್ಯಗಳಲ್ಲಿ ಶಿವಪಾರ್ವತಿಯರ ಚಿತ್ರವೂ ಹಿಂಬದಿಯಲ್ಲಿ ಶ್ರೀಸದಾಶಿವ ಎಂಬ ಲಿಪಿಯೂ ಇದೆ. ಚಿತ್ರದುರ್ಗದ ಪಾಳೆಯಗಾರರ ನಾಣ್ಯಗಳಲ್ಲಿ ಒಂದು ಕಡೆಯಲ್ಲಿ ದುರ್ಗಿಯ ಚಿತ್ರವೂ ಹಿಂಬದಿಯಲ್ಲಿ ನಾಯಕರಾಯರೆಂಬ ನಾಗರಿ ಲಿಪಿಯೂ ಬರೆದಿದೆ. ಈ ನಾಣ್ಯಗಳನ್ನು ದುರ್ಗಿ ಪಗೋಡವೆಂದು ಕರೆದಿದ್ದಾರೆ.

ಪಾಳೆಯಗಾರ ಕೆಂಪೇಗೌಡನು ತನ್ನ ಚಿನ್ನದ ನಾಣ್ಯಗಳನ್ನು ಕುಣಿಗಲ್‌ನಲ್ಲಿ ಮುದ್ರಿಸಿದನು. ಇವುಗಳನ್ನು ಕುಣಿಗಲ್ ಹಣವೆಂದು ಕರೆದನು. ಕುಣಿಗಲ್‌ನಲ್ಲಿ ಕೆಂಪೇಗೌಡನ ಟಂಕಸಾಲೆ ಇತ್ತು. ಬಾಲಕೃಷ್ಣನು ವಿವಿಧ ಭಂಗಿಗಳಲ್ಲಿ ಕುಳಿತಿರುವ ನಾಣ್ಯಗಳನ್ನು ಮುದ್ರಿಸಿದ್ದಾನೆ. ಈತನ ಗರುಡ ನಮೂನೆಯ ನಾಣ್ಯಗಳಲ್ಲಿ ವೀರಾಸನ ಭಂಗಿಯಲ್ಲಿರುವ ಗರುಡನು ಕಿರೀಟಧಾರಿಯಾಗಿ ನಿಂತಿದ್ದಾನೆ. ಉಮಾಮಹೇಶ್ವರ, ನಂದಿ ನಮೂನೆಯ ನಾಣ್ಯಗಳು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಅಚ್ಯುತರಾಯನ ನಾಣ್ಯಗಳಲ್ಲಿ ಗಂಡಭೇರುಂಡ ಚಿತ್ರವಿರುವ ನಾಣ್ಯಗಳು ಗಮನಾರ್ಹವಾಗಿದೆ. ಹಾರುತ್ತಿರುವ ಈ ಪಕ್ಷಿ ತನ್ನ ಎರಡು ಕೊಕ್ಕುಗಳಲ್ಲಿ ಹಾಗೂ ತನ್ನ ಎರಡು ಕಾಲುಗಳಲ್ಲಿ ಎರಡೆರಡು ಆನೆಗಳನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಹಿಂಬದಿಯಲ್ಲಿ ಶ್ರಿಪ್ರತಾಪ ಅಚ್ಯುತರಾಯ ಎಂಬ ಬರಹವಿದೆ. ಸದಾಶಿವರಾಯನ ನಾಣ್ಯಗಳನ್ನು ಲಕ್ಷ್ಮೀನಾರಾಯಣನ ಚಿತ್ರ, ಉಮಾಮಹೇಶ್ವರರ ಚಿತ್ರ ಹಾಗೂ ಗರುಡ ಮುಂತಾದ ದೇವತೆಗಳ ಚಿತ್ರಗಳಿವೆ. ಹಿಂಭಾಗದಲ್ಲಿ ಶ್ರೀ ಪ್ರತಾಪ ಸದಾಶಿವರಾಯ ಎಂಬ ಬರಹವಿದೆ.

ಅರವೀಡು ವಂಶದರಸರು ವೈಷ್ಣವ ಮತಾನುಯಾಯಿಗಳಾಗಿದ್ದರು. ತಿರುಪತಿ ವೆಂಕಟೇಶ್ವರನ ಬದಲು ಶ್ರೀರಾಮ ದೇವರ ಚಿತ್ರ ಮುದ್ರಿಸಿದರು. ಶ್ರೀರಾಮನು ಇವರ ಆರಾಧ್ಯ ದೈವ. ತಿರುಮಲರಾಯನ ನಾಣ್ಯಗಳಲ್ಲಿ ವೆಂಕಟೇಶ್ವರನ ಚಿತ್ರವಿರುವ ನಾಣ್ಯಗಳು ಸಿಕ್ಕಿಲ್ಲ.

ಶ್ರೀರಾಮ, ಶಂಖ, ಚಕ್ರ, ಗರುಡ, ವರಾಹ, ಆನೆ, ನಂದಿ, ಲಕ್ಷ್ಮೀ ಸಮೇತ ವಿಷ್ಣು ಇವರ ಚಿತ್ರಗಳನ್ನು ನೋಡುತ್ತೇವೆ. ಶ್ರೀರಾಮ ಚಿತ್ರವಿರುವ ನಾಣ್ಯಗಳಲ್ಲಿ ರಾಮನು ಸೀತೆಯೊಂದಿಗೆ ಕುಳಿತಿದ್ದಾನೆ. ಲಕ್ಷ್ಮಣನು ಹಿಂದೆ ನಿಂತಿದ್ದಾನೆ. ಈ ನಾಣ್ಯದ ಹಿಂಬದಿಯಲ್ಲಿ ಶ್ರೀತಿರುಮಲರಾಯ ಎಂಬ ಬರಹವಿದೆ. ಶ್ರೀರಂಗರಾಯ ಮತ್ತು ವೆಂಕಟಪತಿರಾಯರ ನಾಣ್ಯಗಳಲ್ಲಿ ವೆಂಕಟೇಶ್ವರನ ಚಿತ್ರವೂ ಕಂಡು ಬಂದಿದೆ.

ವಿಜಯನಗರ ಸಾಮ್ರಾಜ್ಯದ ಪತನಾನಂತರವೂ ಅನೇಕ ಸಣ್ಣ ಪುಟ್ಟ ರಾಜರುಗಳೂ ವಿಜಯನಗರದ ನಾಣ್ಯಗಳನ್ನು ಅನುಕರಿಸಿದರು. ಇಕ್ಕೇರಿಯ ಸದಾಶಿವ ನಾಯಕರೂ, ಚಿತ್ರದುರ್ಗದ ನಾಯಕರುಗಳೂ ಅನುಕರಿಸಿದ್ದಾರೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನರೂ ಕೂಡ ಈ ನಾಣ್ಯಗಳಲ್ಲಿದ್ದ ಮೂರ್ತಿ ರೂಪಗಳನ್ನು ತಮ್ಮ ನಾಣ್ಯಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಬೆಂಗಳೂರಿನ ಸ್ಥಾಪಕ ಪಾಳೆಯಗಾರ ಕೆಂಪೇಗೌಡನು ತನ್ನ ಚಿನ್ನದ ನಾಣ್ಯಗಳಿಗೆ ಕುಣಿಗಲ್ ಹಣವೆಂದು ಕರೆದು ದೇವತೆಗಳ ಚಿತ್ರಗಳಿಗೆ ವಿಜಯನಗರದ ಅರಸರ ನಾಣ್ಯಗಳನ್ನು ಅನುಕರಿಸಿದ್ದಾರೆ.

ದಕ್ಷಿಣ ಭಾರತದ ಅಚ್ಚುಹಾಕಿಸಿ ಮುದ್ರಿಸಿದ ನಾಣ್ಯಗಳನ್ನು ವಿವಿಧ ಲೋಹಗಳಲ್ಲಿ ತೂಕಕ್ಕನುಗುಣವಾಗಿ ಬೆಲೆ ನಿರ್ಧರಿಸಿ ಚಲಾವಣೆ ಆರಂಭಿಸಿದ ಕೀರ್ತಿ ವಿಜಯನಗರದರಸರದು. ಇವರ ಬಗ್ಗೆ ಕೂಲಂಕಷ ವಿಮರ್ಶೆ ನಡೆಯಬೇಕು. ಸಂಗ್ರಹದಲ್ಲಿರುವ ನಾಣ್ಯಗಳ ಮಾಹಿತಿ ಸಕಲರಿಗೂ ಸೇರಿ ಅವುಗಳು ನಿಯಮಬದ್ಧವಾದ ರೀತಿಯಲ್ಲಿ ಪ್ರಕಾಶಿತವಾಗಬೇಕು. ನಾಣ್ಯಗಳ ಮೇಲೆ ಮುದ್ರಿಸಿರುವ ದೇವತೆಗಳನ್ನು ಪೂಜೆಗೆ ಇಟ್ಟು ಕೊಂಡಿರುವವರು ಸಾಕಷ್ಟು ಜನ, ಇಂತಹ ಸಂಗ್ರಹಗಳಲ್ಲಿರುವ ನಾಣ್ಯಗಳೂ ಹೊರಬಂದು ನಾಣ್ಯ ಇತಿಹಾಸ ಸಮಗ್ರವಾಗಿ ರಚಿತವಾಗಬೇಕೆಂಬುದು ಎಲ್ಲರ ಆಕಾಂಕ್ಷೆ.

8. ವಿಜಯನಗರ ಕಾಲದ ಸ್ಥಪತಿಗಳು ಮತ್ತು ಶಿಲ್ಪಿಗಳು

– ಹೆಚ್.ಟಿ. ತಳವಾರ್

ಪ್ರಾಚೀನ ಭಾರತದ ಕಲಾಕಾರರು ದೇವಾಲಯಗಳ ನಿರ್ಮಾಣ ಮತ್ತು ಶಿಲ್ಪಗಳನ್ನು ಕೆತ್ತುವುದು ಒಂದು ಪವಿತ್ರ ಕೆಲಸವೆಂದು ತಿಳಿದಿದ್ದರು. ತಾವು ನಿರ್ಮಾಣ ಮಾಡಿದ ದೇವಾಲಯಗಳ ಮೇಲಾಗಲಿ ಅಥವಾ ಶಿಲ್ಪಗಳ ಮೇಲಾಗಲಿ ತಮ್ಮ ಹೆಸರುಗಳನ್ನು ನಮೂದಿಸುವ ಆಸಕ್ತಿ ಅವರಿಗೆ ಇರಲಿಲ್ಲವೆಂದು ತೋರುತ್ತದೆ. ಆದರೂ ಕೂಡಾ ಕರ್ನಾಟಕದಲ್ಲಿ ಬಾದಾಮಿಯ ಚಾಲುಕ್ಯರ, ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ಕಾಲಗಳಲ್ಲಿ ಕೆಲವರು ತಮ್ಮ ಹೆಸರುಗಳನ್ನು ಶಿಲ್ಪಗಳ ಮೇಲೆ ನಮೂದಿಸಿರುವುದು ಕಂಡು ಬರುತ್ತದೆ. ಈ ಮೇಲಿನ ರಾಜ ಮನೆತನಗಳ ಸ್ಥಪತಿಗಳು ಮತ್ತು ಶಿಲ್ಪಿಗಳ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ.[1] ಆದರೆ ವಿಜಯನಗರ ಕಾಲದಲ್ಲಿ ಶಿಲ್ಪಿಗಳ ಮತ್ತು ಸ್ಥಪತಿಗಳ ಹೆಸರುಗಳನ್ನು ನಮೂದಿಸುವ ಪದ್ಧತಿಯು ಸ್ಥಗಿತವಾಗಿರುವುದು ಕಂಡುಬರುತ್ತದೆ. ಆದರೂ ಕೂಡಾ ಅವರ ಬಗ್ಗೆ ಶಾಸನಗಳಲ್ಲಿರುವ ಉಲ್ಲೇಖಗಳನ್ನು ಗಮನಿಸಿ ಒಂದು ಚಿತ್ರವನ್ನು ರೂಪಿಸುವ ಪುಟ್ಟ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸ್ಥಪತಿಗಳು:

ನಾವು ಕರ್ನಾಟಕದಲ್ಲಿಯ ವಿಜಯನಗರ ಶಾಸನಗಳನ್ನು ಅಧ್ಯಯನ ಮಾಡಿದಾಗ ಮೊದಲನೆಯ ಬುಕ್ಕನ ಕಾಲದಲ್ಲಿ ಜಡೆಯ ರಾಮೋಜನು ಚಿತ್ರದುರ್ಗದ ಸಿದ್ಧನಾಥ ದೇವರಿಗೆ ಕಲ್ಲು ಉಪ್ಪರಿಗೆಯನ್ನು ಕಟ್ಟಿ, ಉಯ್ಯಾಲೆಯನ್ನು ನಿರ್ಮಾಣ ಮಾಡಿ, ಶಾಸನವನ್ನು ಬರೆದದ್ದು ಕಂಡುಬರುತ್ತದೆ.[2] ಅದೇ ರೀತಿಯಾಗಿ 15ನೇ ಶತಮಾನದಲ್ಲಿ ಎರಡನೆಯ ಹರಿಹರನ ಕಾಲದಲ್ಲಿ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಗುಲಗಂಜಿಯಲ್ಲಿ ವಿಶ್ವೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳನ್ನು ತಿಪ್ಪೋಜನ ಮಗ ಮುದ್ದೋಜನು ಕಟ್ಟಿದ್ದು ತಿಳಿದುಬರುತ್ತದೆ.[3] ವಿರೂಪಾಕ್ಷನ ಕಾಲದಲ್ಲಿ ಚಿಂತಾಯಕ ದೇವಣ್ಣನು ಹಂಪಿ ಹತ್ತಿರ ಕಟ್ಟಿಸಿದ ವಿಜಯನಗರ ಅಣೆಕಟ್ಟನ್ನು ಬೊಮೋಜ ಕಟ್ಟಿದನು.[4]

ಶಿಲ್ಪಿಗಳು:

ವಿಜಯನಗರ ಕಾಲದ ಅನೇಕ ಶಾಸನಗಳು ಶಿಲ್ಪಿಗಳು ವಿಗ್ರಹಗಳನ್ನು, ನಿಸಿದಿಗಳನ್ನು, ವೀರಗಲ್ಲುಗಳನ್ನು ಹಾಗೂ ಶಾಸನಗಳನ್ನು ಕೆತ್ತಿರುವುದನ್ನು ಉಲ್ಲೇಖಿಸುತ್ತವೆ. ಎರಡನೆಯ ದೇವರಾಯನ ಕಾಲದಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿಯ ಹನುಮಂತ ದೇವರ ವಿಗ್ರಹವನ್ನು ಕಲ್ಲೋಜನ ಮಗ ಬಮ್ಮೋಜ ಕೆತ್ತಿದನು.[5] ಅದೇ ರೀತಿಯಾಗಿ ಉತ್ತರ ಕನ್ನಡ ಜಿಲ್ಲೆಯ ಹಾಡುವಳ್ಳಿಯಲ್ಲಿ ಈಸರಾಚಾರಿ ಎರಡು ವೀರಗಲ್ಲುಗಳನ್ನು ಹಾಗೂ ಒಂದು ನಿಸಿದಿಯನ್ನು ಕೆತ್ತಿದನು.[6] ಮತ್ತು ಅದೇ ಜಿಲ್ಲೆಯ ಕೈಕಿಣಿ ಎಂಬಲ್ಲಿ ಕೋಟಿವೋಜನ ಮಗ ಬೈಚಾಚಾರಿ ವೀರಗಲ್ಲನ್ನು ಕೆತ್ತಿದನು.[7] ಮಂಡ್ಯ ಜಿಲ್ಲೆಯ ಅರುವನಹಳ್ಳಿಯಲ್ಲಿ ಬೆಲತೂರಿನ ಮಲಿಯೋಜನು ವೀರಗಲ್ಲಿನ ಶಿಲ್ಪವನ್ನು ಮಾಡಿರುವುದು ಗೋಚರಿಸುತ್ತದೆ.[8] ಶಿವಮೊಗ್ಗ ಜಿಲ್ಲೆಯ ಕೊಲವಳ್ಳಿಯಲ್ಲಿಯ ವೀರಗಲ್ಲನ್ನು ವೀರೋಜನು[9] ಮತ್ತು ಸೌಳಂಗದಲ್ಲಿಯ ವೀರಗಲ್ಲನ್ನು ದೇವೋಜನು ಕೆತ್ತಿರುವುದು ತಿಳಿಯುತ್ತದೆ.[10] ಮುಂದುವರಿಯುತ್ತ ಊರಪೂರ್ವಿಕನ ಮಗನಾದ ಬಸದೋಜನು[11] ಮತ್ತು ಮಾದೋಜ–ನಾಗೋಜ[12] ಹಿರೇ ಅವಲಿಯಲ್ಲಿ ನಿಸಿದಿಗಳನ್ನು ಮಾಡಿರುವುದು ತಿಳಿಯುತ್ತದೆ. ಬಳ್ಳಾರಿ ಜಿಲ್ಲೆಯ ರಾಜಬಾವನಹಳ್ಳಿಯ ಶಾಸನವು ರಾಯೋಜ ಎಂಬ ಶಿಲ್ಪಿಯ ಹೆಸರನ್ನು ಸೂಚಿಸುತ್ತದೆ.[13] ಚಿಕ್ಕಮಗಳೂರು ಜಿಲ್ಲೆಯ ಕರುವಂಗಿ ಶಾಸನವು ಮಲೋಜನ ಹೆಸರನ್ನು ಪ್ರತಿಬಿಂಬಿಸುತ್ತದೆ.[14] ಮುಂದುವರಿಯತ್ತಾ ಬೆಂಗಳೂರು ಜಿಲ್ಲೆಯ ಚಿಕ್ಕಮಾರಲವಾಡಿಯ ಶಾಸನವು ಬಸವಯ್ಯ ಎಂಬ ಶಿಲ್ಪಿಯು ಶಾಸನವನ್ನು ಬರೆದ ಬಗ್ಗೆ ತಿಳಿಸುವುದು.[15] ಲಕ್ಕಣಾಚಾರಿಯ ಮಗ ಆಚಾರ್ಯ ಕಲ್ಲಯ್ಯನು ಶಿಲ್ಪಿಯಾಗಿದ್ದು, ಹಾಸನದಲ್ಲಿಯ ಶಾಸನವನ್ನು ಬರೆದದ್ದು ತಿಳಿಯುವುದು[16] ಹಾಗೂ ಶಿವಮೊಗ್ಗ ಜಿಲ್ಲೆಯ ಸಂಪಗೆಕೋಟೆ ಶಾಸನವನ್ನು ಚಿತ್ರಿಕ ಗೌರಯ್ಯ ಬರೆದದ್ದು ತಿಳಿಯುವುದು.[17]

ಶಿಲ್ಪಿಗಳು ತಾಮ್ರ ಶಾಸನಗಳನ್ನು ಬರೆಯುವುದರಲ್ಲಿಯೂ ಪರಿಣತಿ ಹೊಂದಿದ್ದರು. ಕೋಲಾರ ಜಿಲ್ಲೆಯ ಬೆಸ್ತರಹಳ್ಳಿಯ, ತಾಮ್ರ ಶಾಸನವನ್ನು ನಾಗಿದೇವನು ಕ್ರಿ.ಶ. 1336ದಲ್ಲಿ ಬರೆದನು.[18] ಅದೇ ರೀತಿಯಾಗಿ ಅದೇ ಜಿಲ್ಲೆಯ ಬೊಮ್ಮಸಂದ್ರ[19] ಮತ್ತು ಮುದಿಯನೂರುಗಳಲ್ಲಿ ಎರಡು ತಾಮ್ರ ಶಾಸನಗಳನ್ನು ಬರೆದನು.[20] ಮುದಿಯನೂರು ಶಾಸನವು ಅವನನ್ನು ಶಿಲ್ಪಿ ಎಂದು ಸಂಬೋಧಿಸುವುದು. ಶಿವಮೊಗ್ಗ ಜಿಲ್ಲೆಯ ವಿರುಪಾಪುರ ಶಾಸನವನ್ನು ಶಾಸನಚಾರ್ಯ ನಾಗಿದೇವನು 1394ರಲ್ಲಿ ಬರೆದನು.[21]

ನಮಗೆ ವಿಜಯನಗರ ಕಾಲದ ಕಂಚಿನ ವಿಗ್ರಹಗಳು ಸಾಕಷ್ಟು ದೊರೆತರೂ ಯಾವುದೇ ವಿಗ್ರಹವು ಶಿಲ್ಪಿಗಳ ಹೆಸರನ್ನು ಸೂಚಿಸುವುದಿಲ್ಲ. ಆದರೆ ಬೇಲೂರು ಚೆನ್ನಕೇಶವ ದೇವಾಲಯದ ಕಂಚಿನ ದೀಪಸ್ತಂಬವನ್ನು ಮರಲನಿಂದೋಜನ ಮಕ್ಕಳಾದ ಕಾಳೋಜ ಮತ್ತು ಅನಕೋಜ ಮಾಡಿರುವುದು ತಿಳಿಯುತ್ತದೆ.[22]

ಲಿಪಿಕಾರರು:

ವಿಜಯನಗರದ ಶಾಸನಗಳನ್ನು ಅಧ್ಯಯನ ಮುಂದುವರೆಸುತ್ತ ಹೋದಂತೆ ಶಾಸನಗಳಲ್ಲಿ ಲಿಪಿಕಾರರನ್ನು ಗಮನಿಸಬಹುದು. ಇಲ್ಲಿ ಕೆಲವು ಶಿಲ್ಪಿಗಳು, ಅಕ್ಕಸಾಲಿಗರು, ಕಂಚುಗಾರರು, ಕಮ್ಮಾರರು ಮತ್ತು ಬಡಿಗರು ಶಾಸನಗಳನ್ನು ಕೆತ್ತಿರುವುದು ತಿಳಿಯುತ್ತದೆ. ಬೆಂಗಳೂರು ಜಿಲ್ಲೆಯ ನಾಗಶೆಟ್ಟಿಹಳ್ಳಿಯ ಶಾಸನವನ್ನು ತಿಮ್ಮಯ್ಯನು ಕೆತ್ತಿದ್ದು ತಿಳಿಯುವುದು.[23] ಅದೇ ರೀತಿಯಾಗಿ ಬಳ್ಳಾರಿ ಜಿಲ್ಲೆಯ ದೇವಲಾಪುರ ಶಾಸನವನ್ನು ಗಿರಿಯಣ್ಣನೆಂಬ ಅಕ್ಕಸಾಲಿಗ ಕೆತ್ತಿದನು.[24] ಅದೇ ಜಿಲ್ಲೆಯ ಯಳಪಿಯ ಶಾಸನದ ಕೊನೆಯಲ್ಲಿ ಕಂಚುಗಾರ ಚಿನ್ನೋಜನ ಹೆಸರಿದೆ.[25] ತುಮಕೂರು ಜಿಲ್ಲೆಯ ಗಾಣದಹುಣಸೆ ಶಾಸನವನ್ನು ಕಮ್ಮಾರ ಚಿಕ್ಕಯ್ಯನ ಮಗ ಸಿದ್ದಣ್ಣನು ಬರೆದನು.[26] ಬಳ್ಳಾರಿ ಜಿಲ್ಲೆಯ ಮುತ್ತಿಗಿ ಶಾಸನವನ್ನು ಬಡಗಿ ಪೊಚೋಜನ ಮಗ ದೇಮೋಜನು ಕೆತ್ತಿದನು.[27] ಶಾಸನಗಳನ್ನು ಬರೆದ ನಾಗಿದೇವನನ್ನು ಶಾಸನಾಚಾರ್ಯ ಎಂದು ಕರೆದಿರುವುದನ್ನು ಮೇಲೆ ಗಮನಿಸಿದ್ದೇವೆ. ಹಾಸನ ಜಿಲ್ಲೆಯ ಗೊಲ್ಲರ ಹೊಸಳ್ಳಿಯ ಶಾಸನವನ್ನು ಬರೆದ ವೊಡೆಯಪ್ಪಯ್ಯನ ಮೊಮ್ಮಗನಾದ ಮತ್ತು ಬಸವಾಚಾರಿಯ ಮಗನಾದ ವಿಶ್ವನಾಥನು (ವಿಶ್ವಕರ್ಮರ) ಜಗದ್ಗುರು ಆಗಿದ್ದನು.[28]

ಆನೇಕ ಶಾಸನಗಳು ಲಿಪಿಕಾರರ ಹೆಸರುಗಳನ್ನು ಉಲ್ಲೇಖಿಸುತ್ತವೆ. ಬೆಂಗಳೂರು ಜಿಲ್ಲೆಯ ಮಾಲೂರುಪಟ್ಟಣದ ಶಾಸನವು[29] ಗುಲಿ ಅಲ್ಲಪ್ಪ ಎಂಬ ಲಿಪಿಕಾರನ ಹೆಸರನ್ನು ಸೂಚಿಸಿದರೆ ಅದೇ ಜಿಲ್ಲೆಯ ಹರಿಹರದ ಶಾಸನವು ಮಲ್ಲೆಯನ ಬಗ್ಗೆ ಹೇಳುವುದು.[30] ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಶಾಸನವು ಚಿನ್ನ ಮಲ್ಲೋಜನ ಮಗ ಲಿಂಗೋಜನು ಶಾಸನವನ್ನು ಕೆತ್ತಿರುವುದನ್ನು ತಿಳಿಸುವುದು.[31] ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣದ ಶಾಸನವು ಚೌಡೋಜನ ಮಗ ಚೌಡೋಜನು ಶಾಸನವನ್ನು ಕೆತ್ತಿದ್ದನ್ನು ತಿಳಿಸುವುದು.[32] ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳಮೂಡ ಶಾಸನವು ವೆಂಕೋಜನು ಶಾಸನವನ್ನು ಬರೆದದ್ದನ್ನು ಉಲ್ಲೇಖಿಸುವುದು.[33] ಕೋಲಾರ ಜಿಲ್ಲೆಯ ಕಾಮಸಮುದ್ರದ ಶಾಸನವು ಪಾಪೋಜನು ಶಾಸನವನ್ನು ಬರೆದನೆಂದು ಹೇಳುವುದು.[34] ಮಂಡ್ಯ ಜಿಲ್ಲೆಯ ಅರುವನಹಳ್ಳಿಯ ಶಾಸನವು ಬಯಿರೋಜನ ಬಗ್ಗೆ ಹೇಳುವುದು.[35] ಅದೇ ಜಿಲ್ಲೆಯ ನೆಲಮನೆಯ ಶಾಸನವು ವರದಪಾಚಾರ್ಯರ ಮಗ ಶ್ರೀಗಿರಿ ಶಾಸನವನ್ನು ಕೆತ್ತಿದ್ದನ್ನು ಹೇಳುವುದು.[36] ತುಮಕೂರು ಜಿಲ್ಲೆಯ ಉಜನಿಯಲ್ಲಿ ಸೋಮನಾಥನ ಮಗ ಅಲೋಜನು ಶಾಸನವನ್ನು ಕೆತ್ತಿದನು.[37] ಕೋಟಿಚಾರಿ ಮಗ ಈಸರಾಚಾರಿ ಉತ್ತರ ಕನ್ನಡ ಜಿಲ್ಲೆಯ ಬೈಲೂರಿನಲ್ಲಿ ಶಾಸನವನ್ನು[38] ಮತ್ತು ಕೈಕಿಣಿಯಲ್ಲಿ ವೀರಗಲ್ಲನ್ನು[39] ಕೆತ್ತಿದನು.

ವಿಜಯನಗರ ಕಾಲದಲ್ಲಿ ತಾಮ್ರಶಾಸನವನ್ನು ಬರೆದವರಲ್ಲಿ ನಾಲ್ಕು ಜನರು ಪ್ರಮುಖವಾಗಿ ಕಾಣುತ್ತಾರೆ. ಅವರಲ್ಲಿ ಶಿಲ್ಪಿ ನಾಗಿದೇವನು ನಾಲ್ಕು ತಾಮ್ರ ಶಾಸನಗಳನ್ನು ಕ್ರಿ.ಶ. 1336 ರಿಂದ ಕ್ರಿ.ಶ. 1394ರ ಅವಧಿಯಲ್ಲಿ ಬರೆದರೆ, ವರದಪಾಚಾರ್ಯ ಕ್ರಿ.ಶ. 1430 ರಿಂದ 1432ರಲ್ಲಿ ಮೂರು ತಾಮ್ರ ಶಾಸನಗಳನ್ನು ಬರೆದದ್ದು ಶ್ರೀರಂಗಪಟ್ಟಣ[40] ಮತ್ತು ಶೃಂಗೇರಿ[41] ಶಾಸನಗಳಿಂದ ಕಂಡುಬರುತ್ತದೆ. ಮಂಡ್ಯ ಜಿಲ್ಲೆಯ ನೆಲಮನೆಯ ಕ್ರಿ.ಶ. 1458 ರ ಶಾಸನವನ್ನು ವರದಪಾಚಾರ್ಯನ ಮಗ ಶ್ರೀಗಿರಿಯು ರಚಿಸಿದ್ದನೆಂದು ತಿಳಿಯುತ್ತದೆ.[42] ಮುದ್ದಣಾಚಾರ್ಯನ ಮಗ ವೀರಣನು ಕ್ರಿ.ಶ 1430 ಮತ್ತು 1464ರ ಮಧ್ಯದಲ್ಲಿ ಏಳು ತಾಮ್ರ ಶಾಸನಗಳನ್ನು ಬರೆದದ್ದನ್ನು ಗಮನಿಸಬಹುದು.[43] ಅದೇ ರೀತಿಯಾಗಿ ಮಲ್ಲಣಾಚಾರ್ಯನ ಮಗ ವೀರಣಾಚಾರ್ಯನು ಕ್ರಿ.ಶ. 1512 ಮತ್ತು 1539ರ ಮಧ್ಯದಲ್ಲಿ ಹತ್ತೊಂಬತ್ತು ತಾಮ್ರ ಶಾಸನಗಳನ್ನು ಬರೆದದ್ದು ಕಂಡುಬರುತ್ತದೆ.[44] ಅದೇ ರೀತಿಯಾಗಿ ತಾಮ್ರ ಶಾಸನಗಳನ್ನು ಬರೆದ ಇತರ ಹತ್ತು ಲಿಪಿಕಾರರ ಹೆಸರುಗಳು ಕಂಡುಬರುತ್ತವೆ. ಬೆಂಗಳೂರು ಜಿಲ್ಲೆಯ ಸರ್ಜಾಪುರದಲ್ಲಿ ದೊರೆತ ತಾಮ್ರ ಶಾಸನವನ್ನು ಗಣಪಯನ ಮಗನಾದ ಕಾಮಯಚಾರಿಯು ಬರೆದಿರುವುದು ತಿಳಿಯುತ್ತದೆ.[45] ನೆಲಮಂಗಲದಲ್ಲಿ[46] ದೊರೆತ ತಾಮ್ರ ಪಟವನ್ನು ಮಲ್ಲಣಾಚಾರ್ಯನು ಬರೆದರೆ, ಹಾಸನ ಜಿಲ್ಲೆಯ ಕುದುರೆಗುಂಡಿಯ ತಾಮ್ರ ಶಾಸನವನ್ನು ವೀರಣಾಚಾರ್ಯನ ಮಗ ಅಪ್ಪಣಾಚಾರ್ಯನು ಬರೆದನು.[47]

ಕೋಲಾರ ಜಿಲ್ಲೆಯ ಅಗರದಲ್ಲಿ ದೊರೆತ ತಾಮ್ರಪಟವನ್ನು ಗಣಪಯನ ಮೊಮ್ಮಗನಾದ ಸೋಮನಾಥ ಬರೆದನು.[48] ಮಂಡ್ಯ ಜಿಲ್ಲೆಯ ದೊಡ್ಡಜಟಕದ ತಾಮ್ರ ಶಾಸನವನ್ನು ವೀರಣಾಚಾರಿಯ ಮಗ ಮಲ್ಲಣಾಚಾರಿಯು ಬರೆದನು.[49] ಮತ್ತು ಅದೇ ಜಿಲ್ಲೆಯ ಹೊನ್ನೇನಹಳ್ಳಿಯಲ್ಲಿ ದೊರೆತ ತಾಮ್ರ ಶಾಸನವನ್ನು ವೀರಣನ ಮಗ ವೀರಣಾಚಾರ್ಯನು ಕೆತ್ತಿದನು.[50] ಮೈಸೂರು ಜಿಲ್ಲೆಯ ಸರಗೂರಿನಲ್ಲಿ ದೊರೆತ ತಾಮ್ರ ಪಟವನ್ನು ತಿಪ್ಪಯಾಚಾರ್ಯನ ಮಗ ಭೈರವಚಾರ್ಯನು ಬರೆದನು.[51] ಇದೇ ರೀತಿಯಾಗಿ ಶಿವಮೊಗ್ಗ ಜಿಲ್ಲೆಯ ರಾಮಚಂದ್ರಪುರ[52] ಮತ್ತು ಕೂಡಲಿ[53]ಯ ತಾಮ್ರ ಶಾಸನಗಳನ್ನು ವೀರಣಾಚಾರಿ ಕೆತ್ತಿದನು. ಹಾಗೂ ತುಮಕೂರು ಜಿಲ್ಲೆಯ ತಿಮ್ಮಸಂದ್ರ ಶಾಸನವನ್ನು ವೀರಣನ ಮಗ ಗಣಪಾಚಾರ್ಯನು ಕೆತ್ತಿದನು.[54]

ಉಪಸಂಹಾರ:

ವಿಜಯನಗರ ಶಾಸನಗಳ ಅಧ್ಯಯನದಿಂದ ಮೂರು ಜನ ಸ್ಥಪತಿಗಳನ್ನು ಗುರುತಿಸಬಹುದು. ಜಡೆಯ ರಾಮೋಜ ಮತ್ತು ಮುದ್ದೋಜ ದೇವಾಲಯಗಳನ್ನು ನಿರ್ಮಿಸಿದರೆ, ಬಮ್ಮೋಜನು ಅಣೆಕಟ್ಟನ್ನು ಕಟ್ಟಿರುವನು. ಶಿಲ್ಪಿಗಳಲ್ಲಿ ಕಲ್ಲೋಜನು ಹನುಮಂತದೇವರ ವಿಗ್ರಹವನ್ನು ಕೆತ್ತಿದರೆ

ಉಳಿದವರು ವೀರಗಲ್ಲು, ನಿಸಿದಿಕಲ್ಲು ಮತ್ತು ಶಾಸನಗಳನ್ನು ಕೆತ್ತಿರುವರು. ನಾಗಿದೇವನು ಶಾಸನಾಚಾರ್ಯ ಎಂಬ ಬಿರುದನ್ನು ಹೊಂದಿರುವುದು ಗಮನಾರ್ಹವಾಗಿದೆ.

ಟಿಪ್ಪಣಿಗಳು

1. ಶೇಷಾದ್ರಿ ಎಂ., 1970-71, "ಸ್ಕಲ್ಪ್‌ಟರ್ಸ್ ಆಂಡ್ ಆರ್ಕಿಟೆಕ್ಟ್ಸ್ ಆಫ್ ಎನ್ಸಿಯಂಟ್ ಆಂಡ್ ಮೆಡಿವಲ್ ಕರ್ನಾಟಕ", *ಜರ್ನಲ್ ಆಫ್ ದಿ ಮೈಸೂರ್ ಯುನಿವರ್ಸಿಟಿ,* XXIX & XXX, ಪು. 1-10. ಕೆಲ್ಲಿಸನ್ ಕೊಲ್ಲಿಯರ್, 1990, *ದಿ ಹೊಯ್ಸಳ ಆರ್ಟಿಸ್ಟ್ಸ್ : ದೇರ್ ಐಡೆಂಟಿಟಿ ಆಂಡ್ ಸ್ಟೈಲ್ಸ್,* ಮೈಸೂರು. ಪಾಟೀಲ ಚನ್ನಬಸಪ್ಪ ಎಸ್, 1992, *ಟೆಂಪಲ್ಸ್ ಆಫ್ ರಾಯಚೂರು ಆಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಕರ್ನಾಟಕ, 1000-1325 ಎ.ಡಿ.,* ಮೈಸೂರು, ಪು. 57-61.
2. *ಎಕ,* XI, ಚಿತ್ರದುರ್ಗ 2.
3. *ಅದೇ,* X, ಗೌರಿಬಿದನೂರು 59.
4. *ಎಪ್ರೊರಿ,* 1984-87, ಶಾ.ಸಂ. 1, ಪು. 27.
5. *ಆರಿಇಂಎ,* 1938-39, ಬಿಕೆ. ಸಂ. 82; *ಸೌಇಂಇ,* XX, 234.
6. *ಪ್ರೊರಿಕರೀಇ,* 1939-40, ಸಂ. 45, 49, 52; *ಕಇ* I, ಸಂ. 61.
7. *ಅದೇ,* 1938-39, ಸಂ. 61; *ಕಇ,* I, ಸಂ. 61.
8. *ಎಕ* VII (ಪರಿಷ್ಕೃತ), ಮದ್ದೂರು 92; III, ಮಳವಳ್ಳಿ 18.
9. *ಅದೇ,* VIII, ತೀರ್ಥಹಳ್ಳಿ 23.
10. *ಮೈಆರಿ,* 1942, ಸಂ. 72.
11. *ಎಕ* VIII, ಸೊರಬ 118.
12. *ಅದೇ,* VIII, ಸೊರಬ 115.
13. *ಆರಿಸೌಇಂಎ,* 1918, ಸಂ. 283; *ಸೌಇಂಇ,* IX ii, 440.
14. *ಎಕ,* VI, ಚಿಕ್ಕಮಗಳೂರು 48.
15. *ಅದೇ,* IX, ಕಾನಕಾನಹಳ್ಳಿ 8.
16. *ಅದೇ,* V, ಹಾಸನ 2; VIII (ಪರಿಷ್ಕೃತ), ಹಾಸನ 2
17. *ಅದೇ,* VIII, ನಗರ 5.
18. *ಅದೇ,* X, ಬಾಗೇಪಲ್ಲಿ 70.
19. *ಅದೇ,* X, ಗೌರಿಬಿದನೂರು 46.
20. *ಅದೇ,* X, ಮುಳಬಾಗಲ 158.
21. *ಅದೇ,* VIII, ತೀರ್ಥಹಳ್ಳಿ 201.
22. *ಅದೇ,* V, ಬೇಲೂರು 61; IX (ಪರಿಷ್ಕೃತ), ಬೇಲೂರು 20.
23. *ಅದೇ,* IX, ಮಾಗಡಿ 11.
24. *ಆರಿಸೌಇಂಇ,* 1925, ಸಂ. 305-306; *ಸೌಇಂಇ,* IX ii, 647.
25. *ಆರಿಸೌಇಂಎ,* 1913, ಸಂ. 216; *ಸೌಇಂಇ,* IX ii, 529.
26. *ಎಕ,* XII, ಶಿರಾ 3.

27. *ಆರಿಸೌಇಂವಿ,* 1918, ಸಂ. 270; *ಸೌಇಂಇ,* IX ii, 666.

28. *ಎಕ,* V, ಚನ್ನರಾಯಪಟ್ಟಣ 187.

29. *ಅದೇ,* IX, ಚನ್ನಪಟ್ಟಣ 148.

30. *ಅದೇ,* IX, ಕಾನಕಾನಹಳ್ಳಿ 74.

31. *ಅದೇ,* VI, ಶೃಂಗೇರಿ 1; *ಆರಿಇಂವಿ,* 1953-54, ಸಂ. 41; 1961-62, ಸಂ. 499.

32. *ಅದೇ,* V, ಚನ್ನರಾಯಪಟ್ಟಣ 153.

33. *ಆರಿಸೌಇಂವಿ,* 1928, ಸಂ. 334; *ಸೌಇಂಇ,* IX ii, 408.

34. *ಎಕ,* X, ಬೌರಿಂಗ್‌ಪೇಟೆ 83.

35. *ಅದೇ,* III, ಮಳವಳ್ಳಿ 18; VII (ಪರಿಷ್ಕೃತ), ಮದ್ದೂರು 92.

36. *ಅದೇ,* III, ಶ್ರೀರಂಗಪಟ್ಟಣ 133; VI (ಪರಿಷ್ಕೃತ), ಶ್ರೀರಂಗಪಟ್ಟಣ 93.

37. *ಅದೇ,* XII, ಕುಣಿಗಲ್ 18.

38. *ಆರಿಸೌಇಂವಿ,* 1929-30, ಬಿಕೆ. ಸಂ. 117; *ಕಇ,* I, 53; *ಸೌಇಂಇ,* XV, 247.

39. *ಪ್ರೊರಿಕರೀಇ,* 1939-40, ಸಂ. 56; *ಕಇ,* I, 56.

40. *ಎಕ,* III, ಶ್ರೀರಂಗಪಟ್ಟಣ 15; VI (ಪರಿಷ್ಕೃತ), ಶ್ರೀರಂಗಪಟ್ಟಣ 25.

41. *ಮೈಆರಿ,* 1933, ಸಂ. 26-27.

42. *ಎಕ,* III, ಶ್ರೀರಂಗಪಟ್ಟಣ 133; IV (ಪರಿಷ್ಕೃತ), ಶ್ರೀರಂಗಪಟ್ಟಣ 93.

43. *ಅದೇ,* III, ಶ್ರೀರಂಗಪಟ್ಟಣ 11, 15; VI (ಪರಿಷ್ಕೃತ), ಶ್ರೀರಂಗಪಟ್ಟಣ 21, 25; VIII, ನಗರ 65, 69; VIII, ತೀರ್ಥಹಳ್ಳಿ 200, 206.

44. *ಅದೇ,* III, ಮಂಡ್ಯ 55; VII (ಪರಿಷ್ಕೃತ) ಮದ್ದೂರು 144; III, ನಂಜನಗೂಡು 16; III (ಪರಿಷ್ಕೃತ), ನಂಜನಗೂಡು 398; IV, ಕೃಷ್ಣರಾಜಪೇಟೆ 11; VI (ಪರಿಷ್ಕೃತ), ಕೃಷ್ಣರಾಜಪೇಟೆ 99; IV, ಗುಂಡ್ಲುಪೇಟೆ 30; III (ಪರಿಷ್ಕೃತ), ಗುಂಡ್ಲುಪೇಟೆ 1; V, ಅರಸೀಕೆರೆ 126, ಬೇಲೂರು 197, ಚನ್ನರಾಯಪಟ್ಟಣ 167; VII, ಶಿವಮೊಗ್ಗ 1, 85; IX, ಚನ್ನಪಟ್ಟಣ 153; X, ಚಿಂತಾಮಣಿ 28-29; XI, ಹೊಳಲಕೆರೆ 94, 132; XII, ಚಿಕ್ಕನಾಯಕನಹಳ್ಳಿ 10; ಪಾವಗಡ 4, 75; XIV, ಗುಂಡ್ಲುಪೇಟೆ 129; III (ಪರಿಷ್ಕೃತ), ಗುಂಡ್ಲುಪೇಟೆ 150; XIV, ತಿ.ನರಸೀಪುರ 161; V (ಪರಿಷ್ಕೃತ), ತಿ.ನರಸೀಪುರ 105; *ಮೈಆರಿ,* 1947-56, ಸಂ. 50; *ಎಕ* V (ಪರಿಷ್ಕೃತ), ಮೈಸೂರು 105.

45. *ಎಕ,* ಬೆಂಗಳೂರು ಸಪ್ಲಿಮೆಂಟ್, ಆನೇಕಲ್ 99.

46. *ಅದೇ,* ಬೆಂಗಳೂರು ಸಪ್ಲಿಮೆಂಟ್, ನೆಲಮಂಗಲ 90.

47. *ಅದೇ,* V, ಹಾಸನ 94; VIII (ಪರಿಷ್ಕೃತ), ಹಾಸನ 83.

48. *ಅದೇ* X, ಮುಳಬಾಗಲ 60.

49. *ಅದೇ,* XIV, ನಾಗಮಂಗಲ 138; VII (ಪರಿಷ್ಕೃತ), ನಾಗಮಂಗಲ 134.

50. *ಅದೇ,* IV, ನಾಗಮಂಗಲ 58; VII (ಪರಿಷ್ಕೃತ), ನಾಗಮಂಗಲ 107.

51. *ಮೈಆರಿ,* 1924, ಸಂ. 111; *ಎಕ,* III (ಪರಿಷ್ಕೃತ), ಹೆಗ್ಗಡದೇವನಕೋಟೆ 89.

52. *ಎಕ,* VIII, ನಗರ 68.

53. *ಅದೇ,* VII, ಶಿವಮೊಗ್ಗ 83.

54. *ಕಸಾಪಪ,* XXI (I), ಪು. 53 ಮುಂ.

9. ನಾವಿದ ಕಲೆಗೊಂದು ಸಂಮಾನ

– ಶ್ರೀನಿವಾಸ ಪಾಡಿಗಾರ

"ಊರಿಗೊಬ್ಬ ಕ್ಷೌರಿಕನಿರಬೇಕು" ಎಂಬುದೊಂದು ರೂಢಿಮಾತು. ಪ್ರತಿಯೊಂದು ಗ್ರಾಮದಲ್ಲೂ ನಾವಿದನೊಬ್ಬ ಇರಬೇಕಾದುದರ ಅವಶ್ಯಕತೆ, ಅನಿವಾರ್ಯತೆಗಳನ್ನದು ಸೂಚಿಸುತ್ತದೆ. ಪುರೋಹಿತವರ್ಗದಿಂದ ಹಿಡಿದು ತೀರ ಕೆಳಸ್ತರದವರೆಗೂ ಸಮಾಜದ ಎಲ್ಲ ಸಂಪ್ರದಾಯ, ಧರ್ಮಗಳವರಿಗೂ ಕಾಲಕಾಲಕ್ಕೆ ನಾವಿದನ ಅವಶ್ಯಕತೆ ಬಿದ್ದೇಬೀಳುತ್ತದೆ. ಇದಲ್ಲದೆ ಧರ್ಮಶಾಸ್ತ್ರಗಳು ಮನ್ನಿಸಿರುವ ಚೂಡಾಕರಣ, ಉಪನಯನ, ಕೇಶಾಂತ ಇತ್ಯಾದಿ ಕೆಲವು ಸಂಸ್ಕಾರ ವಿಧಿಗಳಲ್ಲಿ ನಾವಿದನ ಪಾತ್ರವಿದ್ದೇ ಇದೆ. ಆಯಾ ಸಂಸ್ಕಾರ ನಡೆವ ಸಂದರ್ಭದಲ್ಲಿ ಅವನಿಗೆ ದಕ್ಕಬೇಕಾದ ತಕ್ಕ "ಮರ್ಯಾದೆ" ಸಂದುತ್ತದೆ. ಚೌಲಕರ್ಮಕ್ಕೆ ಸಂಬಂಧಿಸಿದ ವೇದ ಮಂತ್ರಗಳಲ್ಲಿ ಸವಿತೃರೂಪಿ ನಾಪಿತನನ್ನು ಸ್ವಾಗತಿಸಲಾಗಿದೆ.[1] "ಪುಣ್ಯಕ್ಷೇತ್ರಗಳಲ್ಲಿ ಪಿತೃಗಳು ಕೂಡಾ ನಾಪಿತನ ಸಂಸ್ಕಾರವಿಲ್ಲದವರ ಕೈಯಿಂದ ಪಿಂಡ ಮುಟ್ಟುವದಿಲ್ಲ" ಎಂಬ ಮಾತು ಭಾರತೀಯ ಸಮಾಜದಲ್ಲಿ ನಾಪಿತನ ಕೈಯಿಂದಾಗಬೇಕಾದ ಸಂಸ್ಕಾರಕ್ಕಿದ್ದ ವಿಧಿವತ್ ಮಹತ್ವವೇನೆಂಬುದನ್ನು ಸೂಚಿಸುತ್ತದೆ. "ನಾವಿಂದರಾಲಯಂ ಕ್ಷೌರಗೃಹಮಕ್ಕು" ಎಂದು ಮಂಗರಾಜ ಹೇಳುತ್ತಾನೆ; ಅಂದರೆ 14ನೇ ಶತಮಾನದಲ್ಲಿ ಕೇಶಕರ್ತನಾಲಯಗಳಿದ್ದವು ಎಂದಾಯಿತು. ಆದರೆ ಹಡಪವನ್ನು ಹೊತ್ತು ಮನೆಮನೆಗೆ ತಿರುಗುವ ನಾವಿದರೆ ಹೆಚ್ಚಾಗಿದ್ದಿರಬೇಕು. ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನಗಳು ವೈವಿಧ್ಯಪೂರಿತವಾಗಿದ್ದುದರಿಂದ ವಿವಿಧ ಉಚ್ಚವರ್ಗ-ಸ್ಥಾನಮಾನಗಳವರ ಮನೆಗೆ ನಾವಿದ ತನ್ನ ವೃತ್ತಿನಿರ್ವಹಣೆಗಾಗಿ ಭೆಟ್ಟಿಕೊಡುವುದು ಸಾಮಾನ್ಯವಾಗಿದ್ದಿರಬೇಕು.

ಹೀಗಿದ್ದರು ಕೂಡಾ ಅನೇಕ ವೃತ್ತಿಗಳಂತೆ ನಾವಿದವೃತ್ತಿಯನ್ನೂ ಭಾರತೀಯ ಸಮಾಜ ಕೀಳುವೃತ್ತಿಯಾಗಿಯೇ ಕಂಡಿದೆ. ಅದನ್ನವಲಂಬಿಸಿದಾತ ಸಹ ಕೀಳುವೃತ್ತಿಯವನಾಗಿ ಸಮಾಜದ ಕಣ್ಣಲ್ಲಿ ಕೀಳಾಗಿ ಕಂಡಿದ್ದಾನೆ. ಕ್ಷುರೀ, ಮುಂಡೀ, ದಿವಾಕೀರ್ತಿ, ನಾಪಿತ, ಅಂತಾವಸಾಯಿ - ಇವು ನಾವಿದನ ಅಭಿಧಾನಗಳು. ಇವನ ಕಸುಬು ಹಗಲು, ಅದರಲ್ಲೂ ಬೆಳಿಗ್ಗೆ ಮಾತ್ರ ನಡೆಯುವಂತಹುದು; ಆದ್ದರಿಂದ ಆತ "ದಿವಾಕೀರ್ತಿ". ಅವನ ವಸತಿ - ಬಹುಶಃ ಕ್ಷೌರಾಲಯ ಕೂಡಾ - ಊರ ಮೇರೆಯಲ್ಲಿ ಇರತಕ್ಕುದು; ಅಂತಾಗಿ ಅವನು "ಅಂತಾವಸಾಯಿ". ಚಾಂಡಾಲ ವೃತ್ತಿಯವನನ್ನು ಸೂಚಿಸುವ ಅಭಿಧಾನ ಅವನಿಗೂ ಅನ್ವಯಿತವಾಗಿದೆ !

ಇತಿಹಾಸದುದ್ದಕ್ಕೂ ಅಲ್ಲಲ್ಲಿ ಈ ರೀತಿಯ ಕೀಳ್ದೃಷ್ಟಿಯ ನಿದರ್ಶನಗಳು ಕಾಣುತ್ತವೆ. ಕ್ರಿಸ್ತಪೂರ್ವ ಕಾಲದ ನಂದವಂಶ ಸಂಸ್ಥಾಪಕನನ್ನು ವೇಶ್ಯೆಯಲ್ಲಿ ಹುಟ್ಟಿದ ನಾಪಿತನ ಮಗ ಎಂದು ಜೈನ "ಪರಿಶಿಷ್ಟಪರ್ವನ್" ಕೃತಿಯೂ 'ನಾಪಿತದಾಸ' ಎಂದು "ಆವಶ್ಯಕ ಸೂತ್ರ"ವೂ ಆತ ಹೀನಕುಲದವ ಎಂಬ ಭಾವಪ್ರಕಟಿಸುತ್ತ ಉಲ್ಲೇಖಿಸಿವೆ.[2] "ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ ಕಾಣಂ ಭೋ" ಎಂಬ ಬಸವಣ್ಣನವರ ವಚನೋಕ್ತಿ ಅಂದಿನ ಸಮಾಜ ನಾವಿದರನ್ನು ಕೀಳಾಗಿ ಕಾಣುತ್ತಿತ್ತೆಂಬುದರ ಪರೋಕ್ಷ ಸೂಚನೆ ನೀಡುತ್ತದೆ. ನಾವಿದನಂತೆ ನಾವಿದಪತ್ನಿಗೂ ಸಮಾಜದ ಈ ಓರೆದೃಷ್ಟಿ ಅಂಟದೆ ಇರಲಿಲ್ಲ. ಅವರು ದುರಾಚಾರಿಗಳೆಂಬ ಭಾವನೆ ಪ್ರಚಲಿತವಿತ್ತು. "ನರ್ತಕಿಯ ನಾಪಿತೆಯ ಪರ್ಣವಿಕ್ರಯಿಯ ಪ್ರವರ್ತಕಿಯ ದಾಸಿಯ ... ಇನಿಬರೊಡನಾಡಿದೊಡೆ ಬಾಲೆಯರ್ತವೆ ದುರಾಚಾರಮಂ ಕಲಿದರು" ಎಂದು "ಜೈಮಿನಿ ಭಾರತ"ದಲ್ಲಿ ಲಕ್ಷ್ಮೀಶ ಒಂದೆಡೆ ನುಡಿದಿದ್ದಾನೆ.[3]

"ಊರಿಗೊಬ್ಬ ಕ್ಷೌರಿಕನಿರಬೇಕು" ಎಂಬ ರೂಢಿಮಾತು ಬಹುಶಃ ನಾವಿದ ಕುಟುಂಬಗಳು ಹೆಚ್ಚು ಸಂಖ್ಯೆಯಲ್ಲಿ ಒಂದೆಡೆ ಇರದೆ ಚದುರಿ ಹೋಗಿದ್ದವೆಂಬ ಸೂಚನೆ ನೀಡುವಂತಿದೆ. ಒಂದು ಕುಟುಂಬ ಮಾತ್ರ ಒಂದು ಗ್ರಾಮದಲ್ಲಿರುತ್ತಿತ್ತೇನೊ. ದೊಡ್ಡ ಊರಲ್ಲಿ ಹೆಚ್ಚು ಕಟುಂಬಗಳಿದ್ದಿರಬಹುದು. ನಾವಿದರದು ಉತ್ಪಾದಕ ವೃತ್ತಿಯಲ್ಲ. ಅದರಿಂದ ಆರ್ಥಿಕ ಉತ್ಪನ್ನವಾದರೂ ಹೆಚ್ಚಾಗಿರುವ ಸಾಧ್ಯತೆ ಇಲ್ಲ. ಈ ಕಾರಣಗಳಿಂದಾಗಿ ಬಹುಶಃ ಪ್ರಬಲ ಶ್ರೇಣಿ ರೂಪಿಸಿಕೊಳ್ಳುವದು ಅವರಿಗೆ ಸಾಧ್ಯವಾಗಿರಲಿಕ್ಕಿಲ್ಲ. ಲಭ್ಯ ದಾಖಲೆಗಳನ್ನು ಪರಿಶೀಲಿಸಿದಾಗ ನಾವಿದ ವೃತ್ತಿಯವರು ಗಮನೀಯ ಪ್ರಮಾಣದ, ಸಮಾಜದಲ್ಲಿ ಪ್ರತಿಷ್ಠೆಯ ಸ್ಥಾನಗಿಟ್ಟಿಸಬಹುದಾದ ಕೃತಿಗಳನ್ನು ಮಾಡಿದ್ದು ಕಾಣುವದು ತೀರ ಅಪರೂಪ. ಅಂಥ ಒಂದು ಉದಾಹರಣೆ ಕ್ರಿ.ಶ. 1087ರ ಕುರ್ತಕೋಟಿ ಶಾಸನದಲ್ಲಿದೆ.[4] ದಾಸ ಎಂಬ ನಾವಿದ ದಾಸೇಶ್ವರ ದೇವಾಲಯವನ್ನು ಕಟ್ಟಿಸಿ ದಾನ ನೀಡಿದ ಉಲ್ಲೇಖ ಅದರಲ್ಲಿದೆ. ಇತರ ದಾನಿಗಳ ಉಲ್ಲೇಖವಿದ್ದರು ಕೂಡಾ ಅವರಾರು ನಾವಿದ ವೃತ್ತಿಯವರಲ್ಲ. ಅಂತಾಗಿ ಈ ಶಾಸನ ಕುರ್ತಕೋಟಿಯಲ್ಲಿ ಒಂದೇ ನಾವಿದ ಕುಟುಂಬ ಇದ್ದಿತ್ತೆಂಬ ಸೂಚನೆ ನೀಡುತ್ತದೆ. ನಾವಿದರೈನೂರ್ವರ ಶ್ರೇಣಿಯೊಂದು ಇದ್ದಿರಬಹುದಾದ ಅಸ್ಪಷ್ಟ ಸೂಚನೆ ಕೂಡ ಇಲ್ಲಿದೆ. ಕ್ರಿ.ಶ. 1276ರಲ್ಲಿ ನಾವಿದ ಚಟ್ಟೋಜನ ಮಗ ಸೋವೋಜ ದೇವರ ನಿತ್ಯಾಭಿಷೇಕಕ್ಕೆಂದು ಅಕ್ಷಯ ಭಂಡಾರವಾಗಿ 1 ಗದ್ಯಾಣವನ್ನಿತ್ತ.[5] ಇಂಥ ಉಲ್ಲೇಖಗಳು ಬೆರಳೆಣಿಕೆಯಷ್ಟಿವೆ. "ನಾವಿದರ ಗೋಸಾಸಿ .... ಸತ್ತು ಸುರಲೋಕ"ಕ್ಕೆ ಹೋದುದನ್ನು ತಿಳಿಸುವ ಕ್ರಿ.ಶ. 1007ರ ವೀರಗಲ್ಲು ಶಾಸನ[6] ಇತರ ಓಜರಂತೆ ಇವರು ಕೂಡ ಪ್ರಸಂಗ ಬಂದಾಗ ಕಾದಿ ವೀರಮರಣವನ್ನಪ್ಪುತ್ತಿದ್ದರೆಂಬುದಕ್ಕೆ

ಉದಾಹರಣೆಯೊದಗಿಸುತ್ತದೆ. ಬ್ರಾಹ್ಮಣರ ಉಗುರುಗಳನ್ನು ತೆಗೆಯಲು ಅಗ್ರಹಾರಗಳಲ್ಲಿ ನಾವಿದರನ್ನು ನೇಮಿಸಿಕೊಳ್ಳುತ್ತಿದ್ದರೆಂದು ಕ್ರಿ.ಶ. 1158ರ ಶಾಸನವೊಂದು ತಿಳಿಸುತ್ತದೆ.[7] ಅವರ ಜೀವಿತಕ್ಕಾಗಿ ನಿರ್ದಿಷ್ಟ ಹಣ ಇಲ್ಲವೆ ಭೂಮಿಯನ್ನು ಮೀಸಲಾಗಿರಿಸಲಾಗುತ್ತಿತ್ತು.

ನಾವಿದ ವೃತ್ತಿ ಒಂದು ಕಲೆಯೇ ಸೈ. ಆದ್ದರಿಂದ 'ಉಪಾಧ್ಯಯ' ಪದದಿಂದ ನಿಷ್ಪತ್ತಿಯಾಗಿರುವ 'ಓಜ' ಪದ ಆ ಕಸುಬಿನವರ ಹೆಸರುಗಳಿಗೆ ಸೇರ್ಪಟ್ಟಿರುವುದು ಯಥಾಯೋಗ್ಯವೆ. ಕೂದಲು, ಮೀಸೆ, ಗಡ್ಡಗಳನ್ನು ಆಕರ್ಷಕವಾಗಿ ರೂಪುಗೊಳಿಸಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಮೆರಗು ಕೊಡುವುದು ಕಲೆಯಲ್ಲದೆ ಮತ್ತಿನ್ನೇನು? ಸಮಾಜದಲ್ಲಿ ಅವರವರ ಸ್ಥಾನ-ಮಾನ-ಅಧಿಕಾರ-ಯೋಗ್ಯತೆಗಳಿಗೆ ತಕ್ಕಂತೆ ಕೇಶ, ಮೀಸೆ, ಗಡ್ಡಗಳನ್ನು ತೀಡಬಲ್ಲ ಕಲಾವಿದ ನಾವಿದ. ರೂವಾರಿ ನಿರ್ಜೀವ ಕಲ್ಲನ್ನು ಕಟೆದು ಸುಂದರ ರೂಪು ನೀಡಬಲ್ಲನಾದರೆ ನಾವಿದ ಜೀವಂತ ವ್ಯಕ್ತಿಯ ರೂಪನ್ನು ಕೇಶಕರ್ತನದ ಮೂಲಕ ತೀಡಬಲ್ಲ "ಕೇಶಶಿಲ್ಪಿ".[8]

ರೂವಾರಿಗಳ ಕಲಾಚಾತುರ್ಯವನ್ನು ಗುರುತಿಸಿ ಸಂಮಾನಿಸಿದ ಸಂದರ್ಭ ವಾತಾಪಿಯ ಚಾಲುಕ್ಯರ ಕೊನೆಗಾಲದಲ್ಲಿ ಮೂಡಿತ್ತು. ಪಟ್ಟದಕಲ್ಲಿನ ಲೋಕೇಶ್ವರ (ವಿರೂಪಾಕ್ಷ) ದೇಗುಲ ಮಾಡಿದ ಸೂತ್ರಧಾರಿ ಗುಂಡ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿ ಆಚಾರಿಗಳು ಇಮ್ಮಡಿ ವಿಕ್ರಮಾದಿತ್ಯನಿಂದ ಗೌರವ-ಸಂಮಾನಗಳನ್ನು ಗಿಟ್ಟಿಸಿ ತಮ್ಮ "ಬಳ್ಳಿಗವರ್ತೆ"ಯನ್ನು ಮಂನಾ ಮಾಡಿಸಿಕೊಂಡಿದ್ದ ಸಂಗತಿ ಸರ್ವವಿದಿತ. ಕ್ರಿ.ಶ. 8ನೇ ಶತಮಾನದಲ್ಲಿ ಅದಾವುದೋ ಕಾರಣಕ್ಕಾಗಿ ಬಾದಾಮಿಯ ಸಮ್ಮಗಾರರ ಕವರ್ತೆಯನ್ನು ಮಂನಾ ಮಾಡಲಾಯಿತೆಂಬುದು ಅಲ್ಲಿಯ ಜಂಬುಲಿಂಗ ದೇವಾಲಯದ ಸ್ತಂಭಶಾಸನದಿಂದ ತಿಳಿಯುತ್ತದೆ. ನಾವಿದ ವೃತ್ತಿಯಲ್ಲಿದ್ದವರೂ ತೆರಿಗೆಯಿಂದ ಮುಕ್ತರಾಗಿರಲಿಲ್ಲ. "ನಾವಿದದೆಱೆ" ಎಂಬ ವೃತ್ತಿತೆಱಿಗೆ ಶಾಸನಗಳಲ್ಲಿ ಹಲವು ಬಾರಿ ಉಲ್ಲಿಖಿತವಾಗಿದೆ. ಇದಲ್ಲದೆ ಇನ್ನೂ ಹಲವು ತೆರಿಗೆಗಳನ್ನವರು ತೆರಬೇಕಿತ್ತು. ಅವರ ವೃತ್ತಿಯ ಕಲಾಯೋಗ್ಯತೆಯನ್ನು ಸಮಾಜ ಗುರುತಿಸಿ ಮನ್ನಿಸಿದ ಉದಾರಹಣೆ ಇಲ್ಲವೆ ಇಲ್ಲ ಎನ್ನುವಷ್ಟು ಕಡಿಮೆ.

ವಿಜಯನಗರದ ಕೊನೆಗಾಲದಲ್ಲಿ ಅಂಥ ಒಂದು ಅವಿಸ್ಮರಣೀಯ ಸಂದರ್ಭ ಒದಗಿಬಂತು. ತುಳುವ ಸದಾಶಿವರಾಯನ ಆಳ್ವಿಕೆಯಲ್ಲಿ ಹೊರಡಿಸಲಾದ, ರಾಜ್ಯದ ವಿವಿಧ ಸ್ಥಳಗಳಲ್ಲಿ ದೊರೆತಿರುವ ಅನೇಕ ಶಾಸನಗಳು ನಾವಿದ ಸಮುದಾಯದವರ ಕಲಾವೃತ್ತಿಗೆ ರಾಜಮನ್ನಣೆ ನೀಡಲಾದ ಬಗ್ಗೆ ತಿಳಿಸುತ್ತವೆ. ಇಂಥ ಕನಿಷ್ಠ 32 ಶಾಸನಗಳು ಕರ್ನಾಟಕದ - ಆಂಧ್ರದ ವಿವಿಧ ಭಾಗಗಳಲ್ಲಿ ಈವರೆಗೆ ಗಮನಿಸಲ್ಪಟ್ಟಿವೆ.[9] ಇವುಗಳ ತಾತ್ಪರ್ಯ ಹೆಚ್ಚುಕಡಿಮೆ ಒಂದೆ. ಆದರೆ ವಿಷಯ ನಿರೂಪಣೆ, ಕಾಲನಿರೂಪಣೆ ವ್ಯತ್ಯಾಸಪೂರಿತವಾಗಿವೆ. ಉತ್ತರದಲ್ಲಿ ರಾಯಚೂರು-ವಿಜಾಪುರ ಜಿಲ್ಲೆಯಿಂದ ಹಿಡಿದು ದಕ್ಷಿಣದಲ್ಲಿ ಮೈಸೂರಿನ ಸಮೀಪದವರೆಗೂ, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಹಿಡಿದು ಪೂರ್ವದಲ್ಲಿ ಬಳ್ಳಾರಿ-ಚಿತ್ರದುರ್ಗ-ತುಮಕೂರು ಜಿಲ್ಲೆಗಳವರೆಗೂ ಇವು ಹರಡಿಕೊಂಡಿವೆ. ಸಾಮಾನ್ಯವಾಗಿ ಶಿಲಾಫಲಕಗಳ ಮೇಲೆ ಈ ಶಾಸನಗಳನ್ನು ಕೊರೆದಿದೆ; ಅಪರೂಪಕ್ಕೆ ಬಂಡೆಯ ಮೇಲೂ ಕಂಡುಬರುವದುಂಟು.[10] ನಾವಿದರ ಸಾಧನಗಳಾದ ಕತ್ತಿ, ಕನ್ನಡಿ, ಕತ್ತರಿಗಳನ್ನು ಶಾಸನಗಳ ಮೇಲ್ಭಾಗದಲ್ಲಿ ಕೆತ್ತಿರುವ ಉದಾಹರಣೆಗಳಿವೆ.[11]

ಕ್ರಿ.ಶ. 1550 ಜೂನ್ 4ರಂದು ಹೊರಟ ರಾಣಿಬೆನ್ನೂರು ಹಾಗು ಹಿರೆಕೆರೂರು ಶಾಸನಗಳು ನಾವಿದರ ಮೇಲಿನ ತೆರಿಗೆಗಳನ್ನು ಮನ್ನಾ ಮಾಡುವ ಪ್ರಸಂಗವೊದಗಿದ್ದರ ಮೇಲೆ ತುಸು ಬೆಳಕು ಚೆಲ್ಲುತ್ತವೆ. "ಮಹಾಮಂಡಳೇಶ್ವರ ರಾಮರಾಜೇಂದ್ರ ಮಹಾ ಅರಸುಗಳು ಗಡ್ಡದ ಕೆಲಸಿಗಳು ತಿಂಮೋಜ, ಕೊಂಡೋಜ, ಭದ್ರೋಜ ಯಿವರು ಮೂವರ ಕೆಲಸಕ್ಕೆ ಮೆಚ್ಚಿ ಮಂನಿಸಲಾಗಿ ದೇವರ ಸದಾಶಿವರಾಯರು ಆಳುವಂಥಾ ರಾಜ್ಯದೊಳಗಣ ಗಡ್ಡದ ಕೆಲಸಿಗಳಿಗೆ ತೆಱುಗೆ ಸಿದ್ದಾಯ ಮನೆವಣ ಕಾಣಿಕೆ ಕಡ್ಡಾಯ ಮದುವೆಯ ಸುಂಕ ಮಹನವಮಿಯಲು ಅಕಾಲ ಚಕ್ರ ಮುಂತಾಗಿ ತೆಱುವಂಥಾ ತೆಱವ ಪಾಲಿಸಬೇಕು ಎಂದು ಬಿನ್ನಹಂ ಮಾಡಲಾಗಿ ತೆಱುವಂಥಾದ್ದು ಎಲ್ಲವನು ಪಾಲಿಸಿ ಸರ್ವಮಾನ್ಯವ ಮಾಡಿದರು" ಎಂಬುದು ರಾಣಿಬೆನ್ನೂರು ಶಾಸನದ ಹೇಳಿಕೆ.[12] ಇದರಿಂದ ತಿಮ್ಮೋಜ, ಕೊಂಡೋಜ ಮತ್ತು ಭದ್ರೋಜರು ರಾಮರಾಜನ, ಅವನ ಪರಿವಾರದವರ ಖಾಸ ಕ್ಷೌರಿಕರಾಗಿದ್ದಿರಬೇಕು ಎಂಬುದು ಸೂಚಿತವಾಗಿದೆ. ದೇವರಹುಬ್ಬಳ್ಳಿ ಶಾಸನ[13] ಇವರನ್ನು "ಅರಸಗಳ ಕೆಲಸಿಗರು" ಎಂದು ಹೇಳುವುದರಿಂದ ಅಂಥ ಅಭಿಪ್ರಾಯಕ್ಕೆ ಹೆಚ್ಚಿನ ಪುಷ್ಟಿದೊರೆಯುತ್ತದೆ. ಇವರ ನಾವಿದ ಕಲಾಚಾತುರ್ಯಕ್ಕೆ ಮೆಚ್ಚಿಯೇ ನಾವಿದ ವೃತ್ತಿಯವರ ಮೇಲಿನ ತೆಱಿಗೆಗಳನ್ನು ಮನ್ನಾ ಮಾಡಲಾಯಿತೆಂಬುದಂತೂ ಇದರಿಂದ ಸ್ಫುಟವಾಗುತ್ತದೆ.

ಈ ವಿಷಯ ತಿಳಿಸುವ ಶಾಸನಗಳಲ್ಲಿ ಅತಿ ಪ್ರಾಚೀನವಾದುದು ಕ್ರಿ.ಶ. 1544 ಏಪ್ರಿಲ್ 2ರಂದು ಹೊರಡಿಸಲ್ಪಟ್ಟ ಸೊಂಡೂರಿನ ಶಾಸನ.[14] ತಿಮ್ಮೋಜ ಮತ್ತು ಕೊಂಡೋಜ ಎಂಬ ನಾವಿದರ ನೇತೃತ್ವದಲ್ಲಿ ನಾವಿದ ಸಮುದಾಯ ಮಾಡಿದ ಬಿನ್ನಹದ ಮೇರೆಗೆ ಸಂಡೂರು ಸೀಮೆಯ ನಾವಿದರ ಮೇಲಿನ 'ಸಿದ್ದಾಯ' ಹಾಗೂ 'ಕಾಣಿಕೆ' ತೆರಿಗೆಗಳನ್ನು ರಾಮರಾಜ ಮಹಾಅರಸುಗಳು ಸದಾಶಿವರಾಯರಲ್ಲಿ ವಿನಂತಿಸಿ ಮನ್ನಾ ಮಾಡಿದ್ದನ್ನು ಇದು ಹೇಳುತ್ತದೆ. ಚಂದೇನಹಳ್ಳಿ (ತುಮಕೂರು)[15] ಹಾಗು ಹಿರಿಯಂಗಳ (ಚಿಕ್ಕಮಗಳೂರು)[16] ಶಾಸನಗಳಲ್ಲಿ ಕೊಂಡೋಜನನ್ನು ಮಾತ್ರ ಹೆಸರಿಸಲಾಗಿದೆ. ಕೆಲವು ಶಾಸನಗಳು ಕೊಂಡೋಜ ಮತ್ತು ಭದ್ರೋಜರನ್ನು, ಇನ್ನು ಕೆಲವು ಕೊಂಡೋಜ ಮತ್ತು ತಿಮ್ಮೋಜರನ್ನು, ಮತ್ತೆ ಕೆಲವು ತಿಮ್ಮೋಜನನ್ನು ಮಾತ್ರ ಹಾಗೂ ಇನ್ನೂ ಕೆಲವು ತಿಮ್ಮೋಜ, ಕೊಂಡೋಜ ಹಾಗು ಭದ್ರೋಜ ಎಂಬ ಮೂವರನ್ನೂ ಉಲ್ಲೇಖಿಸುತ್ತವೆ.

ಇದಲ್ಲದೆ ಕೆಲವು ಶಾಸನಗಳು ಆಯಾ ಸೀಮೆ-ಸ್ಥಳಗಳಲ್ಲಿ ಶಾಸನ ಪಡೆದ ನಾವಿದನ ಅಥವಾ ನಾವಿದ ಸಮುದಾಯದ ಪ್ರತಿನಿಧಿ/ಪ್ರತಿನಿಧಿಗಳ ಹೆಸರನ್ನೂ ನೀಡುತ್ತವೆ. ಉದಾರಹಣೆಗೆ, ದೇವರಹುಬ್ಬಳ್ಳಿ ಶಾಸನದಲ್ಲಿ[17] ತಿಮ್ಮೋಜ, ಕೊಂಡೋಜರೊಂದಿಗೆ ರಾಮೋಜನ ಹೆಸರನ್ನೂ ಮುಗುದ ಮೂವತ್ತರ ಕಾಣಾಚಿಗಳಾಗಿ ಮಾದೋಜ, ಮಧುವೋಜಗಳ ಬಣವನ್ನೂ ಹೆಸರಿಸಿದೆ. ಲಕ್ಷ್ಮೇಶ್ವರದ ಶಾಸನ[18] ತಿಮ್ಮೋಜ, ರಂಗೋಜ ಮತ್ತು ಭದ್ರೋಜರನ್ನು ಹೆಸರಿಸಿ, ಭದ್ರೋಜನು ಕಂದನವೊಲು ಸ್ಥಳದ ತಿಮ್ಮೋಜನ ಮಗನೆಂದು ಹೇಳುತ್ತದೆ. ಬೆಳವಟಗಿ ಶಾಸನ[19] ಕೊಂಡೋಜ ಮತ್ತು ಸಿದ್ಧೋಜರನ್ನು ಉಲ್ಲೇಖಿಸಿದೆ. ಸಂಕದಾಳ ಶಾಸನ[20] ತಿಮ್ಮೋಜನನ್ನಲ್ಲದೆ ಸ್ಥಳೀಯ ರಾಮೋಜನನ್ನು ಶಾಸನ ಪಡೆದವನೆಂದು ತಿಳಿಸುತ್ತದೆ. ಗುಡಿಸಾಗರ ಶಾಸನದಲ್ಲಿ ನಾವಿದ ನಾಗೋಜ ಹೆಸರಿಸಲ್ಪಟ್ಟಿದ್ದಾನೆ. ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಯ ಶಾಸನಗಳಲ್ಲಿ ಕಾರ್ಯಕರ್ತ ರಾಮರಾಜವೊಡೆಯರು ನಾವಿದ ಕೊಂಡೋಜನಿಂದ ಸಂಪ್ರೀತನಾಗಿ ಸರ್ವಮಾನ್ಯ ಪಾಲಿಸಿದ್ದಾಗಿಯೂ, ಚಿತ್ರದುರ್ಗ ಜಿಲ್ಲೆಯ ಶಾಸನ ಬೀರೂರಿನ ಕೊಂಡೋಜ ಕುಲದ ನಾವಿದರ ಸಿದ್ದಾಯ ಮಾನ್ಯಮಾಡಿದುದಾಗಿಯೂ ಹೇಳುತ್ತವೆ. ಆದುದರಿಂದ ಕೊಂಡೋಜನು ಆ ಪ್ರದೇಶದವನಾಗಿರಬಹುದು. ಲಕ್ಷ್ಮೇಶ್ವರ ಶಾಸನದ ಪ್ರಕಾರ ಭದ್ರೋಜನು ಕಂದನವೊಲು ಸ್ಥಳದ ತಿಮ್ಮೋಜನ ಮಗ; ಆದುದರಿಂದ ಕಂದನವೊಲಿನವನು.

ಇನ್ನು ಸರ್ವಮಾನ್ಯ ಮಾಡಲಾದ ತೆರಿಗೆಗಳ ವಿವರಗಳಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಕೆಲವು ಶಾಸನಗಳು ಚುಟುಕಾಗಿ ಇದನ್ನು ನಿರೂಪಿಸುತ್ತವಾದರೆ ಇನ್ನು ಕೆಲವು ವಿಸ್ತೃತವಾಗಿ ತೆರಿಗೆಗಳನ್ನು ಹೆಸರಿಸುತ್ತವೆ. ಸಿದ್ದಾಯ, ಕಾಣಿಕೆ ತೆರಿಗೆಗಳನ್ನು ಸಂಡೂರು ಶಾಸನ;[21] ಕುಲದೆರೆ, ಸುಂಕಗಳನ್ನು ಚಂದೇನಹಳ್ಳಿ ಶಾಸನ;[22] ಕಾಣಿಕೆ, ಕಡ್ಡಾಯ, ಬಿಟ್ಟಿ, ಬಿರಾಡ, ಕೊಟ್ಟಣಗಳನ್ನು ಬಾಗಲಿ ಶಾಸನ;[23] ನಾವಿಂದರ ತೆಜಿಗೆ, ಅನೀಕ (ಕಾಣಿಕೆ?), ಅಕಾಲ ಚಕ್ರ, ಬಿಟ್ಟಿ ಬಿರಾಡಗಳನ್ನು ಅಮ್ಮಿನಭಾವಿ ಶಾಸನ;[24] ಸಿದ್ದಾಯ, ಬಿರಾಡ, ಕಾಣಿಕೆ, ಕಡ್ಡಾಯ, ಮದುವೆಸುಂಕಗಳನ್ನು ಗುತ್ತಲ ಶಾಸನ;[25] ಅನ್ನು-ಪನ್ನು(?), ಬಿಟ್ಟಿ, ಕಡ್ಡಾಯಗಳನ್ನು ಮಸ್ಕಿ ಶಾಸನ;[26] ಮನೆದೆಜಿಗೆಯನ್ನು ದೇವರಹುಬ್ಬಳ್ಳಿ ಶಾಸನ;[27] ಕಂದಾಯ, ಬಿಟ್ಟಿ, ಕೊಟ್ಟಣಗಳನ್ನು ಕೊಟ್ಟೂರು ಶಾಸನ;[28] ಬಿರಾಡ, ಬಿಟ್ಟಿ, ದೇವಿಪೊನ್ನು, ದೊಂಬದೆಜಿಗೆಗಳನ್ನು ಕರಡಿ ಶಾಸನ[29] ಉಲ್ಲೇಖಿಸಿವೆ. ಇವುಗಳಲ್ಲಿ ಕೆಲವೆಡೆ "ಮಹಾನವಮಿಯ ಅಕಾಲಚಕ್ರ" ಎಂದು ಉಲ್ಲಿಖಿತ ತೆರಿಗೆ "ದೇವಿಪೊನ್ನಿ"ಗೆ ಸಮಾನವಾದುದೆಂದು ತೋರುತ್ತದೆ. ಮಾನ್ಯ ಪಡೆಯುವ ಮುನ್ನ ನಾವಿದ ವೃತ್ತಿಯವರ ಮೇಲಿನ ವಿವಿಧ ತೆರಿಗೆಗಳ ಹೊರೆ ಎಷ್ಟಿತ್ತೆಂಬುದರ ಪರಿಕಲ್ಪನೆಯನ್ನು ಈ ಉಲ್ಲೇಖಗಳು ನೀಡುತ್ತವೆ.

ತೆರಿಗೆಗಳಿಂದ ಮುಕ್ತವಾದುದಷ್ಟೆ ಅಲ್ಲದೆ ತಿಮ್ಮೋಜ, ಕೊಂಡೋಜ, ಭದ್ರೋಜರು ಅಳಿಯ ರಾಮರಾಜನಿಂದ ತೆರಿಗೆರಹಿತ ಸರ್ವಮಾನ್ಯ ಭೂಮಿಯನ್ನು ಪಡೆದುದಾಗಿ ರಾಯಚೂರು, ಕವಿತಾಳ, ಮುದಗಲ್ಲು ಶಾಸನಗಳು[30] ತಿಳಿಯಪಡಿಸುತ್ತವೆ.

ಕ್ರಿ.ಶ. 1544 ರಷ್ಟು ಮುಂಚೆಯೆ ಈ ಪರಿಯ ಮೊದಲ ಶಾಸನ ಹೊರಟಿದೆಯಾದರೂ 1559 ರವರೆಗೂ ಇಂಥ ಶಾಸನಗಳು ಬೇರೆ ಬೇರೆ ಸ್ಥಳಗಳಲ್ಲಿ ಇರಿಸಲ್ಪಟ್ಟವೆಂಬುದು ಕುತೂಹಲಕಾರಿಯಾಗಿದೆ. ಕ್ರಿ.ಶ. 1559 ರ ಶಾಸನ ಬಾಗಲಕೋಟೆಯ ಬೀಳಗಿ ಸೀಮೆಯದು.[31] ಆರಂಭಿಕ ಶಾಸನಗಳು ಬಳ್ಳಾರಿ, ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ (1544-46); ಸುಮಾರು 12 ಶಾಸನಗಳು 1547ರಲ್ಲಿ ಬಳ್ಳಾರಿ, ಧಾರವಾಡ, ಗದಗ, ಹಾವೇರಿ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ; 2 ಶಾಸನಗಳು 1548ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ; 2 ಶಾಸನಗಳು 1550ರಲ್ಲಿ ಹಾವೇರಿ ಪ್ರದೇಶದಲ್ಲಿ; 5 ಶಾಸನಗಳು 1553ರಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ; 2 ಶಾಸನಗಳು 1555ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ನಿಲ್ಲಿಸಲ್ಪಟ್ಟವೆ. ಇದಕ್ಕೆ 15 ವರ್ಷಗಳಷ್ಟು ದೀರ್ಘ ಕಾಲಾವಧಿ ಯಾಕೆ ಬೇಕಾಯಿತು ಎಂಬುದು ಸ್ಪಷ್ಟವಿಲ್ಲ. ಕೆಲವೆಡೆ ತಿಮ್ಮೋಜ, ಕೊಂಡೋಜ, ಭದ್ರೋಜರಲ್ಲಿ ಒಬ್ಬರೊ, ಇಬ್ಬರೊ ಅಥವಾ ಮೂವರೊ ಸೇರಿಯೋ ಸ್ವತಃ ಹೋಗಿ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ ಶಾಸನ ನಿಲ್ಲಿಸುವಂತೆ ಒತ್ತಾಯಿಸಿರಬೇಕು. ನಿರೂಪ ಜಾರಿಗೊಳಿಸುವದರಲ್ಲಿ ವಿವಿಧ ಸ್ಥಳಗಳಲ್ಲಿ ಕಾಲಾಂತರವಾಗಿದ್ದಿರಬೇಕು. ಜಾರಿಗೆ ಬರದಿದ್ದಲ್ಲಿ ಮತ್ತೆ ನಿಯೋಗ ಹೋಗುವ ಪ್ರಸಂಗವೊದಗಿರಬೇಕು. 1547 ಹಾಗೂ 1553 ರಲ್ಲಿ ಈ ನಾವಿದರ ಪರ ಆ ಸಮುದಾಯದ ನೇತಾರರ ಚಳವಳಿ ಅತಿ ಹೆಚ್ಚು ಕ್ರಿಯಾಶೀಲವಾಗಿತ್ತು ಎಂಬುದು ಒಟ್ಟು ಶಾಸನಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಆ ವರ್ಷಗಳಲ್ಲಿ ಹೊರಡಿಸಲ್ಪಟ್ಟಿವೆ ಎಂಬುದರಿಂದ ಸಿದ್ಧವಾಗುತ್ತದೆ. ಸದಾಶಿವರಾಯನ ಕಾಲಾನಂತರವೂ ಈ ಮಾನ್ಯ ಮುಂದುವರಿಯಿತೆಂಬುದನ್ನು ಕ್ರಿ.ಶ. 1578ರ ಶ್ರೀರಂಗಪಟ್ಟಣದ (ಮಂಡ್ಯ) ಶಾಸನ ಸೂಚಿಸುತ್ತದೆ.[32] ಆ ವರ್ಷ ಶ್ರೀರಂಗಪಟ್ಟಣ ಸೀಮೆಯ ಪಾಲಕನಾಗಿದ್ದ ಮಹಾಮಂಡಲೇಶ್ವರ ರಾಮರಾಜು ರಾಮರಾಜಯ್ಯದೇವ ಮಹಾ ಅರಸು ಶ್ರೀರಂಗಪಟ್ಟಣದ ಸೀಮೆಯ ನಾವಿದರ ಮೇಲಿನ ತೆರಿಗೆಗಳನ್ನು ಮಾನ್ಯಮಾಡಿದ್ದನ್ನು ಶಾಸನ ತಿಳಿಸುತ್ತದೆ. ಇದು ಇಮ್ಮಡಿ ಶ್ರೀರಂಗರಾಯನ ಆಳ್ವಿಕೆಯಲ್ಲಿ ಹೊರಟಿದೆ.

ಒಟ್ಟಾರೆ ಈ ಶಾಸನ ಶ್ರೇಣಿಯನ್ನು ಪರೀಕ್ಷಿಸಿದಾಗ ಒಂದು ಗಮನಾರ್ಹ ಅಂಶ ಬೆಳಕಿಗೆ ಬರುತ್ತದೆ. ಇದು ಕೇವಲ ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬದ ಮೇಲಿನ ತೆರಿಗೆ ಮನ್ನಾ ಮಾಡಿದ್ದಲ್ಲ. ಇಡಿ ವಿಜಯನಗರ ಸಾಮ್ರಾಜ್ಯದ ಕರ್ನಾಟಕ ಪ್ರದೇಶದ ಎಲ್ಲೆಡೆಗಳಲ್ಲಿ ಇಡಿ ನಾವಿದ ವೃತ್ತಿಯವರೆಲ್ಲರ ಮೇಲಿನ ತೆರಿಗೆ ಮನ್ನಾ ಮಾಡಿಸಿಕೊಂಡ ಉದಾಹರಣೆಯಿದು. ಆ ದೃಷ್ಟಿಯಿಂದ ಇದು ಅಪೂರ್ವವಾದುದೆನ್ನಬೇಕು. ಒಂದು ವೃತ್ತಿಯನ್ನವಲಂಬಿಸಿದ್ದ ಜನಸಮುದಾಯ ತಮ್ಮ ವೃತ್ತಿಯ ಕಲಾಪ್ರವೃತ್ತಿಯ ಬಗ್ಗೆ ಜಾಗೃತಿಮೂಡಿಸುವಲ್ಲಿ ತಾತ್ಕಾಲಿಕವಾಗಿಯಾದರೂ ಯಶಸಾಧಿಸಿ,

ರಾಜಮನ್ನಣೆ ದೊರಕಿಸಿಕೊಂಡು ಪ್ರತಿಫಲಪಡೆದ ನಿದರ್ಶನ ಇದಾಗಿದೆ. ಇತರ ವೃತ್ತಿಯವರೂ ಇಂತಹ ಪ್ರಯತ್ನ ಮಾಡಿರುವ ಸಾಧ್ಯತೆಯಿದೆ.[33] ಆದರೆ ಅಂತಹ ಪ್ರಯತ್ನಗಳ ಯಶಾಯಶಗಳ ಬಗ್ಗೆ ಇತಿಹಾಸದ ದಾಖಲೆಗಳನ್ನು ಕೆದಕಿ ನೋಡಬೇಕಾಗಿದೆ. ಒಂದು ಜನತೆಯ ಸಮಗ್ರ ಇತಿಹಾಸದ ಪುನಾರಚನೆಯ ಕಾರ್ಯದಲ್ಲಿ ಇದಕ್ಕೂ ಪ್ರಾಶಸ್ತ್ಯ ದೋರೆಯಬೇಕಾದುದು ಅತ್ಯವಶ್ಯಕ.

ಅಡಿ ಟಿಪ್ಪಣಿಗಳು

1. ಅಥರ್ವವೇದ, VI, 68.2. ರಾಜ ಬಲಿ ಪಾಂಡೆ, *ಹಿಂದೂ ಸಂಸ್ಕಾರಸ್* (ದೆಹಲಿ, 1976), ಪು. 95.
2. ಆರ್.ಸಿ. ಮಜುಂದಾರ್ (ಸಂಪಾದಕ), *ದಿ ಏಜ್ ಆಫ್ ಇಂಪೀರಿಯಲ್ ಯುನಿಟಿ* (ಮುಂಬಯಿ, 1968), ಪು. 91.
3. *ಜೈಮಿನೀ ಭಾರತ,* 5-58.
4. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ (SII),* XI, 133.
5. *SII,* IX, i, 347.
6. *ಎಪಿಗ್ರಾಫಿಯ ಕರ್ನಾಟಿಕ (EC),* VII, Sk. 195.
7. "ಸೋಮವಾರದಲು 30 ಮನುಶ್ಯ ಬ್ರಾಹ್ಮಣರುಗುರ ಕಳವ ನಾವಿದನ ಜೀವಿತಂ ಗದ್ಯಾಣ 5", *EC,* VII, Sk. 185.
8. ವಾದ್ಯ ಬಾರಿಸುವುದು, ಪರ್ವವಿಶೇಷಗಳಲ್ಲಿ ಬಣ್ಣಗಾರಿಕೆ, ಮುಂತಾದ ಇತರ ಕಸುಬು-ಅಧಿಕಾರಗಳು ನಾವಿದರಿಗಿದ್ದವೆಂಬುದು ಇತ್ತೀಚಿನವರೆಗಿನ ಅವರ ಆಚರಣೆಗಳಿಂದ ಗೊತ್ತಾಗುತ್ತದೆ. ಹೆಚ್ಚಾಗಿ ಹಣದ ಮಾಧ್ಯಮದಿಂದಲೇ ಅವರ ಆದಾಯವಿರುತ್ತಿದ್ದುದರಿಂದ ಕೆಲವರು ನಾವಿದರು ಸಾಕಷ್ಟು ಹಣ ಕೂಡಿಟ್ಟು ಲೇವಾದೇವಿ ವ್ಯವಹಾರವನ್ನೂ ಮಾಡುತ್ತಿದ್ದುದಾಗಿ ತಿಳಿಯುತ್ತದೆ. ಈ ವಿಷಯಗಳನ್ನು ತಿಳಿಸಿದ ಶ್ರೀಯುತ ಸೀತಾರಾಮ ಜಾಗೀರದಾರ ಹಾಗೂ ಡಾ. ಎಚ್.ಆರ್ ರಘುನಾಥ ಭಟ್ ಅವರಿಗೆ ಲೇಖಕನ ಕೃತಜ್ಞತೆಗಳು.
9. ಆದೋನಿಯಲ್ಲಿ ಅಷ್ಟೇ ಅಲ್ಲದೆ ಆಂಧ್ರಪ್ರದೇಶದ ಇತರ ಕೆಲವೆಡೆಗಳಲ್ಲಿ ಕೂಡ ತೆಲುಗು ಶಾಸನಗಳು ಈ ವಿಷಯವನ್ನು ಉಲ್ಲೇಖಿಸುತ್ತವೆ ಎಂದು ಡಾ. ದೇವರಕೊಂಡಾರೆಡ್ಡಿ ತಿಳಿಸಿದ್ದಾರೆ. ಅವರಿಗೆ ಲೇಖಕನ ಧನ್ಯವಾದಗಳು.
10. ಮಾನ್ವಿ ಶಾಸನ, ರಾಯಚೂರು ಜಿಲ್ಲೆ, *ARIE,* 1961-62, 601.
11. ಎಂ. ಚಿದಾನಂದಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (ಮೈಸೂರು,1966), ಪು. 441, ಟಿಪ್ಪಣಿ 220.
12. *SII,* XVIII, 286.
13. ಎಂ.ಎಂ. ಕುಲಬುರ್ಗಿ, *ಧಾರವಾಡ ತಾಲೂಕಿನ ಶಾಸನಗಳು,* 28; *SII,* XV, 258.
14. *SII,* XV, 259; *ವಿಜಯನಗರ ಇನ್ಸ್‌ಕ್ರಿಪ್ಷನ್ಸ್ (VI)* (ಬಾ.ರಾ. ಗೋಪಾಲ್) I, KN. 409.
15. *EC,* XII, Tp. 126; *VI,* III, KN. 2258.
16. *EC,* VI, Kd. 167; *VI,* II, KN. 445.
17. *SII,* XV, 258.
18. *SII,* XX, 239; *VI,* II, KN. 721.
19. *SII,* XV, 260; *VI,* I, KN. 260.
20. *SII,* XVIII, 288, *VI,* II, KN. 706.
21. *SII,* XV, 259.
22. *EC,* XII, Tp. 126.
23. *SII,* XVII, 124; *VI,* I, KN. 295.
24. *SII,* XV, 257.
25. *SII,* XVIII, 285.
26. *VI,* III, KN. 1854.

27. *SII*, XV, 258.

28. *SII*, IX, ii, 628; *VI*, I, KN. 403.

29. *SII*, XV, 261.

30. *VI*, III, KN. 1931; KN. 1928; KN. 1922.

31. *SII*, XVIII, 287.

32. *EC*. VI (New), Sr. 36; *VI*, III, KN. 1625.

33. ಈ ದಿಶೆಯಲ್ಲಿ ಕುರುಬ ಗೌಡರ ಪ್ರಯತ್ನ ಬಾಗಲಿಯ ಒಂದು ಶಾಸನದಲ್ಲಿ ಉಲ್ಲಿಖಿತವಾಗಿದೆ. *VI*, I, KN. 297; *SII*, IX, ii, 641; *SII*, XVII, 96: ಕ್ರಿ.ಶ. 1551.

ಅನುಬಂಧ

ನಾವಿದರ ತೆರಿಗೆ ಮಾನ್ಯ ಉಲ್ಲೇಖಿಸುವ ಶಾಸನಗಳ ಪಟ್ಟಿ

ಮಿತಿ	ಸ್ಥಳ	ಉಲ್ಲೇಖ
1544, ಎಪ್ರಿಲ್ 12	ಸಂಡೂರು, ಬಳ್ಳಾರಿ ಜಿಲ್ಲೆ.	*SII*, XV, 259.
1544, ಅಕ್ಟೋಬರ್ 17	ಧರ್ಮಾಪುರ, ಚಿತ್ರದುರ್ಗ ಜಿಲ್ಲೆ	*EC*, XI, Hr. 28; *VI*, II, KN. 578.
1545, ಫೆಬ್ರುವರಿ 17	ಕುರುಕುಂದಿ, ಆದೋನಿ ತಾಲೂಕು, ಆಂಧ್ರಪ್ರದೇಶ.	*VI*, IV, Ap. 33; *ARSIE*, 1919, 723.
1545, ಆಗಸ್ಟ್ 19	ಚಿಕ್ಕಕಾತೂರು, ಚಿಕ್ಕಮಗಳೂರು ಜಿಲ್ಲೆ.	*EC*, VI, Tk. 13; *VI*, II, KN. 535.
1545 ಆಗಸ್ಟ್ 19	ಚಂದೇನಹಳ್ಳಿ, ತುಮಕೂರು ಜಿಲ್ಲೆ.	*EC*, XII, Tp. 126; *VI*, III, KN. 2258.
1546 ಸೆಪ್ಟೆಂಬರ್ 7	ಹಿರಿಯಂಗಳ, ಚಿಕ್ಕಮಗಳೂರು ಜಿಲ್ಲೆ.	*EC*, VI, Kd. 167; *VI*, II, KN. 445.
1547 ಮೇ 30	ಬಾಗಲಿ, ದಾವಣಗೆರೆ ಜಿಲ್ಲೆ.	*SII*, XVII, 124; *VI*, I, KN. 295.
1547 ಜೂನ್ 8	ಕೊಣ್ಣೂರು, ಧಾರವಾಡ ಜಿಲ್ಲೆ.	*SII*, XVIII, 284.
1547 ಜೂನ್ 28	ಅಮ್ಮಿನಭಾವಿ, ಧಾರವಾಡ ಜಿಲ್ಲೆ.	*SII*, XV, 257.
1547 ಜೂನ್ 28	ಗುತ್ತಲ, ಹಾವೇರಿ ಜಿಲ್ಲೆ.	*SII*, XVIII, 285.
1547 ಜುಲೈ 27	ಮಸ್ಕಿ, ರಾಯಚೂರು ಜಿಲ್ಲೆ.	*APGAS*, No. 9, 12; *VI*, KN. 1919.
1547 ಸೆಪ್ಟೆಂಬರ್ 15	ದೇವರ ಹುಬ್ಬಳ್ಳಿ, ಧಾರವಾಡ ಜಿಲ್ಲೆ.	*SII*, XV, 258.
1547 ಸೆಪ್ಟೆಂಬರ್ 29	ಬಾದಾಮಿ, ಬಾಗಲಕೋಟೆ ಜಿಲ್ಲೆ.	*IA*, X, pp. 64-65.
1547 ಅಕ್ಟೋಬರ್ 21	ಹೆಬ್ಬಳ್ಳಿ, ಬಾಗಲಕೋಟೆ ಜಿಲ್ಲೆ.	*SII*, XV, 259.
1547 ನವೆಂಬರ್ 22	ಲಕ್ಷ್ಮೇಶ್ವರ, ಗದಗ ಜಿಲ್ಲೆ.	*SII*, XX, 239.
1547 ನವೆಂಬರ್ 22	ಬೆಳ್ವಟಗಿ, ಗದಗ ಜಿಲ್ಲೆ.	*SII*, XV, 260.
1547 —	ಹೊಂಬಳ, ಗದಗ ಜಿಲ್ಲೆ.	*ARIE*, 1951-52, 48.
1547 —	ಗುಡಿಸಾಗರ, ಗದಗ ಜಿಲ್ಲೆ.	*SII*, XV, 257.
1548 ಜನವರಿ 20	ಕೊಟ್ಟೂರು, ಬಳ್ಳಾರಿ ಜಿಲ್ಲೆ.	*SII*, IX, ii, 628.
1548 ಫೆಬ್ರವರಿ	ಮೈದೂರು, ದಾವಣಗೆರೆ ಜಿಲ್ಲೆ.	*SII*, IX, ii, 629.
1550 ಜೂನ್ 4	ರಾಣಿಬೆನ್ನೂರು, ಹಾವೇರಿ ಜಿಲ್ಲೆ.	*SII*, XVIII, 286.
1550 ಜೂನ್ 4	ಹಿರೆಕೆರೂರು, ಹಾವೇರಿ ಜಿಲ್ಲೆ.	*KI*, IV, 30.
1553 ಮಾರ್ಚ್ 19	ರಾಯಚೂರು, ರಾಯಚೂರು ಜಿಲ್ಲೆ.	*ARIE*, 1957-58, 385; *VI*, III, KN. 1931.

1553 ಮಾರ್ಚ್ 29	ಮಾನ್ವಿ, ರಾಯಚೂರು ಜಿಲ್ಲೆ.	*ARIE*, 1961-62, 601; *VI*, III, KN. 1929.
1553 ಮಾರ್ಚ್ 29	ಕವಿತಾಳ, ರಾಯಚೂರು ಜಿಲ್ಲೆ.	*ARIE*, 1957-58, 381; *VI*, III, KN. 1928.
1553 ಸೆಪ್ಟೆಂಬರ್ 23	ಮುದುಗಲ್ಲು, ರಾಯಚೂರು ಜಿಲ್ಲೆ.	*ARIE*, 1957-58, 362; *VI*, III, KN. 1922.
1553 ನೆಪ್ಟೆಂಬರ್ 23	ಕರಡಿ, ಬಾಗಲಕೋಟೆ ಜಿಲ್ಲೆ.	*SII*, XV, 261.
1555 ಎಪ್ರಿಲ್ 12	ನಾಗಸಮುದ್ರ, ಚಿತ್ರದುರ್ಗ ಜಿಲ್ಲೆ.	*EC*, XI, Mk. 43; *VI*, II, KN. 645.
1555 ಎಪ್ರಿಲ್ 12	ಸಿದ್ದಾಪುರ, ಚಿತ್ರದುರ್ಗ ಜಿಲ್ಲೆ.	*EC*, XI, Mk. 6; *VI*, II, KN. 648.
1559 ಜನವರಿ 20(?)	ಬಾಗಲಕೋಟೆ (ಈಗ ವಿಜಾಪುರ ವಸ್ತುಸಂಗ್ರಹಾಲಯದಲ್ಲಿದೆ)	*SII*, XVIII, 287.
—	ಸಂಕದಾಳ, ಧಾರವಾಡ ಜಿಲ್ಲೆ.	*SII*, XVIII, 288.
—	ಸೊರಟೂರು, ಗದಗ ಜಿಲ್ಲೆ.	*SII*, XV, 262.
1577/78	ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ.	*EC*, VI (New), Sr. 36; *VI*, II, KN. 1625.

10. ವಿಜಯನಗರ ಕಾಲದಲ್ಲಿ ಉದ್ಯೋಗಸ್ಥ ಮಹಿಳೆಯರು

– ಎನ್. ಸರಸ್ವತಿ

ವಿಜಯನಗರ ಕಾಲದ ಸ್ತ್ರೀಯರ ಬಗ್ಗೆ ಮತ್ತು ಅವರ ಸಾಧನೆಯ ಬಗ್ಗೆ ತಿಳಿಯುವುದಕ್ಕೆ ಆ ಕಾಲದ ಶಿಲ್ಪಗಳು, ವರ್ಣಚಿತ್ರಗಳು ಮತ್ತು ಶಾಸನಗಳು ಸಹಾಯಕವಾಗುತ್ತವೆ. ಆ ಕಾಲದಲ್ಲಿ ವಿದೇಶಗಳಿಂದ ಬಂದಿದ್ದಂತಹ ಬಾರ್ಬೋಸ, ಅಬ್ದುರ್ ರಜಾಕ್, ಡಾಮಿಂಗೊ ಪಾಯಸ್, ಫರ್ನಾವೊ ನ್ಯೂನಿಜ್, ನಿಕೋಲೋಕೌಂಟಿ, ನಿಕಿಟನ್ ಮುಂತಾದ ಪ್ರವಾಸಿಗರು ಪ್ರತ್ಯಕ್ಷವಾಗಿ ನೋಡಿ, ತಿಳಿದು, ಬರೆದು ಬಿಟ್ಟುಹೋಗಿರುವಂತಹ ಸಾಹಿತ್ಯಾಧಾರಗಳು ಸಹ ಸಹಾಯಕವಾಗಿವೆ.

ಸ್ತ್ರೀಯರು ಚಕ್ರವರ್ತಿಯ ಅಂಗರಕ್ಷಕರಾಗಿ ಅರಮನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂಬುದನ್ನು ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿದ್ದ ಗ್ರೀಕ್ ರಾಯಭಾರಿ ಮೆಗಸ್ತನೀಸ್ ತಿಳಿಸುತ್ತಾನೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿಯೂ ಸಹ ಸ್ತ್ರೀಯರ ಬಗ್ಗೆ ತಿಳಿಸುತ್ತಾ ಬಿಲ್ಲು ಬಾಣಗಳನ್ನು ಹಿಡಿದ ಮಹಿಳಾಯೋಧರ ಬಗ್ಗೆ ಉಲ್ಲೇಖಿಸುತ್ತಾನೆ.[1]

ಪೋರ್ತುಗೀಸ್ ಪ್ರವಾಸಿ ಡಾಮಿಂಗೊ ಪಯಸ್ ವಿಜಯನಗರ ಕಾಲದ ರಾಣಿಯರ, ರಾಜಗೃಹ ಸ್ತ್ರೀಯರ, ಶಿಖಂಡಿಯರ ಮತ್ತು ರಾಣಿಯರ ಸೇವಕರ ಬಗ್ಗೆ ವಿವರಗಳನ್ನು ನೀಡುತ್ತಾನೆ. ಪ್ರತಿಯೊಬ್ಬ ರಾಣಿಯೂ ತನ್ನದೇ ಆದ ಮನೆಯನ್ನು, ಬಾಲೆಯರನ್ನು, ಸಭಾಮಂದಿರದ ಸ್ತ್ರೀಯರನ್ನು, ರಕ್ಷಣಾ ಸ್ತ್ರೀಯರನ್ನು ಮತ್ತು ಹಲವಾರು ಇತರ ಸೇವಕಿಯರನ್ನು ಹೊಂದಿದ್ದಳು. ಆದರೆ, ಅವರ ಬಳಿ ಒಬ್ಬನೆ ಒಬ್ಬ ಗಂಡಸಿನ ಅವಶ್ಯಕತೆ ಇರುತ್ತಿರಲಿಲ್ಲ. ಒಂದುವೇಳೆ ಅವಶ್ಯಕತೆ ಇದ್ದರೆ ಶಿಖಂಡಿಯು ರಾಣಿಯರನ್ನು ನೋಡಿಕೊಳ್ಳುತ್ತಿದ್ದನು. ಇಂತಹ ಹನ್ನೆರಡು ಸಾವಿರ ಸ್ತ್ರೀಯರಿದ್ದರು. ಸಾಮಾನ್ಯವಾಗಿ ಈ ಸ್ತ್ರೀಯರೆಲ್ಲರೂ ಖಡ್ಗ ಮತ್ತು ಗುರಾಣಿಗಳನ್ನು ಹಿಡಿಯುವ, ಮಲ್ಲಯುದ್ಧ ಮಾಡುವ, ತುತ್ತೂರಿ ಊದುವ ಮತ್ತು ಇತರ ಸಂಗೀತ ವಾದ್ಯಗಳನ್ನು ನುಡಿಸುವ ಸಾಮರ್ಥ್ಯ ಉಳ್ಳವರಾಗಿದ್ದರು. ರಾಜನಂತೆ ರಾಣಿಯರೂ ಸಹ ಆಳುಗಳನ್ನು, ಬಟ್ಟೆ ಒಗೆಯುವವರನ್ನು ಮತ್ತು ಅಧಿಕಾರಿಗಳನ್ನು ತಮ್ಮ ಮನೆಗಳ ಮಹಾದ್ವಾರಗಳ ಒಳಗಡೆ ಹೊಂದಿದ್ದರು.[2]

ರಕ್ಷಣಾ ಸಿಬ್ಬಂದಿಯವರು ರಾಣಿಯರ ಮನೆಗಳ ಆವರಣಗಳಲ್ಲಿ ನಡೆಯುವ ಪ್ರತಿಯೊಂದು ಘಟನೆಯ ಮೇಲೆ ಕಣ್ಣಿಟ್ಟಿರುತ್ತಿದ್ದರು. ಮಹಾದ್ವಾರಗಳಿಂದ ಪ್ರವೇಶ ಮಾಡುವವರನ್ನು ಮತ್ತು ಹೊರ ಹೋಗುವವರನ್ನು ನಿಯಂತ್ರಿಸುತ್ತಿದ್ದರು.

ವಿಜಯನಗರ ಕಾಲದ ಸಾಹಿತ್ಯ ಮತ್ತು ಶಾಸನಗಳ ಪ್ರಕಾರ ಅಂದಿನ ಕೌಟುಂಬಿಕ ಜೀವನದಲ್ಲಿ ಮೂರು ವರ್ಗದ ಸ್ತ್ರೀಯರು ಇರುತ್ತಿದ್ದರು. ಅವರೆಂದರೆ ಕುಲಸ್ತ್ರೀ, ಭೋಗಸ್ತ್ರೀ ಮತ್ತು ವೇಶ್ಯೆ. ಹೆಚ್ಚಿನ ಸ್ತ್ರೀಯರು ಮೊದಲನೆಯ ಗುಂಪಿನಲ್ಲಿದ್ದರೆ, ಎರಡು ಮತ್ತು ಮೂರನೆಯ ಗುಂಪಿನ ಸ್ತ್ರೀಯರು ಕಡಿಮೆ ಪ್ರಮಾಣದಲ್ಲಿದ್ದರು. ಮೊದಲನೇ ಗುಂಪಿನ ಸ್ತ್ರೀಯರು ನ್ಯಾಯಬದ್ಧವಾಗಿ ಮದುವೆಯಾಗಿ, ಧರ್ಮಪತ್ನಿಯರಾಗಿರುತ್ತಿದ್ದರು. ತಮ್ಮ ಗಂಡಂದಿರ ಬಗ್ಗೆ ಶ್ರದ್ಧೆ, ಭಕ್ತಿಯಿಂದಿರುತ್ತಿದ್ದರು. ಇದು ತಮ್ಮ ಗಂಡನ ಬಗ್ಗೆ ತೋರಿಸುತ್ತಿದ್ದ ದೊಡ್ಡದಾದ ಸದ್ಗುಣ ಭಕ್ತಿಯಾಗಿತ್ತು. ತನ್ನ ಮಕ್ಕಳಿಗೆ ತಾಯಿಯಾಗಿ ಮತ್ತು ಮನೆಯಲ್ಲಿ ಗೃಹಪತ್ನಿಯಾಗಿ ಕೆಲಸ ಮಾಡುವುದು ಅವಳ ಹೊಣೆಗಾರಿಕೆಯಾಗಿತ್ತು. ಅಂದು ಅವಳದು ಬಿಡುವಿಲ್ಲದ ಜೀವನವಾಗಿತ್ತು. ಮನೆಯನ್ನು ಗುಡಿಸುವುದು, ರಂಗೋಲಿಯನ್ನು ಬಿಡುವುದರ ಮೂಲಕ ಮನೆಯನ್ನು ಸಿಂಗರಿಸುವುದು, ಪಾತ್ರೆಗಳನ್ನು ತೊಳೆಯುವುದು, ಅಡಿಗೆಯನ್ನು ಮಾಡುವುದು ಹೀಗೆ ಇತ್ಯಾದಿ ಕೆಲಸಗಳಲ್ಲಿ ತೊಡಗುತ್ತಿದ್ದಳು. ಅವಳು ಸಾಮಾನ್ಯವಾಗಿ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ.[3]

ಆ ಕಾಲದಲ್ಲಿ ಸ್ತ್ರೀಯರು ಹಲವಾರು ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಅಂದರೆ, ಮಡಿಕೆ ತಯಾರಿಕೆ, ಬುಟ್ಟಿ ಮತ್ತು ಚಾಪೆ ಹೆಣೆಯುವುದು, ಹೂಗಳನ್ನು ಕಟ್ಟುವುದು, ಬಟ್ಟೆ ನೇಯುವುದು ಮತ್ತು ಬಟ್ಟೆ ಹೊಲಿಯುವುದರಲ್ಲಿ ತಮ್ಮ ಸೇವೆ ಸಲ್ಲಿಸುತ್ತಿದ್ದರು.[4] ಅವರು ಬಿಲ್ಲು ಬಾಣಗಳನ್ನು ಸಹ ತಯಾರಿಸುತ್ತಿದ್ದರು.

ಆ ಕಾಲದಲ್ಲಿ ಸ್ತ್ರೀಯರು ಮತ್ತು ದೇವಾಲಯಗಳ ನಡುವೆ ಉತ್ತಮವಾದ ಸಂಬಂಧವಿತ್ತು. ದೇವಾಲಯ ಧರ್ಮದ ಚಿಹ್ನೆಯಾಗಿತ್ತು. ದೇವಾಲಯದಲ್ಲಿ ಸ್ತ್ರೀಯರು ಉದ್ಯೋಗಸ್ಥರಾಗಿ ಸೇರಿ ಹಲವಾರು ರೀತಿಯಲ್ಲಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸೇವೆ ಸಲ್ಲಿಸುತ್ತಿದ್ದರು. ಅಂದರೆ ನೃತ್ಯ, ಸಂಗೀತ, ಹಾಡುಗಾರಿಕೆ ಹಾಗೂ ಇತರ ಸೇವೆ ಸಲ್ಲಿಸುತ್ತಿದ್ದರು. ಇಂತಹವರನ್ನು ರಂಗಭೋಗದವರು, ಭೋಗದವರು, ದೇವದಾಸಿಗಳು, ಪಾತ್ರಿ ಮತ್ತು ಸಾನಿ ಎಂದು ಕರೆಯುತ್ತಿದ್ದರು.

ಮಧುರಾಪುರಿಯ ಮಾಧವಿದೇವಿಯ ದೇವಾಲಯದ ಸೇವೆಯಲ್ಲಿ ಸಾನಿಯರು ಇದ್ದುದನ್ನು ಅಮರಾವತಿಯ ಕ್ರಿ.ಶ. 1515 ರ ಶಾಸನದಿಂದ ತಿಳಿಯುತ್ತದೆ.[5] ಸಿಂಹಾಚಲಂನ ನರಸಂಹದೇವರ ಮುಂದೆ ನಾಮ ಸಂಕೀರ್ತನ ಹಾಡುವುದಕ್ಕಾಗಿ ಸಾನಿಯರಿದ್ದರೆಂಬುದು ಅಲ್ಲಿಯ ಕ್ರಿ.ಶ. 1359ರ

ಶಾಸನದಿಂದ ತಿಳಿಯುತ್ತದೆ.[6] ಅದೇ ದೇವರ ಸನ್ನಿಧಿಯಲ್ಲಿ ವೀಣೆ ಮತ್ತು ಇತರ ವಾದ್ಯಗಳನ್ನು ನುಡಿಸುವುದಕ್ಕಾಗಿ ಇಬ್ಬರು ಸ್ತ್ರೀಯರಿದ್ದುದು ಕ್ರಿ.ಶ. 1349ರ ಮತ್ತೊಂದು ಶಾಸನದಿಂದ ತಿಳಿಯುತ್ತದೆ.[7] ಅಲ್ಲದೆ, ದೇವರಿಗೆ ಚಾಮರ ಬೀಸಲು ಇಬ್ಬರು ಸಾನಿಯರು ಮತ್ತು ದೇವಾಲಯದಲ್ಲಿ ಕನ್ನಡಿ ಹಿಡಿಯಲು ಮತ್ತು ರಂಗೋಲಿ ಇಡಲು ಒಬ್ಬ ಸ್ತ್ರೀ ಇದ್ದುದು ಸಹ ಶಾಸನಗಳಿಂದ ತಿಳುಯುತ್ತದೆ.[8]

ಆ ಕಾಲದಲ್ಲಿ ದೇವದಾಸಿಯಾಗಿ ದೇವಾಲಯಗಳಲ್ಲಿ ಸೇವೆಸಲ್ಲಿಸುವುದು ಒಂದು ಮಹತ್ವದ ವಿಷಯವಾಗಿತ್ತು. ದೇವದಾಸಿಯರನ್ನು ಕಡ್ಡಾಯವಾಗಿ ಮತ್ತು ಸಾಂಪ್ರದಾಯಿಕವಾಗಿ ಆಯ್ಕೆಮಾಡಲಾಗುತ್ತಿತ್ತು. ದೇವರಿಗೆ ವಿಶೇಷ ಸಂದರ್ಭಗಳಲ್ಲಿ ಪೂಜೆಪುನಸ್ಕಾರ ಪ್ರಾರಂಭವಾಗುವ ಮೊದಲು ಇವರು ನೃತ್ಯ ಮತ್ತು ಹಾಡುಗಾರಿಕೆಯಲ್ಲಿ ನಿರತರಾಗಿರುತ್ತಿದ್ದರು. ದೇವರಿಂದ ಮುಕ್ತಿ ಪಡೆಯಬೇಕಾದರೆ ಅವರ ಸೇವೆಯು ಅನಿವಾರ್ಯವಾಗಿತ್ತು. ದೇವದಾಸಿಯರು ದೇವಾಲಯದಲ್ಲಿ ತಾವು ಮಾಡಿದ ಸೇವೆಗಾಗಿ ದೇವಾಲಯದ ನಿಧಿಯಿಂದ ಸಂಭಾವನೆ ಪಡೆಯುತ್ತಿದ್ದರು.

ಆ ಕಾಲದಲ್ಲಿ ಸ್ತ್ರೀಯರು ಬಹಳ ಉನ್ನತವಾದ ಹುದ್ದೆಯ ಅಧಿಕಾರವನ್ನು ಹೊಂದಿದ್ದರು. ಅಡಿಪಂ ಪರರ್ಮದಮ್ಮಂ ಮತ್ತು ರುಕ್ಮಣೀ ಅಮ್ಮನ್ ಇವರು ಅಚ್ಯುತರಾಯನ ಕಾಲದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದರು.[9] ಮಲ್ಲಮ್ಮನ್, ಅರವಿಟ್ಟು ಲಕ್ಷ್ಮಿಯಮ್ಮನ್ ಮತ್ತು ತಿಮ್ಮಕ್ಕ ಇವರು ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಕಾಲದಲ್ಲಿ ಉನ್ನತ ಹುದ್ದೆಗೇರಿ ಸೇವೆ ಸಲ್ಲಿಸುತ್ತಿದ್ದರು.[10]

ಸ್ತ್ರೀಯರು ಭೂಮಿಯ ವ್ಯವಸಾಯದಲ್ಲೂ ಮಹತ್ವವಾದ ಪಾತ್ರನಿರ್ವಹಿಸಿದ್ದಾರೆ. ಮೊಚ್ಚೊಬ್ಬರಸಿ ಕುಂಬಾಳೆಯ ಮುಖ್ಯಸ್ಥನಿಂದ ಉಳುಮೆಗೆ ಒಳಪಡದ ಭೂಮಿಯನ್ನು ಸ್ವೀಕರಿಸಿ, ಅದನ್ನು ಫಲವತ್ತಾಗಿ ಮಾಡಿ, ಮನೆಯನ್ನು ಕಟ್ಟಿ ತೋಟವನ್ನು ಬೆಳೆಸಿದಳೆಂದು ತಾಳಂಗೇರಿಯ ಶಾಸನವು ತಿಳಿಸುತ್ತದೆ.[11] ಉಳ್ಳಾಲದ ರಾಣಿ ಎರಡನೇ ಅಬ್ಬಕ್ಕ ತನ್ನ ಭೂಮಿಯ ಮೇಲ್ವಿಚಾರಣೆಯನ್ನು ತಾನೇ ಮಾಡುತ್ತಿದ್ದಳು.[12] ಸ್ತ್ರೀಯರು ಕೃಷಿಕಾರ್ಮಿಕರಾಗಿ ಕೆಲಸಮಾಡುತ್ತಿದ್ದುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಇಟಲಿಯ ಪ್ರವಾಸಿಗ ಪಿತ್ರೊದೆಲ್ಲವಲ್ಲೆಯು ಹಲವಾರು ಸ್ತ್ರೀಯರು ಕೃಷಿಯ ಚಟುವಟಿಕೆಯನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದರೆಂದು ತಿಳಿಸುತ್ತಾನೆ. ಅವರು ಬೀಜ ಬಿತ್ತುವುದು, ಸಸಿ ಬೆಳೆಸುವುದು, ಗೊಬ್ಬರ ಹಾಕುವುದು, ಧಾನ್ಯಗಳನ್ನು ಸಂಗ್ರಹಿಸಿ ರಾಶಿ ಮಾಡುವುದು ಮುಂತಾದ ಕೆಲಸ ಮಾಡುತ್ತಿದ್ದರು.[13]

ಹೀಗೆ ವಿಜಯನಗರ ಕಾಲದಲ್ಲಿ ಸ್ತ್ರೀಯರು ಹಲವಾರು ವಿಧದಲ್ಲಿ ರಕ್ಷಕಿ, ನೃತ್ಯಗಾರ್ತಿ, ದೇವಾಲಯ ಸೇವಕಿ, ಮನೆಗೆಲಸಗಿತ್ತಿ, ಮನೆ ಒಡತಿ, ಕಲಾವಿದೆ, ಅಧಿಕಾರಿ, ಕೈಗಾರಿಕೆ ಮತ್ತು ಕೃಷಿ ಉದ್ಯೋಗಸ್ಥರಾಗಿ ತಮ್ಮ ಸಾಧನೆಯನ್ನು ಮಾಡಿದ್ದಾರೆ.

ಟಿಪ್ಪಣಿಗಳು

1. ತಾರಾ ಅಲಿ ಬೇಗ್, 1976, *ವುಮೆನ್ ಇನ್ ಎನ್ಷಿಯಂಟ್ ಇಂಡಿಯ,* ದೆಹಲಿ, ಪು. 6.
2. ಸಿವೆಲ್ ರಾಬರ್ಟ್, 1982(ಪುನರ್ಮುದ್ರಣ), *ಎ ಫಾರ್ಗಾಟನ್ ಎಂಪಾಯರ್,* ನ್ಯೂಡೆಲ್ಲಿ, ಪು. 248-249
3. *ಅದೇ,* ಪು. 246.
4. ವಿನುಕೊಂಡ ವಲ್ಲಭಾಮಾತ್ಯ, *ಕ್ರಿದಾಭಿರಾಮಂ,* ಪು. 81.
5. *ಮ್ಯಾಕೆಂಜಿ ಮ್ಯೂನುಸ್ಕ್ರಿಪ್ಸ್,* ಭಾಗ 5, ಪು. 31-40.
6. *ತಿರುಮಲೈ ತಿರುಪತಿ ಎಪಿಗ್ರಾಫಿಕಲ್ ರಿಪೋರ್ಟ್,* II, ಸಂ. 1379.
7. *ಸೌಇಂಇ,* IV, ಸಂ. 955.
8. *ಅದೇ,* IV, ಸಂ. 818, 1099.
9. *ತಿರುಮಲೈ ತಿರುಪತಿ ದೇವಸ್ಥಾನ ಇನ್ಸ್‌ಕ್ರಿಪ್ಶನ್ಸ್,* ಸಂ. 540, ಪು. 315.
10. *ಅದೇ,* ಸಂ. 60, 325, 328.
11. *ಎಇಂ,* XXIX, ಪು. 208-209.
12. ಪಿತ್ರೊದೆಲ್ಲವಲ್ಲೆ, *ದಿ ಟ್ರಾವೆಲ್ಸ್ ಆಫ್ ಪಿತ್ರೊದೆಲ್ಲವಲ್ಲೆ ಟು ಇಂಡಿಯ,* ಪು. 337.
13. *ಅದೇ,* ಪು. 296.

11. ಧಾರ್ಮಿಕ ಸ್ಥಿತ್ಯಂತರದ ಪ್ರಾತಿನಿಧಿಕ ಕೃತಿಯಾಗಿ ಲಿಂಗಲೀಲಾವಿಲಾಸ ಚಾರಿತ್ರ

– ಮೃತ್ಯುಂಜಯ ರುಮಾಲೆ

ಹನ್ನೆರಡನೇ ಶತಮಾನದಲ್ಲಿ ನಡೆದ ಸಮಾಜೋಧಾರ್ಮಿಕ ಆಂದೋಲನದ ಉಪನಿಷ್ಪತ್ತಿಯ ಫಲವಾಗಿ ಮೂಡಿದವುಗಳೇ ವಚನಗಳು. ಆ ಕಾಲದ ಹೋರಾಟದ ಒಂದು ಭಾಗವಾಗಿ ಈ ವಚನಗಳು ಹುಟ್ಟಿದ್ದರೂ ಇಂದೂ ಆ ವಚನಗಳು ಮಾತ್ರ ಆ ಕಾಲದ ಹೋರಾಟದ ಸಮಗ್ರ ಚಿತ್ರಕ್ಕೆ ಚೌಕಟ್ಟನ್ನು ಒದಗಿಸುತ್ತವೆ. ವಿಷಮ ಸಮಾಜವೇ ಹೋರಾಟಕ್ಕೆ ಕಾರಣವಾಗಿದ್ದರಿಂದ ಈ ಸಮಾಜವನ್ನು ಪ್ರಮುಖವಾದ ನಾಲ್ಕು ತಳಹದಿಯ ಹಿನ್ನೆಲೆಯಲ್ಲಿ ತಿದ್ದುವ ಯತ್ನ ಮಾಡಿದ್ದು ಈ ಹೋರಾಟದ ಒಂದು ವೈಶಿಷ್ಟ್ಯವಾಗಿದೆ. ಸಮಾಜವೇ ಪ್ರಧಾನವಾದ ಕರ್ಮಕ್ಷೇತ್ರವಾಗಿದ್ದರಿಂದ ಆ ಸಮಾಜದಲ್ಲಿ ಅನುಸ್ಯೂತವಾಗಿ ಹೊಡಕಲಿಸಿರುವ ಧರ್ಮ, ರಾಜಕೀಯ, ವರ್ಗ–ವರ್ಣ–ಲಿಂಗಗಳಂಥ ಮಾನದಂಡಗಳ ಪರಿಷ್ಕಾರವೂ ಒಂದೇ ಕಾಲದಲ್ಲಿ ಆಗಬೇಕಾಗಿದ್ದ ಸುಧಾರಣೆಗಳು. ಮತ್ತೊಂದು ವಿಶೇಷ, ಹೆಮ್ಮೆ ಎಂದರೆ ಜಗತ್ತಿನ ಯಾವುದೇ ಹೋರಾಟದ 'ಹುಟ್ಟು'ನೊಂದಿಗೆ ಈ ಹನ್ನೆರಡನೇ ಶತಮಾನದ ಹೋರಾಟವನ್ನು ಹೋಲಿಸಿದಾಗ ಕೆಲವು ಸಾಮ್ಯಗಳನ್ನು ಗುರುತಿಸಬಹುದು. ಆದರೆ ಈ ಹೋರಾಟ ಬೆಳೆದ ಬಗೆ, ಬೆಳೆಯುವುದಕ್ಕಾಗಿ ರೂಪಿಸಿಕೊಂಡ ತತ್ತ್ವಗಳ ಆಲೋಚನೆ, ಅದಕ್ಕೆ ಸಿಕ್ಕ ಸಾರ್ವಜನಿಕ ಬೆಂಬಲ–ಮನ್ನಣೆಯಂಥ ಪ್ರಮಾಣಗಳು ಮಾತ್ರ ಹನ್ನೆರಡನೇ ಶತಮಾನದ ಹೋರಾಟಕ್ಕೆ ಒಂದು ಹೊಸ ಮೇಲ್ಮೆಯನ್ನು ಒದಗಿಸುತ್ತವೆ.

ಒಂದೇ ಕಾಲದಲ್ಲಿ ಒಂದೇ ಪ್ರದೇಶದಲ್ಲಿ ಎಲ್ಲಾ ವರ್ಗ–ವರ್ಣ–ಲಿಂಗಗಳ ಸಮೂಹ ಸಾಮಾಜಿಕ ಚಿಂತನೆ–ಸುಧಾರಣೆಗೆ ತೊಡಗಿದ್ದು ಒಂದು ಅಪರೂಪ ವಿಶೇಷ. ಒಂದೇ ಕಾಲದಲ್ಲಿ ಸಾಮಾಜಿಕವಾಗಿ ಶರಣರಾಗಿ, ಧಾರ್ಮಿಕವಾಗಿ ವೀರಶೈವರಾಗಿ, ರಾಜಕೀಯವಾಗಿ ಹೋರಾಟಗಾರರಾಗಿ, ಸಾಹಿತ್ಯವಾಗಿ ವಚನಕಾರರಾಗಿ ಚರಿತ್ರೆಯಲ್ಲಿ ಒಂದು ಮಹತ್ವದ ಸ್ಥಾನ ಪಡೆಯುತ್ತಿರುವುದು ಒಂದು ವಿಶೇಷವಾಗಿದೆ.

ರಾಜಕಾರಣದೊಂದಿಗೆ ಯಾವುದೇ ರೀತಿಯಲ್ಲಿ ಸಂಧಾನ (Compromise) ಮಾಡಿಕೊಳ್ಳದ ಈ ಚಳುವಳಿ ಸಮಾಜ ಮತ್ತು ಧರ್ಮಗಳಲ್ಲಿ ಪರಿಷ್ಕಾರವನ್ನು ಬಯಸಿತು. ಈ ಮೂಲೋದ್ದೇಶದ ತಳಹದಿಯಲ್ಲಿ ಉಪಉತ್ಪಾದನೆಯಾಗಿ ಬಂದ ಸಾಹಿತ್ಯ ಸಹಜವಾಗಿ ಸಮಾಜಮುಖಿಯಾಯಿತು. ಧರ್ಮಪ್ರಧಾನವಾಗಿ ಅಥವಾ ಧರ್ಮಮೂಲವಾಗಿ ಹೇಳಲಾಗುವ ವಿಚಾರಗಳಿಗೆ ಧರ್ಮದ ಭಾವುಕತೆ ಹೊಂದಿರುವ ಭಾರತೀಯ ಸಮಾಜ ಧರ್ಮದ ಮನೋಭಾವನೆಯಿಂದಲೇ ಸ್ವೀಕರಿಸಲು ಬಯಸುವುದರಿಂದ ಈ ಚಳುವಳಿ ಮೊದಲು ಸಾಮಾಜಿಕ ಆನಂತರ ಧಾರ್ಮಿಕವಾಗಿದ್ದರಿಂದ ಸಮಾಜೋಧಾರ್ಮಿಕ ಎನಿಸಿತು. ಆದರೂ ಸಾಮಾಜಿಕವಾಗಿ ಬಸವಣ್ಣ, ತಾತ್ತ್ವಿಕವಾಗಿ ಅಲ್ಲಮಪ್ರಭು, ಧಾರ್ಮಿಕವಾಗಿ ಚನ್ನಬಸವಣ್ಣ, ಸ್ತ್ರೀ ಧ್ವನಿಯಾಗಿ ನೀಲಾಂಬಿಕೆ –ಯರು ಒಂದೊಂದು ನೆಲೆಯ ಪ್ರಾತಿನಿಧಿಕ ವ್ಯಕ್ತಿಗಳಾಗಿದ್ದಾರೆ. – ಈ ನಾಲ್ಕು ನೆಲೆಗಳು ಒಂದೇ ಕಾಲದಲ್ಲೇ ಪ್ರಜ್ವಲಿಸುವ ಯುಗಧರ್ಮದ ಸಂದರ್ಭವನ್ನು ಪಡೆದಿದ್ದ ಚಳುವಳಿ ತನ್ನ ಕಾಲದಲ್ಲಿ ತಾತ್ಕಾಲಿಕ ತೃಪ್ತಿಯನ್ನು ಪಡೆದಿರಲಿಕ್ಕೆ ಸಾಕು. ಮುಕ್ತ ಮತ್ತು ಉದಾರ ಸಮಾಜದ ಪರಂಪರೆಯನ್ನೇ ಸೃಷ್ಟಿಮಾಡಬೇಕಾಗಿದ್ದುದು ಶರಣ ಚಿಂತನೆಯ ಭವಿಷ್ಯದ ಅಂಶವಾಗಿದೆ.

ಹನ್ನೆರಡನೇ ಶತಮಾನದ ಚಳುವಳಿ ಸಮಾಜ, ಧರ್ಮ, ರಾಜಕಾರಣ ಮತ್ತು ಸಾಹಿತ್ಯಗಳಿಗೆ ಪ್ರತಿಸ್ಪಂದನವಿತ್ತಿದ್ದರಿಂದ ಅದು ಆ ಕಾಲದಲ್ಲಿ ವಿಜೃಂಭಿಸಿತು. ಇದು ಹೀಗೆ ವಿಜೃಂಭಿಸಿದ್ದರ ಪರಿಣಾಮವೋ ಏನೋ ನಂತರದ ಕಾಲದಲ್ಲಿ ತನ್ನ 'ಪೂರ್ಣ ಪ್ರಮಾಣ'ದ ಹಿಡಿತವನ್ನುಳಿಸಿಕೊಳ್ಳಲಿಲ್ಲ! ಬಸವಾದಿ ನೇತಾರ ಶರಣರು 'ಲಿಂಗೈಕ್ಯ'ರಾದ ಬಳಿಕ ಚಳುವಳಿ ವಿಫಲವಾಯಿತು. ಕರ್ನಾಟಕ ಮತ್ತು ಭಾರತದಾದ್ಯಂತ ನಡೆದ ರಾಜಕೀಯ ವಿಪ್ಲವತೆ ಕಾರಣವಾಗಿ ಚಳುವಳಿ ಕುಂಠಿತಗೊಂಡಿತು. ನಾಲ್ಕು ನೆಲೆಗಳಲ್ಲಿ ಬೆಳವಣಿಗೆ ಸಾಧಿಸುವುದಿರಲಿ, ತನ್ನ ಸ್ವರೂಪವನ್ನು ಸಂಕ್ಷೇಪವಾಗಿಯಾಗಲೀ ಮುಂದುವರಿಸುವುದು ಕಷ್ಟ ಸಾಧ್ಯವಾಗಿತ್ತು.

ಡಾ. ಎಂ. ಚಿದಾನಂದ ಮೂರ್ತಿಯವರು ವೀರಶೈವ ಧರ್ಮದ ಬೆಳವಣಿಗೆಯಲ್ಲಿ ನಾಲ್ಕು ಪ್ರಮುಖ ಘಟ್ಟಗಳನ್ನು ಗುರುತಿಸುತ್ತಾರೆ. ಮೊದಲನೇ ಘಟ್ಟ : ಬಸವ, ಅಲ್ಲಮರ ನೇತೃತ್ವದ ಹನ್ನೆರಡನೇ ಶತಮಾನದ ಚಳುವಳಿ. ಎರಡನೇ ಘಟ್ಟ : ಏಕಾಂತದ ರಾಮಯ್ಯ ಮತ್ತು ಆದಯ್ಯರ ಕಾಲ; ಧಾರ್ಮಿಕ ಮನೋಭಾವನೆಯಲ್ಲಿ ಇಬ್ಬರೂ ಒಂದೇ ರೀತಿಯಲ್ಲಿದ್ದು ಜೈನರೊಡನೆ ವಾದ ಮಾಡಿ ಗೆಲುವು ಸಾಧಿಸಿದ ವೀರಶೈವ ಧರ್ಮದ ಪ್ರಾತಿನಿಧಿಕ ವ್ಯಕ್ತಿಗಳು. ಮೂರನೇ ಘಟ್ಟ : ಕೆರೆಯ ಪದ್ಮರಸ, ಕುಮಾರ ಪದ್ಮರಸರ ಕಾಲ. ಇವರು ವಿದ್ವತ್ ಸಭೆಯಲ್ಲಿ ಆಂಧ್ರಪ್ರದೇಶದ ತ್ರಿಭುವನ ತಾತನೆಂಬ ವೈಷ್ಣವನನ್ನು ವಾದದಲ್ಲಿ ಸೋಲಿಸುತ್ತಾರೆ. ತ್ರಿಭುವನ ತಾತ ವೀರಶೈವ ಧರ್ಮವನ್ನಂಗೀಕರಿಸುವುದಲ್ಲದೇ, 'ಗುರುರಗಳೆ' ಎಂಬ ಕಾವ್ಯವನ್ನು ಬರೆದು ತನ್ನ ಶಿವದೀಕ್ಷೆಗೆ ಸಾಕ್ಷಿ ಹೇಳುತ್ತಾನೆ.

ನಾಲ್ಕನೇ ಘಟ್ಟ : ವಿಜಯನಗರದ ಅರಸು ಪ್ರೌಢದೇವರಾಯನ ಕಾಲದಲ್ಲಿ ನಡೆದ ವೀರಶೈವ ಧಾರ್ಮಿಕ ಚಟುವಟಿಕೆ ಮತ್ತು ಆ ನಂತರದಲ್ಲಿ ನಡೆದ ತೋಂಟದ ಸಿದ್ಧಲಿಂಗ ಯತಿಗಳ ನೇತೃತ್ವದ ಧಾರ್ಮಿಕ ಸುಸಂಘಟನೆ.[1]

ವೀರಶೈವ ಧರ್ಮದ ಈ ನಾಲ್ಕು ಘಟ್ಟಗಳಲ್ಲಿ ಒಂದು ಗಮನಾರ್ಹ ಅಂಶವೆಂದರೆ ಮೊದಲ ಘಟ್ಟದಲ್ಲಿ ಜಾಗೃತವಾಗಿದ್ದ 'ನಾಲ್ಕೂ' ನೆಲೆಗಳು (ಸಮಾಜ, ಧರ್ಮ, ರಾಜಕೀಯ, ಸಾಹಿತ್ಯ) ನಂತರದ ಘಟ್ಟಗಳಲ್ಲಿ ಸ್ಥಿತ್ಯಂತರದ ಪರಿಣಾಮವಾಗಿ ಒಂದು ಕಡೆ – ಧಾರ್ಮಿಕ ಸಂಘರ್ಷ, ಇನ್ನೊಂದು ಕಡೆ – ಧಾರ್ಮಿಕ ಸ್ಪರ್ಧೆ, ಮತ್ತೊಂದು ಕಡೆ – ವೀರಶೈವ ಧಾರ್ಮಿಕ ಸಾಹಿತ್ಯದ ಸಂಕಲನ, ವ್ಯವಸ್ಥಾಪನ, ವ್ಯಾಖ್ಯಾನದಂತಹ 'ಕರಣಿಕ–ಶೈಕ್ಷಣಿಕ ಪ್ರವೃತ್ತಿ'ಗಳಿಂದ ಚಳುವಳಿಯ ಸ್ವರೂಪ ಬದಲಾಗುತ್ತ ಹೋಯಿತು. ನಾಲ್ಕು ನೆಲೆಗಳಲ್ಲಿ ಧರ್ಮವೊಂದೇ ಜಾಗೃತಗೊಂಡು (ಅದೂ ತಾತ್ತ್ವಿಕವಾಗಿ ಕ್ರಮೇಣ ಭಿನ್ನಗೊಂಡಿತು ಎಂಬುದೂ ಇಲ್ಲಿ ಗಮನಾರ್ಹ). ಉಳಿದ ಚಿಂತನೆಗಳು ನಿಸ್ತೇಜವಾಗಿದ್ದು 'ಮಾರ್ಗದರ್ಶನದ ಅನಾಥತೆ'ಯೇ ಕಾರಣವಾಗಿದೆ. ಕಾಲದಿಂದ ಕಾಲಕ್ಕೆ ರಾಜಕಾರಣ ಬದಲಾಗುತ್ತದೆ. ಸಾಹಿತ್ಯವೂ ವಸ್ತು–ಶೈಲಿಗಳಿಂದ ಬದಲಾಗುತ್ತದೆ. ಸಮಾಜದ ಮೌಲ್ಯಗಳೂ ಅದಲು ಬದಲಾಗುತ್ತವೆ. ಇದಕ್ಕೆ ಪ್ರತಿಸ್ಪಂದನವಾಗಿ ಮೊದಲ ಘಟ್ಟದ ಆಲೋಚನೆಗಳು ನಂತರದ ಘಟ್ಟಗಳಲ್ಲಿ ಮುಂದುವರೆಯುವುದು ಕಷ್ಟ ಸಾಧ್ಯವಾಗಿದೆ. ಆದರೆ ಸಾಮಾಜಿಕ ಅಸ್ತಿತ್ವಕ್ಕಾಗಿ ಧರ್ಮವೂ ಸ್ಥಿತ್ಯಂತರಗೊಳ್ಳುವುದೂ ಈ ಸಂದರ್ಭದಲ್ಲಿ ನಡೆಯುತ್ತದೆಯಲ್ಲದೇ ಅದರ ಜೊತೆಗೆ ಪ್ರತಿ ಘಟ್ಟಗಳಲ್ಲೂ ಬದುಕಿರುವುದು ಧರ್ಮ ಮತ್ತು ಅದರ ಪ್ರತಿರೂಪವಾಗಿರುವ (ಮತ್ತು ವಚನಗಳ ಆಶಯಕ್ಕೆ ಭಿನ್ನವಾದ) ಸಾಹಿತ್ಯ ಸೃಷ್ಟಿ. ಅಂದರೆ "ಹನ್ನೆರಡನೇ ಶತಮಾನದಲ್ಲಿ ಮಾತನಾಡಿದ್ದು ಕರ್ನಾಟಕದ ಸಮಾಜ. ಹದಿಮೂರನೇ ಶತಮಾನದ ಬಳಿಕ ಆಧುನಿಕ ಕಾಲದವರೆಗೆ ಮಾತನಾಡಿದ್ದು ಕರ್ನಾಟಕದ ಲಿಂಗಾಯತ ಕವಿಗಳು ಮತ್ತು ಜಂಗಮ ವಿದ್ವಾಂಸರು. ಕವಿಗಳು ಲಿಂಗಾಯತ ಚಳುವಳಿಯ ನೇತಾರರನ್ನು ಪವಾಡ ಕಟ್ಟುಕತೆ ವರ್ಣನೆ ಉತ್ಪ್ರೇಕ್ಷೆಗಳ ಮಧ್ಯೆ ಇಟ್ಟು ಮೆರವಣಿಗೆ ಮಾಡಿಸಿದರು. ಜಂಗಮ ವಿದ್ವಾಂಸರು ಸಾಮಾಜಿಕ ಉದ್ದೇಶದ ವಚನಗಳಿಗೂ ತಮ್ಮ ಮನಸ್ಸಿನ ಧಾರ್ಮಿಕ ಅಥವಾ ಆಧ್ಯಾತ್ಮಿಕ ಅರ್ಥವನ್ನು ತುಂಬಿದರು."[2] ಮುಕ್ತ ಸಮಾಜ ರಚನೆಗಾಗಿ ಎಲ್ಲಾ ವರ್ಗ–ವರ್ಣಗಳ ಪ್ರವೇಶ ಕ್ರಮೇಣ ನಿರ್ಬಂಧಿತವಾಯಿತು. "ಹೆಂಗಸರಾಗಲಿ ಅಸ್ಪೃಶ್ಯರಾಗಲಿ ಮತ್ತೆ ವಚನಗಳನ್ನು ಬರೆಯಲಿಲ್ಲ. ಕಾವ್ಯ ನಿರ್ಮಿತಿಗೆ ಕೈಹಾಕಲೂ ಇಲ್ಲ. ಅಸ್ಪೃಶ್ಯರು ಹೆಂಗಸರು ಇರಲಿ, ಕೆಳಜಾತಿಯ ಯಾವುದೇ ಲಿಂಗಾಯತ ಕವಿಗಳೂ ಸಾಹಿತ್ಯ ಕ್ಷೇತ್ರದಲ್ಲಿ ಕಾಣಿಸಲಿಲ್ಲ. ಹನ್ನೆರಡನೆಯ ಶತಮಾನದ ಲಿಂಗಾಯತ ಚಳುವಳಿ ಮುಂದೆ ಒಂದು ಲಿಂಗಾಯತ ಮತವಾಯಿತು; ಮತಕ್ಕೆ ಅಗತ್ಯವಾದ ಪುರೋಹಿತರು ಪ್ರಬಲವಾದರು."[3] – ಹೀಗೆ ಶರಣ ಚಳುವಳಿ ಒಂದು ಧರ್ಮಮಾತ್ರವಾಗಿ; ಒಂದು ಮತವಾಗಿ ಸಂಕುಚಿತಗೊಂಡಿತು.

ವೀರಶೈವ ಧರ್ಮವು ಸ್ಥಿತ್ಯಂತರಗೊಳ್ಳುತ್ತಾ ಕರ್ನಾಟಕದಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ಹರಿದು ಬಂದಿದೆ. ಶರಣ ಚಳುವಳಿ ಒಂದು ಧರ್ಮವಾಗಿ ಸಾಂಸ್ಥಿಕ ಚೌಕಟ್ಟಿಗೆ ಸೀಮಿತಗೊಂಡಂತೆ ಶರಣರ ವಚನಗಳ ಜಾಗದಲ್ಲಿ ಸೂತ್ರ, ರಹಸ್ಯ, ಯೋಗಾಂಗ, ಅಷ್ಟವಿಧಾರ್ಚನೆ, ಮಂತ್ರೋತ್ಪತ್ತಿ, ದೀಕ್ಷಾವಿಧಾನ, ಲಿಂಗ ಮಹಿಮೆಗಳು ಧಾರ್ಮಿಕ ಸಾಹಿತ್ಯವೆನಿಸಿಕೊಂಡವು.

ಕಲ್ಲುಮಠದ ಪ್ರಭುದೇವನಿಗೆ ಶರಣರ ವಚನಗಳು 'ಲಿಂಗಲೀಲಾವಿಲಾಸ'ವಾಗಿ ತೋರಿದವು.

ಮೊದಲು ಘಟ್ಟದ 'ವಚನಗಳು' ಸಮಗ್ರ ಸಮಾಜದ ಎಲ್ಲಾ ಸಂವೇದನೆಯ ತಿಳುವಳಿಕೆಗೆ ಆಕರವಾಗಿ ಸಿಕ್ಕಂತೆ, (ವಿಶೇಷವಾಗಿ) ನಾಲ್ಕನೇ ಘಟ್ಟದ 'ಧಾರ್ಮಿಕ ಸಾಹಿತ್ಯ' ಕೇವಲ ಆ ಕಾಲದ ವೀರಶೈವ ಧರ್ಮದ ಆಕರ ಸಾಮಗ್ರಿಯಾಗಿ ಸಿಗುತ್ತದೆ. ಹನ್ನೆರಡನೇ ಶತಮಾನವನ್ನು ಶರಣ ಚಳುವಳಿಯೆಂದೂ ವಚನ ಚಳುವಳಿಯೆಂದೂ ಧಾರ್ಮಿಕ–ಆರ್ಥಿಕ ಚಳುವಳಿಯೆಂದೂ ಕರೆದು ಸಂಕೀರ್ಣ ದೃಷ್ಟಿಕೋನಗಳಿಗೆ ಕೇಂದ್ರವಾಗಿಸಿದಂತೆ ಮುಂಬರುವ ಘಟ್ಟಗಳು ಧಾರ್ಮಿಕ ಸ್ಥಿತ್ಯಂತರವನ್ನು ಮಾತ್ರ ಪ್ರತಿಬಿಂಬಿಸುತ್ತವೆ.

ಶೈವ ಪರಿಷ್ಕಾರಗೊಂಡು ವೀರಶೈವ (= ಲಿಂಗಾಯತ)ವಾದಂತೆ, ಭೇದ ನೀತಿಯಿಂದ ಒಡೆದು ಹೋಗಿದ್ದ ಸಮಾಜ ಮುಕ್ತ ಸಮಾಜವಾದಂತೆ, 'ರಾಜ ಪ್ರತ್ಯಕ್ಷ ದೈವ'ವೆಂದು ರಾಜಕೇಂದ್ರವಾಗಿದ್ದ ರಾಜ ಕಾರಣ 'ಭೂಪಾಲ ಗೋಪಾಲನಾಗಬಲ್ಲನೇ ?' ಎಂದು ಪ್ರಶ್ನಿಸಲ್ಪಡುವ ಕೇವಲ ಒಂದು ಅಧಿಕಾರ ವರ್ಗವಾದಂತೆ, ಪಂಡಿತನಿಷ್ಠ ಸಾಹಿತ್ಯ ಪಾಮರನಿಷ್ಠ ವಚನಸಾಹಿತ್ಯವಾದಂತೆ ಮುಂಬರುವ ಶತಮಾನಗಳಲ್ಲಿ ಇಂಥ ಅಧಿಷ್ಠಾನ ಕುಂಠಿತಗೊಂಡಿದ್ದಕ್ಕೆ ಹಲವು ಕಾರಣಗಳಿವೆ.

ಚಳುವಳಿಯ ನೇತಾರರು ನಾಲ್ಕನೇ ಘಟ್ಟದ ಕವಿಗಳಿಗೆ, ವಿದ್ವಾಂಸರಿಗೆ ಸಾಹಿತ್ಯಕ–ಧಾರ್ಮಿಕ ಸ್ಮರಣೆಗೆ ವಸ್ತುವಾದಂತೆ ಇನ್ನುಳಿದವರು ನೆನಪಿಗೂ ಬಾರಲಿಲ್ಲ. ಅದೇ ರೀತಿಯಾಗಿ ನಾಲ್ಕನೇ ಘಟ್ಟದಲ್ಲೇ ಕೆಳವರ್ಗದವರು, ಧಾರ್ಮಿಕ ಸಾಹಿತ್ಯ ರಚನಾನುಕೂಲವನ್ನು ಪಡೆದಂತೆಯೂ ಕಾಣುವುದಿಲ್ಲ.

ಸಮಾಜದ ಮೂಲಭೂತ ವಿಕೃತಗಳ ಬದಲಾವಣೆಯೇ ಶರಣರ ಮೂಲಭೂತ ವಿಚಾರವಾಗಿದ್ದರಿಂದ ಅವರದು ಕ್ರಾಂತಿ, ಸುಧಾರಣೆ, ಹೋರಾಟ, ಚಳುವಳಿ ಎಂದೆಲ್ಲ ಎನಿಸಿಕೊಳ್ಳುತ್ತದೆ. ಆದರೆ ಮುಂದಿನ ಶತಮಾನಗಳಲ್ಲಿ ಕೇವಲ ಧಾರ್ಮಿಕ ಚರಿತ್ರೆಯಲ್ಲಿ ಸ್ಥಾನ ಪಡೆಯಬಲ್ಲುದೇ ವಿನಾ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಚರಿತ್ರೆಯಲ್ಲಿ ವಿಶೇಷ ಸ್ಥಾನ ಪಡೆಯಲಾಗದು.

ಯಾವುದೇ ಚಳುವಳಿ ಪ್ರಶ್ನಿಸುವುದು ಪ್ರಭುತ್ವವನ್ನೇ. ಸಮಾಜಪರವಾದ ಚಳುವಳಿ ನ್ಯಾಯಬಯಸುವುದು ಪ್ರಭುತ್ವದಿಂದಲೇ. ಹೀಗಾಗಿ ಪ್ರಭುತ್ವ ಇಂಥ ಚಳುವಳಿಯನ್ನು ಮೂರು ಬಗೆಯಲ್ಲಿ ಎದುರುಗೊಳ್ಳುತ್ತದೆ. ಮೊದಲನೆಯದಾಗಿ ಈ ಚಳುವಳಿಯ ಯಾವುದಾದರೂ

ದೌರ್ಬಲ್ಯವನ್ನು ಬಳಸಿಕೊಳ್ಳುವುದು. ಎರಡನೆಯದಾಗಿ ಹಿಂಸಾತ್ಮಕವಾಗಿ ಅದನ್ನು ನಾಶಮಾಡುವುದು. ಮೂರನೆಯದಾಗಿ ಚಳುವಳಿಗೆ ತಾತ್ಕಾಲಿಕ ಪರಿಹಾರ ಸೂಚಿಸುವುದು.

ಈ ಮೂರರಲ್ಲಿಯೂ ಚಳುವಳಿ – ಪ್ರಭುತ್ವಗಳು ಮುಖಾಮುಖಿಯಾಗುತ್ತವೆ. ಆದರೆ ಶರಣ ಚಳುವಳಿಗೆ ಜನಬೆಂಬಲದ ಪ್ರಾಬಲ್ಯವೇ ಅಧಿಕವಾಗಿದ್ದರಿಂದ ಇಲ್ಲಿ ಪ್ರಭುತ್ವದ ಶಕ್ತಿ 'ಏನೂ ಅಲ್ಲ' ಎಂಬ ಸ್ಥಿತಿಗೆ ತಲುಪಿತು. 'ಅರಸನ ಹೆಣಕ್ಕೆ ಒಂದಡಿಕೆಯ ಬೆಲೆಯಿಲ್ಲ'; 'ಆನೇಂ ಅಂಜುವೇನೇ ಈ ಬಿಜ್ಜಳಂಗೆ' – ಇತ್ಯಾದಿ ಮಾತುಗಳಿಂದ ಕೆಳವರ್ಗದವರಿಂದ ಪ್ರಶ್ನಿಸುವಷ್ಟು 'ಸಾಮಾನ್ಯ ಬಲ'ವಾಗಿ ಪರಿಣಮಿಸಿತ್ತು. ಪ್ರಭುತ್ವದ ಹಿನ್ನೆಲೆಯಲ್ಲಿ ಈ ಚಳುವಳಿ ನಿರ್ಭೀತ ವಾತಾವರಣಕ್ಕೆ ಅನುಕೂಲವುಂಟುಮಾಡಿತ್ತು. ಪ್ರಭುತ್ವ ಮತ್ತು ಚಳುವಳಿಯ ನಡುವೆ ನ್ಯಾಯಸಮ್ಮತ ಸಂಧಾನ ಅಪರೂಪವಾಗಿರುತ್ತದೆ ! (ಅಥವಾ ಅಸಾಧ್ಯವೇ ಸರಿ !)

ತನ್ನ ಕಾಲದಲ್ಲೇ ಪ್ರಭುತ್ವದ ನೆರವು ಪಡೆದಿದ್ದರೆ ಶರಣ ಚಳುವಳಿ ಪರಿಪೂರ್ಣವಾಗುತ್ತಿರಲಿಲ್ಲ. "ರಾಜಾಶ್ರಯ ಸಿಗಬೇಕಾಗಿದ್ದರೆ ಆ ಚಳುವಳಿ ಎಷ್ಟೋ ವಿಷಯಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತಿತ್ತು. ಹೊಂದಾಣಿಕೆ ಮಾಡಿಕೊಂಡಿದ್ದರೆ ಅದು ಚಳುವಳಿ ಎಂದು ಅನ್ನಿಸಿಕೊಳ್ಳುತ್ತಿರಲಿಲ್ಲ."[4] ಸಾಹಿತ್ಯಕ್ಕೆ ಸಂಬಂಧಿಸಿ ಹೇಳುವುದಾದರೆ, ಸಾಹಿತ್ಯ ಹೇಳುವ ಸತ್ಯವನ್ನು ಪ್ರಭುತ್ವ ಎಂದೂ ಒಪ್ಪುವುದಿಲ್ಲವಾದ್ದರಿಂದ ವಚನ ಸಾಹಿತ್ಯದ ತುಂಬಾ ರಾಜ ವಿರೋಧಿ ನಿಲುವುಗಳು ಕಾಣುತ್ತವೆ. ಆದರೆ ಒಂದು ಸತ್ಯವಿಶೇಷವೆಂದರೆ ಶರಣ ಚಳುವಳಿ ತನ್ನ ನಂತರದ ಘಟ್ಟಗಳಲ್ಲಿ ರಾಜತ್ವದೊಂದಿಗೆ ಮಾಡಿಕೊಂಡ ಒಪ್ಪಂದ (?) ದ ಪರಿಣಾಮವಾಗಿ ಚಳುವಳಿ ಧರ್ಮವಾಗಿ, ಮತವಾಗಿ ಬೆಳೆದುಕೊಂಡು ಬಂತು. ರಾಜಾಸ್ಥಾನದಲ್ಲಿ ಪೈಪೋಟಿಗೆ ವಸ್ತುವಾಗಿ ಒಂದೆಡೆ ಬಂದರೆ, ರಾಜಾಶ್ರಯವನ್ನು ಪಡೆದು ಶಾಸ್ತ್ರ, ಪಂಡಿತನಿಷ್ಠವಾಗಿ ಬೆಳೆದು ಮತ್ತೊಂದೆಡೆ ಬಂತು.

ವೀರಶೈವ ಧಾರ್ಮಿಕ ಚರಿತ್ರೆಯ ನಂತರದ ಘಟ್ಟಗಳಲ್ಲಿ ಏಕಾಂತರಾಮಯ್ಯ – ಆದಯ್ಯರಿಂದ ನಡೆದ ಹಿಂಸಾತ್ಮಕ (ಅಥವಾ ಅನಾರೋಗ್ಯಕರ) ಧಾರ್ಮಿಕ ಸ್ಪರ್ಧೆ ಮತ್ತು ಕೆರೆಯ ಪದ್ಮರಸ – ಕುಮಾರ ಪದ್ಮರಸರು ನಡೆಸಿದ ವಿದ್ವತ್ ಪೂರ್ಣವಾದ ಧಾರ್ಮಿಕ ಸ್ಪರ್ಧೆಗಳು ಕ್ರಮೇಣ ವಿಜಯನಗರ ಕಾಲದಲ್ಲಿ ತನ್ನ ಸಾಹಿತ್ಯವನ್ನು 'ಸಂಕಲನ, ವ್ಯವಸ್ಥಾಪನ, ಸಂಗ್ರಹಣ, ವ್ಯಾಖ್ಯಾನ'–ಗಳಂಥ ಕೆಲಸಗಳಿಂದ ಮುಂದುವರೆಯಿತು. ವಿಜಯನಗರ ಕಾಲದಲ್ಲಿ ಸಾಹಿತ್ಯ ರಚನೆಗಿಂತ ತನ್ನ ಪೂರ್ವದ ಸಾಹಿತ್ಯ ಸಂಪಾದನೆಯ ಕೆಲಸವೇ ಮುಖ್ಯವಾದಾಗ ಧಾರ್ಮಿಕ ವಿಚಾರಗಳಿಗೇ ಹೆಚ್ಚು ಗಮನ ಕೊಡಬೇಕಾದುದು ಈ ಕಾಲದ ಧಾರ್ಮಿಕ ಅವಶ್ಯಕ ಕಾರ್ಯವಾಗಿದೆ ಎನಿಸುತ್ತದೆ. ಎಲ್ಲಾ ಲೌಕಿಕ ಅಂತರಗಳನ್ನು ಮೀರಿ ಸಮಾಜದ ತುಂಬಾ ವ್ಯಾಪಿಸಿದ ಶರಣರ ಸಾಮಾಜಿಕ ಪ್ರಜ್ಞೆ, ಕಳಕಳಿ, ಕಾಳಜಿಗಳು ಈ ಕಾಲದಲ್ಲಿ ಧಾರ್ಮಿಕ ಚೌಕಟ್ಟಿಗೆ ಮಾತ್ರ ಸೀಮಿತಗೊಂಡಿರುವುದು ಈ ಕಾಲದ ಧಾರ್ಮಿಕ ಪ್ರತಿಸ್ಪಂದನವಾಗಿದೆಯೇ ವಿನಾ ಸಾಮಾಜಿಕ ಅವಶ್ಯಕತೆಯೇನೂ ಆಗಿಲ್ಲ. ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿಗಳಾಗಿ ಬಂದಿದ್ದ ವಚನಗಳಿಗೆ ಇಲ್ಲಿ ಸ್ಥಾನ ಸಿಗದೆ ಧಾರ್ಮಿಕ ಪ್ರಜ್ಞೆಯ ವಚನಗಳು ಮಾತ್ರ ಸ್ಥಾನ ಪಡೆದಿವೆ.

ವಿಜಯನಗರದ ಅರಸು ಪ್ರೌಢದೇವರಾಯನ ಕಾಲವನ್ನು ವೀರಶೈವ ಧಾರ್ಮಿಕ ಇತಿಹಾಸದಲ್ಲಿ 'ನೂರೊಂದು ವಿರಕ್ತರ ಯುಗ'ವೆಂದೇ ಗುರುತಿಸಲಾಗಿದೆ. ನೂರೊಂದು ವಿರಕ್ತರು 'ಕಲ್ಯಾಣ ಮಂಡಲದ ಶಿವಭಕ್ತ ಸಂತಾನ'ವೆನಿಸಿದ್ದಾರೆ. ಒಂದು ಶಾಸನ ಪ್ರೌಢದೇವರಾಯನನ್ನು 'ವೀರಶೈವಾಗಮ ಸಾರಸಂಪನ್ನ' ಎಂದು ಕರೆದಿದೆ. ಲಕ್ಕಣದಂಡೇಶ ಆ ಕಾಲ 'ವಿಜಯಕಲ್ಯಾಣ' ವಾಗಿತ್ತೆನ್ನುತ್ತಾನೆ. – ಹೀಗೆ ಬಹುಶಃ ವೀರಶೈವಧರ್ಮದ ಮತ್ತೊಂದು ಸೃಷ್ಟಿಶೀಲ ಸಮಾಜ ರಾಜತ್ವದೊಂದಿಗೆ ಬೆಸೆದುಕೊಂಡಿದೆ. ಈ ಕಾಲದ (ವೀರಶೈವ) ಸಾಹಿತ್ಯ ವಿಶೇಷವಾಗಿ ನೂರೊಂದು ವಿರಕ್ತರ ಸಾಹಿತ್ಯ ಸೃಷ್ಟಿ ಶಾಸ್ತ್ರೀಯ ಮೇಲ್ಮೈ ಪಡೆದಿದೆ. ವಚನಸಾಹಿತ್ಯವಷ್ಟೇ ವೀರಶೈವಧರ್ಮದ ಪ್ರಮುಖ ಅಭಿವ್ಯಕ್ತಿಯಾಗಬೇಕಾದುದು. ವಚನೇತರ ಸೂತ್ರ, ರಹಸ್ಯ, ಗೋಪ್ಯ, ಯೋಗಾಂಗ, ಅಷ್ಟವಿಧಾರ್ಚನೆ, ಮಂತ್ರೋತ್ಪತ್ತಿಯಂಥ ಶಾಸ್ತ್ರೀಯ ರಚನೆಗಳು ಇಲ್ಲಿ ಮೊದಲಾದವು. ವಚನಗಳು ಸಂಗ್ರಹವಾಗುವುದರ ಜೊತೆಗೆ ಅವುಗಳ ಸ್ಥಲಕಟ್ಟು ಮಾರ್ಪಾಡು, ಸ್ವರ ವಚನ ಸಂಕಲನ, ಸೂತ್ರ ರಚನೆ, ವ್ಯಾಖ್ಯಾನ ನಿರೂಪಣೆಗಳಲ್ಲಿ ಉಲ್ಲೇಖವಾದವು ವಚನಗಳನ್ನು 'ವಚನಾಗಮ' ಎನ್ನಲಾಯಿತು.

ಹನ್ನೆರಡನೇ ಶತಮಾನದ ಚಳುವಳಿಯ ಕುರುಹಾಗಿ ಈ ಶತಮಾನದಲ್ಲಿ ಆ ಕಾಲದ ವಚನಗಳ ಸಂಕಲನ–ವ್ಯಾಖ್ಯಾನದಂಥ ಕ್ರಿಯೆ ನಡೆಯಿತೇ ವಿನಾ ವಚನಗಳು ಬರೆಯಲ್ಪಡಲಿಲ್ಲ. ವಚನಸಾಹಿತ್ಯದ ಸೃಷ್ಟಿಗಿಂತಲೂ ವಚನಸಾಹಿತ್ಯದ ಪುನರುತ್ಥಾನ ಕಾರ್ಯ ಈ ಕಾಲದಲ್ಲಿ ನಡೆಯಿತು.

ನೂರೊಂದು ವಿರಕ್ತರ ಸಾಹಿತ್ಯ, ಷಟ್‌ಸ್ಥಲ ನಿರ್ಣಾಯಕ ಮಗ್ಗೆಯ ಮಾಯಿದೇವನ ಸಾಹಿತ್ಯ, ಮಹಾಲಿಂಗದೇವ, ಜಕ್ಕಣಾರ್ಯ, ಕರಸ್ಥಲದ ಮಲ್ಲಿಕಾರ್ಜುನ ಒಡೆಯರುಗಳ ವಚನ ಸಂಕಲನ, ಕುಮಾರ ಬಂಕನಾಥ, ಶ್ರೀ ಗಿರೀಂದ್ರ ಮತ್ತು ಕಲ್ಲುಮಠದ ಪ್ರಭುದೇವರ ಟೀಕೆ–

ವ್ಯಾಖ್ಯಾನಗಳು ಈ ಕಾಲದ ವೀರಶೈವ ಧಾರ್ಮಿಕ ಸಾಹಿತ್ಯದ ದಾಖಲೆಗಳಾಗಿವೆ. ಇವುಗಳಿಗೆ ಪೂರಕವಾಗಿ ಕರಸ್ಥಲದ ವೀರಣ್ಣೊಡೆಯರು, ನಾಗಿದೇವ, ಗುರುಬಸವಾರ್ಯ, ಮಗ್ಗೆಯ ಮಾಯಿದೇವರಂಥವರು ಸ್ವತಂತ್ರ ವಚನಗಳನ್ನು ಬರೆದು ಆಂಶಿಕವಾಗಿ ಸ್ಥಾನ ಪಡೆದಿದ್ದಾರೆ.

ವಚನ ಸಂಕಲನ ಕಾರ್ಯದ ಸಂದರ್ಭದಲ್ಲಾದರೂ ಏಕೋತ್ತರ ಸ್ಥಲ ಎಂಬ ಹಿನ್ನೆಲೆಯಲ್ಲಿ ವಿಂಗಡನೆ ಮಾಡಲಾಯಿತು. ವಚನಗಳು ಮೊದಲಬಾರಿಗೆ ಸ್ಥಲಕಟ್ಟಿನ ಹಿನ್ನೆಲೆಯಲ್ಲಿ ವಿಂಗಡನೆಯಾದವು.

ಕಲ್ಲುಮಠದ ಪ್ರಭುದೇವ ತನ್ನ 'ಲಿಂಗ ಲೀಲಾವಿಲಾಸ ಚಾರಿತ್ರ'ದಲ್ಲಿ ಹದಿನಾರು ಸ್ಥಲಕಟ್ಟುಗಳಲ್ಲಿ ವಚನಗಳನ್ನು ವ್ಯಾಖ್ಯಾನಿಸುತ್ತಾನೆ.

ಕಲ್ಲುಮಠದ ಪ್ರಭುದೇವನಿಗೆ ಹಿಂದಿದ್ದ ವೀರಶೈವ ಧರ್ಮವಾಗಲಿ, ವಚನ ಸಾಹಿತ್ಯವಾಗಲಿ ಒಂದು ದೊಡ್ಡ ಕಂದಕವನ್ನು ದಾಟಿ ಬಂದಿದೆ. ಮುಸ್ಲಿಂ ದಾಳಿಯಿಂದ ಹದಿನಾಲ್ಕನೇ ಶತಮಾನದ ಮಧ್ಯಭಾಗದ ಸಂಗಮ ವಂಶ ಸ್ಥಾಪನೆಯವರೆಗೆ ಸುಮಾರು ಒಂದು ನೂರು ವರ್ಷ ಶರಣ ಸಂಸ್ಕೃತಿಯೇ ಅಜ್ಞಾತವಾಸದಲ್ಲಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದುದೇ ಧಾರ್ಮಿಕ ತಳಹದಿಯ ಮೇಲೆ. ರಾಜಮನೆತನವೊಂದು ಸಾಮ್ರಾಜ್ಯವನ್ನು ವಿಸ್ತಾರ ಮಾಡಬೇಕಾದುದು ಅಧಿಕಾರದ ಪ್ರಾಪ್ತಿಗೋಸ್ಕರ ಎಂಬುದು ಸತ್ಯವಾದರೂ ಹಿಂದೂಧರ್ಮದ ಪುನಶ್ಚೇತನ ಎಂಬ ಮೂಲ ಮಂತ್ರ ಇಲ್ಲಿ ಬಹುತೇಕ ಕೆಲಸ ಮಾಡಿದ್ದು ಸತ್ಯವೇ. ಹಿಂದೂಧರ್ಮದ ಸಂಘಟನೆ ಎಂಬುದು ಮತ್ತೊಂದು ಅರ್ಥದಲ್ಲಿ ಭಾರತೀಯ ಧರ್ಮಗಳ ಸಂಘಟನೆಯೂ ಆಗಿದ್ದರಿಂದ ಎಲ್ಲಾ ಧರ್ಮಗಳಿಗೂ (ಜೈನ, ವೈದಿಕ, ವೀರಶೈವ ಇತ್ಯಾದಿ) ಆಶ್ರಯ ನೀಡಿತು.

ಹೀಗಾಗಿ ತನಗಿಂತ ಪೂರ್ವದಲ್ಲಿ ವಚನಗಳನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಕಲ್ಲುಮಠದ ಪ್ರಭುದೇವ ವ್ಯಾಖ್ಯಾನಿಸಿರುವುದು ಸಹಜವಾಗಿದೆ. ಏಕೆಂದರೆ ಕಲ್ಲುಮಠದ ಪ್ರಭುದೇವನಿಗೆ ವಚನ ಸಾಹಿತ್ಯ ಕಂಡಿರುವುದು ವೀರಶೈವ ಧರ್ಮದ ಆಕರವಾಗಿಯೇ ವಿನಾ ಶರಣ ಚಳುವಳಿಯ ಉಪಉತ್ಪಾದನೆಯಾಗಿ ಅಲ್ಲ.

ಇದಕ್ಕೂ ಪೂರ್ವದಲ್ಲಿ ಶರಣ ಚಳುವಳಿ ಏಕಾಂತರಾಮಯ್ಯಾದಿಗಳಿಗೆ 'ಧಾರ್ಮಿಕ ಶ್ರೇಷ್ಠತೆಯ ಸ್ಥಾಪನೆ'ಗೆ ಮುಖ್ಯವಾಗಿತ್ತು; ಹರಿಹರನಂಥ ಕವಿಗಳಿಗೆ 'ಸಾಹಿತ್ಯದ ವಸ್ತು'ವಾಗಿ ಪರಿಣಮಿಸಿತ್ತು.[5] ಹರಿಹರ ಒಬ್ಬ ಪರಿಪೂರ್ಣ ಕವಿಯಾಗಿದ್ದರಿಂದ ಆತನದು ಸಾಹಿತ್ಯಕ್ರಾಂತಿ, ಸಾಹಿತ್ಯಬಂಡಾಯವಾಯಿತು. ಸಾಹಿತ್ಯಕ್ಕೆ ಇಂಥದ್ದೇ ವಸ್ತುವಾಗಬೇಕು. ಸಾಹಿತ್ಯದ ಪರಿಕರಗಳು ಇವೇ – ಎಂದು ಹೇಳುವ ಮಾತುಗಳನ್ನು ಮೀರಿ ಸಾಹಿತ್ಯವನ್ನು ಮೆರೆಸಿದ್ದೇ ಹರಿಹರನ ಬಂಡಾಯ ಸಾಹಿತ್ಯ ಪ್ರಮುಖ ಲಕ್ಷಣವಾಗಿದೆ.

ಕಲ್ಲುಮಠದ ಪ್ರಭುದೇವನ ಕಾಲದ ವೀರಶೈವ ಧರ್ಮಕ್ಕೆ ಕೆಲವು ಏರಿಳಿತ, ರೂಪಗಳ ಅನುಭವವಾಗಿದೆ. ಅದರಲ್ಲೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದ ವೀರಶೈವ ಧರ್ಮ ಸಂಘಟನಾತ್ಮಕವಾಗಿ, ಸಾಹಿತ್ಯಕವಾಗಿ ನಷ್ಟವನ್ನನುಭವಿಸಿದೆ. "ಹೊಸ ಗ್ರಂಥಗಳ ರಚನೆಯ ಮಾತಿರಲಿ, ಈಗ ಔದಾಸೀನ್ಯವನ್ನು ತೋರಿದರೆ ತಮ್ಮ ಪ್ರಾಚೀನ ಪವಿತ್ರ ಗ್ರಂಥರಾಶಿಯಲ್ಲಿ ಅಳಿದು ಉಳಿದುದೂ ನಾಶವಾಗಬಹುದೆಂಬ ಭಯ ವೀರಶೈವ ಧಾರ್ಮಿಕ ನಾಯಕರಲ್ಲಿ ಮೂಡಿತು. ಧಾರ್ಮಿಕ ಸಾಹಿತ್ಯವನ್ನು, ಅದರಲ್ಲಿಯೂ ವಚನ ಸಾಹಿತ್ಯವನ್ನು ಪುನರುಜ್ಜೀವನಗೊಳಿಸುವ ಮಹೋದ್ದೇಶವುಳ್ಳ ದೊಡ್ಡ ಚಟುವಟಿಕೆ ಹದಿನಾಲ್ಕನೇ ಶತಮಾನದ ಅಂತ್ಯದಲ್ಲಿಯೇ ಆರಂಭವಾಗಿರಬೇಕು."[6] - ಈ ಹಿನ್ನೆಲೆಯಲ್ಲಿ,

ಪ್ರಭುದೇವ ಹದಿನಾರು ಸ್ಥಲಕಟ್ಟುಗಳಲ್ಲಿ ಮೂವತ್ತಾರು ವಚನಕಾರರ ಏಳುನೂರಾ ಇಪ್ಪತ್ತೆರಡು ವಚನಗಳನ್ನು, ನೂರಾಮೂವತ್ತೈದು ಸಂಸ್ಕೃತ ಶ್ಲೋಕಗಳಿಗೆ ವ್ಯಾಖ್ಯಾನ ನೀಡುತ್ತಾನೆ. ಶರಣರ ಒಟ್ಟು ಚಳುವಳಿ ಮತ್ತು ಅದರ ಇತಿಹಾಸ ಕಲ್ಲುಮಠದ ಪ್ರಭುದೇವನಿಗೆ 'ಲಿಂಗಲೀಲೆಯ ವಿಲಾಸದ ಚಾರಿತ್ರ'ವೆನಿಸಿದೆ. ಶರಣರ ತಾತ್ತ್ವಿಕ ಚರಿತ್ರೆಯ ಅಧ್ಯಯನವೇ ಶರಣರ ವಚನಗಳ ಅಧ್ಯಯನವಾಗಿದ್ದುದು ಪ್ರಭುದೇವ ಅದನ್ನು 'ಲಿಂಗಲೀಲಾ ವಿಲಾಸ ಚಾರಿತ್ರ' ಎಂದು ತನ್ನ ಕಾಲದ ಧಾರ್ಮಿಕ ಚಿಂತನೆಗೆ ಸಮೀಕರಿಸಿದ್ದಾನೆ. ಅವನ ಪ್ರಕಾರ ವಚನಗಳು ಚಳುವಳಿಯಿಂದ ಸಿಡಿದ ನುಡಿಗಳಾಗಿರಲಿಲ್ಲ; ಅವು 'ಶಿವಸುಖ ಉಕ್ಕಿ ಹರಿದ ಫಲಗಳು' ಆಗಿದ್ದಾವೆ.

'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ ತರ್ಕದ ಬೆನ್ನಾಭಾರನೆತ್ತುವೆ, ಆಗಮದ ಮೂಗುಕೊಯಿವೆ ...' ಎಂಬುದು ವಚನ ವಿಚಾರವಾದರೆ, ಪ್ರಭುದೇವನದು .... ಷೋಡಶ ಸ್ಥಲ ಪರಿಕ್ರಮದಿಂದ ಸೇರಿಸಿ ಅರ್ಥೈಸಿದ ವಚನಾಗಮ' ಎಂಬ ಆಲೋಚನೆಯಾಗಿದೆ.

ಪ್ರಭುದೇವ ಎಲ್ಲಾ ವಚನಗಳನ್ನು ಧಾರ್ಮಿಕ (= ಆಧ್ಯಾತ್ಮಿಕ) ಹಿನ್ನೆಲೆಯಲ್ಲೇ ವ್ಯಾಖ್ಯಾನಿಸಿದ್ದಾನೆ.

ಟಿಪ್ಪಣಿಗಳು

1. ಎಂ. ಚಿದಾನಂದಮೂರ್ತಿ, 1986, *ಲಿಂಗಾಯತ ಅಧ್ಯಯನಗಳು,* ಪುಟ 362-380.

2. ಎಂ. ಚಿದಾನಂದಮೂರ್ತಿ, 1985, *ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ,* ಪುಟ 110.

3. *ಅದೇ,* ಪುಟ 110. ವೀರಶೈವಧರ್ಮ ಆಧುನಿಕವಾಗಿ ಎಷ್ಟು ಸಂಕುಚಿತಗೊಂಡಿತು ಎಂಬುದಕ್ಕೆ *ಲಿಂಗಾಯತ ಅಧ್ಯಯನಗಳು,* ಪುಟ 466-525 ನೋಡಿ.

4. *ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ,* ಪುಟ 154.

5. ಕೆರೆಯ ಪದ್ಮರಸನಿಂದ ಸೋತ ತ್ರಿಭುವನ ತಾತ ವೀರಶೈವ ಧರ್ಮವನ್ನಂಗೀಕರಿಸಿದ್ದು ಹರಿಹರನಿಗೆ ಕಣ್ಣ ಮುಂದಿದ್ದುದರಿಂದ 'ತ್ರಿಭುವನ ತಾತ ರಗಳೆ' ರಚನೆಯಾಯಿತು. ಬಸವಣ್ಣ, 'ಬಸವರಾಜ'ನೂ ಆದ 'ದೇವ'ನೂ ಆದ. ಅಂದರೆ ಚಳುವಳಿ ಸಾಹಿತ್ಯಕ್ಕೆ ವಸ್ತುವಾಯಿತೇ ವಿನಾ ಚಳುವಳಿಯ ಮುಂದುವರಿದ ಭಾಗವಾಗಲಿಲ್ಲ.

6. ಎಂ. ಚಿದಾನಂದಮೂರ್ತಿ, 1962, *ಶೂನ್ಯ ಸಂಪಾದನೆಯನ್ನು ಕುರಿತು,* ಪುಟ 18.

12. ಪಂಪಾತೀರ್ಥ

– ದೇವರ ಕೊಂಡಾರೆಡ್ಡಿ

ಹಂಪೆಯು ರಾಜಕೀಯವಾಗಿ ಪ್ರಸಿದ್ಧಿಗೆ ಬಂದಂತೆ ಅನೇಕ ಬದಲಾವಣೆಗಳಿಗೂ ಒಳಗಾಗಿರುತ್ತದೆ. ಹಂಪೆಯ ಬಳಿ ವಿಜಯನಗರ ಪಟ್ಟಣದ ರಚನೆಯಾದಾಗ ಅದರೊಂದಿಗೆ ಅನೇಕ ದೇವಾಲಯಗಳ, ಪುರಗಳ ರಚನೆಯಾಗುತ್ತದೆ. ಹೀಗಾಗಿ ಹಿಂದೆ ಇದ್ದ ದೇವಾಲಯದ ಜಾಗದಲ್ಲಿ ಅನೇಕ ಬೃಹತ್ ದೇವಾಲಯಗಳು ತಲೆ ಎತ್ತುತ್ತವೆ. ಕೆಲವು ಪ್ರಾಚೀನ ಸ್ಥಳಗಳು ತಮ್ಮ ಹೆಸರನ್ನು ಬದಲಿಸಿಕೊಂಡಿರುತ್ತವೆ.

ಮುಂದೆ ಬಿಜಾಪುರದ ಧಾಳಿಯಾದ ಮೇಲೆ ಇಡೀ ಪಟ್ಟಣ ಪಾಳುಬಿದ್ದು ಜನರಹಿತವಾಗುತ್ತದೆ. ಕೆಲವು ಕಾಲ ಪೂಜಾ ಕಾರ್ಯಗಳೂ ನಿಂತಿರಬೇಕು. ರಾಜಕೀಯ ಕೇಂದ್ರವೂ ಕೂಡ, ಮತ್ತೆ ಆನೆಯಗೊಂದಿಯ ಕಡೆಗೆ ಹೋಗುತ್ತದೆ. ಇಂತಹ ಸನ್ನಿವೇಶದಲ್ಲಿ ಹಿಂದೆ ಬಳಕೆಯಲ್ಲಿದ್ದ ಅನೇಕ ಹೆಸರುಗಳು ಸಹ ಮರೆಯಾಗುತ್ತವೆ. ಅವುಗಳ ಸ್ಥಳದಲ್ಲಿ ಬೇರೆ ಹೆಸರುಗಳು ಕಾಣಿಸಿಕೊಳ್ಳುತ್ತವೆ. ಅಂತಹವುಗಳಲ್ಲಿ ಪಂಪಾತೀರ್ಥವೂ ಒಂದು.

ವಿಜಯನಗರ ಕಾಲದಲ್ಲಿ ಮತ್ತು ಅದಕ್ಕಿಂತ ಹಿಂದೆ ಇದ್ದ ಪಂಪಾತೀರ್ಥದ ಸ್ಥಳ ಯಾವುದು ಎಂಬುದನ್ನು ಚಿಂತಿಸುವುದೇ ಈ ಪ್ರಬಂಧದ ಉದ್ದೇಶವಾಗಿದೆ. ಸಾಮಾನ್ಯವಾಗಿ ಈಗ ಆನೆಯಗೊಂದಿ ಬಳಿ ಇರುವ ಪಂಪಾಸರೋವರವೇ ಪಂಪಾತೀರ್ಥವಾಗಿತ್ತೆಂದು ನಂಬಿಕೆ. ಆದರೆ ಅದರ ಬಗ್ಗೆ ಆಳವಾಗಿ ಯೋಚಿಸಿದಾಗ ಅದಲ್ಲವೆಂದೂ ಮೇಲುನೋಟಕ್ಕೆ ಸ್ಪಷ್ಟವಾಗುತ್ತದೆ. ಪಂಪಾಮಹಾತ್ಮೆ ಎಂಬ ಗ್ರಂಥದಲ್ಲಿ ಈ ಸರೋವರದಲ್ಲಿ ಪಂಪಾದೇವಿ ಸ್ನಾನಮಾಡಿ ತಪಸ್ಸನ್ನಾಚರಿಸಿದುದರಿಂದ ಈ ಸರೋವರಕ್ಕೆ ಪಂಪಾಸರೋವರವೆಂಬ ಹೆಸರಾಯಿತೆಂದು ಹೇಳಿದೆ.[1] ಪಂ ಎಂದರೆ ಅಮೃತವೆಂದೂ ಪ ಎಂದರೆ ಸ್ವರ್ಣವೆಂದೂ ಅರ್ಥೈಸಿ ಬೇಡುವಾತನಿಗೆ ಅಮೃತ ರೂಪವಾದ ಮೋಕ್ಷವನ್ನು ಸಂಪತ್ ರೂಪವಾದ ಭೋಗವನ್ನು ಕೊಟ್ಟು ರಕ್ಷಿಸುವಂತಹದ್ದಾಗಿರುವುದರಿಂದ ಇದಕ್ಕೆ "ಪಂಪಾ" ಎಂದು ಹೆಸರಾಯಿತೆಂದು ಹೇಳಿರುತ್ತಾರೆ.[2] ಎಂ. ಚಿದಾನಂದಮೂರ್ತಿಯವರು ಪಂಪಕ, ಪಪ್ಪಕ ಎಂದರೆ ಸದಾ ತಿಳಿ ನೀರುಳ್ಳ ನದಿ ಎಂದು ಅರ್ಥ ಹೇಳಿ ಈ ಹೆಸರಿನ ನದಿಗಳು ಕೇರಳದಲ್ಲಿ ಮತ್ತು ಆಂಧ್ರದಲ್ಲಿವೆಯೆಂದು ಹೇಳಿರುತ್ತಾರೆ. ಆದರೆ ತುಂಗಾಭದ್ರಾ ನದಿಯನ್ನು ಗಮನಿಸಿದಾಗ ಈ ಪದಗಳಿಗೆ ಬೇರೊಂದು ಅರ್ಥನೀಡಬಹುದಾಗಿದೆ. ನಿಘಂಟುಗಳಲ್ಲಿ ಪಮ್ಪು ಎಂಬ ಪದದ ಅರ್ಥ ಸಮಭಾಗ, ಭಾಗ ಎಂದೂ ತೆಲುಗಿನಲ್ಲಿ "ಪಂಪಕ" ಎಂದರೆ ಹಂಚಿಕೆ ಎಂಬ ಅರ್ಥವಿದೆ. ಹಂಚು ಎಂಬ ಪದವು ನಮ್ಮಲ್ಲಿದ್ದು ಅದರ ತೆಲುಗು ರೂಪ ಪಂಚು ಎಂದು ಅರ್ಥ. ಭಾಗಮಾಡು, ಪ್ರತ್ಯೇಕಮಾಡು ಎಂಬ ಅರ್ಥವನ್ನು ನೀಡುತ್ತದೆ. ಕನ್ನಡ ನಿಘಂಟುಗಳಲ್ಲಿ "ಪಂಪ" ಎಂದರೆ ಸಮಭಾಗವೆಂಬರ್ಥ. ತಮಿಳಿನ ಪಯಿಲ್, ತೆಲುಗು–ಪಂಪಕ, ಪಂಪು ಪದಗಳಿಗೆ ಇದೇ ಅರ್ಥವಿದೆ. ದ್ರವಿಡಿಯನ್ ಎಟಿಮಲಾಜಿಕಲ್ ನಿಘಂಟುವಿನಲ್ಲಿಯೂ ಪಯಲ್, ಪಂಚು, ಪಂಪ, ಪಂಚು, ಪಕು, ಪಂಕು ಮೊದಲಾದ ಪದಗಳಿಗೆ "ವಿಂಗಡಣೆ" ಎಂಬ ಅರ್ಥವೇ ಇದೆ. ಹೀಗಾಗಿ ಈ ಭಾಗದಲ್ಲಿ ತುಂಗಭದ್ರಾ ನದಿಯನ್ನು ಹಂಪಿ ಹೊಳೆ, ಪಂಪಾತೀರ್ಥ ಮೊದಲಾದ ಹೆಸರುಗಳಿಂದ ಕರೆಯುವುದು ಉಚಿತವಾಗಿದೆ. ಭೌಗೋಳಿಕವಾಗಿ ಈ ನದಿ ಅಲ್ಲಲ್ಲಿ ಕವಲೊಡೆದು ಮತ್ತೆ ಕೂಡುವುದರಿಂದ ಅನೇಕ ನಡುಗಡ್ಡೆಗಳನ್ನು ಸೃಷ್ಟಿಸಿ ತುಂಗಭದ್ರೆಯು ಅನೇಕ ಕಡೆ ಟಿಸಿಲುಗಳು ಒಡೆದಿರುವುದನ್ನು ಗಮನಿಸಿರಬಹುದು. ಹೀಗಾಗಿ ನೀರು ಶಾಖೆಗಳಾಗಿ ಹಂಚಿಹೋದದ್ದರಿಂದ ಪಂಪ ಅಂದರೆ ಭಾಗಗಳಾಗಿದ್ದು ಎಂಬ ಅರ್ಥವನ್ನು ಪಡೆದು ಈ ಭಾಗದಲ್ಲಿ ಪಂಪ ಎಂಬ ಅರ್ಥವನ್ನು ಪಡೆದಿದ್ದು ಜನರ ಬಾಯಲ್ಲಿ ಹಂಪಿ ಹೊಳೆಯಾಗಿದೆ. ಹಂಪಿಯಲ್ಲಿ ಈ ನದಿಯು ಮುರಿದು ಉತ್ತರಕ್ಕೆ ತಿರುಗಿದ ಕಾರಣ ಇದು ತೀರ್ಥವಾಯಿತು. ಹೀಗಾಗಿ ಇದು ಪಂಪಾತೀರ್ಥವಾಯಿತು.

ಎಂ. ಚಿದಾನಂದಮೂರ್ತಿಯವರು ಹಂಪೆಯ ಕ್ರಿ.ಶ. 1199ರ ಶಾಸನದಲ್ಲಿ ಬರುವ 'ವಿರೂಪಾಕ್ಷತೀರ್ಥ' ಎಂಬ ಪದವನ್ನು ಉಲ್ಲೇಖಿಸಿ ವಿರೂಪಾಕ್ಷನೇ ಆ ಪ್ರದೇಶಕ್ಕೆ ಒಡೆಯನಾಗಿದ್ದ ಅದನ್ನು ಎಲ್ಲರೂ ಒಪ್ಪಿಕೊಂಡಿದ್ದರು ಎಂದಿರುತ್ತಾರೆ. ಈ ಕಾಲಕ್ಕೆ ಪಂಪಾತೀರ್ಥ ಅಥವಾ ಶಕ್ತಿಸ್ಥಾನವಾಗಿದ್ದ ಪಂಪಾದೇವಿಯ ಹೆಸರು ಹಿಂದಕ್ಕೆ ತಳ್ಳಲಾರಂಭಿಸಿತ್ತು. ವಿರೂಪಾಕ್ಷ ದೇವರ ದೇವಾಲಯ ಸುಮಾರು ಕ್ರಿ.ಶ. 1150ರಲ್ಲಿ ರಚಿತವಾದ ಮೇಲೆ (ಅದಕ್ಕೆ ಮೊದಲು ಇಲ್ಲಿ) 'ವಿರೂಪಾಕ್ಷ' ದೇವಾಲಯವಿರಲಿಲ್ಲ, 'ಮಹಾಕಾಳೇಶ್ವರ' ದೇವಾಲಯವಿತ್ತು. ಪಂಪಾಕ್ಷೇತ್ರವು ವಿರುಪಾಕ್ಷ ಕ್ಷೇತ್ರವಾಗಿ ಮೆರೆಯ ತೊಡಗಿತು. ಜೊತೆಗೆ ವೀರಶೈವ ಧರ್ಮವನ್ನು ಸ್ವೀಕರಿಸಿದ್ದ ಹರಿಹರನಂತಹ ಕವಿ ಶಿವಪಾರಮ್ಯವನ್ನು ಎತ್ತಿ ಹಿಡಿದು ಈ ಕ್ಷೇತ್ರದಲ್ಲಿ ನೆಲಸಿ ಕೃತಿಗಳನ್ನು ರಚಿಸಿದ. ಹೀಗಾಗಿ ಈ ಕ್ಷೇತ್ರ ಶಿವಪಾರಮ್ಯವಾಯಿತು.[3] ಇದೇ ಹರಿಹರನ ಸಮಕಾಲೀನನಾದ ಸೋಮರಾಜನು (ಕ್ರಿ.ಶ. 1222) ತನ್ನ ಉದ್ಭಟ ಕಾವ್ಯದಲ್ಲಿ ಪಂಪಾದೇವಿ ಮತ್ತು ವಿರೂಪಾಕ್ಷರಿಗೆ ಸಮಾನ ಸ್ಥಾನವಿತ್ತಿದ್ದಾನೆ. ಪಂಪಾದೇವಿಯನ್ನು ಮನದುಂಬಿ ಸ್ತುತಿಸಿದ್ದಾನೆ. ತನ್ನ ಕಾವ್ಯದಲ್ಲಿ ಹಂಪೆ ಶಕ್ತಿ ಪೀಠದ ಒಂದು ಕೇಂದ್ರವಾಗಿತ್ತೆಂಬ ಅಂಶವನ್ನು ಆತ ವಿವರವಾಗಿ ನೀಡಿರುತ್ತಾನೆ.

ಎಂ. ಚಿದಾನಂದಮೂರ್ತಿಯವರು ಈಗಿನ ಪಂಪಾಸರೋವರವೇ ಬಾಲಪಂಪಾದೇವಿಯ ಸ್ಥಾನ. ಈಗಿನ ಪಂಪಾಸರೋವರದ ಬಳಿಯ ಜಯಲಕ್ಷ್ಮಿಯೇ ಬಾಲಪಂಪಾದೇವಿ ಎಂದು ಖಚಿತಪಡಿಸಿಕೊಂಡಿರುವುದಾಗಿ ಹೇಳಿರುತ್ತಾರೆ.[4] ಈ ವಿದ್ವಾಂಸರೆಲ್ಲಾ ಹೀಗೆ ವಾದಿಸಲು ಕಾರಣ ಇಷ್ಟೆ. ಕೆಲವು ಕೃತಿಗಳಲ್ಲಿ ಮುಖ್ಯವಾಗಿ ಪಂಪಾಮಹಾತ್ಮೆ ಕೃತಿಯಲ್ಲಿ ಈ ಪಂಪಾಸರೋವರದ ಉಲ್ಲೇಖವಿದ್ದು ಅದು ಆನೆಯಗೊಂದಿಯ ಬಳಿಯ ಸರೋವರವನ್ನು ಸೂಚಿಸುತ್ತದೆ. ಹಾಗಾದರೆ ಪಂಪಾಮಹಾತ್ಮೆಯ ಕಾಲ ಯಾವುದು? ಇದರಲ್ಲಿನ ಅನೇಕ ವಿಷಯಗಳು ಹಂಪೆಯ ಪೂರ್ಣವಾಗಿ ವೀರಶೈವೀಕರಣಗೊಂಡ ಮೇಲೆ ಬಂದಿರುವ ಅಂಶಗಳಿರುವುದರಿಂದ ಮತ್ತು ಅನೇಕ ಸೇರ್ಪಡೆಗಳು ಇದರಲ್ಲಿ ಬಂದಿರುವುದರಿಂದ ಇದರ ಕಾಲವು ಕ್ರಿ.ಶ. 16ನೆಯ ಶತಮಾನಕ್ಕಿಂತ ಹಿಂದೆ ಹೋಗಲಾರದು. ಇದನ್ನು ಶೈವಕ್ಷೇತ್ರವೆಂದು ಸಾಧಿಸಲು ಹೊರಟ ಕವಿಯೊಬ್ಬ ಪಂಪಾಮಹಾತ್ಮೆ ಭಾಗವನ್ನು ರಚಿಸಿ ಸೇರಿಸಿದಂತೆ ಭಾಸವಾಗುತ್ತದೆ ಇರಲಿ. ಕುಮಾರವ್ಯಾಸನ ಸಭಾಪರ್ವದಲ್ಲಿ ಸಹದೇವನು ತುಂಗಭದ್ರಾನದಿಯನ್ನು ದಾಟಿ ಪಂಪಾಸರದ ದಡದ ವಿರೂಪಾಕ್ಷ ಸೀಮೆಯಲ್ಲಿ ಬೀಡುಬಿಟ್ಟನೆಂದು ಹೇಳಿದೆ.[5] ಇಲ್ಲಿ 'ಪಂಪಸರದ' ದಡದಲ್ಲಿ ವೀರೂಪಾಕ್ಷಸೀಮೆಯಿತ್ತು. ಪಂಪಾಮಹಾತ್ಮೆಯ ಪ್ರಕಾರ ಆನೆಯಗೊಂದಿ ಬಳಿ ಇರುವ ದೇವಿ ಹಿರಿಯ ಹಂಪಾದೇವಿ. ವಿರೂಪಾಕ್ಷನ ಬಳಿ ಇರುವ ದೇವಿ ಚಿಕ್ಕಹಂಪಾದೇವಿ. ವಾಲ್ಮೀಕಿಯು 'ಪಂಪಾಪುಷ್ಕರಣಿ'ಯನ್ನು ಉಲ್ಲೇಖಿಸುತ್ತಾನೆ. ಹಾಗೆಯೇ ಅನೇಕ ಕಡೆಗಳಲ್ಲಿ 'ಪಂಪಾ' ಉಲ್ಲೇಖ ಬಂದಿದೆ. ರಾಮಚರಿತ ಮಾನಸದಲ್ಲಿ 'ಪಂಪಾಸರಹಿ', 'ಪಂಪಾನಾಮಕ್ ಸರೋವರ್'[6] ಉಲ್ಲೇಖಗಳು ಬಂದಿವೆಯಾದರೂ ನಿರ್ದಿಷ್ಟ ಸ್ಥಳವನ್ನು ಈ ಕಾವ್ಯಗಳು ತಿಳಿಸಿಲ್ಲ. ಹೀಗಾಗಿ ಪಂಪಾಮಹಾತ್ಮೆಯ ಸಂಪಾದಕರು ಈಗಿನ ಪಂಪಾಸರೋವರವೆಂದು ತಿಳಿಸುವ ಸ್ಥಳವನ್ನು ಇದೇ ಪಂಪಾಸರೋವರವೆಂದು ಗುರುತಿಸಿರುತ್ತಾರೆ. ಇವರನ್ನನುಸರಿಸಿದ ಅನೇಕರು ಇದನ್ನೇ ಜಾಹೀರುಪಡಿಸಿರುತ್ತಾರೆ. ಹಿಂದಿನ ಕಾದಂಬರಿಗಳಲ್ಲಿ, ನಾಟಕಗಳಲ್ಲಿ ಇದೇ ಸ್ಥಳವನ್ನು ಪಂಪಾಸರೋವರವೆಂದು ಗುರುತಿಸಿರುತ್ತಾರೆ.

ಇಲ್ಲಿ ಬರುವ ಪ್ರಶ್ನೆ ಮೂಲ ಪಂಪಾತೀರ್ಥ ಯಾವುದು? ತೀರ್ಥ ಬೇರೆ ಸರೋವರ ಬೇರೆ. ಸಾಮಾನ್ಯವಾಗಿ ಪುಣ್ಯಕ್ಷೇತ್ರಗಳಲ್ಲಿ ತೀರ್ಥಸ್ನಾನ ಬಹುಮುಖ್ಯವಾದದ್ದು. ಈಗಿನ ಹಂಪೆಯ ಹಿಂಬದಿಯ ಊರುಗಳಲ್ಲಿ ಅಂದರೆ ಹಡಗಲಿ, ಮುಂತಾದ ಕಡೆ ತುಂಗಭದ್ರಾ ನದಿಯನ್ನು ಹಂಪಿಹೊಳೆಯೆಂದೇ ಕರೆಯುತ್ತಾರೆ. ಹೀಗಾಗಿ ತುಂಗಭದ್ರಾನದಿಗೆ ಈ ಪ್ರದೇಶದಲ್ಲಿ ಹಂಪಿ ಹೊಳೆಯೆಂಬ ಪರ್ಯಾಯನಾಮವೂ ಇದೆ. ಹೀಗಾಗಿ ಹಂಪೆಯೆಂಬುದು ಒಂದು ಸ್ಥಳನಾಮವೂ ಹೌದು. ಹಾಗೆಯೇ ನದಿಗಿದ್ದ ಹೆಸರೂ ಹೌದು. ಸಾಮಾನ್ಯವಾಗಿ ಹಿಂದಿನ ಶಾಸನಗಳಲ್ಲಿ ಈ ಬಗ್ಗೆ ಕೆಲವು ಉಲ್ಲೇಖಗಳು ಸಿಗುತ್ತವೆ.

ವಾಸ್ತವವಾಗಿ ಈಗಿನ ಆನೆಯಗೊಂದಿ ಬಳಿಯ ಪಂಪಾಸರೋವರವು ಪ್ರಖ್ಯಾತವಾದುದು ವಿಜಯನಗರದ ಪತನದಿಂದೀಚೆಗೆ. ಅದಕ್ಕೆ ಮೊದಲು ಪಂಪಾತೀರ್ಥವು ಪವಿತ್ರವಾದ ಸ್ಥಳವಾಗಿ ಹಂಪೆಯಲ್ಲಿಯೇ ಇತ್ತು. ರಾಘವಾಂಕನ ವೀರೇಶ ಚರಿತೆಯಲ್ಲಿ '.... ಬಂದುಜೆ ಪಂಪಾಧೀಶನ ಮುಂದಣ ತೀರ್ಥದ ತಡಿಯ ತಪೋವನದೊಳ್ ಮುನಿವೃಂದದ ನಡುವಿನ ದಧೀಚಿಗೆ ...'.[7] ಅಂದರೆ ಈ ತೀರ್ಥವು ವಿರೂಪಾಕ್ಷನ ಮುಂಬದಿಯಲ್ಲಿತ್ತು. ಕುಮಾರವ್ಯಾಸನ ಪ್ರಕಾರ ಸಹದೇವನು ಕುಂತಲ ದೊರೆಯನ್ನು ಗೆದ್ದ ಬಳಿಕ ತುಂಗಭದ್ರಾ ನದಿಯನ್ನು ದಾಟಿ ಪಂಪಾಸರದ ದಡದ 'ವಿರೂಪಾಕ್ಷ ಸೀಮೆ'ಯಲ್ಲಿ ಬೀಡುಬಿಟ್ಟ ಉಲ್ಲೇಖವಿದೆ. ಕುಂತಳ ದೇಶವೆಂದರೆ ಮುಖ್ಯವಾಗಿ ತುಂಗಭದ್ರಾ ನದಿಯ ಉತ್ತರಭಾಗ. ಕೆಲವೊಮ್ಮೆ ದಕ್ಷಿಣದ ಭಾಗವನ್ನು ಹೇಳಿರುವುದುಂಟು. ಆದರೂ ಸಹದೇವನು ತುಂಗಭದ್ರಾ ನದಿಯನ್ನು ದಾಟಿ ಪಂಪಾಸರದ ಬಳಿಗೆ ಬಂದ. ಅಂದರೆ ಈಗಿನ ಆನೆಯಗೊಂದಿಯ ಪಂಪಾಸರಸ್ಸು ಅಲ್ಲ. ಸೋವರಾಜನ ಉದ್ಭಟ ಕಾವ್ಯದಲ್ಲಿಯೂ (ಕ್ರಿ.ಶ 1222) ಉದ್ಭಟನು ತನ್ನ ರಾಜ್ಯದಿಂದ ಪಂಪಾಕ್ಷೇತ್ರಕ್ಕೆ ಬರುತ್ತಾನೆ. ಆತ ಮೊದಲು ಕಾಣುವುದು ಬಾಲಪಂಪಾದೇವಿಯನ್ನು ಹಾಗೆಯೇ ತುಂಗಭದ್ರಾ ನದಿಯ ದಡದಲ್ಲೇ ಬಂದು ವಿರೂಪಾಕ್ಷನನ್ನು ಆ ಮೇಲೆ ಅಲ್ಲಿದ್ದ ಹಿರಿಯ ಹಂಪಾದೇವಿಯನ್ನು ಕಾಣುತ್ತಾನೆ. ಒಟ್ಟಿನಲ್ಲಿ ಈ ಎಲ್ಲಾ ದೇವರುಗಳ ದರ್ಶನಗಳನ್ನು ಪಡೆದದ್ದು ತುಂಗಭದ್ರೆಯನ್ನು ದಾಟಿದ ಮೇಲೆ. ಪಂಪಾಕ್ಷೇತ್ರದಲ್ಲಿ ಬಾಲಪಂಪಾದೇವಿ ಮಾತ್ರ ಈಗಿನ ವಿರೂಪಾಕ್ಷ ದೇವಾಲಯದ ಸಮುಚ್ಚಯದಲ್ಲಿರದೆ ದೂರದಲ್ಲಿದ್ದಳು. ಹೀಗಾಗಿ ಸಾಹಿತ್ಯದ ಆಧಾರಗಳಿಂದ ಪಂಪಾತೀರ್ಥ/ಸರಸ್ಸು ತುಂಗಭದ್ರೆಯ ಬಲಭಾಗದಲ್ಲಿತ್ತು.

ಶಾಸನಗಳಲ್ಲಿ ಪಂಪಾತೀರ್ಥದ ಉಲ್ಲೇಖವು ಕ್ರಿ.ಶ. 681ರ ಶಾಸನದಲ್ಲಿ ಬರುತ್ತದೆ.[8] ಆದರೆ ಹೆಚ್ಚಿನ ವಿವರಗಳನ್ನು ನೀಡಿಲ್ಲ. ಮುಂದೆ ಕ್ರಿ.ಶ. 1018ರ ಭಾಗದ ಶಾಸನದಲ್ಲಿ ಇಲ್ಲಿ ನೊಳಂಬ ಅರಸನು ಕಂಪಿಲೆಯಿಂದ ಪಂಪಾತೀರ್ಥಕ್ಕೆ ಬಂದಿದ್ದಾಗ, ಬಾಗಳಿಯ ಕಲ್ಲೇಶ್ವರ ದೇವರಿಗೆ ದಾನನೀಡಿರುತ್ತಾನೆ.[9] ಇಲ್ಲಿ ಸ್ಥಳದ ಉಲ್ಲೇಖದ ವಿವರಗಳಿಲ್ಲ. ಕ್ರಿ.ಶ. 1053ರ ಶಾಸನದಲ್ಲಿ 'ಪಂಪೆಯ ತೀರ್ಥದ' ಉಲ್ಲೇಖ ಬರುತ್ತದೆ.[10] ಕ್ರಿ.ಶ. 1199ರ ಹಂಪೆಯ ಶಾಸನವು ಹಂಪೆಯ ದೇವಾಲಯಗಳ ಬಗ್ಗೆ ನಮಗೆ ಅನೇಕ ವಿವರಗಳನ್ನು ನೀಡುತ್ತದೆ.[11] ವಿರೂಪಾಕ್ಷ ದೇವಾಲಯಕ್ಕೆ ಹಾಗೂ ಹಂಪಾದೇವಿಗೆ ದಾನಗಳನ್ನು ಮೈದುನ ಚೌಡಯ ಬಿಡುತ್ತಾನೆ. ಈ ಶಾಸನದಲ್ಲಿ ವಿರೂಪಾಕ್ಷನಿದ್ದ ಸ್ಥಳವನ್ನು 'ವಿರೂಪಾಕ್ಷಸೀಮೆ' ಎಂದು ಕರೆದಿದೆ. ಸೈನ್ಯ ಬೀಡುಬಿಟ್ಟಿದ್ದದ್ದು ಮಂತಂಗ ಪರ್ವತದ ಬಳಿಯ ಬೀಡಿನಲ್ಲಿ. ಪಂಪಾತೀರ್ಥದ ಉಲ್ಲೇಖ ಈ ಶಾಸನದಲ್ಲಿಲ್ಲ. ಕ್ರಿ.ಶ. 1379ರ ಒಂದೇ ವಿಷಯವನ್ನು ಹೇಳುವ ಎರಡು ಶಾಸನಗಳಲ್ಲಿ ಪಂಪಾತೀರದಲ್ಲಿ ನರಸಿಂಹದೇವರನ್ನು ನಲಾನು ಚಕ್ರವರ್ತಿ ಪ್ರತಿಷ್ಟಾಪಿಸಿದ. ಈ ನರಸಿಂಹನನ್ನು 'ಪಂಪಾತೀರನಿಲಯ' ಎಂದು ಶಾಸನದಲ್ಲಿ ಕರೆದಿದೆ.[12]



1. ಚಕ್ರತೀರ್ಥ (ಮೊದಲ ಪಂಪಾತೀರ್ಥ)



2. ಚಕ್ರತೀರ್ಥದ ಬಳಿಯ ಹರಕೆ ಮಂಟಪಗಳು

ಜಾನಪದ ಐತಿಹ್ಯಗಳು ಸಾಮಾನ್ಯವಾಗಿ ಈಗಿರುವ ಸ್ಥಿತಿಯನ್ನು ವರ್ಣಿಸುತ್ತವೆ. ಇವರ ಪ್ರಕಾರ ಪಂಪಾಸರೋವರವು ಈಗಿನ ಘಟ್ಟಕೋಟೆ ಮತ್ತು ಅಂಜನಾದ್ರಿ ಪರ್ವತಗಳ ಮಧ್ಯೆ ಇರುವ ಸರೋವರವಾಗಿದೆ. ಇಂದಿಗೂ ಅನೇಕ ಯಾತ್ರಿಕರು ಈ ಸರೋವರಕ್ಕೆ ಭೇಟಿ ನೀಡುತ್ತಾರೆ.

ಇಷ್ಟೆಲ್ಲಾ ಇದ್ದರೂ ಮೂಲ ಪಂಪಾತೀರ್ಥ ಯಾವುದೆಂದು ಸ್ಪಷ್ಟವಾಗಿಲ್ಲ. ಸಾಮಾನ್ಯವಾಗಿ ತೀರ್ಥಸ್ಥಳವು ಪ್ರಾಚೀನ ಕ್ಷೇತ್ರವಾಗಿದ್ದು ಅಲ್ಲಿ ನದಿ ಸ್ನಾನ ಅಥವಾ ಜಲಸ್ನಾನವು ಮೋಕ್ಷವನ್ನು ನೀಡುತ್ತದೆಂಬ ನಂಬಿಕೆ ಇದೆ. ತುಂಗಭದ್ರೆಯು ಕೂಡಲಿಯಿಂದ ಆಂಧ್ರಪ್ರದೇಶದ ಆಲಂಪುರದ ಬಳಿಯ ಸಂಗಮದವರೆಗೆ ಹರಿದರೂ 'ಹಂಪಿಹೊಳೆ' ಎನಿಸಿಕೊಂಡಿರುವುದು ಹಡಗಲಿಯಿಂದ ಕಂಪಿಲಿವರೆಗೆ. ಈ ಪ್ರದೇಶದಲ್ಲಿ ಇದ್ದ ತೀರ್ಥವು ಈಗಿನ ಹಂಪೆಯಲ್ಲಿತ್ತು. ಯಾವುದೇ ತೀರ್ಥವು ಪ್ರಾಚೀನ ಅವಶೇಷಗಳನ್ನು ಹೊಂದಿರಬೇಕು. ನದಿಯ ಮುರಿದಿರುವ ಭಾಗವು (ತಿರುಗಿರುವ) ಸಾಮಾನ್ಯವಾಗಿ ತೀರ್ಥವಾಗುತ್ತದೆ. ಒಂದಲ್ಲ ಒಂದು ಸಂದರ್ಭದಲ್ಲಿ ಜನರು ಇಲ್ಲಿ ಸ್ನಾನಮಾಡಿ ಕೆಲವು ವಿಧಿಗಳನ್ನು ತಿಳಿದೋ ತಿಳಿಯದೆಯೋ ಪರಂಪರೆಯಾಗಿ ಇಂದಿಗೂ ಆಚರಿಸುತ್ತಾರೆ.

ಇದುವರೆಗಿನ ಆಧಾರಗಳನ್ನು ಗಮನಿಸಿದಾಗ ಇಂತಹ ತೀರ್ಥವು ಹಂಪೆಯಲ್ಲಿ ಈಗಿನ ಚಕ್ರತೀರ್ಥವೇ ಆಗಿತ್ತು (ಪಂಪಾಸರಸ್ ಅಲ್ಲ). ಅನೇಕ ಸಾಹಿತ್ಯಿಕ, ಪುರಾತತ್ವ, ಶಾಸನಗಳು ಹಾಗೂ ಹಂಪೆಯಲ್ಲಿನ ಆಚರಣೆಗಳು ಈ ವಾದವನ್ನು ಬಲಗೊಳಿಸುತ್ತವೆ.

1. ಸಾಹಿತ್ಯ ಕೃತಿಗಳಲ್ಲಿ ಎಲ್ಲಿಯೂ ಪಂಪಾತೀರ್ಥ ಅಥವಾ ಪಂಪಾಸರಸ್ಸು ಹೊಳೆಯಿಂದ ಆಚೆಗಿತ್ತೆಂಬ ಉಲ್ಲೇಖಗಳಿಲ್ಲ. ಎಲ್ಲವೂ ತುಂಗಭದ್ರೆಯ ಬಲದಂಡೆಗೇ ಸೀಮಿತವಾಗಿವೆ.

2. ಪುರಾತತ್ವ ಅವಶೇಷ ಹಾಗೂ ರಾಮಾಯಣಕ್ಕೆ ಸಂಬಂಧಿಸಿದ ಐತಿಹ್ಯಗಳು ಈ ಭಾಗದಲ್ಲಿಯೂ ಇವೆ. ಇಲ್ಲಿರುವ ಬಂಡೆಯಲ್ಲಿನ ಗೆರೆಯನ್ನು ಸೀತೆ ಸೆರಗೆಂದು ತೋರಿಸಿ ರಾಮಾಯಣಕ್ಕೆ ಸಂಬಂಧಿಸಿದಂತೆ ಈ ಸ್ಥಳಕ್ಕೆ ಅನ್ವಯಿಸುತ್ತಾರೆ. ಈ ತೀರ್ಥದ ಮೇಲ್ಭಾಗದಲ್ಲಿನ ಸ್ಥಳದಲ್ಲಿ ಅಚ್ಯುತ ದೇವರಾಯನು ದೇವಾಲಯವನ್ನು ಕಟ್ಟಿಸಿದ್ದು, ಹಿಂದೆ ಇದ್ದಿರಬಹುದಾದ ಪ್ರಾಚೀನ ಅವಶೇಷಗಳನ್ನು ನಾಶಮಾಡಿರಬೇಕು. ವಿಜಯನಗರ ಕಾಲದಲ್ಲಿ ಇಂತಹವು ಬಹಳಷ್ಟು ಹಾಳಾಗಿವೆ.

3. ಶಾಸನಗಳು ಪಂಪಾತೀರ್ಥವನ್ನು ಉಲ್ಲೇಖಿಸುತ್ತವೆಯೇ ಹೊರತು ನಿರ್ದಿಷ್ಟ ಸ್ಥಳವನ್ನು ಸೂಚಿಸುವುದಿಲ್ಲ. ಇಡೀ ಹಂಪೆಯನ್ನೇ ಪಂಪಾತೀರ್ಥವೆಂದು ಕರೆದಿವೆ. ಆದರೂ ವೀರಹರಿಹರನ ಕಾಲದ ಅಧಿಕಾರಿ ಸಾಯಣ ಅಯ್ಯನ ಕಾಲದಲ್ಲಿ 'ಪಂಪಾ' ತೀರದಲ್ಲಿ ನರಸಿಂಹದೇವಾಲಯ ಕಟ್ಟಿಸಿದಂತೆ ಹೇಳಿಕೊಂಡಿರುವುದರಿಂದ ಇಲ್ಲಿ ನದಿಯಯನ್ನು 'ಪಂಪಾ' ಎಂದು ಕರೆಯುತ್ತಿದ್ದರೆಂಬುದು ಸ್ಪಷ್ಟ. ನರಸಿಂಹ ದೇವಾಲಯದ ಅವಶೇಷವೂ ಈಗ ಉಳಿದು ಬಂದಿರುವುದರಿಂದ ಇದನ್ನು ಈಗ ಗುರುತಿಸುವುದು ಕಷ್ಟವೇನಲ್ಲ. ನದಿಯು ತಿರುವು ಪಡೆದಿರುವ ಚಕ್ರತೀರ್ಥಪ್ರದೇಶವೇ ಪಂಪಾತೀರ್ಥದ ಮುಖ್ಯ ಸ್ನಾನಘಟ್ಟವಾಗಿತ್ತು (ಚಿತ್ರ 1).

4. ಹಂಪೆಯಲ್ಲಿ ಇಂದಿಗೂ ಉಳಿದು ಬಂದಿರುವ ಆಚರಣೆಗಳಲ್ಲಿ ಫಲಪೂಜೆಯೂ ಒಂದು. ಆ ದಿನ ಪಂಪಾಪತಿ ಅಥವಾ ವಿರೂಪಾಕ್ಷ ಹಾಗೂ ಪಂಪಾದೇವಿಯನ್ನು ಹಂಪಿ ಹೊಳೆಯ ತೀರದ ಕೋದಂಡರಾಮಸ್ವಾಮಿ ದೇವಾಲಯದ ಬಳಿಗೆ ತೆಗೆದುಕೊಂಡು ಹೋಗುತ್ತಾರೆ. ಇಲ್ಲಿಯೇ ಪಂಪಾಂಬಿಕೆಯ ನಿಶ್ಚಿತಾರ್ಥಮಾಡಿಕೊಳ್ಳುವುದು[13] ಹಾಗೂ ಈ ಚಕ್ರತೀರ್ಥದಲ್ಲಿ ದೇವರನ್ನು ತೊಳೆಯುವುದು ಅಥವಾ ಮೆರವಣಿಗೆಯಲ್ಲಿ ತರುವುದು, ಮೆರೆಸುವುದು ಮೊದಲಾದ ಕಾರ್ಯಗಳು ನಡೆಯುತ್ತವೆ. ವಿರೂಪಾಕ್ಷ ದೇವಾಲಯದ ಬಳಿ ಹರಿಯುವ ನದಿಯಲ್ಲಿಯೇ ಘಟ್ಟವಿದ್ದರೂ ಜನ ಮತ್ತು ದೇವರು ಪವಿತ್ರ ಸ್ನಾನ ಮಾಡುವುದು ಇಲ್ಲಿಯೇ.

5. ಇವಲ್ಲದೆ ಕೆಲವು ಪ್ರಾಚೀನ ಆಚರಣೆಗಳು ಇಂದಿಗೂ ಜನಪದ ಆಚರಣೆಗಳೊಂದಿಗೆ ಪ್ರಚಲಿತದಲ್ಲಿರುವುದು ಈ ಚಕ್ರತೀರ್ಥದ ಬಳಿಯಲ್ಲಿಯೇ. ಅವುಗಳಲ್ಲಿ ಚಕ್ರತೀರ್ಥದಲ್ಲಿ ನದಿಸ್ನಾನ ಮಾಡಿ, ಹರಕೆ ಮಂಟಪಗಳನ್ನು ರಚಿಸಿ, ಅಲ್ಲಿಯೇ ಇರುವ ಮರಕ್ಕೆ ಅಥವಾ ಗಿಡಕ್ಕೆ ತೊಟ್ಟಿಲನ್ನು ಕಟ್ಟಿ ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ಪ್ರಾರ್ಥಿಸುವುದು. ಈ ಆಚರಣೆಯು ದೇವರ ಮೂರ್ತರೂಪದ ಪೂಜೆಗಿಂತ ಹಿಂದಿನ ಆಚರಣೆಯಾಗಿದೆ.[14] ಇಂದಿಗೂ ಚಕ್ರತೀರ್ಥದ ಬಳಿ ವಿಠಲದೇವರ ಗುಡಿಗೆ ಹೋಗುವ ದಾರಿಯಲ್ಲಿ ಬಲಕ್ಕೆ ಬೆಟ್ಟದ ಮೇಲೆ ಇಂತಹ ಹರಕೆಯ ಮಂಟಪಗಳು ಸಾವಿರಾರಿವೆ.[15] ಇಂದಿಗೂ ರಚಿತವಾಗುತ್ತಲೇ ಇವೆ. ಬೀಳುತ್ತಲೂ ಇರುತ್ತವೆ (ಚಿತ್ರ 2). ಅಲ್ಲೇ ಇರುವ ಮರಕ್ಕೆ ಬಟ್ಟೆಯಲ್ಲಿ ಕಲ್ಲನ್ನು ಕಟ್ಟಿ ಮರದ ಕೊಂಬೆಗೆ ಕಟ್ಟಿರುವುದನ್ನು ಕಾಣುತ್ತೇವೆ.

ಈ ಆಧಾರಗಳಿಂದ ಈ ಕೆಳಕಂಡ ತೀರ್ಮಾನಕ್ಕೆ ಬರಲಾಗಿದೆ.

1. ಪ್ರಾಚೀನ ಪಂಪಾತೀರ್ಥವು ಈಗಿನ ಚಕ್ರತೀರ್ಥವೇ ಆಗಿತ್ತು.

2. ಬಾಲಪಂಪಾದೇವಾಲಯವು ಚಕ್ರತೀರ್ಥದ ಬಳಿ ಇತ್ತು. ವಿರೂಪಾಕ್ಷ ದೇವಾಲಯ ಪ್ರಸಿದ್ಧಿಗೆ ಬಂದ ಮೇಲೆ ಅನೇಕ ಸಣ್ಣಪುಟ್ಟ ಗುಡಿಗಳು ಮೂಲೆಗುಂಪಾಗಿ ನಾಶವಾಗಿರಬಹುದು.

3. ಪಂಪಾಸರೋವರವು ವಿಜಯನಗರೋತ್ತರ ಕಾಲದಲ್ಲಿ ಪ್ರಸಿದ್ಧಿಗೆ ಬಂದದ್ದು.

4. ಈಗಿನ ಚಕ್ರತೀರ್ಥದ ಬಳಿ ಇದ್ದಿರಬಹುದಾದ ಬಹಳಷ್ಟು ಪ್ರಾಚೀನ ಕುರುಹುಗಳು ಅಚ್ಯುತರಾಯದೇವಾಲಯದ ಮತ್ತು ಅದರ ಪೇಟೆ ಬೀದಿಯ ರಚನೆಯಲ್ಲಿ ನಾಶವಾಗಿರಬೇಕು.

5. ಹಂಪೆಯ ಈಗಿನ ವಿರೂಪಾಕ್ಷ ದೇವಾಲಯವು ಕ್ರಿ.ಶ. 1150ರಲ್ಲಿ ರಚಿತವಾದದ್ದು. ಈ ಕಾಲಕ್ಕಾಗಲೇ ಬೇರೆ ಬೇರೆ ದೇವರ ದೇವಾಲಯಗಳು ಇಲ್ಲಿದ್ದವು. ಬಹುಶಃ ನೊಳಂಬರ ಕಾಲದಿಂದ ಈ ಪ್ರದೇಶ ಹೆಚ್ಚಿನ ಬೆಳವಣಿಗೆ ಪಡೆಯಿತು.

6. ವಿರೂಪಾಕ್ಷ ದೇವಾಲಯ ಆಗಮೋಕ್ತವಾಗಿ ಪಂಚಾಯತನದಿಂದ ಕೂಡಿದ ದೇವಾಲಯವಾಗಿತ್ತು.

7. ಶಾಕ್ತ ಕೇಂದ್ರವಾಗಿದ್ದ ಪಂಪಾಕ್ಷೇತ್ರವು ಶಿವಪಾರಮ್ಯಕ್ಷೇತ್ರವಾಗಿ ಬೆಳೆದ ಮೇಲೆ ಪಂಪಾದೇವಿಯ ದೇವಾಲಯಗಳು ಮೂಲೆಗುಂಪಾದವು.

8. ಪಂಪಾನದಿ ಎಂದರೆ ಕವಲುಗಳುಳ್ಳ ನದಿ ಎಂದರ್ಥ.

ಟಿಪ್ಪಣಿಗಳು

1. ಶ್ರೀಗುರು ಸಿದ್ಧಲಿಂಗೇಶ್ವರ ಸ್ವಾಮಿಗಳು, *ಪಂಪಾಮಹಾತ್ಮೆ*, ಪು. 28.
2. *ಅದೇ*, ಪು. 29.
3. "ತುಂಗಭದ್ರೆಯ ವಿರೂಪಾಕ್ಷ ದೇವಾಲಯಗಳು", *ಇತಿಹಾಸ ದರ್ಶನ*, ಸಂ. 13.
4. ಚಿದಾನಂದಮೂರ್ತಿ ಎಂ., *ಹೊಸತು ಹೊಸತು*, ಪು. 480–481.
5. *ಅದೇ*, ಪು. 473.
6. *ಪಂಪಾಮಹಾತ್ಮೆ*, ಪು. 818.
7. *ರಾಘವಾಂಕನ ವೀರೇಶ ಚರಿತೆ*, ಪದ್ಯ 43.
8. *ಇಂಎ*, VI, ಪು. 85–88; *ಜಬಾಂಬ್ರಾಂರಾಏಸೊ*, XII, ಪು. 337.
9. *ಸೌಇಂಇ*, IX i, ಸಂ. 80.
10. *ಕ್ವಾಜಮಿಸೊ*, IV, ಪು. 290.
11. *ಸೌಇಂಇ*, VII, ಸಂ. 260.
12. ದೇವರಾಜ್ ಡಿ.ವಿ. ಮತ್ತು ಪಾಟೀಲ ಚನ್ನಬಸಪ್ಪ ಎಸ್. (ಸಂ.), *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1984–87*, ಪು. 38–39.
13. ಬಿಳಿಮಲೆ ಪುರುಷೋತ್ತಮ, *ಹಂಪಿ ಜಾನಪದ*, ಪು. 130.
14. *ಇತಿಹಾಸ ದರ್ಶನ*, ಸಂ. 8, ಪು. 1.
15. ಬಿಳಿಮಲೆ ಪುರುಷೋತ್ತಮ, *ಪೂರ್ವೋಕ್ತ*, ಪು. 95.

13. ಮುಮ್ಮಡಿ ಸಿಂಗನ ಮೇಲೆ ಮತ್ತಷ್ಟು ಬೆಳಕು

– ಚನ್ನಬಸಪ್ಪ ಎಸ್. ಪಾಟೀಲ

ಕಂಪಿಲರಾಯನ ರಾಜ್ಯದ ಅವಸಾನ ಮತ್ತು ವಿಜಯನಗರ ಸಾಮ್ರಾಜ್ಯದ ಉದಯ ಇವೆರಡರ ಅವಧಿಯಲ್ಲಿ ಹಂಪಿಯ ಪ್ರದೇಶದಲ್ಲಿ ನಡೆದ ಘಟನೆಗಳ ಬಗ್ಗೆ ವ್ಯಾಪಕವಾದ ಸಂಶೋಧನೆ ಆಗಬೇಕಾಗಿದೆ. ದಕ್ಷಿಣ ಭಾರತದ ಎಲ್ಲ ಪ್ರಮುಖ ಅರಸರು ದಿಲ್ಲಿಯ ಸುಲ್ತಾನನಿಂದ ಸೋಲನ್ನು ಅನುಭವಿಸಿದಾಗ ಕುಮ್ಮಟದುರ್ಗದಿಂದ ಆಳುತ್ತಿದ್ದ ಕಂಪಿಲರಾಯನು ದಿಲ್ಲಿಯ ಸೈನ್ಯವನ್ನು ಮೂರು ಸಲ ಸೋಲಿಸುತ್ತಾನೆ. ನಾಲ್ಕನೆಯ ಸಲ ಕ್ರಿ.ಶ. 1327ರಲ್ಲಿ ದಿಲ್ಲಿ ಸೈನ್ಯವು ದೊಡ್ಡ ಪ್ರಮಾಣದಲ್ಲಿ ಕುಮ್ಮಟವನ್ನು ತಿಂಗಳುಗಟ್ಟಲೆ ಮುತ್ತಿದಾಗ ಕಂಪಿಲರಾಯನು ಇತರ ವೀರರೊಂದಿಗೆ ಕೋಟೆಯ ಹೊರ ಬಂದು, ಹೋರಾಡಿ, ವೀರಮರಣ ಹೊಂದುತ್ತಾನೆ. ಕುಮ್ಮಟದುರ್ಗದಿಂದ ಕೇವಲ 12 ಕಿ.ಮೀ. ಆಗ್ನೇಯಕ್ಕಿರುವ ಹಂಪಿ-ವಿಜಯನಗರದಲ್ಲಿ ಕೇವಲ 9 ವರ್ಷಗಳ ನಂತರ ವಿಜಯನಗರ ಸಾಮ್ರಾಜ್ಯದ ಉದಯವಾಗುತ್ತದೆ. ಆದುದರಿಂದ ವಿಜಯನಗರ ಸಾಮ್ರಾಜ್ಯದ ಉದಯದಲ್ಲಿ ಕಂಪಿಲರಾಯ ಮತ್ತು ಕುಮ್ಮಟದುರ್ಗದ ಪಾತ್ರ ಮಹತ್ವದ್ದಾಗಿದೆ. ಈ ದಿಸೆಯಲ್ಲಿ ಸಂಶೋಧನೆ ಕೈಗೊಂಡು ಈಗಾಗಲೇ "ಮುಮ್ಮಡಿ ಸಿಂಗ, ಕಂಪಿಲ ಮತ್ತು ಕುಮಾರ ರಾಮ,"[1] "ಕುಮ್ಮಟ",[2] "ಹೊಸಮಲೆದುರ್ಗ"[3] ಮತ್ತು "ದೊರವಡಿ"[4] ಲೇಖನಗಳನ್ನು ಪ್ರಕಟಿಸಿದ್ದೇನೆ. ಮುಮ್ಮಡಿ ಸಿಂಗ ಕಂಪಿಲರಾಯನ ತಂದೆ. ಹನೆಯ ಮತ್ತು ದೊರವಡಿಗಳು ಅವನ ರಾಜಧಾನಿಗಳಾಗಿದ್ದವು. ಕುಮ್ಮಟ ಮತ್ತು ಹೊಸಮಲೆದುರ್ಗ ಕಂಪಿಲರಾಯನ ರಾಜಧಾನಿಗಳಾಗಿದ್ದವು.

1995ರಲ್ಲಿ ಲಂಡನ್ನಿನ ವಿಕ್ಟೋರಿಯ ಆಂಡ್ ಅಲ್ಬರ್ಟ್ ಮ್ಯೂಜಿಯಮ್‌ಗೆ ಭೇಟಿ ನೀಡಿದಾಗ ಅಲ್ಲಿಯ ಪಾರ್ಶ್ವನಾಥ ಶಿಲ್ಪದ ಪೀಠದಲ್ಲಿಯ ಕನ್ನಡ ಶಾಸನವೊಂದು ನನ್ನನ್ನು ಆಕರ್ಷಿಸಿತು. ಶಾಸನದ ಪಾಠ ಹೀಗಿದೆ.[5]

1. ಮುನ್ನಂ ಹೊಸಣದೇಶಕುಂನತ ದೇಸಿಯಗಣಕ್ಕೆ ರಾಯಾಚಾರ್ಯ್ಯ೯ಂ ಇಂನಿ ಕುಂತಣದೇಶಕುನ್ನತನಾಚಾರ್ಯ
2. ವರ್ಯ್ಯ ರಾಯಚಾರ್ಯ್ಯಂ ॥ ಎರಂಬರಗೆಯ ಧರ್ಮ್ಮ ಮುಮುಡಿ ಸಿಂಗನ ಬಾಧೆಇಂದ ಕೆಟ್ಟಿಡೆ ಮತ್ತಂ ವ
3. ರಮುನಿ ಬಾಳೇಂದುಧರಿಸಿದನಾಚಾರ್ಯರಾಯನಗಳಿತ ಮಹಿಮಂ । ಸ್ವಸ್ತಿ ಶ್ರೀ ಮುಲಸಂಘ ದೇಸಿಯ
4. ಗಣ ಪುಸ್ತಕಗಚ್ಛ ಕುಂಡಕುಂದಾನ್ವಯ ರೋಣ ಸಂಬಂದ ಎರಂಬರಗಯ ನಗರ ಜಿನಾಲಯಕೆ ಜೀರ್ಣ್ನೋದ್ಧಾರವಾ
5. ಗಿ ಮಿಂಡಗುದಲಿಯ ಕೇತಿಸೆಟ್ಟಿಯರ ಮಗ ಮಲ್ಲಿಸೆಟ್ಟಿಯರು ಶ್ರೀ ಪಾರ್ಶ್ವದೇವರ ಮಾಡಿಸಿ ಪು
6. ಣ್ಯವ್ರಿದ್ಧಿ ಯಸೋವ್ರಿದ್ಧಿಯಂ ಮಾಡಿಕೊಂಡ । ಧರೆ ರೂವಾರಿ ಚಕ್ರವರ್ತ್ತಿ ಪಾಲೋಜ ಶ್ರೀಶ್ರೀಶ್ರೀ

ಇಲ್ಲಿ ನಾವು ಗಮನಿಸಬೇಕಾದ ಅಂಶಗಳು: ಮುಮ್ಮಡಿ ಸಿಂಗನ ಬಾಧೆಯಿಂದ ಎರಂಬರಗೆಯ ಧರ್ಮ ಅಂದರೆ ಎರಂಬರಗೆಯ ಜೈನ ಧರ್ಮ ಕೆಟ್ಟಿತು. ಮುಂದೆ ಬಾಳೇಂದು ಆಚಾರ್ಯನು ಅವಧರಿಸಿ ಎರಂಬರಗೆಯ ನಗರ ಜಿನಾಲಯಕ್ಕೆ ಜೀರ್ಣೋದ್ಧಾರವಾಗಿ ಮಿಂಡಗುದಲಿಯ ಕೇತಿಸೆಟ್ಟಿಯ ಮಗ ಮಲ್ಲಿಸೆಟ್ಟಿ ಪಾರ್ಶ್ವದೇವರನ್ನು ಮಾಡಿಸಿದ.

ಶಾಸನದಲ್ಲಿ ಉಲ್ಲೇಖಗೊಂಡ ಮುಮ್ಮಡಿ ಸಿಂಗನು ಕಂಪಿಲರಾಯನ ತಂದೆ ಮುಮ್ಮಡಿ ಸಿಂಗನೇ ಎಂದು ನಿರ್ಧರಿಸಲು ಕೆಳಗಿನ ಅಂಶಗಳು ಸಹಾಯಕವಾಗಿವೆ.

1. ಶಾಸನದಲ್ಲಿ ಉಲ್ಲೇಖಗೊಂಡ ಎರಂಬರಗೆ ಈಗಿನ ಕೊಪ್ಪಳ ಜಿಲ್ಲೆಯಲ್ಲಿಯ ಯಲಬುರ್ಗ. ಇದು ಸಿಂದರ ರಾಜಧಾನಿಯಾಗಿತ್ತಲ್ಲದೆ ಜೈನ ಕೇಂದ್ರವೂ ಆಗಿತ್ತು. ಈಗಾಗಲೇ ಈ ಸ್ಥಳದಲ್ಲಿ ಶಾಸನವುಳ್ಳ ಮೂರು ಜೈನ ಶಿಲ್ಪಗಳು ದೊರೆತಿವೆ.[6] ಮುಮ್ಮಡಿ ಸಿಂಗನು ಕ್ರಿ.ಶ. 1287ರಲ್ಲಿ ಕುಮ್ಮಟದಲ್ಲಿದ್ದನೆಂದು ಲಕ್ಷ್ಮೇಶ್ವರ ಶಾಸನದಿಂದ ತಿಳಿಯುತ್ತದೆ.[7] ಯಲಬುರ್ಗ ಕುಮ್ಮಟದಿಂದ ಸರಳ ರೇಖೆಯಲ್ಲಿ ಸುಮಾರು 45 ಕಿ.ಮೀ. ದೂರವಿರುವುದರಿಂದ ಇದೂ ಸಹ ಮುಮ್ಮಡಿ ಸಿಂಗನ ವಶದಲ್ಲಿತ್ತೆಂದು ನಿರ್ಧರಿಸಬಹುದು.
2. ಶಾಸನದಲ್ಲಿ ದಿನಾಂಕವಿಲ್ಲವಾದರೂ ಅಕ್ಷರಗಳ ಆಕಾರದ ಮೇಲೆ ಶಾಸನದ ಕಾಲವನ್ನು 13ನೇ ಶತಮಾನದ ಕೊನೆಯ ಭಾಗವೆಂದು ನಿರ್ಧರಿಸಬಹುದು. ಮುಮ್ಮಡಿ ಸಿಂಗನು ಕ್ರಿ.ಶ. 1280ರಿಂದ ಕ್ರಿ.ಶ. 1287ರವರೆಗೆ ಆಳುತ್ತಿದ್ದುದನ್ನು ಶಾಸನಗಳು ದೃಢಪಡಿಸುತ್ತವೆ.
3. ಕಂಪಿಲನ ಮಗ ಕುಮಾರರಾಮನು ಕುಮ್ಮಟದಲ್ಲಿ ವಾಸವಾಗಿದ್ದ ಜೈನರಿಗೆ ತೊಂದರೆ ಕೊಟ್ಟು ಅಲ್ಲಿಂದ ಓಡಿಸಿ ಆ ಸ್ಥಳದಲ್ಲಿ ಕೋಟೆಯನ್ನು ಕಟ್ಟಿಸಿದ್ದು ಪಾಂಚಾಳ ಗಂಗನ ಚೆನ್ನರಾಮನ ಸಾಂಗತ್ಯ ಮತ್ತು ಕೈಫಿಯತ್ತುಗಳಿಂದ ತಿಳಿಯುತ್ತದೆ.[8] ಕುಮ್ಮಟದಲ್ಲಿ



ಪಾರ್ಶ್ವನಾಥ, ವಿಕ್ಟೋರಿಯ ಆಂಡ್ ಆಲ್ಬರ್ಟ್ ಮ್ಯೂಜಿಯಮ್, ಲಂಡನ್

ಈಗಲೂ ಒಂದು ಜೈನ ಬಸದಿ ಇದೆ. ಕಂಪಿಲರಾಯನ ವಂಶಸ್ಥರು ಜೈನ ಧರ್ಮಕ್ಕೆ ಪೋಷಣೆ ನೀಡುವುದರ ಬದಲು ತೊಂದರೆ ಕೊಟ್ಟಿದ್ದಾರೆ. ಇದು ಮುಮ್ಮಡಿ ಸಿಂಗನ ಕಾಲದಿಂದ ನಡೆದುಬಂದಿದೆ.

4. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಅಮರಾಪುರದಲ್ಲಿಯ ಕ್ರಿ.ಶ. 1278ರ ಒಂದು ಶಾಸನವು ಬಾಳೇಂದು ಮಲಧರಿ ಎಂಬ ಜೈನ ಆಚಾರ್ಯನನ್ನು ಉಲ್ಲೇಖಿಸುತ್ತದೆ. ಈತನ ಶಿಷ್ಯನಾದ ಮಲ್ಲಿಸೆಟ್ಟಿಯು ಪ್ರಸನ್ನ ಪಾರ್ಶ್ವದೇವ ಬಸದಿಯನ್ನು ಉಪಾನದಿಂದ ಸ್ತೂಪಿಯವರೆಗೆ ಹೊಸದಾಗಿ ಕಟ್ಟಲು ಎರಡುಸಾವಿರ ಅಡಕೆ ಮರಗಳನ್ನು ದಾನವಾಗಿ ಕೊಡುತ್ತಾನೆ.[9] ಪಾರ್ಶ್ವದೇವ ಬಸದಿಯು ಹಾಳಾಗಿದ್ದುದರಿಂದ ಅದನ್ನು ಹೊಸದಾಗಿ ಕಟ್ಟುವ ಸಂದರ್ಭ ಒದಗಿ ಬಂದಿರಬಹುದು. ಈ ಶಾಸನದಲ್ಲಿ ಉಲ್ಲೇಖಿಗೊಂಡ ಜೈನ ಆಚಾರ್ಯ ಬಾಳೇಂದು ಮಲಧರಿ ಸಹ ಜೈನ ಧರ್ಮವನ್ನು ಪುನರುಜ್ಜೀವನಗೊಳಿಸಿರುವುದರಲ್ಲಿ ಆಸಕ್ತಿ ವಹಿಸಿದ್ದನ್ನು ಗಮನಿಸಬಹುದು. ಆದುದರಿಂದ ಅಮರಾಪುರ ಮತ್ತು ಯಲಬುರ್ಗ ಶಾಸನಗಳಲ್ಲಿ ಉಲ್ಲೇಖಗೊಂಡ ಬಾಳೇಂದು ಆಚಾರ್ಯ ಒಬ್ಬನೇ ಆಗಿರಲು ಸಾಧ್ಯ.

ಮೇಲಿನ ಅಂಶಗಳನ್ನು ಗಮನಿಸಿದಾಗ ಯಲಬುರ್ಗದಲ್ಲಿಯ ಜೈನ ಧರ್ಮವು ಮುಮ್ಮಡಿ ಸಿಂಗನ ಬಾಧೆಯಿಂದ ಕೆಟ್ಟಿತು. ನಂತರ ಬಾಳೇಂದು ಆಚಾರ್ಯ ಜೈನ ಧರ್ಮವನ್ನು ಪುನರುಜ್ಜೀವನಗೊಳಿಸಿದಾಗ ಪ್ರಸ್ತುತ ಪಾರ್ಶ್ವದೇವರ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು ಎಂದು ನಿರ್ಧರಿಸಬಹುದು.

ಟಿಪ್ಪಣಿಗಳು

1. ಪಾಟೀಲ ಚನ್ನಬಸಪ್ಪ ಎಸ್., 1991, "ಮುಮ್ಮಡಿ ಸಿಂಗ, ಕಂಪಿಲ ಆಂಡ್ ಕುಮಾರ ರಾಮ," *ವಿಜಯನಗರ : ಪ್ರೊಗ್ರೆಸ್ ಆಫ್ ರೀಸರ್ಚ್ 1987-88*, (ಸಂ.) ಡಿ.ವಿ. ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 179-198.
2. ಪಾಟೀಲ ಚನ್ನಬಸಪ್ಪ ಎಸ್., 1991, "ಕುಮ್ಮಟ," *ವಿಜಯನಗರ : ಪ್ರೊಗ್ರೆಸ್ ಆಫ್ ರೀಸರ್ಚ್ 1987-88*, (ಸಂ.) ಡಿ.ವಿ. ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 199-216.
3. ಪಾಟೀಲ ಚನ್ನಬಸಪ್ಪ ಎಸ್., 1996, "ಹೊಸಮಲೆದುರ್ಗ," *ವಿಜಯನಗರ : ಪ್ರೊಗ್ರೆಸ್ ಆಫ್ ರೀಸರ್ಚ್ 1988-91*, (ಸಂ.) ಡಿ.ವಿ. ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 236-242.
4. ಪಾಟೀಲ ಚನ್ನಬಸಪ್ಪ ಎಸ್., 1996, "ದೊರವಡಿ," *ವಿಜಯನಗರ : ಪ್ರೊಗ್ರೆಸ್ ಆಫ್ ರೀಸರ್ಚ್ 1988-91*, (ಸಂ.) ಡಿ.ವಿ. ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 243-247.
5. ಬ್ಯಾರ್ನೆಟ್ ಎಲ್.ಡಿ., "ಇನ್ಸ್‌ಕ್ರಿಪ್ಶನ್ಸ್ ಇನ್ ವಿಕ್ಟೋರಿಯ ಆಂಡ್ ಆಲ್ಬರ್ಟ್ ಮ್ಯೂಜಿಯಮ್," *ಜರ್ನಲ್ ಆಫ್ ದಿ ರಾಯಲ್ ಏಶಿಯಾಟಿಕ್ ಸೊಸಾಯಿಟಿ*, ಏಪ್ರಿಲ್ 1915, ಪು. 337-339. ಬ್ಯಾರ್ನೆಟ್ ಅವರು ಶಾಸನದ ಕಾಲವನ್ನು 12ನೆಯ ಶತಮಾನದ ಕೊನೊಯ ಭಾಗವೆಂದು ತಿಳಿಸಿ, ಶಾಸನದಲ್ಲಿ ಉಲ್ಲೇಖಗೊಂಡ ಮುಮ್ಮಡಿ ಸಿಂಗನನ್ನು ಎರಂಬರಗೆಯಲ್ಲಿ ಆಳುತ್ತಿದ್ದ ಸಿಂದ ವಂಶದ ಎರಡನೆಯ ಸಿಂಗನೆಂದು ಗುರುತಿಸುತ್ತಾರೆ. ಶಾಸನದಲ್ಲಿ ಮುಮ್ಮಡಿ ಅಂದರೆ ಮೂರನೆಯ ಸಿಂಗನೆಂದು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ ಈತನು ಸಿಂದ ಅರಸನಲ್ಲ.
6. ದೇಸಾಯಿ ಪಿ.ಬಿ., 1957, *ಜೈನಿಜಂ ಇನ್ ಸೌತ್ ಇಂಡಿಯ ಆಂಡ್ ಸಮ್ ಜೈನ ಎಪಿಗ್ರಾಫ್ಸ್*, ಶಾಸನ ಸಂ. 49, 50, 51.
7. *ಎರಿಇಂಎ*, 1935-36, ಸಂ. ಇ 23; *ಎಇಂ*, XXIII ಪು. 184; *ಸೌಇಂಇ*, XX, ಸಂ. 222.
8. ವರದರಾಜರಾವ್ ಜಿ., 1966, *ಕುಮಾರರಾಮನ ಸಾಂಗತ್ಯಗಳು*, ಪು. 264-266.
9. ಗೋಪಾಲಕೃಷ್ಣ ಮೂರ್ತಿ ಎಸ್., *ಜೈನ ವೆಸ್ಟಿಜಸ್ ಇನ್ ಆಂಧ್ರ*, ಹೈದರಾಬಾದ್, ಪು. 57.

14. ವಿಜಯನಗರದ ಮೂಲಚೂಲಗಳು

– ಸೀತಾರಾಮ ಜಾಗೀರ್‌ದಾರ್

ಯಾ ಸಾಹಿತ್ಯಲತಾಕಂದಂ ಯಾ ಸಂಗೀತಸುಧಾಸ್ಪದಂ
ಯಾ ಪದಂ ಸಂಪದಾಂ ನಿತ್ಯಂ ಸಾ ಮಾಂ ಪಾತು ಸರಸ್ವತೀ ||[1]

ಕರ್ನಾಟಕದ ಕೀರ್ತಿಯನ್ನು ಪ್ರಪಂಚದಲ್ಲಿ ದೇಶೋವಿಶಾಲವಾಗಿ ಬೆಳಗಿದ ಶ್ರೇಯಸ್ಸು ವಿಜಯನಗರದ ಸಾಮ್ರಾಜ್ಯಕ್ಕೂ ಇನಿತು ಸಲ್ಲುತ್ತದೆ.[2] ನಾಲ್ಕು ಮನೆತನಗಳ ಆಡಳಿತದ ಒಂದು ಘಟಕ ಈ ವಿಜಯನಗರದ ಸಾಮ್ರಾಜ್ಯ : ಸಂಗಮ, ಸಾಳುವ, ತುಳುವ ಹಾಗೂ ಅರವೀಡು ಇಲ್ಲವೇ ಆರವೀಟಿ. ಇವರು ಆರಂಭದಲ್ಲಿ ಸಂಗಮನ ಮಕ್ಕಳ ನೇತೃತ್ವದಲ್ಲಿ ಅಂದು ಬಂದ ಮುಸಲ್ಮಾನ ರಾಜರ ದಾಳಿಗಳನ್ನು ಎದುರಿಸಲು ತಾವೆಲ್ಲ ಸಂಯುಕ್ತವಾಗಿಯೆ ಸೈನ್ಯ ನಿರ್ಮಿಸಿಕೊಂಡು ಸಜ್ಜಾಗಿ ನಿಂತರು. ನೇತಾರ ಮನೆತನ ಮುಂದಕ್ಕೆ ಬಂದಿತು ಮತ್ತು ಮಿಕ್ಕ ಮನೆತನದ ವ್ಯಕ್ತಿಗಳು ಆಡಳಿತದ ಚುಕ್ಕಾಣಿಯನ್ನು - ಅಧಿಕಾರದ ಸ್ಥಾನಗಳನ್ನು - ಮಂತ್ರಿ, ಮಹಾಪ್ರಧಾನ, ಅಮರಮಾಗಣ ಇತ್ಯಾದಿಗಳನ್ನು ಅಲಂಕರಿಸಿದ್ದರು. ಒಂದು ಮಾತು ಹೇಳುವುದಾದರೆ ಒಂದು ರಾಜ್ಯದ ಕೆಲಸಕ್ಕೆ ಹತ್ತಾರು ಕೈಗಳ ನೆರವು ಬೇಕಾಗುತ್ತದೆ. ಹಾಗೆಯೇ ಹರಿಹರನಿಗೂ ವಿಜಯನಗರ ಸಾಮ್ರಾಜ್ಯ ಕಟ್ಟುವಲ್ಲಿ ಹತ್ತಾರು ಜನರ - ಅಧಿಕಾರಿಗಳ - ನೆರವು ಅವಶ್ಯವಾಗಿ ಬೇಕಿದ್ದವು. ಹಾಗೇ ಬೇಕಿದ್ದ ನೆರವನ್ನು ನೀಡಿದವರು ಸಾಳುವ, ತುಳುವ ಹಾಗೂ ಅರವೀಡು ಮನೆತನದ ಜನರು - ಆ ಮನೆತನಗಳ ಅಂದಿನ ಆ ಪ್ರತಿನಿಧಿಗಳು. ಸಾಮ್ರಾಜ್ಯದ ಸಿಂಹಾಸನ ಹಿಡಿದಾಕ್ಷಣ - ಏರಿದಾಕ್ಷಣ ಆಯಾ ಮನೆತನಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಬರೆಯುವ ಇತಿಹಾಸ - ಬರೆ ಮೇಲಿನ - ಮೇಲ್ಮೈ ವಿವರಣೆ. ಈ ಎಲ್ಲ ಮನೆತನಗಳು ಹರಿಹರನ ನೆರವಿಗೆ ನಿಂತರೆಂದು ಅದೊಂದು ರಾಜ್ಯವಾಯಿತು. ಅನಂತರ ಅಧಿಕಾರಕ್ಕಾಗಿ - ಸಿಂಹಾಸನಕ್ಕಾಗಿ - ಸ್ವಾರ್ಥಕ್ಕಾಗಿ - ಸಮಯ ಸಿಕ್ಕಾಗ ಅತಿಕ್ರಮಿಸಿದರು ಇಲ್ಲವೇ ದುರಾಕ್ರಮಣ (usurpation) ಮಾಡಿದರು. ಅತಿಕ್ರಮಣ, ದುರಾಕ್ರಮಣ ಏನೇ ಇರಲಿ ಒಂದು ಯುಗದ - ಕಾಲಾವಧಿಯ - ಅಧ್ಯಯನ ಮಾಡುವಾಗ ರಾಜರಿಂದ ರಂಕರವರೆಗಿನ ಎಲ್ಲರ ದೇಣಿಗೆಯನ್ನು ಯಥಾಸ್ಥಿತಿಯಲ್ಲಿ ತೆಗೆದುಕೊಂಡರೆ ಆ ಯುಗದ ಆ ಜನರ ಸಾಂಸ್ಕೃತಿಕ ಅಧ್ಯಯನವು ಸರಿಯಾಗಿ ಆಗುತ್ತದೆ. ಉದಾಹರಣೆಗೆ ಇಮ್ಮಡಿ ಹರಿಹರನ ಆಳ್ವಿಕೆಯಲ್ಲಿ ಬೇಲೂರು ದೇವಾಲಯ ಇಂದಿನ ಸ್ವರೂಪ ಕಂಡಿತು. ಸ್ವರೂಪ ಕೊಟ್ಟವನು ಗುಂಡಮ ದಂಡನಾಥ; ಆತ ಸಾಳುವ ಮನೆತನದ ವ್ಯಕ್ತಿ.[3] ಈ ಜೀರ್ಣೋದ್ಧಾರದ, ಈ ಹೊಸ ಗೋಪುರದ ಕಟ್ಟುವಿಕೆಯ, ಶ್ರೇಯಸ್ಸು ಯಾರ ಮನೆಗೆ ಸಲ್ಲಬೇಕು? ಸಂಗಮಕ್ಕೊ, ಸಾಳುವಕ್ಕೊ?

ದಾಖಲೆಗಳು ಇಲ್ಲದಾಗ ಉಪಲಬ್ಧ ಸಾಮಾಗ್ರಿಯನ್ನು - ಐತಿಹ್ಯಗಳನ್ನು - ರಾಜಾವಳಿಯಂತಹ ಕಿಂವದಂತಿಯ ಕೃತಿಗಳನ್ನು ಅವಲಂಬಿಸಬೇಕು. ಆದರೆ ಉಪಲಬ್ಧ ತತ್ಕಾಲೀನ ಶಾಸನಗಳನ್ನು ಗಮನಿಸದೇ ನಮ್ಮ ವಿದ್ವಾಂಸರು ಇತಿಹಾಸ ಬರೆದರು; ಇದು ಅಚ್ಚರಿ. ಪಾಶ್ಚಿಮಾತ್ಯ ವಿದ್ವಾಂಸರು ಮೊದಲು ಇತಿಹಾಸ ನಿರೂಪಿಸಲು ಆರಂಭಿಸಿದರು. ಆಗಿನ ದೇಸೀಯ ವಿದ್ವಾಂಸರು ಹೇಳಿದ ಕತೆಗಳು - ಬಹಳ ಕಾಲದ ಅನಂತರದಲ್ಲಿ ಬರೆಯಲಾದ ಗ್ರಂಥಗಳು ಮೊದಲು ಬೇಕಾದ ಸಾಮಗ್ರಿಗಳನ್ನು ಅವರಿಗೆ ಒದಗಿಸಿದವು. ಅಂತೆಯೆ ಅನೇಕ ಊಹಾಪೋಹಗಳ ತತ್ವದ ಮೇಲೆ ಇತಿಹಾಸದ ಕಟ್ಟಡ ನಿರ್ಮಾಣವಾಯಿತು. ಆ ಕಟ್ಟಡದಲ್ಲೇ ನಮ್ಮ ಆಧುನಿಕ ವಿದ್ವಾಂಸರೂ ಇರಲು ಆರಂಭಿಸಿದರು. ಸಾಲದ್ದಕ್ಕೆ ಈ ಹೊಸಬರಿಗೆ ಭಾಷಾಮೋಹ; ಈ ಮೋಹದಲ್ಲಿ ತೆಲುಗರು ಎಂದು ಹೇಳಿದಾಗ ಅಲ್ಲ ಎನ್ನುವುದೇ ಮುಖ್ಯ ತತ್ವವಾಗಿ ನಿಂತಿತು. ತೆಲುಗು ವಿದ್ವಾಂಸರು ಮತ್ತು ಅಂತೆಯೆ ಕನ್ನಡ ವಿದ್ವಾಂಸರು ಭೌಗೋಲಿಕ ಹಾಗೂ ಚಾರಿತ್ರಿಕ ಸತ್ಯಗಳನ್ನು ಕಡೆಗಣಿಸಿದರು. ಎಂದರೆ ಒರಂಗಲ್ಲು (ಓರಂಗಲ್ಲು) ಜಿಲ್ಲೆಯವರಿಗೆ ಒಂದೊಮ್ಮೆ ಕನ್ನಡ ವ್ಯಾಪಿಸಿತ್ತು. ಈಗಿನ ಪಾವಗಡ, ಹಿಂದೂಪುರ, ಮಡಕಶಿರ ಮುಂತಾದುವುಗಳಲ್ಲಿ ಇರುವಂತೆ ಆಗ ಆ ಭಾಗದಲ್ಲಿ ಕನ್ನಡ-ತೆಲುಗು ಭಾಷೆಗಳು ದ್ವಿಭಾಷಾವಲಯಗಳಾಗಿದ್ದವು (Bilingual areas). ಕ್ರಿ.ಶ. 1150 ರವರೆಗೆ ಎಂದರೆ ಇಮ್ಮಡಿ ಪ್ರೋಲನ ಕಾಲದವರೆಗೆ ಆ ಭಾಗದಲ್ಲಿ ಕನ್ನಡವೇ ಜನರ ತಾಯ್ನುಡಿ - ಆಡಳಿತದ ನುಡಿ - ಸಾಹಿತ್ಯದ ಭಾಷೆ ಆಗಿ ರಾರಾಜಿಸಿತು. ವೇಮುಲವಾಡದ ಚಾಳುಕ್ಯರು, ಹನ್ಮಕುಂದೆಯ ಅಥವಾ ಅನಂತರದ ಕಲ್ಯಾಣದ ಚಾಳುಕ್ಯರು, ಅವರ ಸಾಮಂತರು, ಆಡಳಿತಾಧಿಕಾರಿಗಳು ಕನ್ನಡದಲ್ಲೇ ಶಾಸನಗಳನ್ನು ಅದೂ ಯಥೇಚ್ಛವಾಗಿ (ಶಾಸನಗಳನ್ನು) ಬರಸಿದ್ದಾರೆ. ಅನೇಕ ಸಂಪುಟಗಳಲ್ಲಿ ಅವು ಪ್ರಕಟವಾಗಿವೆ. ತೆಲಂಗಾಣ ಪ್ರದೇಶದಲ್ಲಿ (ತ್ರಿಕಲಿಂಗ ಪ್ರದೇಶ) ಒಂದಾದರೂ ಅತ್ಯಂತ ಪ್ರಾಚೀನ ತೆಲುಗು ಶಾಸನ ದೊರಕಿಲ್ಲ. ಹೇಳುವ ಉದ್ದೇಶವಿಷ್ಟೆ ಒಂದೊಮ್ಮೆ ಈ ನೆಲ - ಜನ - ಕನ್ನಡವಾಗಿದ್ದರು. ಆದುದರಿಂದ ಈ ನೆಲದಿಂದ ಆಗ ಬಂದಿದ್ದರು ಎಂದರೆ ಅವರು ಡಾ. ಎನ್. ವೆಂಕಟರಮಣಯ್ಯನವರು ಹೇಳಿರುವಂತೆ ಆಂಧ್ರ ಮೂಲದವರಾಗಬೇಕಿಲ್ಲ. ಮತ್ತೆ ಕನ್ನಡಿಗರಾದ ಡಾ. ಪಾಂ.ಭೀ. ದೇಸಾಯಿ (ಡಾ. ಪಿ.ಬಿ. ದೇಸಾಯಿ) ಹಾಗೂ ಅವರ ಸ್ನೇಹಿತರು - ಸಹ ಬರಹಗಾರರು - ತಿಳಿದಿರುವಂತೆ ಆಂಧ್ರರಾಗಬೇಕಿಲ್ಲ. ಅಂತೆಯೆ ಅವರ ನಿರೂಪಣೆಯಂತೆ ಇಂದಿನ ಆಂಧ್ರಪ್ರದೇಶದ ಮೂಲವನ್ನು ಬಿಡಲೂ ಬೇಕಿಲ್ಲ. ಏಕೆಂದರೆ ಸಂಗಮ ಮನೆತನದವರು ಬಾದಾಮಿ - ಹನ್ಮಕುಂದೆಯ - ಕಲ್ಯಾಣ ಚಾಳುಕ್ಯರ ವಂಶಸ್ಥರು. ಹರಿಹರ ಹಾಗೂ ಬುಕ್ಕಾದಿ ಪಂಚ ಭ್ರಾತೃಗಳ ತಂದೆ ಸಂಗಮ ಅಥವಾ ಸಂಗಮೇಶ್ವರ[4] ಸ್ವಂತಃ ರಾಜನಾಗಿದ್ದ.

ಅಸ್ತಿ ಸ್ವಸ್ತಿ ಮದುದಯೋ । ಮುಕ್ತಾಮಯಸೂತಿ ಸಂಭವಂನ್ನ ಹಿಮಾ
[ಜಾ]ನಂತ್ಯಮೂಲನಿಲಯಃ । ಸುಪರ್ವಮಹಿತೋ ಯದೋರ್ವರೋ ವಂಶಃ ।
ತತ್ರಾಸೀತ್ಸಂಗಮೋ ನಾಮಾ ಭೂಮಿಪಾಲೋ ಗುಣೋತ್ತರಃ
ಯೇನ ಕರ್ನ್ನಾಟದೇಶಶ್ರೀ ಸ್ಥಿರತಾಟಂಕವತ್ಯಭೂತ ||[5]

[ಮುತ್ತಿನ ಹಾಗೆ ಶುಭ್ರವಾದ ಚಂದ್ರವಂಶದಲ್ಲಿ ಯದುವಿನ ಜನನ; ಆ ಯದುವಿನ ವಂಶ, ಯಾವುದು ಅನಂತಾನಂದವನ್ನು ನೀಡುವ ಆಕರವಾಗಿದ್ದು ದೇವತೆಗಳಿಂದ ಮಾನಿತವಾಗಿದೆ; ಅದರಲ್ಲಿ ಸಂಗಮನೆಂಬ ಭೂಮಿಪಾಲ; ಆ ಗುಣಭರಿತನಿಂದ ಕರ್ನಾಟಕದೇಶಶ್ರೀಯು ಸ್ಥಿರತಾಟಂಕವತಿ (ಮುತ್ತೈದೆ) ಆದಳು.]

ಸಂಗಮ ದೊರೆ ಎಲ್ಲಿ ದೊರೆ ಆಗಿದ್ದನೆಂಬುದು ಇನ್ನೂ ಸರಿಯಾಗಿ ತಿಳಿಯದ ಸಂಗತಿ. ಯಾವ ಭೂ ಪ್ರದೇಶಕ್ಕೆ ಒಡೆಯನಾಗಿದ್ದ ಎಂಬ ಪ್ರಶ್ನೆಗೆ ಆತನ ಹೆಸರೇ ಹೇಳುತ್ತದೆ. ಅದೇ ಸಂಗಮೇಶ್ವರ. ಈ ದೇವತೆ ನನಗೆ ತಿಳಿದ ಹಾಗೆ ಕೃಷ್ಣಾ-ತುಂಗಭದ್ರಾ ನದಿಗಳ ಸಂಗಮದ ಆರಾಧ್ಯ ದೇವತೆ ಸಂಗಮೇಶ್ವರ. ಈಗಲೂ ಈ ದೇವತೆ ಇದೇ ಹೆಸರಿನಿಂದ ಪ್ರಸಿದ್ಧ; ಕರ್ನೂಲು ಜಿಲ್ಲೆಯಲ್ಲಿ ಈ ಕ್ಷೇತ್ರಸ್ಥಳವಿದೆ. ಕರ್ನೂಲು ಅನಂತಪುರ ಜಿಲ್ಲೆಗಳಲ್ಲಿ ಅವಕ್ಕೆ ಆನಿದ ಉತ್ತರಭಾಗದ ಜಿಲ್ಲೆಗಳಲ್ಲಿ ಸಂಗಮಭೂಪಾಲನ ರಾಜ್ಯವಿದ್ದಿತು.[6] ಸಂಗಮ ದೊರೆ ಅಷ್ಟೆ ಅಲ್ಲ, ಅವನ ತಂದೆ ಬುಕ್ಕ ಭೂಪಾಲನೂ ದೊರೆಯಾಗಿದ್ದ. ಸಂಗಮ ಮನೆತನದ ಇತಿಹಾಸವನ್ನು ಬರೆದ ಇತಿಹಾಸಜ್ಞರಾರು ಚಾಮರಾಜನಗರದ ಹೊಮ್ಮಗ್ರಾಮದ ಶಾಸನವನ್ನು ನೋಡಿ ಇತಿಹಾಸವನ್ನು ಸರಿಪಡಿಸಲು ಈ ಹಿಂದೆ ಪ್ರಯತ್ನಪಟ್ಟಿಲ್ಲ. ಈ ಶಾಸನದ ಪ್ರಕಾರ ಸಂಗಮ ಮನೆತನದ ಕಿಂಚಿತ್ ಚರಿತ್ರ ಹೀಗಿದೆ:

ಶ್ರೀಮದ್ದೇವೇಂದ್ರವೃಂದಾರ್ಚಿತ ಚರಣಸರೋಜಾತಭೃಂಗಂ ಕವೀಂದ್ರಾ
ಸ್ತೋಮಾಂಭೋರಾಶಿಚಂದ್ರಂ ಗುಣಗಣನಿಳಯಂ ಬುಕ್ಕಭೂಪಾಲನತ್ತು
ದ್ದಾಮಂ ತತ್ಪುತ್ರನುದ್ಯದ್ರಿಪುಕುಲಗಜಪಂಚಾನನಂ ಕೀರ್ತ್ತಿಭಾಸ್ವ
ದ್ಧಾಮಾನೇಕಾಬ್ಧಸೂರ್ಯ್ಯಂ ನೆಗಳ್ದನವನಿಯೊಳ್ಸಂಗಮಕ್ಷೋಣಿಪಾಲಂ ||

ಧರೆಯೊಳ್ಸಂಗಮನೆಂಬ ಪಾಂಡುವಿಗಮಾ ಕಾಮಾಯಿಗಂ ಪುಟ್ಟಿದ
ರ್ಬ್ಬರದಿಂ ಹರಿಯಪ ಕಂಪಣಕ್ಷಿತಿಪನಾ ಬುಕ್ಕೋರ್ವ್ವಿಪಂ ಮುದ್ದಪಂ
ನಿರುತಂ ಮಾರಪನೆಂಬ ಪಾಂಡವರೊಳಾರ್ಯ್ಯಂ ಮಧ್ಯಮಂ ಪಾರ್ತ್ಥನಂ
ವರ ಭೂಪಾಳಕಗರ್ವ್ವಮತ್ತಗಜಸಿಂಹಂ ಬುಕ್ಕ ಭೂಪಾಲಕಂ ||

ನಿರುತಂ ತದ್ಬುಕ್ಕಭೂಪಾಲಕಸುತನುರುಧರ್ಮ್ಮಾಗ್ಬ್ಧಿಸಂಪೂರ್ಣ್ಣಚಂದ್ರಂ
ವರಸಾಹಿತ್ಯಾಬ್ಧಿಪೂಷಂ ರಿಪುನೃಪಕರಭದ್ರಾತಭೇರುಂಡನಾಸ
ದ್ಧರತಾರಾಹಾರ ಹಾರಾಚಲಹರಸನಾದಭ್ರಸುಧಾಭ್ರಕೀರ್ತ್ತೀ
ಶ್ವರನಾದಂ ರಾಜಿಪಂ ಶ್ರೀಹರಿಹರಧರಣೀಪಾಲನಾದ್ರೀಂದ್ರಲೀಲಂ ||

ಅಂತೆಸೆವ ಹರಿಹರಕ್ಷ್ಮಾ
ಕಾಂತಂ ವಿಜಯಾಭಿದಾನನಗರಿಯೊಳ್ ಸುಖ
ಸ್ವಾಂತಂ ರಾಜ್ಯಂಗೆಯ್ಯು
ತ್ತಸ್ತೊಪ್ಪಿರೆ ಧರಣೀಪಾಲಮೌಳೀರತ್ನಂ ||

ಈ ಮೂರು ಪದ್ಯಗಳಿಂದ ಒಂದು ವಂಶ ಶಾಖೆ ಪ್ರತಿಬಿಂಬಿತವಾದರೆ ಇನ್ನೊಂದು ಪದ್ಯದಿಂದ ಸಂಗಮ ದೊರೆಯ ಇನ್ನೊಬ್ಬ ಮಗನ ಅಸ್ತಿತ್ವವೂ ತಿಳಿದು ಬಂದಿದೆ:

ಹರಿಹರ ಭೂಮಿಪಾಲಸಚಿವಂ ವರಕಂಪಣ .. ನಾಜ್ಞೆಯಿಂ
ಧರಣಿನೆಯ್ದೆ ಪಾಲಿಸುತೆ ಸಂಗಮರಾಜತನೂಜನುತ್ತಮೀ
ಶ್ವರ ಸುರಭೂಜನಿಂದುವರಕುಂದವಿನಿರ್ಮ್ಮಲಕೀರ್ತ್ತಿವಾ(ನ್) ಜಿನೇ
ಶ್ವರ ಪಾದಪದ್ಮಭೃಂಗನೆಸೆವಂ ಸಲೆ ಬಲ್ಲಪನಾಮ ಮಂತ್ರಿಪಂ ||
ಆ ಬಲ್ಲಪನು ಹದಿನಾಡನಧಿಕಾರಂ ಮಾಡುತ್ತಿರ್ದ್ದಲ್ಲಿ ||[7]

ಇಡೀ ಶಾಸನವನ್ನು ಪರಿಗಣಿಸಿ ವಂಶಾವಳಿಯ ಸಂಗತಿಗಳನ್ನು ರೇಖೆಯಲ್ಲಿ ಕೆಳಗಿನಂತೆ ಗುರುತಿಸಬೇಕಾಗುತ್ತದೆ.

ಬುಕ್ಕ ಭೂಪಾಲ

|

ಸಂಗಮ ಕ್ಷೋಣಿಪಾಲ

ಹೆಂ. ಕಾಮಾಯಿ;[8] ಇನ್ನೊಬ್ಬ ಹೆಂ.

| |

ಬಲ್ಲಪ್ಪ ಮಂತ್ರಿ

ಹರಿಹರ I | ಕಂಪಣ್ಣ | ಬುಕ್ಕ | ಮುದ್ದಪ | ಮಾರಪ

ಬುಕ್ಕ

ಹೆಂ. ತಾರಾಂಬಿಕಾ

|

ಹರಿಹರ II

ಹೆಂ. ದೇವಾಂಬಿಕಾ

ಈ ಶಾಸನ ವಿಜಯನಗರದ ಅರಸು ಹರಿಹರ(II) ನ ಕಾಲದ್ದು. ಇದನ್ನು ಬರೆದ ತೇದಿ ಶಾ.ಶ. 1302, ರೌದ್ರಿ, ಶ್ರಾವಣ ಶು. 5, ಆದಿತ್ಯವಾರ (ಕ್ರಿ.ಶ. 1380, ಜುಲೈ 7). ಇದರಲ್ಲಿ ಹರಿಹರ, ಅದೇ ವಂಶದ ಕಂಪಣ್ಣ ಮಂತ್ರಿ ಹಾಗೂ ಇನ್ನೊಬ್ಬ ಮಂತ್ರಿ ಬಲ್ಲಪ್ಪ ಇವರ ಪ್ರಸ್ತಾಪ ಹೊಂದಿದ್ದು ಸಂಗಮ ಮನೆತನದ ಇತಿಹಾಸವನ್ನು ತಿಳಿಸುವ ಒಂದು ಅತ್ಯಂತ ಮಹತ್ವದ ದಾಖಲೆಯಾಗಿದೆ. ವಿಜಯನಗರದ ಇತಿಹಾಸ ಬರೆಯುವವರು ಈ ಸಂಗತಿಯನ್ನು ಇನ್ನು ಮುಂದೆ ಗಮನಕ್ಕೆ ತೆಗೆದುಕೊಳ್ಳಬೇಕು. ಹಿಂದಿನ ವಿದ್ವಾಂಸರು ಪಾರ್ಶ್ವಭಾಗಕ್ಕೆ ಎಳೆದಿರುವುದನ್ನು (Side-track) ಮುಂದೆ ಬರುವ - ಬರೆಯುವ - ವಿದ್ವಾಂಸರು ಕೈ ಬಿಡಬೇಕು. ಹಾವೇರಿ ತಾಲೂಕಿನ ಸಂಗೂರ ಶಾಸನದಿಂದ ಸಂಗಮ ಮನೆತನ ವಸ್ತುತಃ ವರಾಹ ಲಾಂಛನವನ್ನು ಹೊಂದಿದ ಬಾದಾಮಿ ಚಾಳುಕ್ಯ - ಕಲ್ಯಾಣದ (ಹನ್ಮಕುಂದೆ/ಓರಂಗಲ್ಲು) ಚಾಳುಕ್ಯರ ಒಂದು ಕುಡಿ (ಶಾಖೆ) ಎಂಬುದನ್ನು ಸಾಕಷ್ಟು ವಿವರಗಳಿಂದ ಆಧಾರಗಳಿಂದ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-9 ರಲ್ಲಿ ವಿವರಿಸಲಾಗಿದೆ; ಹಳೇಬೀಡಿನ ಶಾಸನಗಳೂ ಅದಕ್ಕೆ ಉಪಷ್ಟಂಭಕ ಆಗಿವೆಯೆಂಬುದನ್ನು ತೋರಿಸಿಕೊಟ್ಟಾಗಿದೆ.[9] ಸಂಗಮ ಮನೆತನ ಹನ್ಮಕುಂದೆ (ಓರಂಗಲ್ಲು) ಪ್ರದೇಶದಿಂದ ಹಂಪೆ, ಅದರಾಚೆಗೆ ಆ ಪಶ್ಚಿಮ ಸಮುದ್ರದವರೆಗೆ ನಾಡನ್ನು - ನಾಡಿನ ಸುಂಕಗಳನ್ನು - ಉಪಭೋಗಿಸುತ್ತಿದ್ದರೆಂದರೆ ತಪ್ಪಾಗದು. ಒಂದು ರಾಜ ಮನೆತನ ಬೆಳೆಯಬೇಕಾದರೆ ಅನೇಕರ ಸೇನಾಶಕ್ತಿ ಬೇಕಾಗಿರುತ್ತದೆ. ಸೇನೆಯ ಮುಖ್ಯಸ್ಥರು ರಾಜನಿಗೆ ಆತ್ಮೀಯರಾಗಿ - ನಚ್ಚಿನ ಬಂಟರಾಗಿ - ನಂಬಿಗಸ್ತರಾಗಿ ಎಲ್ಲ ಹಂತದಲ್ಲೂ ಇರದಿದ್ದರೆ ಆ ರಾಜ್ಯ - ಸಾಮ್ರಾಜ್ಯ - ಬೆಳೆಯುವಂತಿಲ್ಲ. ಒಂದನೆಯ ಹರಿಹರನ ನಚ್ಚಿನ ವ್ಯಕ್ತಿಗಳು - ಮನ್ನೆಯ ಬಂಟರು - ಮಾಂಡಲಿಕ ಮನೆತನಗಳು ಮದುವೆ ಮುಖಾಂತರ (matrimonial relations) ಆದ ನೆಂಟರು ಇಂದಿನ ಇತಿಹಾಸ ಗ್ರಂಥಗಳ ಪುಟಗಳಲ್ಲಿ ವಿವರ ವಿವರವಾಗಿ ಬಂದಿಲ್ಲ.[10] ನಮ್ಮ ರಾಜ ಮಹಾರಾಜರ ಯುದ್ಧಗಳೆಂದರೆ ಗಾದಿಗಾಗಿ ಗುದ್ದಾಡಿದ ಗುದ್ದಾಟಗಳು. ರಾಜಮನೆತನಗಳು ಭಾರತದ - ದಕ್ಷಿಣ ಭಾರತದ - ಯಾವುದೇ ಭಾಗದಲ್ಲಿ ಇರಲಿ ಅವರು ನೆಂಟರು; ಹೆಣ್ಣುಕೊಟ್ಟು ತಂದವರು. ಅವರಿಗೆ ಚತುಸ್ಸಮಯಗಳೂ ಸಮಾನವಾಗಿದ್ದವು. ಎರಡು ಉದಾಹರಣೆಗಳಿಂದ ವಿಶದೀಕರಿಸಬಹುದು:

1. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಚೋಳರೊಂದಿಗೆ ಕಾದಿದ ಯುದ್ಧ ವಾಸ್ತವದಲ್ಲಿ ದಾಯಾದಿ ಕಲಹ. ಏಕೆಂದರೆ ಚಕ್ರವರ್ತಿಯಾದ ರಾಷ್ಟ್ರಕೂಟ ಇಂದ್ರನ ಪುತ್ರ ನಾಲ್ವಡಿ ಗೋವಿಂದನ ಹೆಂಡತಿ ಚೋಳ ದೊರೆ ಪರಾಂತಕನ ಪುತ್ರಿ. ಮಾವನಾದ ಪರಾಂತಕ, ಗೋವಿಂದನ ಹೆಂಡತಿಯ ಅಣ್ಣನಾದ ರಾಜಾದಿತ್ಯ ಇವರು ಗೋವಿಂದನ ಕಡೆ ನಿಂತದ್ದೂ ಸಹಜ; ವಿಜಿಗೀಷುವಾದ ಮುಮ್ಮಡಿ ಕೃಷ್ಣನು ದಾಯಾದಿ ನಾಲ್ವಡಿ ಗೋವಿಂದನೊಂದಿಗೆ ಅವನ ಪಕ್ಷವಹಿಸಿದವರನ್ನು ಮುರಿದದ್ದೂ ಅಷ್ಟೇ ಸತ್ಯ. ಮುಮ್ಮಡಿ ಕೃಷ್ಣ ಆತನ ಸೋದರಿ ರೇವಕನಿರ್ಮಡಿಯ ಗಂಡ ಗಂಗಬೂತುಗ (II) ಒಂದು ಪಕ್ಷದಲ್ಲಿ ನಿಂತು ಇನ್ನೊಂದು ಪಕ್ಷದೊಂದಿಗೆ ಯುದ್ಧ ಮಾಡಿರುವಾಗ ಇದು ಕರ್ನಾಟಕದವರು ತಮಿಳರೊಂದಿಗೆ ಮಾಡಿದ ಯುದ್ಧ ಎಂದು ಇತಿಹಾಸಜ್ಞರು ಬರೆದಿರುವುದು ಸತ್ಯಕ್ಕೆ ದೂರವಾದುದು. ಭಾಷಾ ಜಗಳವನ್ನು ಸೃಷ್ಟಿಸಿದ್ದು ದೊಡ್ಡ ತಪ್ಪು.

2. ವಿಜಯನಗರದ ಕಾಲಾವಧಿಯ ಒಂದು ಸಂಗತಿಯನ್ನು ಹೇಳುವುದಾದರೆ ಸಂಗಮ ಮನೆತನದ ಸಂಬಂಧಿಗಳು ಉಮ್ಮತ್ತೂರ ದೊರೆಗಳು ಗಜಬೇಂಟೆಕಾರ ಪ್ರೌಢದೇವರಾಯನ ತಾಯಿ ಆ ಮನೆಯವಳು. ತುಳುವ ಮನೆತನದ ಕೃಷ್ಣದೇವರಾಯ ವಾಸ್ತವದಲ್ಲಿ ಸಾಳುವ ಮನೆತನದ ಹೆಣ್ಣುಮಗಳ ಮಗ. ಸಾಳುವ ನರಸಿಂಹನ ಮಗಳ ಮಗ. ಆ ಒಂದು ಕಾರಣದಿಂದಲೇ ಮಹಾಪ್ರಧಾನ ಸಾಳುವ ತಿಮ್ಮರಸ ಕೃಷ್ಣದೇವರಾಯನನ್ನು ಕೊಲ್ಲಬೇಕೆಂದು ಆಜ್ಞೆ ಆಗಿದ್ದರೂ ಮುಚ್ಚಿಟ್ಟು ರಕ್ಷಿಸಿದ. ಹೊರಗಿನವರಾಗಿದ್ದರೆ ಹೊತ್ತು ಹೊಂದುವದರಲ್ಲೇ ಕೊಂದು ಹಾಕಿರುತ್ತಿದ್ದರು. ಇನ್ನು ಆ ಕೃಷ್ಣದೇವರಾಯ ಸಂಗಮ ಮನೆತನದ ಕಡೆಗೆ ವಾಲಿದ್ದ ಉಮ್ಮತ್ತೂರ ಮನೆಯನ್ನು ಧ್ವಂಸಮಾಡಿದ.

II

ಸಂಗಮ ಮನೆತನದ ಚರಿತ್ರೆಗೆ ಚಾಮರಾಜನಗರದ ಶಾಸನ ಒಂದು ಮುಖ್ಯ ದಾಖಲೆಯಾದಂತೆ ಎರಡನೆಯದಾದ ಸಾಳುವ ಮನೆತನದ ಇತಿಹಾಸ ಬರೆಯುವದಕ್ಕೆ ನಮಗೆ ಹೆಗ್ಗಡದೇವನಕೋಟೆಯ ಸರಗೂರಲ್ಲಿ ದೊರಕಿದ ಸಾಳುವ ಇಮ್ಮಡಿ ನರಸಿಂಹನ ಶಾ.ಶ. 1414, ಪರಿಧಾವಿ, ಫಾಲ್ಗುಣ ಬ.7, ಭಾನುವಾರ (ಕ್ರಿ.ಶ. 1493, ಮಾರ್ಚ್ 10) ದಿವಸದಂದು ಬರೆಯಲಾದ ತಾಮ್ರ ಶಾಸನ ಬಹಳ ಮುಖ್ಯವಾಗಿದೆ.[11] ಈ ಶಾಸನದ ಪ್ರಕಾರ ಸಾಳುವ ವಂಶಾವಳಿಯು ಕೆಳಗಿನಂತೆ ಇರುತ್ತದೆ:

ಪೌರಾಣಿಕ ವಂಶ: ಚಂದ್ರ
|
ಬುಧ
|
ಪುರೂರವ
ಹೆಂ. ಊರ್ವಶೀ
|
ಶಂತನು
ಹೆಂ. ಗಂಗಾ
|
X
|
ಐತಿಹಾಸಿಕ ವಂಶ: ಗುಂಡದೇವಮಹೀಪತಿ I

ಗುಂಡಬೊಮ್ಮ[12] | ಮಾದಿರಾಜ | ಗೌತಯ I | ವೀರಹೋಬಲ

ವೀರಹೋಬಲ
|
(ಸಾಳುವ ಸಾವಿತ್ರಿ) ಮಂಗಿದೇವ
(ಕಠಾರಿಸಾಳುವ)
|
ಗೌತಯ II
|
ಗುಂಡಯ/ಗುಂಡಮ II
|
(ಮೇದಿನೀಮೀಸರಗಂಡ) ನರಸಿಂಹ ಮಹಾರಾಯ
(ಕ್ರಿ.ಶ. 1485-1491)
ಹೆಂ. ರಂಗಮಾಂಬಿಕಾ

ತಿಮ್ಮ | ಇಮ್ಮಡಿ ನರಸಿಂಹ (ಕ್ರಿ.ಶ. 1491-1505)

ತಿಮ್ಮ
|
X

ಸಾಳುವ ಮಹಾಪ್ರಧಾನ ತಿಮ್ಮರಸ | ಸಾಳುವ ಗೋವಿಂದರಾಜ

ಸಾಳುವ ಮಂಗಿದೇವ ಬಹಳ ದೊಡ್ಡ ಯೋಧನಾಗಿದ್ದ. ಆತ ಇಮ್ಮಡಿ ಕಂಪಣ್ಣನ ಮಧುರಾದಂಡಯಾತ್ರೆಯಲ್ಲಿ - ಯುದ್ಧದಲ್ಲಿ - ಗೆಲುವಿನಲ್ಲಿ ಒಬ್ಬ ಪಾಲುಗಾರ. ಮಂಗಿದೇವ ಪಂಥಗಾರನೂ ಆಗಿದ್ದ. ವೈರಿಯೊಬ್ಬನ ಕೈಯಲ್ಲಿಯ ಕಠಾರಿಯನ್ನು ಆತ ಲೀಲಾಜಾಲವಾಗಿ ತುಮುಲಯುದ್ಧದಲ್ಲಿ ಕಸಿದುಕೊಂಡ ತನ್ನಿಮಿತ್ತ "ಕಠಾರಿಸಾಳುವ" ಎಂಬ ಬಿರುದನ್ನು ಹೊಂದಿದ. 'ಸಗರ' ಎಂಬ ಹೆಸರಿನ (ವೈರಿಯ ಅಧೀನದ) ದುರ್ಗದ ಪ್ರಾಕಾರದಲ್ಲಿ ತನ್ನ ಸೈನ್ಯದ ಯುದ್ಧದ ಕಹಳೆಯನ್ನು ಎಸೆದು ಕೂಡಲೆ ಹಿಂಬದಿಯಲ್ಲಿ ಆ ದುರ್ಗವನ್ನು ಒಡೆದು ಜಯಿಸಿ ತನ್ನ ಕಹಳೆಯನ್ನು ಸಂಪಾದಿಸಿದ.[13] ಮಂಗಿದೇವ ಇಮ್ಮಡಿ ಹರಿಹರನ (ಕ್ರಿ.ಶ. 1377-1404) ಸೋದರ ಕಂಪಣ್ಣನ ಸಮಕಾಲೀನ; ಆದುದರಿಂದ

ಆತ ಸಗರ ದುರ್ಗದಲ್ಲಿ ಆಡಿದ ಈ ಪಂಥದ ಪ್ರದರ್ಶನ ನಡೆದದ್ದು ಅವನ ಕಾಲದಲ್ಲಿ ಎಂಬುದು ಗಮನಾರ್ಹವಾದ - ದಾಖಲಿಸಬೇಕಾದ - ಒಂದು ಘಟನೆ. ಸಾಳುವರು ಸಂಗಮರಿಗೆ - ವಂಶಸ್ಥರಿಗೆ - ಆ ಮನೆಯ ಅಭ್ಯುದಯಕ್ಕೆ ದುಡಿದರೆಂಬುದು ಗಮನಿಸಬೇಕಾದ ಸಂಗತಿ. ಈತ ದಕ್ಷಿಣದಲ್ಲಿ ಆಗ ಹರಡಿದ ತುರುಷ್ಕರ ಹಾವಳಿಯನ್ನು ಹತ್ತಿಕ್ಕಿದ ಮತ್ತೆ ಶ್ರೀರಂಗ ಕ್ಷೇತ್ರಕ್ಕೆ ಬಂದ ಅಂದಿನ ಕಂಟಕವನ್ನು ದೂರುಮಾಡಿದ. ಮುಸಲ್ಮಾನರ ಹಾವಳಿಯಲ್ಲಿ ಶ್ರೀರಂಗದ ಕೆಲ ದೇವತಾ ವಿಗ್ರಹಗಳನ್ನು ತಿರುಮಲ ತಿರುಪತಿಗೆ ಸಾಗಿಸಿದ್ದರು; ಹಾಗೆ ಸಾಗಿಸಿದ ಮೂರ್ತಿಗಳನ್ನು ಪುನಃ ತಂದು ಶ್ರೀರಂಗದಲ್ಲಿ ಪ್ರತಿಷ್ಠಾಪಿಸಿದ. ಆ ಕಾರಣಕ್ಕಾಗಿ ಅವನಿಗೆ 'ಶ್ರೀರಂಗಸ್ಥಾಪನಾಚಾರ್ಯ' ಎಂಬ ಬಿರುದನ್ನು ಜನತೆ ಇತ್ತಿತು. ಆತ ಸಹಸ್ರ ಸಾಲಿಗ್ರಾಮಗಳನ್ನು ವಿದ್ವಾಂಸರಿಗೆ ದಾನ ಮಾಡಿದನಂತೆ! ಇದೂ ಒಂದು ಅದ್ಭುತವೇ. ಸಾಳುವರು ಮೈಸೂರು ಜಿಲ್ಲೆ, ಆಂಧ್ರದ ಚಿತ್ತೂರು ಜಿಲ್ಲೆ ಅದರಲ್ಲೂ ಚಂದ್ರಗಿರಿ ಮುಂತಾಗಿ ತಿರುಪತಿ ಸುತ್ತಮುತ್ತ ನೆಲಸಿದ್ದರೆಂಬುದು ಅಲ್ಲಿ ದೊರೆತ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಅಷ್ಟಗ್ರಾಮಗಳ ದತ್ತಿಯ ಪ್ರಸಕ್ತಿಯು ಈ ಶಾಸನದಲ್ಲಿ ಬಂದಿದ್ದು ಅದು ಮೈಸೂರು ಮಹಾರಾಜರ ಕಾಲದಲ್ಲೂ ಆಡಳಿತದ ಒಂದು ವಸ್ತು ವಿಷಯವಾಗಿತ್ತು.

ಮಂಗಿದೇವನ ತರುವಾಯದಲ್ಲಿ ಗುಂಡಮ ಪ್ರಸಿದ್ಧ ಪ್ರಧಾನನಾಗಿದ್ದ. ಗುಂಡಮನ ತರುವಾಯ ಸಂಗಮ ವಂಶಸ್ಥರು ನಿಶ್ಶಕ್ತರಾದಾಗ - ದಾಯಾದಿ ಕಲಹದಲ್ಲಿ ಮುಳುಗಿದಾಗ - ಆತನ ಪುತ್ರ ಸಾಳುವ 'ಮೇದಿನೀಮೀಸೆಯರ ಗಂಡ' ಬಿರುದಾಂಕಿತ ನರಸಿಂಹನು ಸಾಮ್ರಾಜ್ಯದ ಕಡಿವಾಣಗಳನ್ನೇ ಕೈಯಲ್ಲಿ ಹಿಡಿದು ರಥವನ್ನು ಮುಂದಕ್ಕೆ ಸಾಗಿಸಿದ. ಸಮರ್ಥವಾಗಿ ಆಡಳಿತ ನಡೆಸಿದ.

III

ಸಾಳುವ ನರಸಿಂಹ ತನ್ನ ಅವಸಾನದ ಕಾಲದಲ್ಲಿ ಮಕ್ಕಳು ಚಿಕ್ಕವರಾಗಿದ್ದ ಕಾರಣ ಆಡಳಿತವನ್ನು ಅಳಿಯನಾದ ತುಳುವ ಮನೆತನದ[14] ನರಸನಾಯಕನ ಕೈಗಿತ್ತು ರಾಜಕುಮಾರರು ವಯಸ್ಕರಾದಾಗ ಆಡಳಿತವನ್ನು ಹಸ್ತಾಂತರಿಸಲು ಆಶಿಸಿದ್ದ. ತುಳುವ ನರಸನಾಯಕ ಸಾಳುವನ ಅತ್ಯಂತ ನಂಬಿಗಸ್ತ ಮಂತ್ರಿ, ಸೇನಾನಿ ಹಾಗೂ ಅಳಿಯನಾಗಿದ್ದ. ಅವನು ರಾಜ ಪ್ರತಿನಿಧಿಯಾಗಿ ರಾಜ್ಯವಾಳಿದ. ಆದರೆ ಅವನ ಪುತ್ರ ವೀರನರಸಿಂಹ ಅವನಷ್ಟೇ ಉದಾರಿಯಾಗಿರಲಿಲ್ಲ. ಮೇಲಾಗಿ ಅವನು ಸಾಳುವ ಮನೆತನಕ್ಕೆ ಕೃಷ್ಣದೇವರಾಯನ ಹಾಗೆ ಸಂಬಧಿಯೂ ಆಗಿದ್ದಿಲ್ಲ. ಕೃಷ್ಣದೇವರಾಯ ಸಾಳುವ ವಂಶಕ್ಕೆ ತಾಯಿಯ ಕಡೆಯಿಂದ ಸಂಬಂಧ ಹೊಂದಿದ್ದ; ನೋಡಿ:

1 ಸ್ವಸ್ತಿ ಶ್ರೀಮನ್ಮಹಾರಾಜಾಧಿರಾಜ
2 ರಾಜಪರಮೇಶ್ವರ ಶ್ರೀಮನ್ಮಹಾಮೇದಿನೀಮೀಸೆಯರ
3 ಗಂಡ ಕಠಾರಿಸಾಳುವ ಶ್ರೀಮದ್ದಕ್ಷಿಣಸಮುದ್ರಾಧಿಪತಿ
4 ನಾರಸಿಂಹವರ್ಮ್ಮ ಮಹಾಧಿರಾಜ ತತ್ಪುತ್ರ ಪಿತುರನ್ವಾಗತ
5 ಸಕಲ .. ಜನಾನಂದ ಸಂದೋಹ ಶೌರ್ಯ ಪರಾಕ್ರಮೋ
6 ದಾರ ಸಕಲದೇಶಾಧೀಶ್ವರ ಮಣಿಮಕುಟ ಚರಣಾರವಿಂದ ಶ್ರೀ
7 ಮತ್ಕೃಷ್ಣವರ್ಮ್ಮ ಮಹಾರಾಜಂ ಪೃಥ್ವೀರಾಜ್ಯಂಗೆ
8 ಯಿಉತ್ತಿರಲು ಶ್ರೀಮತು ದಕ್ಷಿಣ ವಾರಣಾಸಿಯಾ
9 ದ ತ್ರಿಮಕೂಟದಲ್ಲಿ ಅಗಸ್ತನಾಥದೇವರ ಸನ್ನಿಧಿಯಲು
10 ಶಾಲಿವಾಹನ ಶಕವರುಷಂ ಗತೇಷು ೧೪೩೫ ಸಂದು ವ
11 ರ್ತಮಾನ ಶ್ರೀಮುಖ ಸಂವತ್ಸರದ ಆಶ್ವಯುಜ ಶು ೧೦ ಆ
12 ದಿವಾರದಲು ಶ್ರೀಕೃಷ್ಣದೇವಮಹಾರಾಯರ ನಿರೂಪ
13 ದಿಂದ ಮಹಾಪ್ರಧಾನ ಸಾಳುವ ತಿಂಮರಸವೊಡೆ
14 ಯರ ತಂಮಂದಿರಾದ ಸಾಳುವ ಗೋವಿಂದರಾಜವೊ
15 ಡೆಯರು .... ಇತ್ಯಾದಿ.[15]

ಈ ಶಾಸನ ಸಾಳುವರ ಹಾಗೂ ತುಳುವ ಕೃಷ್ಣದೇವರಾಯನ ರಕ್ತ ಸಂಬಂಧಗಳು ಅಥವಾ ವಂಶ ಸಂಬಂಧಗಳನ್ನು ಚೆನ್ನಾಗಿ ಸೂಚಿಸಿದೆ. ತೌಳವ ಮನೆತನದ ವಂಶವೃಕ್ಷವನ್ನು ಈಗಾಗಲೇ ಸರಿಮಾಡಿಕೊಟ್ಟಿದೆ. ಅದು ಹೀಗಿದೆ (ಆರಂಭದ ಹಿರಿಯರು[16]):

ತಿಮ್ಮಭೂಪ
ಹೆಂ. ದೇವಕಿ
|
ಈಶ್ವರ ನಾಯಕ
ಹೆಂ. ಬುಕ್ಕಮಾ
|
ನರಸನಾಯಕ (ರಾಜಪ್ರತಿನಿಧಿ/Regency) (ಕ್ರಿ.ಶ. 1491-1505)
(ಹೆಂಡಂದಿರು ಮೂವರು)

1. ಹೆಂ. ತಿಪ್ಪಾಜಿ — ವೀರನರಸಿಂಹ

2. ಹೆಂ. ನಾಗಲಾದೇವೀ — ಕೃಷ್ಣದೇವರಾಯ
- ತಿರುಮಲಾಂಬಾ, ಗಂ. ಅರವೀಡು ರಾಮರಾಯ
- ವೆಂಗಲಾ, ಗಂ. ಅರವೀಡು ತಿರುಮಲ
- ತಿರುಮಲ

3. ಓಬಾಂಬಿಕಾ
- ಅಚ್ಯುತರಾಯ
- ರಂಗರಾಯ

IV

ತುಳುವ ಕೃಷ್ಣದೇವರಾಯನ ಇಬ್ಬರು ಹೆಣ್ಣುಮಕ್ಕಳನ್ನು ಅರವೀಡು/ಆರವೀಟಿ ಮನೆಗೆ ಕೊಟ್ಟು ಮದುವೆ ಆಯಿತು. ಸೋದರಿಯರಾದ ತಿರುಮಲಾಂಬ ಹಾಗೂ ವೆಂಗಳಾ ಸೋದರರಾದ ರಾಮರಾಯ ಮತ್ತು ತಿರುಮಲ ಇವರನ್ನು ವರಿಸಿದ್ದರು - ಕೊಟ್ಟು ಮದುವೆಮಾಡಿದ್ದರು. ಕೃಷ್ಣದೇವರಾಯ ತನ್ನ ಮಕ್ಕಳನ್ನು ಸಿಂಹಾಸನದ ಮೇಲೆ ಕುಳಿತು ರಾಜ್ಯವಾಳುವ - ಸಮಾನಸ್ಕಂದ - ರಾಜಮನೆತನವೊಂದಕ್ಕೆ ಕನಿಷ್ಠ ತನ್ನ ಆರ್ಥಿಕ ಅಂತಸ್ತಿಗೆ ಧಕ್ಕೆ ಬಾರದ ರೀತಿಯ ಮನೆಗೆ ಕೊಟ್ಟು ಮದುವೆ ಮಾಡಿದ್ದ ಎಂದರೆ ಏನೇನು ತಪ್ಪಾಗದು. ಹೆಣ್ಣು ಕೊಟ್ಟು ತರುವುದರಲ್ಲಿ ಇದು ಸಹಜ ಲೋಕಧರ್ಮ. ಅರವೀಡು ಮನೆತನದ ಹೆಸರು ರಾಮರಾಯನಿಂದ ಹೆಚ್ಚು ಪ್ರಸಿದ್ಧಿಗೆ ಬಂದಿತು. ಪಶ್ಚಿಮ ಸಮುದ್ರ ತೀರದ ಮನೆತನದವರು ಪೂರ್ವ ಸಮುದ್ರ ಪ್ರದೇಶವನ್ನು ತಮ್ಮ ತೋಳತೆಕ್ಕೆಗೆ ತೆಗೆದುಕೊಂಡಾಗ ಅಲ್ಲಿದ್ದ ಜನರ - ರಾಜಮನೆತನಗಳ - ಇನಿತು ನೆರವು ಅನಿವಾರ್ಯವಾಗಿ ಬೇಕಿತ್ತು. ಅದನ್ನು ಅವರು ರಾಜ್ಯ ನಿಲ್ಲಿಸುವುದಕ್ಕೋಸ್ಕರ, ರಾಜ್ಯದಲ್ಲಿ ನೆಮ್ಮದಿ ರಾರಾಜಿಸುವುದಕ್ಕೋಸ್ಕರ ಎದುರಿಸಿದವರನ್ನು ಹೊಡೆದು ಬಾಗಿದ ಅವರಲ್ಲೊಬ್ಬನನ್ನು ಆ ಪ್ರಾಂತಕ್ಕೆ ಒಡೆಯನನ್ನಾಗಿ ಮಾಡಿ ಆಡಳಿತವನ್ನು ಸುಸೂತ್ರಗೊಳಿಸುವುದು ಲೋಕರೂಢಿಯ ರಾಜಕೀಯ ವರ್ತನೆ. ಹಾಗಾದರೆ ಅರವೀಡು ಮನೆತನದ ರಾಜರು ವಿಜಯನಗರದ ಅರಸರ ಬಳಿಯಲ್ಲಿ ಸೌಹಾರ್ದತೆಯಿಂದ ಇರಲು ಆರಂಭಿಸಿದುದು ಯಾವಾಗ ?

ಅರವೀಡು ದೊರೆಗಳಲ್ಲಿ ಒಬ್ಬನನ್ನು ಜನರು ಆರವೀಟಿಬುಕ್ಕ ಎಂದೇ ಗುರುತಿಸುತ್ತಿದ್ದರು. ಇಬ್ಬರು ಬುಕ್ಕರು ಇದ್ದಾಗ ಈ ವಾಡಿಕೆ ಉಂಟಾಯಿತು; ವ್ಯಕ್ತಿಗಳನ್ನು ಗುರುತಿಸಲು ಹೀಗೆ ಕರೆಯಲಾಗುತ್ತದೆ. ಆದುದರಿಂದ ಆರವೀಟಿಬುಕ್ಕನ ಕಾಲಕ್ಕೆ ಸಮಕಾಲೀನನಾದ ಬುಕ್ಕದೊರೆ ಎಂದರೆ ಸಂಗಮ ಮನೆತನದ ಬುಕ್ಕನೂ ಒಬ್ಬ. ಚಕ್ರವರ್ತಿಗಳನ್ನು - ಸಾಮ್ರಾಟರನ್ನು - ಸಣ್ಣ ಹೆಸರಿನಿಂದ ಕರೆಯದೇ ಅವರನ್ನು ಹಾಗೆ ಅಧಿಪತಿಗಳೆಂದೆ ಕರೆಯುವುದು ರೂಢಿ. ಗಂಗಾದೇವಿ ತನ್ನ ಮಾವ ಬುಕ್ಕಭೂಪಾಲನನ್ನು "ಕುಂತಲ ಭೂಪಾಲ" ಎಂದೇ ಕರೆದಿದ್ದಾಳೆ:

> ಸುಖಾಯಮಾನಾಂ ಸುತಜನ್ಮವಾರ್ತಾ । ಸಹರ್ಷಮಾವೇದಯ ।
> ಅವಾಂಛದಾತ್ಮನಮಪಿಪ್ರದಾತುಂ । ಕುತೂ ಹಮೀ ಕುಂತಲಭೂಪಾಲಃ ॥[16]

ಅರವೀಡು ಬುಕ್ಕರಾಯ ಅವನ ವಂಶಸ್ಥರು ಸಂಗಮ ಮನೆತನದ ಪ್ರಭಾವಲಯದಲ್ಲಿ ಬೆಳೆದರು ಎಂದರೆ ತಪ್ಪಾಗದು. ಸರಿಯಾಗಿ ತಿಳಿದುಕೊಳ್ಳಬೇಕಾದರೆ ಈ ಮನೆತನದ ವಂಶವೃಕ್ಷ ಅವರ ಚರಿತ್ರೆ ಇತ್ಯಾದಿಗಳನ್ನು ಇನಿತು ತಿಳಿದುಕೊಳ್ಳಬೇಕಾದುದು ಅನಿವಾರ್ಯ. ಈ ದಿಶೆಯಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಆವನಿ ತಾಮ್ರ ಶಾಸನ ಹಾಗೂ ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನ ಮುಖ್ಯಸ್ಥಳ ಹಾಸನದ ತಾಮ್ರ ಶಾಸನ ಇವು ನಮ್ಮ ನೆರವಿಗೆ ಬರುತ್ತವೆ.[17] ಮುಳಬಾಗಿಲು ಶಾಸನದ ಪ್ರಕಾರ ಅರವೀಡು ಮನೆತನದವರು ಕಲ್ಯಾಣದಿಂದ ಆಳಿದ ಕಳಚುರ್ಯರು. ಸಾಮ್ರಾಟನಾದ ಬಿಜ್ಜಳನ ಶಾಖೆಯ ಒಬ್ಬ ವ್ಯಕ್ತಿ ಮಾಯಾಪುರಕ್ಕೆ[18] ಒಡೆಯನಾಗುತ್ತಾನೆ:

ಪಂಕ್ತಿ: 10 ತಸ್ಮಾಶ್ರೀಬಿಜ್ಜಲೇಂದ್ರೋದಶಮ ಇಹನೃಪೋವೀ[ರ] । ಹೇಮ್ಮಾಳಿರಾಯಸ್ತ್ರಿತ್ರೀಕೋಮುರಾ
11 ರಾತ್ಕೃತನತಿರುದಭೂತ್ತಸ್ಯ ಮಾಯಾಪುರೀಶಃ । ತತ್ಸುರ್ಯೋರ್ಜನಿ ತಾತಪಿನ್ನಮ

12 ಮಹಿಪಾಲೋ ನಿಜಾಲೋಕನತ್ರಸ್ತಾಮಿತ್ರಗಣಸ್ತತೋಜನಿ ಹರನ್ ದುರ್ಗಾಣಿ
13 ಸಪ್ತಾಹಿತಾತ್ । ಅನ್ವೈಕೇನಸಸೋಮಿದೇವನೃಪತಿಸ್ತಸ್ಮೈ ಜಜ್ಞೇಸುತೋವೀರೋರಾ
14 ಘವದೇವರಾಡಿತಿತತಶ್ರೀ ಪಿನ್ನಮೋಭೂನೃಪಃ । ಆರವೀಟಿ ನಗರೀವಿಭೋರ
15 ಭೂದಸ್ಯ ಬುಕ್ಕಧರಣೀಪತಿಸುತಃ[19] । ಯೇನ ಸಾಲವ ನೃಸಿಹ್ಮರಾಜ್ಯಮಪ್ಯೇಧಮಾನಮ
16 ಹಸಾಸ್ಥಿರೀಕೃತಂ । ಶ್ರೀರಾಮರಾಜಕ್ಷಿತಿಪಸ್ಯ ತಸ್ಯ ಚಿನ್ತಾಮಣೇರರ್ಥಿಕದಂಬ
17 ಕಾನಾಂ । ಲಕ್ಷ್ಮೀರಿವಾಂಭೋರುಹಲೋಚನಸ್ಯ ಲಕ್ಕಾಂಬಿಕಾಮುಷ್ಯಮಹಿಷ್ಯಥಾಸೀತ್ ।
18 ತಸ್ಯಾಧಿಕೈಸಮಭವಸ್ತನಯಸ್ತಪೋಭಿಶ್ರೀರಂಗರಾಜನೃಪತಿ ಶಶಿವಂಶದೀ
19 ಪಃ । ಆಸನ್ನಮುಲ್ಲಸತಿ ಧಾಮನಿಯಸ್ಯ ಚಿತ್ರಂ ನೇತ್ರಾಣಿ ವೈರಿಸುದೃಶಾಂಚನಿ
20 ರಂಜನಾನಿ ಸತೀತಿರುಮಲಾಂಬಿಕಾಂ ಚರಿತ ಲೀಲಯಾರುಂಧತೀ ಪ್ರಥಾಮಪಿ
21 ತಿತಿಕ್ಷಯಾವಸುಮತೀಯಶೋರುಂಧತೀಂ । ಹಿಮಾಂಶುರಿವ ರೋಹಿಣೀಂ ಹೃದಯಹಾರಿಣೀಂ
22 *ಸದ್ಗುಣೈರವೋದತಸಧರ್ಮಿಣೀ ಮಯಮವಾಪ್ಯವೀರಾಗ್ರಣೀಃ । ರಚಿ
23 ತನಯ ವಿಚಾರಂ ರಾಮಾರಾಜಂಚ ಧೀರಂ ವರ ತಿರುಮಲರಾಯಂ ವೇಂಕಟಾದ್ರಿ ಕ್ಷಿತೀಶಂ । ಅ
24 ಜನಯತ .... ಇತ್ಯಾದಿ.

ರೇಖೆಯಲ್ಲಿ ವಂಶವೃಕ್ಷವನ್ನು ಹೀಗೆ ವಿವರಿಸಬಹುದು:

ಬಿಜ್ಜಲೇಂದ್ರನ ಕುಲದಲ್ಲಿ
ಮಾಯಾಪುರೀಶ
|
ತಾತಪಿನ್ನಮ
|
ಸೋಮಿದೇವ[20]
|
ವೀರರಾಘವ
|
ಪಿನ್ನಮ
|
ಆರವೀಟಿಬುಕ್ಕ
|
ರಾಮರಾಜ
ಹೆಂ. ಲಕ್ಕಾಂಬಿಕಾ
|
ಶ್ರೀರಂಗರಾಜ
ಹೆಂ. ತಿರುಮಲಾಂಬಿಕಾ
|
(ಅಳಿಯ) ರಾಮರಾಯ | ತಿರುಮಲ | ವೇಂಕಟಾದ್ರಿ

ಅಳಿಯ ರಾಮರಾಯನ ಕಾಲದಿಂದ ಮುಂದಿನ ಚರಿತ್ರೆ ಸುವಿಶ್ರುತ. ತಾಳಿಕೋಟೆಯ ಯುದ್ಧದ ಅನಂತರ ರಾಜಧಾನಿಯು ವಿಜಯನಗರದಲ್ಲಿ ಉಳಿಯಲಿಲ್ಲ. ವಿಜಯನಗರದ ವೈಭವ ಮತ್ತೆ ಮುಂದೆ ಎಂದೂ ಮರುಕಳಿಸಲಿಲ್ಲ.

V

ಸಂಗಮ ಮನೆತನದವರು ಶೈವ ಧರ್ಮವನ್ನು ಹೆಚ್ಚು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರೆಂದು ಹೆಸರುಗಳಿಂದ ತೋರುತ್ತದೆ. ಸಂಗಮೇಶ್ವರ, ವಿರುಪಣ್ಣ, ವಿರೂಪಾಕ್ಷ, ಮಲ್ಲಿಕಾರ್ಜುನ, ಮಲ್ಲಪ್ಪ ಮುಂತಾದವು ಶಿವನ ಭಕ್ತಿಯ ದ್ಯೋತಕವಾಗಿವೆ.[21] ಪ್ರಾಯಃ ಅದೇ ಕಾರಣದಿಂದ ಪೂರ್ವ ಪಶ್ಚಿಮ ಸಮುದ್ರಕ್ಕೆ ಮಧ್ಯವರ್ತಿಯಾದ, ಆರಾಧ್ಯದೇವತೆಯ (ಶಿವನ) ಕ್ಷೇತ್ರವೂ ಆದ ಪಂಪಾಕ್ಷೇತ್ರವನ್ನು ರಾಜಧಾನಿಯನ್ನಾಗಿ ಆರಿಸಿದರೆಂದು ತೋರುತ್ತದೆ. ತುಂಗಭದ್ರಾ ನದಿಯ ರಕ್ಷಣೆಯೂ ನೈಸರ್ಗಿಕವಾಗಿ ಇದ್ದೇ ಇತ್ತು. ಸಂಗಮ ಮನೆತನದ ಸಂಬಂಧಿಗಳು ಎಂದರೆ ಸಾಳುವ,[22] ತುಳುವ ಹಾಗೂ ಆರವೀಟಿ ಎಲ್ಲರೂ ಆಗಲೇ ಭದ್ರಬುನಾದಿಯನ್ನು ಹೊಂದಿದ್ದ ರಾಜಧಾನಿಯನ್ನು ಬದಲಿಸಲಿಲ್ಲ. ಕಲ್ಯಾಣದ ಸಾಮ್ರಾಜ್ಯವನ್ನು ಕಟ್ಟಿದ ಚಾಳುಕ್ಯ ಹಾಗೂ ಆ ಸಾಮ್ರಾಜ್ಯವನ್ನು ಶಿಥಿಲಗೊಳಿಸಿದ - ಅಳಿದ, ಆ ಕಳಚುರ್ಯರ ವಂಶದ

ಕುಡಿಗಳೇ - ಶಾಖೆಗಳೇ - ವಿಜಯನಗರದ ಸಾಮ್ರಾಜ್ಯವನ್ನು ಕಟ್ಟುವುದರಲ್ಲಿ ಕೆಡವುದರಲ್ಲಿ, (ಅವೇ ರಾಜಮನೆತನಗಳು) ಪಾತ್ರವಹಿದ್ದೂ ಒಂದು ಯೋಗಾಯೋಗ !

ಟಿಪ್ಪಣಿಗಳು

1. The Krāku Grant of Harihar II, *Ep. Andh.* Vol. II, p. 80.
2. ಕರ್ನಾಟಕದ ಕೀರ್ತಿಯನ್ನು ಬಾದಾಮಿಯ ಚಾಳುಕ್ಯರು ರಾಷ್ಟ್ರಕೂಟರು ಅನಂತರ ಕಲ್ಯಾಣದ ಚಾಳುಕ್ಯರು, ಅಲ್ಲಲ್ಲಿ ಹನ್ಮಕೊಂಡ (ಹನ್ಮಕುಂದೆ, l ಅನ್ಮಕುಂದೆ !) ಮಂಡಲದ ಅಧಿಪತಿಗಳು (- ಬಾದಾಮಿಯ ಚಾಳುಕ್ಯರ ವಂಶಸ್ಥರು) ಅವರ ಸ್ನೇಹಿತರು - ಸಂಬಂಧಿಗಳು: ಕಳಚುರಿಗಳು ಹಾಗೂ ಹೊಯ್ಸಳ ಇತ್ಯಾದಿ ಹಲವು ರಾಜಮನೆತನದವರು.
3. ಎ.ಕ. ಸಂಪುಟ, 9 (1990), ಬೇ. 144, ಪೃ. 98-102.
4. ಶ್ಲಾಘ್ಯೇ ತಸ್ಮಿನ್ ಯದೋರ್ವಶೇ ಸಂಜಾತಃ <u>ಸಂಗಮೇಶ್ವರಃ</u> ಸಂಗಮಃ ಶ್ರೀ ಸರಸ್ವತ್ಯೋರಭೂಯತ್ರಾತಿದುರ್ಲಭಃ ॥
ಆಕರಾದ್ಗುಣರತ್ನಾನಾಂ ತಸ್ಮಾತ್ ಶ್ರೀ ಸಂಗಮೇಶ್ವರಾತ್ ಪಾರಿಜಾತ ಇವಾಂಭೋಧೇರುದಭೂದ್ಬುಕ್ಕಭೂಪತಿಃ ॥
(ಎ.ಕ., ಸಂ. 9 (1990), ಬೇಲೂರು 264, ಪೃ. 250 ಇತ್ಯಾದಿ).
5. ಎ.ಕ., ಸಂ. 6 (1977), ಶ್ರೀರಂಗಪಟ್ಟಣ 21, ಪೃ. 344 ಇತ್ಯಾದಿ.
6. 'ಗುತ್ತಿ' ದುರ್ಗ ಗಂಗರ ಕಾಲದಿಂದಲೂ ಬಹಳ ಪ್ರಸಿದ್ಧ. ಹರಿಹರನಿಗೆ ಮೊದಲ ರಾಜಧಾನಿ ಗುತ್ತಿಯೆ. ಇಸಾಮಿ ಎಂಬ ಮುಸಲ್ಮಾನ ಬರಹಗಾರ ದಿಲ್ಲಿಯ ಸುಲ್ತಾನರು ಗುತ್ತಿಯಿಂದ ದೂಬರದವರೆಗೆ ಭೂಮಿಯನ್ನು ಗೆದ್ದರೆಂದು ಬರೆದಿದ್ದಾನೆ. ಎಲ್ಲ ಸಂಗತಿಗಳನ್ನು ಮನಗಂಡರೆ ಸಂಗಮ ಮನೆತನದ ರಾಜರು ಗುತ್ತಿಯ ಸುತ್ತಮುತ್ತಣ ಪ್ರದೇಶವನ್ನು ಆಳುತ್ತಿದ್ದರು.
7. ಎ.ಕ., ಸಂ. 4 (1975), ಚಾಮರಾಜನಗರ 148, ಪೃ. 90-92; ವಿಜಯನಗರದ ಜೊತೆಗೆ ಹದಿನಾಡು ಅರಸುಮನೆತನದ ಮೂಲಪುರುಷನ ಒಂದು ಉಲ್ಲೇಖ ಇಲ್ಲಿದೆ. ಇದೂ ಗಮನಾರ್ಹ.
8. ಬೇ. 144 (ಪೂರ್ವೋಕ್ತ) ಶಾಸನದಲ್ಲಿ ಕಾಮಾಯಿಯ ಹೆಸರನ್ನು ಹೇಳದೆ ಪಂಚಪಾಂಡವ ಸಮಾನರಾದ ಸಂಗಮನ ಮಕ್ಕಳು 'ಶಾರದಾ' ಎಂಬ ರಾಣಿಯ ಮಕ್ಕಳೆಂದು ತಿಳಿಸಿದೆ. ಕಾಮಾಯಿ 'ಶಾರದಾದೇವೀ' ಹಾಗೆ ವಿದ್ವತ್ತಿಗೆ ಸಂಕೇತವಾಗಿರಬೇಕು ಅರ್ಥಾತ್ ದೊಡ್ಡ ವಿದುಷಿಯಾಗಿರಬೇಕು. 'ಶಾರದಾ' ಇದಕ್ಕೆ ಪ್ರತಿಯಾಗಿ 'ಸರಸ್ವತೀ' ಎಂದು ಕೆಲವು ಶಾಸನಗಳಲ್ಲಿ ಆಕೆಯನ್ನು ಪರ್ಯಾಯ ಹೆಸರಿನಿಂದ ಕರೆದಿವೆ. ಎ.ಕ., ಸಂ. 9 (1990), ಬೇ. 264, ಪೃ. 250.
9. ಎ.ಕ., ಸಂ. 9 (1990), ಪೀಠಿಕೆ (Introduction), ಪೃ. lxvii-lxix ಮತ್ತು cxiii-cxv.
10. ಒಂದನೆಯ ಹರಿಹರನಿಗೆ ಆತನ ಸೇನಾನಾಯಕನು ಸಹಾಯಕರಾಗಿ ನಿಂತಿದ್ದಿಲ್ಲವೆಂದರೆ ಅವನು ರಾಜ್ಯವನ್ನು ಕಟ್ಟಲು ಆಗುತ್ತಿದ್ದಿಲ್ಲ.
11. ಎ.ಕ., ಸಂ. 3 (1974), ಹೆ.ಕೋ. 89, ಪೃ. 483-491.
12. 'ಗುಂಡಬೊಮ್ಮ' ಇದು 'ಗುಂಡಬ್ರಹ್ಮ' ಇದರ ವಿಕೃತರೂಪ. 'ಬ್ರಹ್ಮ', 'ಬೊಮ್ಮ' ಆಗುವುದು ಭಾಷಾಪದ್ಧತಿ. 'ಗುಂಡಬೊಮ್ಮ' ಆಗಿನ ಕಾಲದಲ್ಲಿ ಪ್ರಸಿದ್ಧವಾದ 'ಗುಂಡಬ್ರಹ್ಮ' ದೇವತಾಸ್ವರೂಪಿಯ ಅವಶೇಷ. ಕರ್ನಾಟಕದ ರಾಜಮನೆತನಗಳೆಲ್ಲ 'ಬ್ರಹ್ಮಕ್ಷತ್ರಿಯ' ಜನಾಂಗದವರು. ಈ ಇಮ್ಮಡಿ ನರಸಿಂಹ "ತ್ರಿಶೂಲದಕಲ್ಲು" ಹಾಕಿಸಿ ಭೂಮಿದತ್ತಿ ಕೊಟ್ಟಿರುವುದೂ ಒಂದು ಗಮನಾರ್ಹ ಅಂಶ. ತ್ರಿಶೂಲಕ್ಕೂ 'ಗುಂಡಬ್ರಹ್ಮ'ಕ್ಕೂ ಸಂಬಂಧವಿದೆ. ಪ್ರಧಾನ ತಿಪ್ಪರಸರ ನೇತೃತ್ವದಲ್ಲಿ ದತ್ತಿಯ ಕಾರ್ಯ ನಡೆದಿದೆ.
13. ಪ್ರತಿಗ್ನಾಯ ಪುರೋರಾಜ್ಞಾಮ್ಮಾಕಾರಂ ಸಗರಾಹ್ವಯಂ ಭಿತ್ವಾಪ್ರತ್ಯಗ್ರಹೀತ್ತತ್ರ ಕ್ಷಿಪ್ರಾಮ್ಯಃ ಕಡಲೀಂ ನಿಜಾಂ॥ (ಪೂರ್ವೋಕ್ತ ಶಾಸನ, ಪಂಕ್ತಿಗಳು 31 ರಿಂದ 33).

   'ಕತ್ತಿಯನ್ನು ಕಸಿಯುವುದು' ಮತ್ತೆ ವೈರಿಯ ದುರ್ಗದಲ್ಲಿ ಯುದ್ಧದ ಕಹಳೆಯನ್ನು ಎಸೆಯಿಸಿ ಆ ಕೂಡಲೆ ಆ ದುರ್ಗವನ್ನು ಗೋಡೆ ಒಡೆದು ಪ್ರವೇಶಿಸಿ ತಮ್ಮ ಕಹಳೆಯನ್ನು ಸಂಪಾದಿಸುವುದು ಯುದ್ಧಕಲೆ - ಆಟ (An art and a game in war) ಗಳನ್ನು ದಾಖಲಿಸಿರುವುದು ಗಮನಾರ್ಹವಾದ ಅಂಶ.
14. ಸಾಳುವ ಹಾಗೂ ತುಳುವ ಮನೆತನಗಳು ಪಶ್ಚಿಮ ಕರಾವಳಿಯ ನಾಡನ್ನು (ಇಂದಿನ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಹಾಗೂ ಗೋವೆಯ ಪ್ರಾಂತ) ಆಳುತ್ತಿದ್ದರು.

15. ಎ.ಕ., ಸಂ. 3 (1974), 285, ಪು. 361; ಇಂತಹದೇ ಸಂಬಂಧ ತಿಳಿಸುವ ಇನ್ನೂ ಕೆಲವು ಶಾಸನಗಳು ಈ ಸಂಪುಟದಲ್ಲಿವೆ.

16. "ಕಂಪರಾಯಚರಿತ್ರ" ಉಲ್ಲೇಖಿತ ಪ್ರಾಚೀನಾಂಧ್ರ ಚಾರಿತ್ರಕ ಭೂಗೋಳಮು, ಪು. 88.

17. (a) ಎ.ಕ., ಸಂ. 10 (BLR), ಮುಳಬಾಗಿಲು 60, ಪು. 81-84, (ಕನ್ನಡ ಪಠ್ಯವಿಭಾಗ) ಇದನ್ನು ಅನುಬಂಧದಲ್ಲಿ ಕೊಟ್ಟಿದೆ. ಅನ್ನ ಪರೀಕ್ಷಿಸುವುದಕ್ಕೆ ಅಗುಳು ಸಾಕಲ್ಲವೆ ?

(b) ಎ.ಕ., ಸಂ. 8 (1984), ಹಾ. 9, ಪು. 226-232. ಇದು ಮುಳಬಾಗಿಲು ಶಾಸನದಷ್ಟು ವಿವರಗಳನ್ನು ಹೊಂದಿಲ್ಲ.

18. 'ಮಾಯಾಪುರಂ' ಇದು ತಮಿಳುನಾಡಿನ ಮಾಯಾವರಂ.

19. ಮಾಯಾಪುರದಿಂದ ಆರವೀಟಿ ನಗರಕ್ಕೆ ಬುಕ್ಕನ ಕಾಲಕ್ಕೆ ಬರುತ್ತಾರೆ.

20. "ಸೋವಿದೇವ" ಎಂಬ ಹೆಸರೂ ಕಲಚುರಿ ವಂಶವನ್ನು ಸೂಚಿಸುತ್ತದೆ. ಬಿಜ್ಜಳನ ಮಗನ ಹೆಸರು ಪುನರಾವರ್ತನಗೊಂಡಿದೆ.

21. ವಿಜಯನಗರದ ಕಾಲದವರೆಗೆ ರಾಜಮನೆತನಗಳೆಲ್ಲ ಸರ್ವಧರ್ಮ್ಮ ಸಮನ್ವಯವನ್ನು ಹೊಂದಿದ್ದವು. "ಚತುಸ್ಸಮಯ ಸಮುದ್ಧರಣಕಾರರು" ಎಂಬುದು ಅವರ ರಾಜನೀತಿಯಾಗಿತ್ತು.

22. ಸಾಳುವ ಮನೆತನ ಹೆಚ್ಚು ವೈಷ್ಣವ ಧೋರಣೆಯನ್ನು ನಿಜ ಜೀವನದಲ್ಲಿ ಹೊಂದಿತ್ತು.

ಅನುಬಂಧ-1, ಎ.ಕ. ಸಂ. 4 (1975), ಪು. 90-92.

148 (IV ಚಾ ನ 64)

ಹೊಮ್ಮ

ಮೂಲಸ್ಥಾನೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಕಲ್ಲಿನಲ್ಲಿ

This record gives the genealogy of Hariyappa-oḍeya (Harihara II), the Vijayanagara king, who is said to be the son of Bukka (I) and grandson of Saṅgama and Kāmāyi. Harihara's minister was Kampa at whose instance Ballappa, son of Saṅgamarāja, was governing Hadināḍ. Then it decribes the village Homma *alias* Akaḷaṅka-chaturvēdi-maṅgala, also called Sarvajña Vishṇupura. For the worship, offerings etc., to god Mūlasthānadēva of this place, a gift of land was made by the *mahājanas* of the 108 *vṛittis,* made over to Bhūtāṇḍi-hāruva, the *sthānika* of the temple. The epigraph was written by Aksharada Gōpaṇṇa.

It is dated Śaka 1302, Raudri, Śrāvaṇa śu. 5, Sunday, corresponding to 1380 A.D., July 7. This weekday was Saturday.

1 ಶ್ರೀಮದ್ದೇವೇಂದ್ರವೃಂದಾರ್ಚ್ಚಿತಚರಣಸರೋಜಾತಭೃಂಗಂ ಕವೀಂದ್ರಾಸ್ತೋಮಾಂಭೋರಾಸಿಚಂದ್ರಂ ಗುಣಗಣನಿಳಯಂ ಬುಕ್ಕಭೂಪಾಲನತ್ಯುದ್ದಾಮಂ

2 ತತ್ಪುತ್ರನುದ್ಯದ್ವಿಪುಕುಲಗಜಪಂಚಾನನಂ ಕೀರ್ತಿಭಾಸ್ಪದ್ರಾಮಾನೇತ್ರಾಬ್ಜಸೂರ್ಯಂ ನೆಗಳ್ದನವನಿಯೊಳ್ಸಂಗಮಕ್ಷೋಣಿಪಾಲಂ ॥

3 ಧರೆಯೋಳ್ಸಂಗಮನೆಂಬ ಪಾಂಡುವಿಗಮಾ ಕಾಮಾಯಿಗಂ ಪುಟ್ಟಿದರ್ಬ್ಬರದಿಂ ಹರಿಯಪಕಂಪಣಕ್ಷಿತಿಪನಾ ಬುಕ್ಕೋರ್ವ್ವಿಪಂ ಮುದ್ದಪಂ ನಿರುತಂ ಮಾರಪ

4 ನೆಂಬ ಪಾಣ್ಡವರೊಳಾರ್ಪ್ಪಿಂ ಮಧ್ಯಮಂ ಪಾಣ್ಡವಂ ವರಭೂಪಾಳಕಗರ್ವ್ವಮತ್ತಗಜಸಿಂಹಂ ಬುಕ್ಕ ಭೂಪಾಲಕಂ ॥ ನಿರುತಂ ತದ್ಬುಕ್ಕ ಭೂಪಾಲಕಸುತನುರುಧರ್ಮ್ಮಾ

5 ಬ್ಧಿಸಂಪೂರ್ಣ್ಣಚಂದ್ರಂ ವರಸಾಹಿತ್ಯಾಬ್ಜಪೂಷಂ ರಿಪುನೃಪಶರಭಬ್ರಾತಭೇರುಂಡನಾಸದ್ವರತಾರಾಹಾರ ತಾರಾಚಲಹರಹಸನಾದಭ್ರಶುಭ್ರಾ

6 ಭ್ರಕೀರ್ತ್ತೀಶ್ವರನಾದಂ ರಾಜಿಪಂ ಶ್ರೀಹರಿಹರಧರಣೀಪಾಲನಾರ್ದ್ದಿಂದ್ರಲೀಲಂ ॥ ಅಂತೆಸೆವ ಹರಿಹರಕ್ಷ್ಮಾ ಕಾಂತಂ ವಿಜಯಾಭಿಧಾನನಗರಿಯೊಳೆ

7 ಸುಖಸ್ವಾಂತಂ ರಾಜ್ಯಂಗೆಯ್ಯುತ್ತನ್ನೊಪ್ಪಿರೆ ಧರಣಿಪಾಲಮೌಳೀರತ್ನಂ ॥ ಸ್ವಸ್ತಿ ಶ್ರೀಮನ್ಮಹಾರಾಜ ರಾಜಪರಮೇಶ್ವರ ಶ್ರೀವೀರಹರಿ

8 ಯಪ್ಪೊಡೆಯರು ವಿಜಯಾನಗರದೊಳು ಪೃಥ್ವೀರಾಜ್ಯಂಗೆಯ್ಯುತ್ತವಿರು ॥ ತತ್ಪಾದಪದ್ಮೋಪಜೀವಿ ॥ ಶ್ರೀಮತ್ರಂಬಕನಾಥಪದಾಮಳಸರಸಿ

9 ಜಯುಗಳನಿರುಪಮಭೃಂಗಂ ಧೀಮಾನ್ಸಭಾಸುಧಾರ್ನ್ನವಸೋಮಂ ಶ್ರೀಕಂಪಮಂತ್ರಿಪಂ ಧರೆಗೆಸೆವಂ ॥ ಹರಿಹರಭೂಮಿಪಾಲ ಸಚಿವಂ ವರಕಂಪಣ

10 ನಾಗ್ನೆಯಿಂ ಧರಣಿಯನೆಯ್ದೆ ಪಾಲಿಸುತೆ ಸಂಗಮರಾಜತನೂಜನುತ್ಕವೀಶ್ವರಸುರಭೂಜನಿಂದುವರಕುಂದ ವಿನಿರ್ಮ್ಮಲಕೀರ್ತ್ತಿ ವಾ(ನೆ)ಜಿನೇಶ್ವರ ॥

11 ಪಾದಪದ್ಮಭೃಂಗನೆಸೆವಂ ಸಲೆ ಬಲ್ಲಪನಾಮ ಮಂತ್ರಿಪಂ ॥ ಆ ಬಲ್ಲಪ್ಪನು ಹದಿನಾಡನಧಿಕಾರಂ ಮಾಡುತ್ತಿರ್ದ್ದಲ್ಲಿ ॥ ತುಂಗತರಂಗಕಾಂಚನನದೀತಟ

12 ಸಂಭವನಾಳಿಕೇರನಾರಂಗಸುಪೂಗಚೂತವರಚಂಪಕಬಂಧುರ ನಂದನಾಳಿಯಿಂ ಪಿಂಗದ ನೀಲನೀರರುಹಪಂಕಜ ಸೌರಭಸಾರಲೋಲಸ

13 ದ್ಭೃಂಗದಿನೊಪ್ಪುಗುಂ ಭರದೆ ಹೊಂಮಮೆನಿಪ್ಪ ಪುರಂ ನಿರಂತರಂ ॥ ಅದಜೊಳ್ಪಂದೋದಿ ವಾಚಸ್ಪತಿ ಸುರಪತಿಯಾಸ್ಥಾನದೊಳ್ಸಂದನಾರ್ಪ್ಪಿಂ

14 ದದಜೊಳ್ಬಂದಿರ್ದ್ದ ವಾಣೀಸತಿಸರಸಕಳಾಪ್ರೌಢೆಯಾದಳ್ ಶಶಾಂಕಂ ಅದಜುದ್ಯದ್ಧರ್ಮ್ಮರುಕ್ಸಂಗದಿ ನೆಸೆವಕಳಾಭೂಷ

15 ನಾದಂ ಮಹೀಭಾಗದೊಳೆಂದನಾರ್ದ್ದ ತದ್ಗ್ರಾಮದ ಮಹಿಮೆಯನಿಂ ಬಂಣಿಸಲ್ಬಲ್ಲನಾವಂ ॥ ಸ್ವಸ್ತಿ ಸಮಸ್ತಪ್ರಶಸ್ತಿಸಹಿತಂ ಶ್ರೀಮತ್ಸ

16 ರ್ವಗ್ನವಿಷ್ನುಪುರಂ ಹೊಮ್ಮವಾದ ಅಕಳಂಕಚತುರ್ವೇದಿಮಂಗಲದ । ರುಗ್ಯಜುಸ್ಸಾಮಾಥರ್ವ್ವಣಾದಿವೇದ ಪ್ರವೀಣರುಂ । ಯ

17 ಜನಯಾಜನಾಧ್ಯಯನಾಧ್ಯಾಪನದಾನಪ್ರತಿಗ್ರಹಷಟ್ಕರ್ಮ್ಮನಿರತರುಂ ತರ್ಕ್ಕವ್ಯಾಕರಣಚ್ಛಂದೋಭಿದಾನ ಭರತಾಲಂಕಾರಾದಿ

18 ನಾನಾಕಳಾಪ್ರವೀಣರುಂ । ಷಟ್ತರ್ಕ್ಕಕರ್ಕ್ಕಶರುಮಪ್ಪ ಪುಲ್ಲೂರ ಅಳಘುಪೆರುಮಾಳೆಗಳುಂ । ದೇಸಾಮಂಗಲದ ಕೊಂಡಾರುಂ । ವಿಳಕ್ಕನ್ದೆಜಿದ ವಿ

19 ಶ್ವೇಶ್ವರನುಂ । ಕುಜುಹಟ್ಟಿಯ ಅಳ್ಳಾಳನಾಥನುಂ । ವಂಗಿಪುರದ ಕೇಶವರುಂ । ತಳಕಾಡ ಚೊಕ್ಕ ಕೇತಂಣನುಂ । ಕೂಣದೂರ ಸೇನಾಬೋವ ಅ

20 ಲ್ಲಾಳನಾಥನುಂ ಮೊದಲಾದ ೧೦೫ ವೃತ್ತಿಯ ಮಹಾಜನಂಗಳು ಆ ಹೊಮ್ಮದ ಪೂರ್ವ್ವದ್ವಾರದ ಮೂಲಸ್ಥಾನದೇವರ ಅಮೃತಪಡಿ

21 ಧೂಪದೀಪಗಂಧವಸ್ತ್ರಪಂಚಪರ್ವ್ವಂಗಳಿಗೆ ಶಕವರುಷ ೧೩೦೨ನೆಯ ರಉದ್ರಿ ಸಂವತ್ಸರದ ಶ್ರಾವಣ ಶು ೫ ಆದಿವಾರದಲು ಆ ಹೊಮ್ಮದ

22 ನಯಿರುತ್ಯ ದಿಗ್ವಿಭಾಗದ ಹಿಟ್ಟನ ಕೊಡಿಗೆಯಲ್ಲಿ ಗ . . . . ನೂ ಚತುರಶ್ರದೊಳ್ ತ್ರಿಶೂಲಾಂಕಿತಪಾಷಾಣ ಪ್ರತಿಷ್ಠೆಯಂ

23 ಮಾಡಿ ಆ ದೇವರ ಸ್ಥಾನಿಕ ಭೂತಾಂಡಿಹಾರುವಂ . . . . ಳಿಗೆ ಹಿರಣ್ಯಧಾರಾಪೂರ್ವ್ವಕಂ ಮಾಡಿ ಚಂದ್ರಾರ್ಕ್ಕತಾರಂಬರಂ ಸರ್ವ್ವಮಾನ್ಯ

24 ಮಾಗಿ ಸಲ್ಬುದೆಂದಿತ್ತು ಬರೆಸಿಕೊಟ್ಟ ಶಿಲಾಶಾಸನಂ ॥ ಇದನಾವಂ ನೋಡಿ ಸಂತೋಷದೆ ನಡಿಸಿದ ಭೂಪಾಲ ವಕ್ಷಸ್ಥಳಾವಾ

25 ಸದೊಳಿರ್ಪ್ಪಂ ನಾಂ ಸಮಂತಲ್ಲದೆ ಯಿದಕುಜಿಕಾಯ್ದಿರ್ದ್ದನಾವಾಸದೊಳ್ಮಾಣದೆ ನಿಲ್ವಳ್ಮಾನದೆನ್ನಗ್ರಜೆಯೆನುತೆ ರಮಾದೇವಿ ಕೀರ್ತ್ಯಂ

26 ಗನಾಹಸ್ತದೆ ದಿಕ್ಪಾಲಬ್ರಜಾಧ್ಯಕ್ಷದೊಳನವರತಂ ಡಂಗುರಂ ಪೊಯ್ಯುತಿರ್ಪ್ಪಳು ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇ

27 ತ ವಸುಂಧರಾ ಷಷ್ಟಿರ್ವ್ವರುಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ॥ ಅಕ್ಷರದ ಗೋಪಂಣನ ಬರಹ

ಅನುಬಂಧ-2, ಎ.ಕ. ಸಂ. 3 (1974), ಪು. 483-491.

89 (ಎಂ.ಎ.ಆರ್. 1924-111)

ಸರಗೂರು

ಸಾಳುವ ಇಮ್ಮಡಿ ನಾರಸಿಂಹನ ಚಾಕೇನಹಳ್ಳಿ (ದೇಮಸಮುದ್ರ) ದಾನಶಾಸನ

This Sanskrit record in Nāgari is engraved on seven copper plates, acquired for the office of the Director of Archaeology of the State. It refers to the rule of Sāḷuva Narasimha whose genealogical

account is given and whose achievements are eulogised. It states that Nāga-nāyaka, son of Malla-nāyaka and Tippāmba represented to the king that under his orders and the money provided by him, a tank had been excavated and forty brahmins, well-versed in different branches of learning, had been brought and that an *agrahāra* needs to be settled on them. Thereupon, the king made a grant of the village Chākēnahaḷḷi also called Dēmasamudra situated in Maṇiyūra Honnayanahaḷi-sthaḷa. Bhairavāchārya, son of Tippayāchārya wrote (engraved) this record. The details of the date are Śaka 1414, expressed by the chronogram *bhāgya-bhāgyē,* Paridhāvi, Phālguṇa ba. 7, Sunday, Mūla-nakshatra and they regularly correspond to 10th March, 1493 A.D.

ಒಂದನೆಯ ಹಲಗೆಯ ಹಿಂಭಾಗ

1 ಶುಭಮಸ್ತು । ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರಚಾರವೇ । ತ್ರೈ
2 ಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ॥ ಶ್ರೀ ಗಣಾಧಿ
3 ಪತಯೇ ನಮಃ । ಅವಂತು ಪ್ರಸರಾ ಯುಷ್ಮಾನಿಂದಿರಾಪಾಂಗ ಸಂಪ
4 ದಾಂ ಮನೋರಥಸುಧಾಂಭೋಧಿಮಾಂಸಲೀಕರಣೇಂದವಃ । ವರಾಹಃ
5 ಪಾತು ವೋ ದಂಷ್ಟ್ರಾಂ ವಹನ್ಧೃತವಸುಂಧರಾಂ । ಶಿಖರಾಲೀನ ಜಂ
6 ಬಾಲಸಿಂಧೋರಿವ ಮೃಣಾಳಿಕಾಂ । ಕಟತಟವಿಗಳನ್ ಮದಾಂ
7 ಬುಧಾರಾಕಬಳನಗರ್ವಿತಕಾಮಶಿಂಜಿನೀಕಂ । ಅವಿರ
8 ತಮಿಮಮಾಗಲಂ ಪುಮಾಂಸಂ ಕರಿಣಮತಃ ಪರಮಾಶ್ರಯಂ ಕ
9 ರೋಮಿ । ಅನಭಿಜ್ಞಾತವಿಶ್ಲೇಷಮದೃಷ್ಟಾನ್ಯೋನ್ಯದೃಙ್ಮುಖಂ ।
10 ಸಕಾಮೋಪಜ್ಞಶೃಂಗಾರಮೈಕ್ಯಂ ಸ್ತ್ರೀಪುಂಸಯೋರ್ಭಜೇ । ಮುಕುಟಶ
11 ಶಿನಮ್ಮುಗ್ಧಂ ದೇವಸ್ಯ ವೀಕ್ಷ್ಯ ಮುಹುರ್ಮುದಾ ಕಲಭವದನೇಕ
12 ರಿಷತ್ಯುತ್ಕೈಃ ಕರೇಣ ಬಿಸಭ್ರಮಾತ್ ॥ ಪ್ರತಿಗಜ ಇತಿ ಕ್ರೋ
13 ಧಾತ್ಪಶ್ಯತ್ಯಪಿ ಪ್ರತಿಮಾಂ ತನೌ ಹರಸಹಚರೀಹಾಸ
14 ಜ್ಯೋತ್ಸ್ನಾ ತನೋತು ಶಿವಾನಿ ವಃ ॥ ಅಸ್ತಿ ಲಕ್ಷ್ಮೀಪತೇಶ್ಚಕ್ಷು
15 ರಖಿಲಾನಂದಕಾರಣಂ । ಆಮೋದತೇ ಕುವಲಯಮಾಲೋಕ್ಯೈರ್ಯ
16 ಸ್ಯ ಶೀತಲೈಃ । ಆಯುಷ್ಕರಮಮರ್ತ್ಯಾನಾಂ ಅಬ್ಧೇರ್ಮೇದಸ್ಕರೌಷ
17 ಧಂ । ಚಷಕಮ್ಯಚ್ಚಕೋರೀಣಾಂ ಚಂಡೀಶಮಕುಟೀಮಣಿಃ । ತಸ್ಮಾ
18 ತ್ಸುಮೇಧಾಃ ಸಮಭೂತ್ಬುಧೋ ಬೋಧಾಮೃತಾಂಬುಧಿಃ । ಸಾರ್ಧಂ ಕಾ
19 ವ್ಯೇನ ಗುರುಣಾ ಸತ್ಪಥೇ ಯಃ ಪ್ರಶಸ್ಯತೇ । ಬಭೂವ ತಸ್ಮಾತ್ಪೃ
20 ಥಿವೀಪುರುಹೂತಃ ಪುರೂರವಃ । ಗಂಗೇವ ಶಂತನುಮ್ಪ್ರಾಗಾದ್ಪೂರೀಚ
21 ಕ್ರೇಯಮುರ್ವಶೀ । ತತಃ ಕ್ರಮೇಣ ಕತಿಚಿದ್ಧರಣೀಪತಯೋಭವನ್
22 ಪ್ರತಾಪಕೀರ್ತಿಸೂರ್ಯೇನ್ದು ಪ್ರಕಾಶಿತ ದಿಗನ್ತರಾಃ । ತದ್ವಂಶೇ

ಎರಡನೆಯ ಹಲಗೆಯ ಮುಂಭಾಗ

23 ಸಮಭೂತ್ತುಂಗಮುಕ್ತಾಮಣಿರಿವೋಜ್ವಲಃ । ಗುಣೀ ಸುವೃತ್ತೋ ನಿರ್ದೋ
24 ಷೋ ಗುಂಡದೇವೋ ಮಹೀಪತಿಃ । ಗುಂಡಬೊಮ್ಮೋ ಮಾದಿರಾಜೋ ಗೌತಯೋ
25 ವೀರಹೋಬಲಃ । ತಸ್ಮಾತ್ಸಾಳುವಸಾವಿತ್ರಿಮಂಗಿದೇವೌ ವಿ

26 ಜಜ್ಞಿರೇ । ತೇಷಾಮಭೂತ್ಸಾಳುವಾದಿಮಂಗಿದೇವೋ ಗುಣೋತ್ತರಃ ।
27 ತನ್ವನ್ಸುಮನಸಾಂ ಲಕ್ಷ್ಮೀಮೃತೂನಾಮಿವ ಮಾಧವಃ । ಸಾಂ
28 ಯುಗೀನೇನ ಕೇನಾಪಿ ಸಮಿತ್ಕಂಡೂಲಬಾಹುನಾ । ಸತ್ರಾಸ
29 ಶಸ್ತ್ರಾಸ್ತ್ರಿ ಕೃತ್ವಾ ಯೋಗ್ರಹೀತ್ತತ್ಕಠಾರಿಕಾಂ । ಕಠಾರಿ ಸಾಳುವ
30 ಇತಿ ಖ್ಯಾತಿರ್ಯಸ್ಯಾಥ ಪಪ್ರಥೇ । ಮಹೇಶ್ವರ ಇತಿ ಖ್ಯಾತಿರ್ಯ
31 ಥಾ ಮನ್ಮಥಮಾಥಿನಃ । ಪ್ರತಿಜ್ಞಾಯ ಪುರೋ ರಾಜ್ಞಾಮ್ಮಾಕಾರಂ
32 ಸಗರಾಹ್ವಯಂ । ಭಿತ್ವಾಪ್ರತ್ಯಗ್ರಹೀತ್ತತ್ರ ಕ್ಷಿಪ್ತಾಮ್ಯಃ ಕಹಲೀಂ
33 ನಿಜಾಂ । ಸಮುದ್ಧೃತಸುರತ್ರಾಣಶಲ್ಯೇ ಯತ್ರಾವನೀಶ್ವರೇ । ಯದ್ಯ
34 ಶಃಪೂರಕರ್ಪೂರೈರಾಶ್ವಾಸೀದ್ದಕ್ಷಿಣಾಂ ದಿಶಾಂ । ಖಿಲೀಕೃತ
35 ತುರುಷ್ಕೈಃ ಪ್ರಾಕ್ಶ್ರೀರಂಗಮ್ಪುನರುದ್ಧರನ್ । ಶ್ರೀರಂಗಸ್ಥಾಪನಾ
36 ಚಾರ್ಯ ಇತ್ತಿ ಯಃ ಕೀರ್ತಿತೋ ಜನೈಃ । ಶ್ರೀರಂಗಸ್ಥಾನಮಕರೋ
37 ಶ್ರೀರಂಗಸ್ಥಾಪನೋಭವತ್ । ಸಾಲಗ್ರಾಮ ಸಹಸ್ರಸ್ಯ (ದಾ)
38 ದಾತಾ ಯೋ ವಿದುಷಾಂ ದ್ವಿಷಾಂ । ಸುಪರ್ವರಾಮರಾವೋಚ್ಚೈಸ್ತನ
39 ಗ್ರಾಮೋಷ್ಟಮೋಭವತ್ । ತಂ ದಕ್ಷಿಣಸುರತ್ರಾಣಂ ನಿಹತ್ಯ ಸ
40 ಮರಾಂಕಣೇ । ಯಃ ಪ್ರತಿಜ್ಞಮವಿತಥಾಂ ಚಕಾರ ನಿಜವಿ
41 ಕ್ರಮೈಃ । ಕೀರ್ತ್ತಿಗಃ ಕ್ಷೀರೋದ ಪೂರ್ಣೇಂದೋಃ ಗೌತಯೋಸ್ಯಾನ್ಮಹೀ
42 ಪತೇಃ । ಅಭೂದಭೂತಪೂರ್ವಶ್ರೀರ್ಜಯಂತ್ಯೈವ ವಾಸವಾತ್ ।
43 ಯಸ್ಯ ದಿಗ್ವಿತ್ರಯಾತ್ರಾಸು ತನೋತಿ ಸ್ಮ ಚಮೂ(ರಜಃ) । ಪರಿಪಂಥಿ
44 ವಧೂವಕ್ತ್ರೇಪದ್ಮಪ್ರಾಲೇಯ ವರ್ಷತಾಂ । ಗುಣಾನಾಮತ್ಸರಿಗು
45 ಣಾತ್ಸಂತಯಾಮ್ನೃಪತೇಸ್ತತಃ । ಕೀರ್ತಿಮಾನ್ಸುಂಡಯೋ ಜಜ್ಞೇ
46 ಕ್ಷೀರಾಬ್ಧೇರಿವ ಚಂದ್ರಮಾಃ । ಯಸ್ಮಿನ್ನಗತಿರಾಜೇಂದೌ ತ

ಎರಡನೆಯ ಹಲಗೆಯ ಹಿಂಭಾಗ

47 ಗತೇ ನೀತಿಕೌಮುದೀಂ । ಕಲಿಶಾರ್ವರಗಂಧೋಪಿ ನ ಕೇನಾ
48 ಪ್ಯನ್ವಭೂಯತ । ತತಃ ಕಾಲತ್ರಹೋಸ್ತಪ್ತ್ವಾ ತಪಾಂಸಿ ಸ ಮ
49 ಹೀಪತಿಃ । ನರಸಿಂಹಮಹಾರಾಯಂ ಲೇ ಭೇ ನರಹರೇರ್ವರಂ ಚಾ
50 ಪಕೋಟಿಸಮುತ್ಪಾತಸಕಲಾರಾತಿಭೂಭೃತಾ । ನೀತಾ
51 ದಶಾಂ ಅವಿಷಮಾಮ್ಪೃಥುನಾ ಯೇನ ಮೇದ್ನೀ । ಸಂಹರ್ತುಮಿಹ ನಿ
52 ಶ್ಯೇಷಂ ಕಂಟಕಾನ್ಸ ಹರಿಸ್ಸ್ವಯಂ । ಯಾಜ್ಞನ್ಮಚ್ಛದ್ಮನಾ ಸಾಕ್ಷಾ
53 ದಿಯೇಷ್ವೆಕಾದಶಂ ಜನುಃ । ಮಹೋಬಲ ಶ್ರೀನೃಸಿಂಹಾದಾವಿರ್ಭೂ
54 ತಾತ್ತಪೋಬಲಾತ್ । ನರಸಿಂಹಮಹಾರಾಯಂ ಪುತ್ರಂ ಲೇಭೇ ಸ ಭೂ
55 ಪತಿಃ । ಅವನೀಸುಭತಾ ಸ್ತ್ರೀತ್ವಮ್ಮಾನಯನ್ನಿಜಪೌರುಷೈಃ ।
56 ಪ್ರಘೋಷಿತೋ ಮೆದಿನೀಮೀಸರಗಂಡ ಪದೇನ ಯಃ । ಪರಭೂ
57 ಯಾನ್ಯತೇಜಾಂಸಿ ಪ್ರಕೃಷ್ಟೇನ ಸ್ವತೇಜಸಾ । ಉನ್ನರಾದಿತ್ಯವಿಖ್ಯಾ

58 ತಿಮುಚಿತಾಮ್ಯಃ ಪ್ರಪೇದಿವಾನ್ । ನಿಹತ್ಯ ಪತ್ರಿಣಾಮ್ಮೇಗಮ

59 ನ್ನೇಷ್ವಾಮ್ನಿಜವಿಕ್ರಮ್ಯೈಃ । ಊರೀಚಕಾರ ಯೋ ರಾಯ ಪಖಿಸಾ

60 ಳುವ ಘೋಷಣಾಂ । ಕಂಟಕಪ್ರಲಯಾಂಭೋಧೇಃ ಕ್ಷಮಾಮುದ್ಧೃತ್ಯ ಪಾ

61 ಲಯ ನ್ಧರಾವರಾಹ ಬಿರುದಂ ದಧೌ ಯಃ ಸಾಂಪ್ರತಂ ಗುಣ್ಯೈಃ ।

62 ನರಸಿಂಹಮಹಾರಾಯಃ ಸೈಂಧವೇಭನರೇಶ್ವರಾನ್ಜಿತ್ವಾ

63 ನಾಮಾರ್ಹಮರ್ಚ್ಛದ್ಯೋ ಮೂವರಾಯರ ಗಂಡತಾಂ । ಪುಣ್ಯಕ್ಷೇತ್ರೇ ಹೇ

64 ಮಕೂಟಕಾಂಚೀಶ್ರೀಶೈಲಪೂರ್ವಕೇ । ಹೇಮಾದ್ರ್ಯುಕ್ತಾನಿ ದಾನಾನಿ

65 ವ್ರತಾನ್ ಚ ಚಕಾರ ಯಃ । ಕಷ್ಣಾಗೋದಾವರೀತೀರಾತ್ತೃಷ್ಣಾ

66 ಯಾತಾನ್ಮಹೀಸುರಾನ್ । ಅರ್ಧರಾಜ್ಯೇನ ಸಂಭಾವ್ಯ ಸರ್ವಂ ರಾಜ್ಯಂ

67 ಶಶಾಸ ಯಃ । ವಿದ್ಯಾನಗರ್ಯಾಮಾರೂಢೇ ಯಸ್ಮಿನ್ ಭದ್ರಾಸ

68 ನೋತ್ತಮ ಮಾಸನ್ । ಭದ್ರಾಸನಾರೂಢಾ ಅರ್ಥಿಪ್ರತ್ಯರ್ಥಿನೋಪ್ಯಾ

ಮೂರನೆಯ ಹಲಗೆಯ ಮುಂಭಾಗ

69 ಹೋ ಯಸ್ಯ ಪ್ರತಾಪತಪನೇ ತಪತ್ಯವಿರತೋದ್ಯಮೇ । ಪುರಾ

70 ಪ್ರತ್ಯರ್ಥಿಭೂಪಾನಾಮ್ಪುಟಪಾಕಮಿವಾನ್ವಭೂತ್ । ಯತ್ಸೈನ್ಯೇ ಮ

71 ತ್ತದಂತೀಂದ್ರಕ್ಷರನ್ಮದಜಲೋಷ್ಮಣಾ ಉದನ್ಯವಾನಿವೋ

72 ದನ್ವಾನ್ನದ್ಯಾಪ್ಯಾಸ್ತೇ ಪಿಬನ್ನದೀಃ ಪರಂತ್ತಪಸ್ಯ ಯಸ್ಯೋಚ್ಚೈಃ

73 ಪ್ರತಾಪತಪನೋದಯೇ ಅಪಕ್ರಮೇ ರಿಪುಸ್ತ್ರೀಣಾಂ ಅಂಘ್ರಿಪದ್ಮಾ

74 ನಿ ಪುಸ್ಫುಟುಃ ಜಯಾತ್ತರೂಣಾಂ ಪಂಚಾನಾಂ ಕೀರ್ತಿತಃ ಪಂಚಘಂಟಯಾ

75 ಪ್ರಾಯಃ ಪ್ರಪೇದೇ ಯಸ್ಯಾಗಾತ್ಪಂಚಘಟಾನಿನಾದತಾಂ ಚೌ

76 ಹತ್ತಮಲ್ಲಸ್ಮಾಣಿಕ್ಯನಾರಾಯಣ್ಯೈತಿ ಶ್ರುತಃ ಯೋ ಮೋಹ

77 ನಮಧಾರಿ ಕ್ಷ್ಮಾವರಾಹಶ್ಚೈತ್ಯಸೌ ಹರಿಃ । ಮಹಿಷೀ ತಸ್ಯ ಸಂ

78 ಜಜ್ಞೇ ಮಹಿತಾ ರಂಗಮಾಂಬಿಕಾ । ಶತಕ್ರತೋರಿವ ಶಚೀ ಛಾಯೇ

79 ವ ದಿವಸಪ್ರಭೋಃ । ಪಾತಿವ್ರತ್ಯಸ್ಯ ಜೀವಾತುಃ ಪತ್ಯುರಿಂಗಿತ

80 ದೈವತಂ । ಆಕರೋ ಗುಣರತ್ನಾನಾಮಾರಾಧಯತ ಸಾ ಪತಿಂ । ತ

81 ಸ್ಯಾಮಜನಯತ್ಪುತ್ರಂ ಪಾಂಡುಃ ಕುಂತ್ಯಾಮಿವಾರ್ಜುನಂ । ಕೌಸಲ್ಯಾ

82 ಯಾಂ ದಶರಥಃ ಕಾಕುಸ್ಥಮಿವ ಪಾರ್ಥಿವಃ । ಪ್ರಸೂನಾದಿವ ಸೌ

83 ರಭ್ಯಂ ಭಾಗಧೇ ಯಾದಿವೇಪ್ಸಿತಂ ಪ್ರತಾಪಾದಿವ ಸಾಮ್ರಾಜ್ಯಂ ಪ್ರ

84 ಣಯಾದಿವ ಸೌಹೃದಂ । ಸಾಹಿತ್ಯಾದಿವ ಸಾರಸ್ಯಂ ಸಂತಾನಾದಿವ

85 ಪಲ್ಲವಂ । ಚಂದ್ರಾದಿವ ಸುಧಾಸಾರಃ ಸಾಗರಾದಿವ ಚಂದ್ರಮಾಃ । ವಿ

86 ಶ್ರಾಣನಾದಿವ ಯಶೋ ವಿಶ್ವಾಸಾದಿವ ದೈವತಂ । ಕಾಸಾರಾದಿವ

87 ಕಲ್ಹಾರಂ ಕಾರುಣ್ಯಾದಿವ ಪಾಲನಂ ನರಸಿಂಹ ಮಹಾರಾಜಾಜ್ಜಾ

88 ತೋ ನಾಥಃ ಕ್ಷಮಾಭುಜಾಂ । ಯಿಮ್ಮಡಿ ಶ್ರೀ ನೃಸಿಂಹಾಖ್ಯೋ ರಾಯಃ ಶಾ

89 ಸ್ತಿ ವಸುಂಧರಾಂ । ಯದಂಘ್ರಿಭೂಷಾಧೋವಕ್ತ್ರಲಂಬಸ್ವಪ್ರತಿಮಾ

ಮೂರನೆಯ ಹಲಗೆಯ ಹಿಂಭಾಗ

90 ಭಲಾತ್ । ಭೂಪಾಸ್ಸರ್ವೇ ತಪಸ್ಯಂತಿ ಭೂಯೋ ಲಬ್ಧುಂ ನಿಜಂ ಪದಂ ॥
91 ಗುಣೈರತೀಶಯಾನಸ್ಸ್ವೈ ಧೈರ್ಯಶೌರ್ಯಾದಿಭಿರ್ಗುರುಂ । ಯಿಮ್ಮಡಿ ಶ್ರೀ
92 ನೃಸಿಂಹಾಖ್ಯಾಂ ಅನ್ವರ್ಥಾಂ ಯಃ ಸಮಶ್ನುತೇ । ಕಲ್ಪಶಾಖೀವ
93 ಯೋ ಮೇರುಂ ಕರ್ತಾ ಭಾಸಾನಿವೋದಯಂ । ಸಿಂಹಾಸನಂ ತದಧ್ಯಾಸ್ತೇ
94 ಸೇವಿತಂ ಸುಮನೋಗಣೈಃ । ಪರಿಪಾಲಯತೋ ಯಸ್ಯ ಪಾಥೋಧಿ
95 ರಶನಾಮ್ಮಹೀಂ । ವರಾಹಮೂರ್ತಿಃ ಪ್ರೀತ್ಯೇವ ವರ್ತತೇದ್ಯಾಪಿ ಕೇ
96 ತನೇ ॥ ಗದಾಕೃಪಾಣಕೋದಂಡಧುರ್ಯೇ ತನೇ ॥ ಗದಾಕೃಪಾಣಕೋ
97 ದಂಡಧುರ್ಯೇ ಜ್ಯಾಯಸಿ ಸಾದಿನಾಂ । ಧರ್ಮೋತ್ತರೇ ಚ ಯತ್ರೈಕ್ಯಂ ದ
98 ಧತೇ ಪಾಂಡವಾ ಧ್ರುವಂ ॥ ಅಕೃಷ್ಣಮಪಿ ಯಚ್ಛೀಲಮಶ್ನುತೇ ಬಲ
99 ಸೌಹೃದಂ ॥ ಅವಾಮನಮಪಿ ಸ್ವೈರಂ ಆಕ್ರಾಮತಿ ಬಲೀಶ್ರಿಯಂ ।
100 ದೈನಂದಿನಂ ಯಸ್ಯ ಕೃತ್ಯಂ ಮಹಾದಾನಾನಿ ಷೋಡಶ । ವಸಂತ್ರ ಕ
101 ನಕತ್ಯಾಗೋ ಬಾಲ್ಯಾರ್ಕ ಪಾಂಸುಕೇಲನಂ । ಕ
102 ಲ್ಲೋಲಿನೀ ಪತಿರ್ಯಸ್ಯ ಗಾಮ್ಭೀರ್ಯೇಣ ಜಿತಸ್ಸದಾ ॥ ತಥಾ ಚಿಂ
103 ತಾಜ್ವರೇಣೇವ ತಪ್ಯತೇ ಬಡಬಾಗ್ನಿನಾ । ಜಿಷ್ಣುಃ ಶುಚಿರ್ದಣ್ಡಧ
104 ರಃ ತಥಾ ಪುಣ್ಯಾಜನಸ್ಸ್ವಯಮ್ । ಭುವನೇಶೋ ಜಗತ್ಪ್ರಾಣೋ ಧನ
105 ದಃ ಶಂಕರೋಪಿ ಯಃ । ನಾವಕಾಶಃ ಖಿಲೋಕ್ತಿರ್ನಾಮ್ಯತ್ಯರ್ಣೇ ಸತ್
106 ಕಥಾಭೃತೇ ॥ ದುಶ್ಚಿನ್ತಾನಾಮ್ ತು ಯಚ್ಚಿತ್ತೇ ಧರ್ಮಚಿನ್ತಾನಿರನ್ತ
107 ರೇ । ನೈಸರ್ಗಿಕೋ ಗುಣೋ ಯಸ್ಯ ದೇವಬ್ರಾಹ್ಮಣ ಪಾಲನಂ । ಸಾಂಪಿ
108 ದ್ಧಿಕಂ ದ್ರವತ್ವಂ ತದಪಾಮಿವ ವಿಭಾವ್ಯತೇ । ವಿಜೇತುಮಿಚ್ಛನ್ನೈ
109 ವಾಪಯಾತಾನ್ನಿರೋಧಿನೋ ಯಜ್ಜಯತೂರ್ಯನಾದಾಃ । ಪ್ರತ್ಯಾಶ
110 ಮುರ್ವೀಂ ಪ್ರವಿಶನ್ತ್ಯಶೇಷಾನ್ ಪದೇ ಪದೇ ಭೂಮಿಭೃತೋ ವನಾನಿ ॥

ನಾಲ್ಕನೆಯ ಹಲಗೆಯ ಮುಂಭಾಗ

111 ಜಗತ್ತ್ರಯೀವೇಶ್ಮನಿ ಯತ್ಪ್ರತಾಪಃ ಪ್ರದೀಪ್ಯತೇ ಚಿ
112 ತ್ರಗತಿಃ ಪ್ರದೀಪಃ । ಸೃಜನ್ ದ್ವಿಷಾಂವ ಮರುತ್ಪ್ರಕಂಪಮ್ರುಜಾಂ
113 ಸದಾ ದಾರಗೃಹ್ಣಾನಾನಿ । ಯದ್ದಾನಾಂಬುಪ್ರಹರ್ಷಃ ಸಕಲಜಲ
114 ನಿಧೇರ್ಜೌರ್ವಗರ್ವಾಪಹರ್ತಾ ಯಸ್ಯ ಬ್ರಹ್ಮಾಣ್ಡಭಾಣ್ಡಾದುಪರಿ ಪ
115 ರಿವಹತ್ಯೇಷ ಕೀರ್ತಿಪ್ರವಾಹಃ । ಸರ್ವಾಶಾವರ್ತಿಭೂಭೃತ್ಕ
116 ಟಕಪರಿಸರಾದುಜ್ಜಿಹೀತೇ ಯದೀಯೋ ಭಾಸ್ವಾನ್ ಭಾಸ್ವಾನ್ ಪ್ರ
117 ತಾಪಃ ಸ ಜಯತಿ ಗುಣಾವಾನಿಮ್ಮಡಿ ಶ್ರೀ ನೃಸಿಂಹಃ । ತಸ್ಮಿ
118 ನ್ ಸಿಂಹಾಸನಾರೂಢೇ ಸಮಸ್ತನೃಪಸೇವಿತೇ । ಪ್ರಾಪ್ತಃ ಕದಾಚಿ
119 ದಾಸ್ಥಾನೀಮ್ಮಲ್ಲನಾಯಕ ನಂದನಃ ॥ ತಿಪ್ಪಾಂಬಿಕಾದುಗ್ಧಸಿಂ
120 ಧುಲಹರೀಪೂರ್ಣಚಂದ್ರಮಾಃ । ನಾಮ್ನಾ ಚ ಭೂಮಿಭರಣಾದ್ವಿಖ್ಯಾತೋ

121 ನಾಗನಾಯಕಃ । ಸಂಗೀತವಿದ್ಯಾಸರ್ವಸ್ವಂ ಸಾಹಿತ್ಯರಸಜೀ
122 ವಿತಂ । ಸಾಮಗ್ರೀ ಸಚ್ಚರಿತ್ರಾಣಾಮ್ಸಾಕ್ಷಾತ್ಕಾರೋ ರಮಾಪತೇಃ ॥
123 ಭಾಗ್ಯಮ್ಪರೋಪಕಾರಸ್ಯ ಗುಣಾನಾಂ ಕುಲದೈವತಂ । ರಾಜ್ಯಂ ರಕ್ಷಾ
124 ಧಿಕಾರಸ್ಯ ಸಾಮ್ರಾಜ್ಯಂ ಪುಣ್ಯಸಂಪದಾಂ । ವಿಶ್ವಾಸಸ್ಯ ಪರಾ ಕೋ
125 ಟಿರ್ವಿನಯಸ್ಯ ಪ್ರಸೂತಿಭೂಃ ॥ ಸ್ವಾಮಿಭಕ್ತೇಃ ಪರಿಣಾಮಸ್ಸುಕೃ
126 ತಸ್ಯ ತಪಃ ಫಲಂ । ದಿನೇ ದಿನೇ ಕೃತಮನಾ ದೇವಬ್ರಾಹ್ಮಣಪಾ
127 ಲನೇ ॥ ಜೀರ್ಣಪೂರ್ವತಟಾಕಾನಾಂ ಪುನರುದ್ಧಾರಧೂರ್ವಹಃ ಪರಾಕ್ರ
128 ಮೇಣ ಪಾಣ್ಡ್ಯಾಸ್ಯೋ ಭೋಗಲಕ್ಷ್ಮ್ಯಾ ಪುರಂದರಃ । ಕ್ಷಮಯಾ ಪ್ರಿಥಿವೀ
129 ಸಾಕ್ಷಾದ್ವಿಜಯೇನ ಧನಞ್ಜಯಃ ತತ್ಪಾದಪೀಠಪರ್ಯಂತೇ ಪ್ರಣಿಪ
130 ತ್ಯ ವ್ಯಜಿಜ್ಞಿಪತ್ । ಸ್ವಾಮಿದತ್ತೇನ ವಿತ್ತೇನ ತಟಾಕಸ್ಸ್ಥಾಪಿ
131 ತೋ ಮಹಾನ್ ॥ ಮೀಮಾಂಸಾನ್ಯಾಯಶಾಸ್ತ್ರಜ್ಞೋ ಋಗ್ಯಜುಸ್ಸಾಮ

ನಾಲ್ಕನೆಯ ಹಲಗೆಯ ಹಿಂಭಾಗ

132 ವೇದಿನಃ । ಪೌರಾಣಿಕಾಸ್ಸ್ಮೃತಿವಿದಃ ತಾತ್ರಿಕಾ ಮನ್ತ್ರವೇದಿ
133 ನಃ । ಶ್ರೌತಸ್ಮಾರ್ತವಿದಃ ಶುದ್ಧಾ ಯಜ್ವಾನೋ ಬ್ರಾಹ್ಮಣೋತ್ತಮಾಃ ಚ
134 ತ್ವಾರಿಂಶತ್ಸಮಾನೀತಾಃ ಸ್ವಾಮಿವಾಕ್ಯಾನುಸಾರತಃ । ಆಚಂದ್ರ
135 ತಾರಕಮಮೀ ತಾಮ್ರಶಾಸನಪೂರ್ವಕಂ ಅಗ್ರಹಾರಪ್ರದಾನೇನ
136 ಸಂರಕ್ಷ್ಯಾ ಸ್ವಾಮಿನೇತ್ಯಸೌ ॥ ತಥೇತಿ ತಸ್ಯ ವಿಜ್ಞಪ್ತಿಂ ಪಾಲಯಂ
137 ತಿಪತಿಸ್ತದಾ ॥ ಭಾಗ್ಯಭಾಗ್ಯೇಶಕಸ್ಯಾಬ್ದೇ ಪರೀಧಾವಿನಿ
138 ವತ್ಸರೇ ॥ ಫಾಲ್ಗುನೇ ಬಹುಳೇ ಪಕ್ಷೇ ಜನ್ಮರ್ಕ್ಷೇ ಮೂಲಸಂಜ್ಞಕೇ ವ್ಯ
139 ತೀಪಾತೇ ಪುಣ್ಯಕಾಲೇ ಸಪ್ತಮ್ಯಾಂ ಭಾನುವಾಸರೇ ॥ ವಿದ್ಯಾನ
140 ಗರ್ಯಾಂ ಹಿರಿಯಚಾವಡ್ಯಾಮ್ಮಕರಾಹ್ವಯೇ ವೇಠಯೇ ಚ ತಥಾ ಚೋಳ
141 ಸಮುದ್ರಾಖ್ಯೇ ಚ ಹೋಬಲೇ ॥ ಮಣಿಯೂರ ಹೊನ್ನಯನಹಳ್ಳಿಸ್ಥಳ ಸಂ
142 ಬಂಧಿನಿ ಸ್ಥಳೇ ॥ ಚಾಕೇನಹಳ್ಳಿಕಾಂ ದೇಮಸಮುದ್ರ ಪ್ರತಿನಾಮಿ
143 ಕಾಮ್ । ನಿಧಿನಿಕ್ಷೇಪಸಲಿಲಂ ಪಾಷಾಣಾಕ್ಷೀಣಿಸಿದ್ಧಿಕಂ । ಸಾ
144 ಧ್ಯಮಾಗಾಮ್ಯಷ್ಟಭೋಗಾನ್ ಚತುಸ್ಸೀಮಾಸಮನ್ವಿತಂ । ಆಜ್ಞಾ
145 ಶುಲ್ಕಂ ಚ ದಂಡಂ ಚ ಮೃದಾಹರಣಮೇವ ಚ । ಸೀಮಾನಿರ್ಣಯಕರ್ತೃತ್ವ
146 ಪ್ರಜಾಭ್ಯೋಭಯರಕ್ಷಣಂ । ಯಥೇಷ್ಟಂ ಚ ಕರಾದಾನಂ ಕರುಸ್ಥಾಪನ
147 ಮೇವ ಚ ॥ ಖಿಲೀಬೂತಂ ಚ ಯತ್ ಕ್ಷೇತ್ರಂ ಮೃಗಾವಾಸಸ್ತಥೈವ ಚ । ನ
148 ದೀಪರ್ವತಇತ್ಯಾಖ್ಯಗ್ರಾಮಭೋಗೇನ ಸಂಯುತಂ ಸಹಿರಣ್ಯೋದ
149 ಕದಾನಧಾರಾಪೂರ್ವಂ ಯಥಾವಿಧಿ । ಗ್ರಾಮಂ ಪ್ರಾದಾದ್ಬ್ರಾಹ್ಮಣೇಭ್ಯ
150 ಸಕಲೋಪಾಧಿವರ್ಜಿತಂ । ವತ್ತಿಮನ್ತೋ ವಿಲಿಖ್ಯನ್ತೇ ಗೋತ್ರಸೂತ್ರಾ
151 ದಿಲಕ್ಷಿತಾಃ । ವಿಷ್ಣುಸ್ಥಾನೇ ಶಿವಸ್ಥಾನೇ ಏಕೈಕಾ ವೃತ್ತಿರಿಷ್ಯತೇ ।
152 ದೇದಿಪುತ್ರೋ ಯಜುರ್ವೇದೀ ಭಾರದ್ವಾಜಸ್ಯ ಗೋತ್ರಜಃ । ಶ್ರೀಮಾನ್ವಿಠ

ಐದನೆಯ ಹಲಗೆಯ ಮುಂಭಾಗ

153 ಲದೇವೋಽಯಂ ವೃತ್ತಿದ್ವಯಮಿಹಾಶ್ನುತೇ ॥ ಆಪಸ್ತಂಭೋ ಭರದ್ವಾಜಗೋತ್ರ
154 ಜೋ ಮಞ್ಚಿಭಟ್ಟಜಃ । ನೃಸಿಮ್ಹದೀಕ್ಷಿತೋ ವಿದ್ವಾನ್ ವೃತ್ತಿಮೇಕಾಂ
155 ಸಮಶ್ನುತೇ । ದ್ರಾಹ್ಯಾಯಣಃ ಸಾಮವೇದೀ ಕಾಶ್ಯಪೋ ಹರಿದೀಕ್ಷಿ
156 ತಃ । ಪುತ್ರೋ ಲಕ್ಕಪ್ಪಾಹಿತಾಗ್ನೇಃ ಗ್ರಾಮೇಸ್ಮಿನೇಕವೃತ್ತಿಮಾನ್ ।
157 ಭರದ್ವಾಜೋ ಯಜುರ್ವೇದೀ ದೇವೋತ್ತಮಗುರೋಃ ಸುತಃ । ಶ್ರೀಚೆನ್ನಕೇ
158 ಶವಾರಾಧ್ಯೋ ವೃತ್ತಿಮೇಕಾಂ ಸಮಶ್ನುತೇ । ಕಾಶ್ಯಪಃ ಸಾಮಗೋ ದ್ರಾ
159 ಹ್ಯಾಯಣೋ ಲಖಣದೀಕ್ಷಿತಃ । ಪುತ್ರೋ ಲಖಪ್ಪಾಹಿತಾಗ್ನೇಃ ಗ್ರಾ
160 ಮೇಸ್ಮಿನೇಕವೃತ್ತಿಮಾನ್ ಭಾರದ್ವಾಜೋ ಬಹ್ವೃಚಶ್ಚ ವಿದ್ವಾನ್ ದೇ
161 ವಪದೀಕ್ಷಿತಃ । ಅಪ್ಪಣ್ಣಯಜ್ವನಃ ಪುತ್ರೋ ವೃತ್ತಿಮೇಕಾಮಿಹಾ
162 ಶ್ನುತೇ । ಅನನ್ತಯಜ್ವನಃ ಪುತ್ರೋ ರಾಮಚಂದ್ರಾಖ್ಯಯಾಜಕಃ ।
163 ಬೋಧಾಯನೋ ಯಜುರ್ವೇದೀ ವಾಸಿಷ್ಠೋಽಪ್ಯೇಕವೃತ್ತಿಭಾಕ್ । ಕಾ
164 ಸ್ಯಪಃ ಸಾಮವೇದೀ ಚ ಚನ್ನಭಟ್ಟತನೂದ್ಭವಃ । ಆಹಿತಾಗ್ನಿಃ ಸಾ
165 ಯಣಾಖ್ಯೋ ವೃತ್ತಿಮೇಕಾಮೀಹಾಶ್ನುತೇ । ಬಹ್ವೃಚಃ ಕೌಶಿಕೋ ವಿದ್ವಾ
166 ನ್ ಚೆನ್ನಕೃಷ್ಣತನೂದ್ಭವಃ । ಕೃಷ್ಣಾರಾಧ್ಯ ಇತಿ ಖ್ಯಾತೋ ವೃತ್ತಿಮೇ
167 ಕಾಮಿಹಾಶ್ನುತೇ । ಸೂತ್ರಾದ್ಗೋತ್ರಾದ್ಭರದ್ವಾಜೋ ವೈನತೇಯಾರ್ಯಸಂಭವಃ ।
168 ಜನಾರ್ದನೊ ಬಿಭರ್ತ್ಯೇಕಾಂ ವೃತ್ತಿಂ ವಿದ್ವಾನ್ಯಜುಶ್ರುತಿಃ । ಗೋಪ
169 ಣಾರ್ಯಸುತೋ ಗಂಗಾಧರೋ ಋಗ್ವೇದವಿದ್ವರಃ । ವಿದ್ವಾನ್ ಕಾಶ್ಯಪ
170 ಗೋತ್ರಶ್ಚ ಗ್ರಾಮೇಸ್ಮಿನೇಕವೃತ್ತಿಮಾನ್ । ಋಗಧ್ಯೇತಾ ಚ ವಾಸಿ
171 ಷ್ಠೋ ವಿಷ್ಣುಭಟ್ಟತನೂದ್ಭವಃ । ದ್ವಿಜೋ ನೃಹರಿಭಟ್ಟಾಖ್ಯೋ ಗ್ರಾಮೇ
172 ಸ್ಮಿನೇಕವೃತ್ತಿಮಾನ್ । ವಿಶ್ವಾಮಿತ್ರೋ ನಾಗಣಾರ್ಯಸುತೋ ಋಗ್ವೇದ
173 ವಿದ್ವರಃ । ಬ್ರಹ್ಮಣ್ಯಭಟ್ಟಶರ್ಮಾಸೌ ಗ್ರಾಮೇಸ್ಮಿನೇಕವೃತ್ತಿ ಭಾಕ್ ।
174 ಲಕ್ಕಪ್ಪಾರ್ಯಸುತಃ ಶ್ರೀಮಾನ್ ಬಹ್ವೃಚೋ ಮೌನಭಾರ್ಗವಃ । ನಞ್ಜನಾ
175 ಥಬುಧಃ ಖ್ಯಾತೋ ವೃತ್ತಿಮೇಕಾಮ್ ಸಮಶ್ನುತೇ । ಜಾಮದಗ್ನ್ಯಾಖ್ಯವ
176 ತ್ಸೋಽಸೌ ತಿಮ್ಮಣಾರ್ಯತನೂದ್ಭವಃ । ತಿಮ್ಮಣಾರ್ಯೋ ಯಜುರ್ವೇದೀ ವೃತ್ತಿ

ಐದನೆಯ ಹಲಗೆಯ ಹಿಂಭಾಗ

177 ಮೇಕಾಮ್ ಸಮಶ್ನುತೇ । ಹಾರೀತೋ ಯಜುಷೋಧ್ಯೇತಾ ಶ್ರೀನಿವಾ
178 ಸಬುಧಾತ್ಮಜಃ । ಚೆರ್ಚಾವಲ್ಲಭನಾಮಾಸೌ ಸಾರ್ಧೈಕಾಂ ವೃತ್ತಿಮ
179 ಶ್ನುತೇ । ಕೌಣ್ಡಿನ್ಯೋ ಯಾಜುಷೋಧ್ಯೇತಾ ನೃಸಿಂಹಯಜ್ವನಃ ಸುತಃ
180 ಯಜ್ಞೇಶ್ವರಾಖ್ಯಭಟ್ಟೋಽಸೌ ವೃತ್ತಿಮೇಕಾಮಿಹಾಪ್ತವಾನ್ । ದ್ವೇದಿ
181 ಪುತ್ರೋ ಯಜುರ್ವೇದೀ ಪಞ್ಚಸಿದ್ಧಾನ್ತಪಾರಗಃ । ಭಾರದ್ವಾಜೋ
182 ವಿಶ್ವನಾಥೋ ವೃತ್ತಿಮೇಕಾಮಿಹಾಪ್ತವಾನ್ । ವಾಸಿಷ್ಠೋ ಬಹ್ವೃ
183 ಚೋ ವಿದ್ವಾನ್ನುಗ್ಗಾಭಟ್ಟತನೂದ್ಭವಃ । ಸಿದ್ಧಾನ್ತೀ ನಾಗಭಟ್ಟಾಖ್ಯೋ

184 ವೃತ್ತಿಮೇಕಾಮಿಹಾಶ್ನುತೇ । ಭಾರದ್ವಾಜೋ ಭೈರವಾಖ್ಯಃ ಶ್ರೀಧ
185 ರಾರ್ಯತನೂದ್ಭವಃ । ಆಪಸ್ತಮ್ಬೋ ಯಜುರ್ವೇದೀ ವೃತ್ತಿಮೇಕಾಮಿ
186 ಹಾಪ್ತವಾನ್ । ಮಾಧವಾರ್ಯಸುತೋ ಗೋಪಿನಾಥೋ ಗೌತಮಗೋ
187 ತ್ರಜಃ । ಬೋಧಾಯನೋ ಯಜುರ್ವೇದೀ ಗ್ರಾಮೇಸ್ಮಿನ್ನೇಕವೃತ್ತಿಮಾನ್ ।
188 ಸಾಮಗೋ ಲಖಣಾಚಾರ್ಯೋ ವಿಶ್ವೇಶ್ವರಗುರೋಃ ಸುತಃ । ಉಪೇಂದ್ರಪು
189 ರವಾಸ್ಯೈಕಾಮಾತ್ರೇಯೋ ವೃತ್ತಿಮಶ್ನುತೇ । ಆಶ್ವಲಾಯನಸೂ
190 ತ್ರಶ್ಚ ಋಗ್ವೇದೀ ದಾವಣಾತ್ಮಜಃ । ಕೌಶಿಕಃ ಸಂಗಣೋ ವಿದ್ವಾನ್ ಗ್ರಾ
191 ಮೇಸ್ಮಿನ್ ಅರ್ಧವೃತ್ತಿಮಾನ್ । ಆತ್ರೇಯೋ ನಞ್ಜಿನಾಥಸ್ಯ ಪುತ್ರಃ ಶು
192 ಕ್ಲಯಜುಶ್ರುತಿಃ । ಲಿಂಗಣ್ಣಭಟ್ಟರಾಮೋಸಾವರ್ಧವೃತ್ತಿಮಿಹಾಶ್ನು
193 ತೇ । ಭಾರದ್ವಾಜೋ ಯಜುರ್ವೇತ್ತಾ ರಂಗಯಜ್ವತನೂದ್ಭವಃ । ಯಜ್ನ
194 ನಾರಾಯಣೋ ಯಜ್ವಾ ವೃತ್ತಿಮೇಕಾಂ ಸಮಶ್ನುತೇ । ಆತ್ರೇಯೋ ಯ
195 ಜುರಧ್ಯೇತಾ ಕೇಶವಾಖ್ಯಸ್ಯ ಯಜ್ವನಃ । ಪುತ್ರಶ್ಚೆನ್ನಪ್ಪ ಯ
196 ಜ್ವಾಯಂ ಗ್ರಾಮೇಶ್ಮಿನ್ನೇಕವೃತ್ತಿಮಾನ್ । ಭಾರದ್ವಾಜೋ ಯುಜುರ್ವೇದೀ
197 ಹೌಭಲಾಖ್ಯತನೂದ್ಭವಃ । ಲಿಂಗಾಭಟ್ಟಾರಕೋ ವಿದ್ವಾನ್ ಗ್ರಾ

ಆರನೆಯ ಹಲಗೆಯ ಮುಂಭಾಗ

198 ಮೇಸ್ಮಿನ್ನೇಕವೃತ್ತಿಮಾನ್ । ಭಾರದ್ವಾಜೋ ಋಗಧ್ಯೇತಾ ಮಧುವ
199 ಣ್ಣಾಖ್ಯ ಸಂಭವಃ । ಲಿಂಗಣ್ಣ ಯಜ್ವಾ ಚ ತಥಾ ಗ್ರಾಮೇಸ್ಮಿನ್ನೇಕ
200 ವೃತ್ತಿಭಾಕ್ । ಕಾಶ್ಯಪೋ ಯಜುರಧ್ಯೇತಾ ಗಂಗಯಜ್ವತನೂದ್ಭ
201 ವಃ । ಆಪಸ್ತಂಬೋ ನಂಜನಾಥಯಜ್ವಾಸ್ಮಿನ್ನೇಕ ವೃತ್ತಿಮಾನ್
202 ಆತ್ರೇಯಃ ಸಾಮವೇದೀ ಚ ತಿಪ್ಪಣಾಖ್ಯತನೂದ್ಭವಃ ದ್ರಾಹ್ಯಾ
203 ಯಣೋ ನಂಜನಾಥೋ ಗ್ರಾಮೇಸ್ಮಿನ್ನೇಕವೃತ್ತಿಭಾಕ್ । ಕೌಣ್ಡಿನ್ಯೋ
204 ಯಜುರಧ್ಯೇತಾ ಚೌಡಿಯಜ್ವತನೂದ್ಭವಃ । ಸಿದ್ಧಾನ್ತವಿತ್ತಮ್ಮಿ
205 ಶರ್ಮಾ ಗ್ರಾಮೇಸ್ಮಿನ್ನೇಕವೃತ್ತಿಮಾನ್ । ಶಾಣ್ಡಿಲ್ಯಃ ಶುಕ್ಲಯಜು
206 ಷಾ ಖ್ಯಾತೋ ಗೋಪಣ್ಣಸಂಭವಃ ಕಾತ್ಯಾಯನೋ ನಾರಸಿಂಹ ಭ
207 ಟ್ಟೋಸ್ಮಿನ್ನರ್ಧವೃತ್ತಿಮಾನ್ । ವಿಶ್ವಾಮಿತ್ರೋ ಋಗಧ್ಯೇತಾ ದುಗ್ಗಾಭಟ್ಟ
208 ತನೂದ್ಭವಃ । ನಂಜನಾಥಾಖ್ಯಭಟ್ಟೋಯಮ್ ಗ್ರಾಮೇಸ್ಮಿನ್ನರ್ಧವೃತ್ತಿ
209 ಮಾನ್ । ಲಕ್ಷ್ಮೀನಾಥಸುತೋ ದೇವರಾಜೋಪ್ಯಾತ್ರೇಯ ಗೋತ್ರಜಃ । ಆ
210 ಪಸ್ತಂಬೋ ಯಜುರ್ವೇದೀ ಗ್ರಾಮೇಸ್ಮಿನ್ನರ್ಧವೃತ್ತಿಮಾನ್ । ಬೋಧಾಯನೋ
211 ಯಜುರ್ವೇದೀ ಮಾಯಿಭಟ್ಟತನೂದ್ಭವಃ । ವಿಶ್ವಾಮಿತ್ರೋ ಲಕ್ಷಣಾ
212 ಖ್ಯೋ ಗ್ರಾಮೇಸ್ಮಿನ್ನರ್ಧವೃತ್ತಿಮಾನ್ । ಆಪಸ್ತಮ್ಬೋ ಯಜುರ್ವೇದೀ ರಾ
213 ಮಚನ್ನಗುರೋಃ ಸುತಃ । ಕೌಸಿಕ ಶ್ರೀನಿವಾಸಾರ್ಯೋ ಯಜ್ವೈಕಾಮ್ ವೃ
214 ತ್ತಿಮಶ್ನುತೇ । ಭಾರದ್ವಾಜೋ ಯಜುರ್ವೇದೀ ನೃಸಿಂಹಭ[ಟ್ಟ]ಸಂಭವಃ । ಶ್ರೀ
215 ಮಾನ್ವೇದಾಢ್ಯವಿಖ್ಯಾತೋ ಗ್ರಾಮೇಸ್ಮಿನ್ನೇಕ ವೃತ್ತಿಮಾನ್ । ಮಂಗಣ್ಣಾ

216 ಖ್ಯಸುತಃ ಶ್ರೀಮಾನ್ ಬಹ್ವೃಚೋ ಮೌನಭಾರ್ಗವಃ । ಲಕ್ಷ್ಮಿಭಟ್ಟಾರಕೋ
217 ವೃತ್ತಿಂ ಪಾದೋನ್ಯೈಕಾಮ್ ಸಮಶ್ನುತೇ । ವಾಸಿಷ್ಠೋ ಯಜುರಧ್ಯೇತಾ ಹ್ಯೊ
218 ಡೆಯಪ್ಪತನೂದ್ಭವಃ । ದೇವರಸಶರ್ಮಾ ಪಾದೋನ್ಯೈಕಾಮ್ [ವೃತ್ತಿಂ] ಸಮ
219 ಶ್ನುತೇ । ನಾಗಣಾಖ್ಯಸುತಃ ಶ್ರೀಮಾನ್ ಬಹ್ವೃಚೋ ಮೌನಭಾರ್ಗವಃ
220 ದೇವರಭಟ್ಟಶರ್ಮಾಸೌ ಗ್ರಾಮೇಸ್ಮಿನರ್ಧವೃತ್ತಿಮಾನ್ । ಶಾಣ್ಡಿಲ್ಯೋ

ಆರನೆಯ ಹಲಗೆಯ ಹಿಂಭಾಗ

221 ಯಜುರಧ್ಯೇತಾ ಶಿಂಗಣಾಖ್ಯತನೂದ್ಭವಃ ಆಪಸ್ತಂಬೋ ಗಾರು
222 ಡಯ್ಯೋ ವೃತ್ತಿಮೇಕಾಮಿಹಾಪ್ತವಾನ್ । ಚತ್ವಾರಿಂಶದ್ವೃತ್ತಿಮಂ
223 ತಃ ಶಾಸನೇಸ್ಮಿನ್ ಸುಲೇಖಿತಾಃ । ಸಮನ್ತಾಲ್ಲಕ್ಷ್ಮ ಸಹಿತಃ
224 ಸಾಮನ್ತಗ್ರಾಮ ಸಮ್ಮತಃ । ಚತುಸೀಮಾನಿರ್ಣಯೋತ್ರ ಲಿಖ್ಯ
225 ತೇ ದೇಶಭಾಷಯಾ । ಬೆಳ್ಳೂರಿಗೆ ಸಲುವ ಮನ್ನಿಹಳ್ಳಿಯಿಂ ಬ
226 ಡಗದಿಂದ ಬಂದ ಹಳ್ಳದಿಂ ಪಡುವ ವರದಸಮುದ್ರದ ಸೀ
227 ಮೆಯಿಂ ನಟ್ಟ ಕಲ್ಲಿಂದ ಬಸುರೀಮರವೊಳಗಾಗಿ ವಾಯವ್ಯ । ಸಣ
228 ಬದ ಸೀಮೆಯಿಂ ನೆಟ್ಟ ಕಲ್ಲಿಂದ ಕರಿಯ ಮರಡಿ ಸಹ ಬಡಗ । ಅ
229 ಳಲಸಮುದ್ರದಿಮೀಶಾನ್ಯ ಹಿರಿಯ ಕೆಜೆಯ ಸಾಗರ ಮೇರೆ ಹೆರಗಿನಹ
230 ಳ್ಳಿಯಿಮ್ಮೂಡ ಹಿರಿಯಕೆಜೆಯ ಸಾರ ಮೇರೆ ಹುಲ್ಲೇಹಳ್ಳಿಯಿಂ ಮೋಚೆಯಹಳ್ಳ ಸಹ
231 ಮೂಡ । ಹುಲ್ಲೇಹಳ್ಳಿಯ ಬಲಕನಹಳ್ಳಿಯ ಮಧ್ಯದಲಿ ನೆಟ್ಟ ಕಲ್ಲಿಂದಮಾಗ್ನೇಯ
232 ಬಲಕನಹಳ್ಳಿಯ ತಿಗುಳನಹಳ್ಳಿಯ ಮಧ್ಯದಲ್ಲಿ ನೆಟ್ಟ ಕಲ್ಲಿಂದ ತೆಂಕ
233 ತೀಗಳನಹಳ್ಳಿಯ ಸೀಮೆಯ ಕಲ್ಲಿಂದಮಡ್ಡಗೆರೆಯಹ
234 ಳ್ಳಿ ಸಹ ನೈಋತ್ಯ । ಬೆಳ್ಳೂರಿಗೆ ಸಲುವ ಶ್ರೀ

ಏಳನೆಯ ಹಲಗೆಯ ಮುಂಭಾಗ

235 ರಂಗಪುರದಿಂ ಜೀವಗಲ್ಲಿನ್ದಂ ನೈಋತ್ಯ ದಾಸನಕೆರೆಯೊಳ
236 ಗೆ ನಟ್ಟ ಕಲ್ಲಿಂದ ಪಡುವ ಮಿಶ್ರವಾಗಿ ನೈಋತ್ಯ । ಇನ್ತೀ ವ
237 ಲಯ ಶಾಸನ ವೊಳಗಾದ ಅಡ್ಡಗೆರೆಯಹಳ್ಳಿ ಸ
238 ಹವಾಗಿ ಚಾಕೇನಹಳ್ಳಿಗೆ ಪ್ರತಿನಾಮವಾದ ದೇಮಸಮು
239 ದ್ರವೆಂಬ ಅಗ್ರಹಾರದ ವಲಯಶಾಸನ ದಾನಪಾಲ
240 ನಯೋರ್ಮಧ್ಯೇ ದಾನಾಚ್ಛ್ರೇಯೋನುಪಾಲನಮ್ । ದಾನಾತ್ಸ್ವರ್ಗ
241 ಮವಾಪ್ನೋತಿ ಪಾಲನಾದಚ್ಯುತಮ್ ಪದಂ । ಸ್ವದತ್ತಾಂ ಪ
242 ರದತ್ತಾಂ ವಾ ಯೋ ಹರೇತ ವಸುಂಧರಾಂ । ಷಷ್ಟಿವರ್ಷ ಸ
243 ಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ । ಏಕೈವ ಭಗಿ
244 ನೀ ಲೋಕೇ ಸರ್ವೇಷಾಮೇವ ಭೂಭುಜಾಂ । ನ ಭೋಜ್ಯಾ ನ ಕರ

245 ಗ್ರಾಹ್ಯಾ ವಿಪ್ರದತ್ತಾ ವಸುನ್ಧರಾ । ಸಾಮಾನ್ಯೋಯಮ್ ಧರ್ಮಸೇ
246 ತುರ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ । ಸರ್ವಾ
247 ನೇತಾನ್ ಭಾವಿನಃ ಪಾರ್ಥಿವೇನ್ದ್ರಾನ್ ಭೂಯೋ ಭೂಯೋ ಯಾಚತೇ ರಾ
248 ಮಚನ್ದ್ರಃ । ತೃಷ್ಣ ಶ್ರೀ ತಿಪ್ಪಯಾಚರ್ಯ್ಯತನಯೇನ ಸುಶಿಲ್ಪಿನಾ । ಭೈರ
249 ವಾಚಾರ್ಯನಾಮ್ನೈತದ್ಲಿಖಿತಂ ತಾಮ್ರಶಾಸನಂ । ಶ್ರೀ ಶ್ರೀ ಶ್ರೀ
250 ಶ್ರೀ ರಾಮಚಂದ್ರ

ಅನುಬಂಧ-3, ಎ.ಕ. ಸಂ. 10 (BLR), ಮುಳಬಾಗಿಲು-60, ಪು. 81-84.
ಆವನಿ ಮಠದಲ್ಲಿರುವ ತಾಮ್ರ ಶಾಸನ
೩ ಪತ್ರಗಳು–ನಾಗರಾಕ್ಷರ–ವರಾಹಮುದ್ರೆ

1 ನೇ ಪತ್ರದ ಹಿಂಭಾಗ

1 ಶ್ರೀವೇಂಕಟೇಶಾಯನಮಃ । ಯಸ್ಯಸಂಪರ್ಕಪುಣ್ಯೇನನಾರೀ
2 ರತ್ನಮಭೂಚ್ಛಿಲಾ । ಯದುಪಾಸ್ಯಂಸುಮನಸಾಂತದ್ವಸ್ತುದ್ವನ್ದ್ವಮಾಶ್ರಯೇ ।
3 ಯಸ್ಯದ್ವಿರದವಕ್ತ್ರಾದ್ಯಾಃಪಾ[ರಿ]ಷದ್ಯಾಃಪರಶ್ಶತಂ । ವಿಘ್ನಂನಿಘ್ನನ್ತಿಭಜತಾಂವಿ
4 ಷ್ವಕ್ಸೇನಂತಮಾಶ್ರಯೇ । ಜಯತಿಕ್ಷೀರಜಲಧೇ(ಃ)ರ್ಜಾತಂಸರ್ವೇಕ್ಷಣಂಹರೇಃ ।
5 ಆಲಂಬನಂಚಕೋರಾಣಾಮಮರಾಯ್ಯುಷ್ಕರಂಮ[ಹ]ಃ । ಪೌತ್ರಸ್ತಸ್ಯಪುರೂರವಾಬುಧಸು
6 ತಸ್ತಸ್ಯಾಯುರಸ್ಮಾತ್ಮಜಸ್ಸಂಜಜ್ಞೇನಹುಷೋಯಯಾತಿರಭವನ್ತಸ್ಮಾಚ್ಚಪೂರು
7 ಸ್ತತಃ । ತದ್ವಂಶೇಭರತೋಬಭೂವನೃಪತಿಸ್ತತ್ಸಂತೌಶಂತನುಸ್ತತ್ತುರ್ಯೋವಿಜಯೋಭಿ
8 ಮಂನ್ಯುರುದಭೂತ್ತಸ್ಮಾತ್ಪರೀಕ್ಷಿತಃ । ನಂದಾಸ್ತಾಸ್ಯಾಪ್ಯಮೋಭೂತ್ಸಮಜನಿ[ನ]ವಮಸ್ತಸ್ಯ
9 ರಾಜ್ಞಚ್ಛಲಿಕ್ಯಕ್ಷ್ಮಾಪಸ್ತತ್ಸಪ್ತಮಶ್ಶ್ರೀಪತಿರುಚಿರಭವದ್ರಾಜಪೂರ್ವೋನರೇಂದ್ರಃ । ತ
10 ಸ್ಮಾಶ್ರೀ ಬಿಜ್ಜಲೇಂದ್ರೋದಶಮಃಇಹನೃಪೋವೀ[ರ] ಹೆಮ್ಮಾಳಿರಾಯಸ್ತಾರ್ತೀಈಕೋಮುರಾ
11 ರೌಕೃತನತಿರುದಭೂತ್ತಸ್ಯಮಾಯಾಪುರೀಶಃ । ತತ್ತುರ್ಯ್ಯೋಜನಿತಾತಪಿನ್ನಮ
12 ಮಹೀಪಾಲೋನಿಜಾಲೋಕನತ್ರಸ್ತಾಮಿತ್ರಗಣಸ್ತತೋಜನಿಹರನ್‌ದುರ್ಗಾಣಿ
13 ಸಪ್ತಾಹಿತಾತ್ । ಅನ್ವೈಕೇನಸಸೋಮಿದೇವನೃಪತಿಸ್ತಸ್ಮೈಜಜ್ಞೇಸುತೋವೀರೋರಾ
14 ಘವದೇವರಾಡಿತಿತತಶ್ಶ್ರೀಪಿನ್ನಮೋಭೂನ್ನೃಪಃ । ಆರವೀಟಿನಗರೀವಿಭೋರ
15 ಭೂದಸ್ಯಬುಕ್ಕಧರಣೀಪತಿಸುತಃ । ಯೇನಸಾಲುವನೃಸಿಹ್ಮರಾಜ್ಯಮಪ್ಯೇಧಮಾನಮ
16 ಹಸಾಸ್ಥಿರೀಕೃತಂ । ಶ್ರೀರಾಮರಾಜಕ್ಷಿತಿಪಸ್ಯತಸ್ಯಚಿನ್ತಾಮಣೇರರ್ಥಿಕದಂಬ
17 ಕಾನಾಂ । ಲಕ್ಷ್ಮೀರಿವಾಂಭೋರುಹಲೋಚನಸ್ಯಲಕ್ಕಾಂಬಿಕಾಮುಷ್ಯಮಹಿಷ್ಯಥಾಸೀತ ।
18 ತಸ್ಯಾಧಿಕೈಸಮಭವಸ್ತನಯಸ್ತಪೋಭಿಶ್ಶ್ರೀರಂಗರಾಜನೃಪತಿಶಶಿವಂಶದೀ
19 ಪ । ಅಸನ್ನಮುಲ್ಲಸತಿಧಾಮನಿಯಸ್ಯಚಿತ್ರಂನೇತ್ರಾಣಿವೈರಿಸುದೃಶಾಂಚನಿ
20 ರಂಜನಾನಿ । ಸತೀ[ತಿ]ರುಮಲಾಂಬಿಕಾಂಚರಿತಲೀಲಯಾರುಂಧತೀಪ್ರಥಾಮಪಿ
21 ತಿತಿಕ್ಷಯಾವಸುಮತೀಯಶೋರುಂಧತೀಂ । ಹಿಮಾಂಶುರಿವರೋಹಿಣೀಂಹೃದಯಹಾರಿಣೀಂ
22 (ಹೃದಯಹಾರಿಣೀಂ) ಸದ್ಗುಣೈರಮೋದತಸಧರ್ಮಿಣೀಮಯಮವಾಪ್ಯವೀರಾಗ್ರಣೀಃ । ರುಚಿ
23 ತನಯವಿಚಾರಂರಾಮರಾಜಂಚಧೀರಂವರತಿರುಮಲರಾಯಂವೇಂಕಟಾದ್ರಿಕ್ಷಿತೀಶಂ । ಅ

24 ಜನಯತಸಪಿತಾನಾನುಪೂರ್ವ್ಯಾಕುಮಾರಾನಿಹತಿರುಮಲದೇವ್ಯಾಮೇವರಾಜಾಮಹೋಜಾಃ । ಸ
25 ಕಲಭುವನಕಂಟಕಾನರಾತೀನ್‌ಸಮಿತಿನಿಹತ್ಯಸರಾಮರಾ[ಜ]ವೀರಃ । ವ್ಯರಾಜತಶ್ರೀ
26 ವರವೇಂಕಟಾದ್ರಿರಾಜಃಕ್ಷಿತೌಲಕ್ಷ್ಮಣಚಾರುಮೂರ್ತಿಃ । ತ್ರಿಷುಶ್ರೀರಂಗಕ್ಷ್ಮಾಪರಿವೃಢಕು
27 ಮಾರೇಷ್ವಧಿರಣಂವಿಜಿತ್ಯಾರಿಕ್ಷ್ಮಾಪಾನ್‌ತಿರುಮಲಮಹಾರಾಯನೃಪತಿಃ । ಮಹೌಜಾಸ್ಸಾಮ್ರಾಜ್ಯೇ

2 ನೇ ಪತ್ರದ ಮುಂಭಾಗ

28 ಸುಮತಿರಭಿಷಿಕ್ತೋನಿರುಪಮೇಪ್ರ[ಶಾ]ಸ್ತ್ಯುರ್ವೀಂಸರ್ವಾಮಪಿತಿಸ್ರುಷುಮೂರ್ತಿ
29 ಷ್ವಿವಹರಿಃ । ಯಶಸ್ವಿನಾಮಗ್ರಸರಸ್ಯಯಸ್ಯಪಟ್ಟಾಭಿಷೇಕೇಸತಿಪಾರ್ಥಿ
30 ವೇಂದೋಃ । ದಾನಾಂಬುಪೂರ್ರೈರಭಿಷಿಚ್ಯಮಾನಾದೇವೀಪದಂಭೂಮಿರಿಯಂದಧಾತಿ । ಸಾಮಾದ
31 ಯೋವಿಧಿಮುಖಾದಿವಸತ್ಯವಾಚಃ ಸಾಮಾದ್ಯುಪಾಯನಿವಹಾಯ್ಯುವಸಾಂಯ್ಯುಗೀನಾತ್ । ರಾಮಾ
32 ದಯೋದಶರಥಾದಿವರಾಜಮೌಳೇಃತಸ್ಮಾದಮೇಯ[ಯ]ಶಸಸ್ತನಯಾಬಭೂವುಹಃ । ರಾಜಾತತೋಭೂ
33 ದ್ರಘುನಾಥನಾಮಾಶ್ರೀರಂಗರಾಯಶ್ರಿತಪಾರಿಜಾತಃ । ಶ್ರೀರಾಮರಾಜಶಿಶಿರಾಂಶುರು
34 ರ್ವ್ಯಾಃ । ವಿಖ್ಯಾತಿಮಾನ್‌ವೇಂಕಟದೇವರಾಯಃ । ಶ್ರೀರಂಗರಾಯಸಹಜೇಷುತೇಷುಪಾರಂಗ
35 ತೋನೀತಿಪಯಃ ಪಯೋಧೇಃ । ಅಷ್ಟಾಸುದಿಕ್ಷು(ಃ)ಪ್ರಥಿತಸ್ಸಲೇಭೇಪಟ್ಟಾಭಿಷೇಕಂಪೆನುಗೊಂಡರಾ
36 ಜ್ಯೇ । ಅಥಶ್ರೀವೇಂಕಟಪತಿದೇವರಾಯೋನಯೋಜ್ವಲಃ । ಅವನೀಮಶಿಷತ್ಕೀರ್ತ್ಯಾದಿಶೋದ
37 ಶವಿಶೋಭಯನ್ । ತಜ್ಜ್ಯಾಯಸಸ್ಸುರದ್ರುಮಲಜ್ಜಾವಹಚರಿತರಾಮರಾಜವಿಭೋಃ । ಜಾತ(ಃ)ಸ್ತಿ
38 ರುಮಲರಾಜಃಖ್ಯಾತಶ್ರೀರಂಗರಾಯೋಪಿ । ತಯೋಶ್ಶ್ರೀರಂಗರಾಯಾಸ್ಯತನಯಾವಿನಯಾಧಿಕಾಃ ।
39 ಅಜಾಯಂತದಯಾವಂತಶ್ರುತವಂತೋಯಶಸ್ವಿನಃ । ಶ್ರೀರಂಗರಾಯನೃಪತೇಸ್ತನಯೇಷುತೇಷುಪಾ
40 ರಂಗಿರಾಮಧಿಗತಃಕವಿಪುಂಗವಾನಾಂ । ರತ್ನೇಷುಕೌಸ್ತುಭಇವಾಂಬುಧಿಸಂಭವೇಷುಶ್ರೀ
41 ರಾಮರಾಯನೃಪತಿಸುಚಿರಂವ್ಯಲಾಸೀತ್ । ಪೂರ್ವಂವಿಶ್ರುತರಾಮರಾಜನೃಪತೇಶ್ರೀರಾ
42 ಮಭದ್ರಾಕೃತೇಃ ಕಲ್ಯಾಣೋದಯ ಶಾಲಿನಸ್ತನುಭವಾಃ ಪಂಚಪ್ರಪಂಚಾವನೇ । ದಕ್ಷಾನೀತಿಪಥಾ
43 ನುಗಾಃ ಸಮಭವನ್‌ಕ್ಷೀರಾಪಗಾಕಾಮಿನೊಗೀರ್ವಾಣಾಲಯಭೂರುಹಾಇವಬುಧಶ್ರೇಣೀ
44 ಷ್ವದಾನೋತ್ಸುಕಾಃ । ವಿಖ್ಯಾತಚರ್ಯೇಷುನೃಪೇಷುತೇಷುಶ್ರೀರಂಗರಾಜಃ ಶಿರಾಂಶುರುರ್ವ್ಯಾಃ ।
45 ವಿಶ್ವತ್ರಯೇವಿಶ್ರುತಕೀರ್ತಿರಾಸೀತ್ ಸೌರೇಷುಶಾಲೇಷ್ವಿವಪಾರಿಜಾತಃ । ಶ್ರೀರಂಗರಾ
46 ಜಸ್ಯತಪೋವಿಶೇಷೈಃ ಸಂತೋಷಣಶೇಷಗಿರೀಶ್ವರಸ್ಯ । ಕಾರುಣ್ಯಭೂಮ್ನಾಕಮನೀಯ
47 ಶೋಭೌಪುತ್ರಾವಭೂತಾಂಪುರುಹೂತಭೋಗೌ । ಪೆದವೇಂಕಟೇಂದ್ರಪಿನವೇಂಕಟಾಧಿರಾಡಿತಿನಾಮಕೌ
48 ಪ್ರಕೃತಿಪಾಲನೋತ್ಸುಕೌ + ಖರದೂಷಣಪ್ರಹತಿದಕ್ಷಿಣಾವುಭೌದದತಃ ಪ್ರಮೋದಮಿವರಾಮ
49 ಲಕ್ಷ್ಮಣೌ । ಶ್ರೀಶಾಲೀಪೆದವೇಂಕಟೇಂದ್ರನೃಪತಿರ್ಜೇಷ್ಠೋವಯೋಭಿಸ್ತಯೋಃ । ಶೌರ್ಯೌದಾರ್ಯಗಭೀರ
50 ಥಾಧೃತಿಕಲಾ(ಃ) ಪೂರ್ವೈಶ್ಚಸರ್ವೈರ್ಗುಣೈಃ । ಶ್ರೀರಂಗರಾಜೇಂದ್ರಕುಮಾರಕೇಸ್ಮಿವೀರೋತ್ತಮೇವೆಂಕ
51 ಟದೇವರಾಯೇ । ಪಟ್ಟಾಭಿಷಿಕ್ತೇಪೆನುಗೊಂಡರಾಜ್ಯೇತದಾಭಿಷಿಕ್ತಾಃ ಸುಧಿಯೋಪಿಹೇಮ್ನಾ ।
52 ಖ್ಯಾತಸ್ತಸ್ಯಪಿತಾಮಹಾನುಜತಯಾಶ್ರೀವೇಂಕಟಾದ್ರಿಕ್ಷಮಾಪಾಲಶ್ರೀಲಲನಾಸ್ವಯಂವ್ರ
53 ತಪತೇಃಜಾತಾನುಕಂಪಾಸ್ಪದಂ । ಆಸೀದುದ್ಧತಶತ್ರುಗಂಧಕರಟಿಪ್ರಧ್ವಂಸಬದ್ಧವ್ರತೋ
54 ಹರ್ಯಕ್ಷಃಕವಿಲೋಕರಕ್ಷಣಕಲಾಪ್ರತ್ಯಗ್ರಭೋಜಾಕೃತಿಃ । ತಸ್ಯಶ್ರೀರಂಗಪತಿಕ್ಷೋಣೀ
55 ಪತಿರಾತ್ಮಭೂರ್ಗುಣಾಬ್ಧಿರಥ । ಯಸ್ಯಾದಾರ್ಯಮಹಿಮ್ನಾ ಕಲ್ಪತರುಃ ಕ್ವಾಪಿನಂದನೇ
56 ವಸತಿ । ರಾಜ್ಞಸ್ತಸ್ಯಗುಣಾದ್ಭುತಸ್ಯಸುಕೃತೈಃ ಪ್ರಾಚೀನಜನ್ಮಾರ್ಜಿತೈಃಪುತ್ರೋಭೂತ್ಪುರುಹೂತ

2 ನೇ ಪತ್ರದ ಹಿಂಭಾಗ

57 ಕಲ್ಪಮಹಿಮಾಗೋಪಾಲರಾಜಾಗ್ರಣೀಃ । ಸರ್ವೇಷಾಂವಿದುಷಾಂಸಮೀ
58 ಹಿತಫಲಂದತ್ವಾಜಗತ್ಯಾಂಸ್ವಯಂ । ಯೋವಿಸ್ಮಾರಯತಿಸ್ಮದಾನಚತುರಾ
59 ನ್‌ಭೋಜಾದಿಮಾನ್‌ಪಾರ್ಥಿವಾನ್ । ಸೋಯಂಪ್ರಿಯಾಸಹಚರಸ್ಸುಕೃತೀತಪೋಭಿರಾ
60 ರಾಧಯದ್ವೇಂಕಟಶೈಲನಾಥಂ । ಪ್ರೀತಸ್ತದಾನೀಮಗದೀದಭೀಷ್ಟಾದಾತಾಸದೇವಃಕೃಪಯಾ
61 ತಮೇನಂ । ಪುತ್ರಸ್ಸನ್‌ಸಿಧ[ರಣೇ]ಮವಾಪಮಧುನಾಶ್ರೀವೇಂಕಟಾಭಿಖ್ಯಯಾವಿಖ್ಯಾತಶ್ಚಿನವೇಂಕಟೇಂ
62 ದ್ರನೃಪತೇರುಗ್ರೈಸ್ತಪೋವೈಭವೈಃ । ಪೂರ್ವಂ ಶ್ರೀವಸುದೇವಭೂವಲರಿಪೋಃಕೃಷ್ಣಾಭಿಧೋಹಂಯಥಾ । ನಂದಃ
63 ಪ್ರಾಗಿವತಂಸುತಂಕಲಯತಾಂಶ್ರೀರಂಗರಾಯಾಭಿಧಂ । ಶ್ರೀರಂಗರಾಯಕ್ಷಿತಿನಾಯಕಂತಂಶ್ರೀ
64 ಕಾಂತ್ತರೂಪಂಕ್ಷಿತಿರಕ್ಷಣಾಯ । ಅವಾಪ್ಯತಂ[ತತ್]ಕುಲವೃದ್ಧಹೇತೋರ್ಗೋಪಾಲರಾಜಸ್ಸಮಭೂತ್ಪ್ರಹೃ
65 ಷ್ಟಃ । ಸೋಯಂಶ್ರೀರಂಗರಾಯಕ್ಷಿತಿಪತಿರವಿತುಂಸಜ್ಜನಾನ್‌ದುರ್ಜನಾನಾಂಗರ್ವಧ್ವಂಸಾಯ
66 ಕಂಸಾಸುರಮದಗರಿಮಧ್ವಂಸಿನೋರೂಪಧಾರೀ । ಪ್ರಾಜ್ಯಂಸಾಮ್ರಾಜ್ಯಸಿಂಹಾಸನಮಧಿವ
67 ಸತಿಪ್ರತ್ಯಹಂಭಕ್ತಿಪೂರ್ವಂನಾನಾದೇಶಾವನೀಶೈರ್ವಿನತಮನುಪಮಂಪ್ರಾಪ್ತಿಪಟ್ಟಾಭಿಷೇಕಃ ।
68 ಶ್ರೀರಂಗೇಶ್ವರದತ್ತ ರಾಜ್ಯಮಹಿಮಾ ಶ್ರೀ ರಂಗರಾಯಾಗ್ರಣೀಃ ಪಾದಾಂಭೋಜವಿನಂಬ್ರಭೋಜಮಗ
69 ಧಃಕ್ಷ್ಮಾಪಾರ್ಪಿತಃಪ್ರ . ತಃ । ಸರ್ವೆಷಾಂಪೃಥಿವೀಭುಜಾಮಧಿಶಿರೋವಿನ್ಯಸ್ತಪಾದಾಂಬುಜಃ । ಪೃಥ್ವೀಂ
70 ಪಾಲ[ಯತೇ] ನಯೇನಮಹತಾಸಪ್ತಾರ್ಣವೀಮೇಖಲಾಂ । ವಾರಾಶಿಗಾಂಭೀರ್ಯವಿಶೇಷಧುರ್ಯಚೌರಾಶಿ
71 ದುರ್ಗೈಕವಿಭಾಲವರ್ಯಃ । ಪರಾಷ್ಟದಿಗ್ರಾಯಮನಃಪ್ರಾಕಾಮಭಯಂಕರಶಾರ್ಙ್ಗಧರಾಂತರಂಗಃ ।
72 ಹತರಿಪುರನಿಮೇಷಾನೋಕಹೋಯಾಚಕಾನಾಂಹೊಸಬಿರುದರಗಂಡೋರಾಯರಾಹುತ್ತಮಿಂಡಃ । ಸಾರ
73 ವೀರರಮಯಾಸಮುಲಸನ್‌ಆರವೀಟಿಪುರಹಾರನಾಯಕಃ । ಕುಂಡಲೀಶ್ವರಮಹಾಭುಜಶ್ರಯನಿ
74 ಮಂಡಲೀಕಧರಣೀವರಾಹತಾಂ । ಆತ್ರೇಯಗೋತ್ರಜಾನಾಮಗ್ರಸರೋಭೂಭುಜಾಮುದಾರಯಶಾಃ ।
75 ಸೋಯಂನೀತಿಜಿತಾದಿಭೂಪತಿತತಿಸ್ಸುತ್ರಾಮಶಾಖೀಸುಧೀಸಾರ್ಥಾನಾಂಭುಜತೇಜಸಾಸ್ವವ
76 ಶಯನ್‌ಕರ್ಣಾಟಸಿಂಹಾಸನಂ । ಆಸೇತೋರಪಿಚಾಹಿಮಾದ್ರಿವಿಮತಾನ್‌ಸಂಹೃತ್ಯಶಾಸ
77 ನ್ಮುದಾ । ಸರ್ವೋರ್ವೀಂಪ್ರಚಕಾಸ್ತಿ ಸಿಂಧುಪರಿಘಾಂಶ್ರೀರಂಗರಾಯಾಗ್ರಣೀಃ । ರಂದ್ರರ್ತುಬಾಣಚಂ
78 ದ್ರಾಖ್ಯ ೧೫೬೭ ಗಣಿತೇಶಕವತ್ಸರೇ । ವತ್ಸರೇಪಾರ್ಥಿವಾಭಿಖ್ಯೇಮಾಸೇಸ್ಮಿನ್ಮಾರ್ಗಶೀರ್ಷಕೇ । ಪಕ್ಷೇವ
79 ಳಕ್ಷೇಪುಣ್ಯಾರ್ಹೇದ್ವಾದಶ್ಯಾಂಚಮಹಾತಿಥೌ । ಶ್ರೀವೇಂಕಟೇಶಪಾದಾಬ್ಜಸಂನಿಧೌಶ್ರೇಯಸಾನಿಧೌ ।
80 ಪರಮಹಂಸಪರಿವ್ರಾಜಕಾಚಾರ್ಯಾಣಾಂ ಮಹೌಜಸಾಂ । ಶಿಷ್ಯಾಯೇವಿಶ್ವರೂಪಾಖ್ಯಭಾ
81 ರತಿಸ್ವಾಮಿನಾಮಮೀ । ಶ್ರೀಮದ್ವಿಠಲನಾಮಾನೋಭಾರತಿಸ್ವಾಮಿನಃಪ್ರಿಯಾಃ । ತಚ್ಛಿ
82 ಷ್ಯರಾಮಚಂದ್ರಾಖ್ಯಭಾ[ರ]ತೀಸ್ವಾಮಿನೋಭವ[ನ್] । ಅಶೇಷ[ವಿ]ದುಷಾಂತೇಷಾಂಮಠಾಯಮಹದೋಜಸಾಂ
83 ಶ್ರೀಮತ್‌ಕೋಳಾಲದೇಶೀಯ್ಯಗ್ರಮೇಷುದಣಿತಂಜನ್ಯೈಃ । ಮನೋಹರಂದೇವಪಲ್ಲ್ಯಾಃಪ್ರಾಚೀಂದಿ
84 ಶಮುಪಾಶ್ರಿತಂ । ಸ್ವನಾಮಗಸ್ಯಶೈಲಸ್ಯದಕ್ಷಿಣಾಂದಿಶಮಾಶ್ರಿತಂ । ಚಿಂಕಾಭಿಧಾನಗ್ರಾ
85 ಮಸ್ಯಪಶ್ಚಿಮಾಶಾಮುಪಾಶ್ರಿತಂ । ತಂಮೇಪಲ್ಲ್ಯಾಖ್ಯಘೋಷಸ್ಯಉತ್ತರಾಶಾಮುಪಾಶ್ರಿತಂ । ನ
86 ರಸಿಂಹಇತಿಖ್ಯಾತಂಪ್ರತಿನಾಮಸಮನ್ವಿತಂ । ಚಿನಾಣಿಕಲ್ಲುನಾಮಾನಂಗ್ರಾಮಮಾರಾಮ
87 ಶೋಭಿತಂ । ಸರ್ವಮಾನ್ಯಂಚತುಸೀಮಾಸಹಿತಂಚಸಮಂತತಃ । ನಿಧಿನಿಕ್ಷೇಪಪಾಷಾಣ
88 ಸಿದ್ಧಸಾಧ್ಯಜಲಾನ್ವಿತಂ । ಅಕ್ಷಿಣ್ಯಾಗಾಮಿಸಂಯುಕ್ತಂ ಋಷಿಭೋಗ್ಯಂಸಭೂರುಹಂ । ವಾ
89 ಪೀಕೂಪತಟಾಕೈಶ್ಚಕಚ್ಛಾರಾಮೈಶ್ಚಸಂಯುತಂ । ಶಿಷ್ಯಪ್ರಶಿಷ್ಯಸಂಭೋಜ್ಯಂಕ್ರಮಾದಾಚಂ

3 ನೇ ಪತ್ರದ ಮುಂಭಾಗ

90 ದ್ರತಾರಕಂ । ದಾನಾಧಮನವಿಕ್ರೀತಿಯೋಗ್ಯಂವಿನಿಮಯೋಚ್ಚಿತಂ । ಪರೀತಃ
91 ಪ್ರಯತ್ನೈಸ್ಸ್ನಿಗ್ಧೈಃ ಪುರೋಹಿತಪುರೋಗಮೈಃ । ವಿವಿಧೈರ್ವಿಬುಧೈಶ್ಶ್ರೌತಪಥಿಕೈರಧಿ
92 ಕೈರ್ಗಿರಾ । ಶ್ರೀರಂಗರಾಯಭೂಪಾಲೋಮಾನನೀಯೋಮನಸ್ವಿನಾಂ । ಸಹಿರಣ್ಯಪಯೋಧಾ
93 ರಾಪೂರ್ವಕಂದತ್ತವಾನ್ಮುದಾ । ವೀರಶ್ರೀರಂಗರಾಯಕ್ಷಿತಿಪತಿವರ್ಯಸ್ಯಕೀರ್ತಿಧುರ್ಯಸ್ಯ ।
94 ಶಾಸನಮಿದಂಸುಧೀಜನಕುವಲಯಚಂದ್ರಸ್ಯಭೂಮಹೇಂದ್ರಸ್ಯ । ವೀರಶ್ರೀರಂಗರಾಯೋಕ್ತ್ಯಾ
95 ಪ್ರಾಹಪೌತ್ರಸ್ಸಭಾಪತೇಃ । ಕಾಮಕೋಟಿಸುತೋರಾಮಕವಿಶ್ಯಾಸನವಾಙ್ಮಯಂ । ವೀರಶ್ರೀ
96 ರಂಗರಾಯಕ್ಷ್ಮಾಪತಿದೇಶೇನಸೋಮನಾಥಾರ್ಯಃ । ಶಾಸನಮಲಿಖತ್ಕಾಮಯಶ್ರೀಗಣಪ
97 ಯಾರ್ಯಪೌತ್ರಮಣಿಃ । ದಾನಪಾಲನಯೋರ್ಮಧ್ಯೇದಾನಾಶ್ರೇಯೋನುಪಾಲನಂ । ದಾನಾಸ್ವರ್ಗ
98 ಮವಾಪ್ನೋತಿಪಾಲನಾದಚ್ಯುತಂಪದಂ । ಸ್ವದತ್ತಾದ್ವಿಗುಣಂಪುಣ್ಯಂ ಪರದತ್ತಾನುಪಾಲ
99 ನೆ । ಪರದತ್ತಾಪಹಾರೇಣಸ್ವದತ್ತಂನಿಷ್ಫಲಂಭವೇತ್ । ಸ್ವದತ್ತಾಂಪರದತ್ತಾಂವಾಯೋಹ
100 ರೇತವಸುಂಧರಾಂ । ಷಷ್ಟಿರ್ವರ್ಷಸಹಸ್ರಾಣಿವಿಷ್ಟಾಯಾಂಜಾ(ಯಾ)ಯತೇಕ್ರಿಮಿಃ । ಏಕೈವ
101 ಭಗಿನೀಲೋಕೇಸರ್ವೇಷಾಮೇವಭೂಭುಜಾಂ । ನಭೋಜ್ಯಾನಕರಗ್ರಾಹ್ಯಾವಿಪ್ರದತ್ತಾವಸುಂ
102 ಧರಾ । ಸಾಮಾನ್ಯೋಯಂಧರ್ಮಸೇತುಂನೃಪಾಣಾಂಕಾಲೇಕಾಲೇಪಾಲನೀಯೋಭವದ್ಭಿಃ ।
103 ಸರ್ವಾನೇತಾನ್ಭಾವಿನಃಪಾರ್ಥಿವೇಂದ್ರಾನ್ ಭೂಯೋಭೂಯೋಯಾಚತೇರಾಮಚಂದ್ರಃ ॥

ಶ್ರೀರಾಮ

15. ಓಲೆಗರಿಯಲ್ಲಿ ದೊರೆತ ಅಪ್ರಕಟಿತ ವಿಜಯನಗರ ಇತಿಹಾಸ ಆಕರಗಳು

– ಕೆಳದಿ ವೆಂಕಟೇಶ ಜೋಯಿಸ್

ವಿಜಯನಗರದ ಒಂದನೇ ವೆಂಕಟ (ಕ್ರಿ.ಶ. 1543)ನ ನಂತರ ಸದಾಶಿವರಾಯನ (ಕ್ರಿ.ಶ. 1543-1571) ಆಡಳಿತ ಕಾಲದಲ್ಲಿ ರಚಿಸಲ್ಪಟ್ಟ ಆರು ಗರಿಗಳುಳ್ಳ ಚೂರ್ಣಿಕೆಯೊಂದು ಇತ್ತೀಚೆಗೆ ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಕಂಡುಬಂದಿತು. ಇದು ವಿಜಯನಗರದ ಅಳಿಯ ರಾಮರಾಯನ ಸೋದರ ವಿಠಲರಾಯನ ಕುರಿತು ನಮಗೆ ಆಕರವನ್ನು ನೀಡುತ್ತದೆ. ಈ ಚೂರ್ಣಿಕೆಯನ್ನು ಬರೆದಾತನ ಹೆಸರಿನ ಉಲ್ಲೇಖವಿಲ್ಲ. ಭಾಷೆ, ಲಿಪಿಯ ಆಧಾರದಿಂದ ಇದು 17-18ನೇ ಶತಮಾನದ್ದೆನ್ನಬಹುದು. ಅಸಮಗ್ರವಾಗಿರುವ ಈ ಹಸ್ತಪ್ರತಿಗಳು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿವೆ. ಓಲೆಗರಿಯ ಪ್ರಮಾಣ ಉದ್ದ 15 ಸೆ.ಮೀ. ಹಾಗೂ ಅಗಲ 3 ಸೆ.ಮೀ.

ಚೂರ್ಣಿಕೆ ಎಂದರೆ ವಿವರವಾಗಿ, ಗದ್ಯ ಪದ್ಯ ಶೈಲಿಯಲ್ಲಿ ಬರೆಯುವುದು ಎಂದು ಅರ್ಥ. ಶ್ರೀ ರಾಮದಾಸರು ಶಿವಾಜಿಯ ಮಗ ರಾಜಾರಾಮನಿಗೆ ರಹಸ್ಯ ವಿಷಯವನ್ನು ಕಳುಹಿಸುವ ಸಂದರ್ಭದಲ್ಲಿ ಚೂರ್ಣಿಕೆಯಂತಹ ಗದ್ಯ ಪದ್ಯ ಮಿಶ್ರಿತ ಶೈಲಿಯಲ್ಲಿ ಬರೆದು ಕಳುಹಿಸುವುದು ರೂಢಿಯಲ್ಲಿತ್ತು. ಶ್ರೀ ಸಾಮಾನ್ಯನಿಗೆ ಇದು ಅರ್ಥವಾಗುತ್ತಿರಲಿಲ್ಲ. ಕೇವಲ ನಿಗದಿತ ಸಂದರ್ಭಗಳಿಗೆ ಮಾತ್ರ ಇದು ಅರ್ಥವಾಗುತ್ತಿತ್ತು.

ಈಗ ದೊರೆತಿರುವ ಚೂರ್ನಿಕೆಯಲ್ಲಿ ಕಂಡುಬರುವ ಶ್ರೀಮದ್ರಮಾರಮಣ, ಸಕಲಗುಣ ಸಂಪೂರ್ಣ, ಶಡ್ಗುಣ್ಯೈಶ್ವರ್ಯ, ಸಕಲದೆವ ಪ್ರತಿಪಾದ್ಯಸುರ ಸಾರ್ವಭೌಮ ... ಸುರವರ ಚಿಂತಾಮಣಿ, ಕರುಣನಿಧಿ, ಚತುರ್ವೆದ ಶದ್ಯಸ್ತ್ರ, ಅಷ್ಟಾದಶ ಪುರಾಣ, ಶ್ರೀಮಂನ್ಮಹಾಬಾಶ್ಯಬ್ರಂಹ, ಈ ಮೊದಲಾದ ಬಿರುದು ಬಾವಲಿಗಳು ಹಾಸುಹೊಕ್ಕಾಗಿ ಬರುವುದು ಕಾಣಬಹುದು. ಅದೇ ರೀತಿ ಅನಂತಾನಂತ್ತರವಿತೇಜ, ಬ್ರಂಹ್ಮವಾಯು ಸರಸ್ವತಿ, ಭಾರತ್ತಿ, ಗರುಢ, ಶೆಷರುದ್ರ, ಶಣ್ಮುಕಾವಿರಭದ್ರ ... ಲಕ್ಷ್ಮಣ ಜಾಂಬವತ್ತಿ, ಸಉಪರ್ಣಿ, ವಾರುಣಿ, ಉಮಾ, ಯಿಂದ್ರ ಮೊದಲಾದ ವಿವರಣೆಗಳು ಮಹಾನವಮಿ ಹಬ್ಬದಲ್ಲಿ ಕಾಣಬರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹಸ್ತಪ್ರತಿಯಲ್ಲಿ ಉಲ್ಲೇಖಗೊಂಡಿರುವ ವ್ಯಾಸರಾಯ ಆದಿಯಾಗಿ ವಾದಿರಾಜ ಮುಂತಾದ ಸಮಕಾಲೀನ ಧರ್ಮ ಸುಧಾರಕರ ಸಂಗತಿಗಳು ವಿಶ್ಲೇಷಣೆಗೆ ಅರ್ಹವಾಗಿವೆ. ಸುರೇಂದ್ರ, ಜಯೆಂದ್ರ, ಸುಧೆಂದ್ರ, ರಾಘವೆಂದ್ರರಾಯ, ಯೊಗಿಂದ್ರ, ಸುಧಿಂದ್ರ, ಸುಮುತೆಂದ್ರ, ಉಪೇಂದ್ರ, ವಾದಿಂದ್ರ, ವಸುದೆಂದ್ರ, ವರದೆಂದ್ರ, ಭುವನೆಂದ್ರ, ಮೊದಲಾದ ಧಾರ್ಮಿಕ ಹೆಸರುಗಳು ಗಮನ ಸೆಳೆಯುತ್ತವೆ.

ಓಲೆ ಹಸ್ತಪ್ರತಿಯಲ್ಲಿ ಗಮನಿಸಬೇಕಾದ ಅಂಶಗಳು :

ರಣ ರಂಗಧಿರಾ । ಆಶ್ರಿತ ಜನ ಮಂದಾರ । ಭುವನೇಶ ವೀರ ಜವರದಾರ ನಂದ ಗೋಪ ಕುಮಾರ । ಗೊಪಿ ಜನ ಜಾರಾ ನವನೀತ ಚೋರಾ ......

ವ್ಯಾಸಮುನಿವರದ ಶ್ರೀ ಪುರಂದರ ವಿಟಲಾ ಗುರು ಪುರಂದರಾಮಲ ಮದ್ವಪತಿ ಮಲವರದ ಪುರಂದರ ವಿಟ್ಠಲ ಅಭಿನವ ಪುರಂದರ ವಿಠಲ ರಂಗ ವಿಟ್ಠಲ ತ್ರಿಚಲಾನಂದ ವಿಟ್ಠಲ ಮುದ್ದು ಥಿಟ್ಠಲ ಕೃಷ್ಣವೆದವ್ಯಾಸಾತ್ಮಕ । ಶ್ರೀವರ ವಿಟ್ಠಲ ರಾಜಾದಿರಾಜ ನಮಸ್ತೆ xxxxx

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಡಾ. ವಿ.ಎಸ್.ಎಸ್. ಆಚಾರ್‌ರವರ ಸಂಪಾದಕತ್ವದಲ್ಲಿ ಹೊರತಂದಿರುವ 'ಶ್ರೀ ಕೃಷ್ಣದೇವರಾಯನ ದಿನಚರಿ' ಕೃತಿಯಲ್ಲಿ.

ಪುಟ 2 ರಲ್ಲಿ

ಸಾಲು 14 ..... ಡಣಾಯಕರವರು ಕೇಳಿ । ರಾಯರಿಗೆ

15 ಬಿನ್ನಹಂ ಮಾಡಿದರು । ವಿಠಲ ವಿರೂಪಾಕ್ಷರ ಸ್ಥಳದವರು । ಸ್ವಾಮಿ ನಿತ್ಯೋತ್ಸವಕ್ಕೆ ..... ಎಂಬಲ್ಲಿ

ಪುಟ 5 ರಲ್ಲಿ

ಸಾಲು 14 ಪ್ರದಾನಿ ತಿ(ಮ್ಮ)ಪ್ಪರಸರು ಸಾಳುವ ನಾಯಕರು । ಅಪ್ಪರ

15 ಪಿಳ್ಳೆಯು । ಕುಪ್ಪರ ಪಿಳ್ಳೆಯು । ಮನ್ನಾರ ಪಿಳ್ಳೆಯು ರಾಯಸದ ವಿಶ್ವಮರಸು ।

16 ತ್ರಿಯಂಬಕಯ್ಯನು .... ಎಂಬಲ್ಲಿ

ಪುಟ 48 ರಲ್ಲಿ

ಸಾಲು 22 ಅರಮನೆಗೆ ಅಪ್ಪಾಜಿ ಬಂದು । ತಮಗೆ ಆಪ್ತರಾದ

23 ಅಯ್ಯಪ್ಪರಸರು । ಕೊಂಡಮರಸರು । ರಾಯಸದ ವಿಟ್ಟಮರಸರು ಅವಸರದ

24 ಲಕ್ಷ್ಮೀಪತಿ ಮೊದಲಾದ ನಿಯೋಗಿಗಳು ...... ಎಂಬಲ್ಲಿ

ವಿಠಲರಾಯರ ಹೆಸರಿನ ಉಲ್ಲೇಖ ಕಂಡುಬರುತ್ತದೆ. ವಿಠಲರಾಯ ಮಹಾರಾಯರವರ ಹೆಸರು ಶಾಸನಗಳಲ್ಲಿಯೂ ಅಲ್ಲಲ್ಲಿ ಉಲ್ಲೇಖಗೊಂಡಿರುವುದಿದೆ.

ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ :

ವ ॥ ಇಂತು ರಾಜಯೋಗ್ಯಮಾದುಡುಗೊರೆಗಳನಿತ್ತು ಬೀಳ್ಕೊಡಲ್ ಸಂಕಣನಾಯಕಂ ಸಂತಸಂದಳೆದು ನಿಜಾವಾಸಮಂ ಸಾರ್ದು ಸುಖಮಿರುತ್ತುಮಿರಲೊಂದವಸರದೊಳ್ ರಾಮರಾಯರೋಲಗದೊಳ್ ಕುಳ್ಳಿರ್ದಲ್ಲಾ ದುರ್ಗಂಗಳೆಮ್ಮಧೀನ ಮರುವವಿದ್ದ ಕರ್ಣರಾಳುತಿರ್ಪ ಗೋವೆಯ ಗಡಮೊಂದೇನಾದೊಡಂ ಸಾಧ್ಯಮಾದುದಿಲ್ಲೆಂತಾದೊಡಮಾಗಡಮಂ ಸಾಧ್ಯಂಗೈಯಲ್ವೇಳ್ಕೆಂದು ನಿಜನಿಯೋಗಿ ಜನ ರೇಳಾಳೋಚಿಸಿ ಪಿಂತಮ್ಮ ಸಂಸ್ಥಾನಕ್ಕೊದವಿದ ರಾಜಕಾರ್ಯಂಗಳೊಳತಿ ಸಾಹಸಂಗೆಯ್ದು ಜಯಕಜ್ಜಂಗಳನಾಗಿಸಿ ಪರವು ಪ್ರಖ್ಯಾತಿಯಂ ಪಡೆದ ಸದಾಶಿವನಾಯಕ ನಾತ್ಮಜನಪ್ಪ ಸಂಕಣ್ಣನಾಯಕನ್ನೆ ತಂದಿರ್ಪನೀತನ ಮುಖದಿಂದಾ ದೊಡಮಾಕಾರ್ಯಮಂ ಸಾಧಿಸಲ್ವೇಳ್ಕೆಂದು ಮನದಂದು ನಿಜಾನುಜನಪ್ಪ ವಿಠಲರಾಯನ ನಾರಣ ಮುಖದ ಕಾರ್ಯಕ್ಕೆ ಪ್ರಮಾಣವನೊರರ್ಚಿಸಿ ಸಂಕಣನಾಯಕನಂ ಕರೆಸಿ ಮನೋಭಿಪ್ರಾಯಮಾನಿಸಿರ್ದು ಬೇಗದಿಂ ನಡೆದೆಮ್ಮ ಕಜ್ಜಮಂ ಶೇಖದಂಗೆಯ್ಯದೆಂದೊರೆದು ಸೇನಾ ಸಮೂಹಮಂ ಕೈವರ್ತಿಸಿ ಬೀಳ್ಕೊಡಲೊಡನಾ ಪ್ರಸ್ತುತದೊಳ್.

ಕಂ ॥ ಶ್ರೀ ವಿಠ್ಠಲರಾಯರ ಕೂ
ಡಾ ವಿಭುವರನ್ನೆದಿ ದಾಳಿವರಿದಂಬುಧಿಮ
ಧ್ಯಾವಷ್ಟಂಭನ ಮನಿಸಿದ
ಗೋವೆಯ ಗಡವಂ ಸಮೀಕದೊಳ್ ಸಾಧಿಸಿದಂ ೬

ಎಂಬುದಾಗಿ 'ವಿಠ್ಠಲರಾಯನ' ಉಲ್ಲೇಖ ಕಂಡು ಬರುತ್ತದೆ. The history of the Vijayanagar Empire ಪುಸ್ತಕದಲ್ಲಿ "In 1557 A.D. the Adil Shah again sent an army of 2,000 horse 18,000 foot under his officer Nazir Khan. It must be during this accasion that Rama Raya sent his first cousin Vithala Raja against the main land of Goa evidently in support of Ibrahim who was now his ally. ......" ಎಂಬುದಾಗಿ ಆ ಘಟನೆ ಹಾಗೂ ವಿಠ್ಠಲರಾಜನ ಕುರಿತು ಉಲ್ಲೇಖಗಳಿವೆ.

ಈ ಮೇಲಿನ ವಿವರಗಳು ಹಾಗೂ ಈಗ ದೊರೆತಿರುವ ಚೂರ್ಣಿಕೆಯನ್ನು ಗಮನಿಸಿದರೆ ರಾಮರಾಯನ ಚಿಕ್ಕಪ್ಪನ ಮಗನಾದ ಈ ವಿಠ್ಠಲರಾಯ ಅಥವಾ ವಿಠ್ಠಲರಾಜನ ಪ್ರಭಾವ ರಾಜಕೀಯ ವಲಯದಲ್ಲಿ ಬಹಳ ಪ್ರಾಮುಖ್ಯತೆ ಪಡೆದಿರುವುದು ವ್ಯಕ್ತವಾಗುತ್ತದೆ.

ದಕ್ಷಿಣದ ರಾಜ್ಯಗಳಲ್ಲಿ ಕಂಡು ಬಂದ ವಿರೋಧವನ್ನು ಹತ್ತಿಕ್ಕಲು ರಾಮರಾಯನು ತನ್ನ ಬಂಧು ಚಿನ್ನತಿಮ್ಮ ಹಾಗೂ 'ವಿಠಲರಾಜ' ಎಂಬುವವನನ್ನು ಕಳುಹಿಸಿಕೊಟ್ಟನು. ಅವರುಗಳು ದಂಗೆಗಳನ್ನು ಹತ್ತಿಕ್ಕಿದ್ದರು. ಇದರಿಂದ ವಿಜಯನಗರದ ಇತಿಹಾಸದಲ್ಲಿ ವಿಠಲರಾಜನ ಪ್ರಭುತ್ವವನ್ನು ಗುರುತಿಸಬಹುದು. ಸಾಕಷ್ಟು ಆಧಾರಗಳಿಲ್ಲದ ಕಾರಣ ಇದನ್ನು ಇದಮಿತ್ಥಂ ಎನ್ನುವಂತಿಲ್ಲವಾದರೂ ಈಗ ದೊರೆತಿರುವ ಚೂರ್ಣಿಕೆಯು ಇವನನ್ನು ಕುರಿತದ್ದೆ ಎಂದು ಹೇಳಲು ಅವಕಾಶವಿದೆ.

ಈ ಚೂರ್ಣಿಕೆಯಲ್ಲಿ ಕಂಡುಬರುವ ಪುರಂದರ ವಿಟ್ಟಲ, ವ್ಯಾಸರಾಯ, ವಾದಿರಾಜರು ಮೊದಲಾದವರುಗಳ ಕುರಿತು ಗಮನ ಸೆಳೆಯುತ್ತದೆ.

ಯಾವುದೇ ಚಾರಿತ್ರಿಕ ಘಟನೆ, ಸಾಮಾಜಿಕ, ಸಾಂಸ್ಕೃತಿಕ ಮುನ್ನಡೆ ಅಥವಾ ಚಳುವಳಿಯು ಅದು ಸಂಭವಿಸುವ ಕಾಲದ ಪರಿಣಾಮವನ್ನು ಒಳಗೊಂಡಿರುತ್ತದೆ. ಇದರಿಂದಾಗಿ ಯಾವುದೇ ಚಾರಿತ್ರಿಕ ಘಟನೆಯೂ ತನಗೆ ತಾನೇ ಪ್ರತ್ಯೇಕವಾಗಿರುವುದಿಲ್ಲ. ಈ ಅಂಶವನ್ನು ಆ ಕಾಲದಲ್ಲಿ ರಚಿತವಾದ ಸಾಹಿತ್ಯಕ ಆಧಾರಗಳು ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಈಗ ದೊರೆತಿರುವ ಓಲೆಗರಿ ಹಸ್ತಪ್ರತಿಯಲ್ಲಿರುವ ಚೂರ್ಣಿಕೆ ಪ್ರಮುಖವಾಗಿದ್ದು, ಉಳಿದ ಗರಿಗಳು ದೊರೆತಲ್ಲಿ ಹೆಚ್ಚಿನ ಅಂಶಗಳನ್ನು ತಿಳಿಯುವುದು ಸಾಧ್ಯವಾಗುತ್ತದೆ.

ಚೂರ್ಣಿಕೆಯಲ್ಲಿ ಕಂಡು ಬರುವ ಸ್ಥಳನಾಮಗಳು :

ಬದರಿ, ಅಯೋದ್ಯ, ಕಾಶಿ, ಪ್ರಯಾಗ, ಗಯಾ, ಅವನ್ತಿ, ಕುರುಕ್ಷೇತ್ರ, ಗೋಕುಲ, ಬೃಂದಾವನ, ಪಂಡರಾಪುರ, ಮಧುರ, ಶ್ರೀರಂಗ, ಕಂಚಿ, ಕಾಳಹಸ್ತಿ, ಸಾಲಿಗ್ರಾಮ, ಗಂಡಕಿ, ಶ್ರೀಶೈಲ, ಪೊಂಪಾನ್ಯಮಿಶತೋತ್ತಾದ್ರಿ, ಪುಷ್ಕರ, ರಾಮಸೇತು, ಕನ್ಯಾಕುಮಾರಿ, ಗೋಕರ್ನ, ಕೊಡಚಾದ್ರಿ, ಉಡುಪಿ, ಸುಬ್ರಹ್ಮಣ್ಯ ಇತ್ಯಾದಿ ....

ವಿಶೇಷ ನಾಮಗಳು :

ಶ್ರೀಮದ್ರಮಾರಮಣ, ಸಕಲದೆವ ಪ್ರತಿಪುಣ್ಯಸಾರ, ಪೊಂಪಾನ್ಯಮಿಶತೋತ್ತಾದ್ರಿ, ಕೃಷ್ಣವೇದ ವ್ಯಾಸಾತ್ಮ, ವಿಠಲರಾಜಾಧಿರಾಜ ...... ಇತ್ಯಾದಿ ಗಮನ ಸೆಳೆಯುವ ವಿಷಯವಾಗಿವೆ.

ವ್ಯಕ್ತಿನಾಮಗಳು :

ಸಚ್ಚಿದಾನಂದ, ಕಾಮದೇನು, ಸುರವರ, ಚಿಂತಾಮಣಿ, ಬ್ರಂಹ್ಮ, ವಾಯು, ಸರಸ್ವತಿ, ಭಾರತಿ, ಗರುಢ, ಶೇಷರುದ್ರ, ಷಣ್ಮುಕ, ವೀರಭದ್ರ, ಜಮದಗ್ನಿ, ವಶಿಷ್ಠ, ವೈವಸ್ವತ್ತ, ಮನುಮಿತ್ರ, ಸುರೇಂದ್ರ, ಜಯೇಂದ್ರ, ಸುದೇಂದ್ರ, ರಾಘವೇಂದ್ರ, ಯೋಗಿಂದ್ರ, ಸುದೀಂದ್ರ, ಸುಮುತೇಂದ್ರ, ಉಪೇಂದ್ರ, ವಾದೀಂದ್ರ, ವಸುದೇಂದ್ರ, ವ್ಯಾಸರಾಯ, ಶ್ರೀನಿವಾಸ, ಲಕ್ಷುಮಿಕಾಂತ, ರಘುನಾಥ, ಜಗನ್ನಾಥ, ಶ್ರೀಸುಧ, ಜಗದೀಶ, ಕಂಬುಘೊಶಾ, ಲಕ್ಷ್ಮೀಶಾ, ಭರತ, ಹರಿಶ್ಚಂದ್ರ, ಅಂಬರೀಶ, ವೆಂಕಟೇಶ, ಹಿರಣ್ಯಕ್ಷ, ಹಿರಣ್ಯಕಶಪು, ಶಿಶುಪಾಲ, ದಂತವಕ್ತ್ರ, ಪಾಂಡುರಾಯ, ರಾಮಕೃಷ್ಣ, ಬೌದ್ಧ, ಕಲ್ಕ್ಯ, ಸನತ್ಕುಮಾರ, ಹಯಗ್ರೀವ, ದತ್ತಾತ್ರೇಯ, ವೃಷಭ, ನರನಾರಾಯಣ, ಹರಿಕೃಷ್ಣ, ಪರಶುರಾಮ, ವಾಸುದೇವ ಇತ್ಯಾದಿ ....

ತೀರ್ಥಗಳು :

ವ್ಯಾಸರಾಯತೀರ್ಥ, ಶ್ರೀನಿವಾಸತೀರ್ಥ, ರಾಮತೀರ್ಥ, ತುಂಗಭದ್ರ, ಕೊಮಾರಧಾರೆ, ನೇತ್ರಾವತಿ, ಕುಮದ್ವತಿ, ಕುಶಾವತಿ, ಹರಿದ್ರಾವತಿ, ಹೇಮಾವತ್ತಿ, ಅರ್ಕಾವತಿ, ವೇದಾವತ್ತಿ, ಚರ್ಮಣವತ್ತಿ, ಗೊಮವತ್ತಿ, ಭೀಮರತ್ತಿ, ಮಣಿಕರ್ಣಿಕೆ, ಗೋದಾವರಿ, ಇತ್ಯಾದಿ .....

ಗು 1 ಮುಂಭಾಗ :

01. ಶ್ರೀ ಗಣಾಧಿಪತಯೆ ನಮಃ । ಜೂರ್ನಿಕೆ ಬರಉದಕೆ ಶುಭಮಸ್ತು ॥ ಶ್ರೀಮದ್ರಮಾರಮಣ ಸಕಲ ಗುಣ ಸಂಪೂರ್ಣ ಶಡ್ಗುಣ್ಯೈಶ್ವರ್ಯ xxxx (ಮುರಿದಿದೆ)

02. ನ್ನ ಸಚ್ಚಿದಾನಂದ ವಿಗ್ರಹ ಸಕಲ ದೆವ ಪ್ರತಿ ಪಾದ್ಯಸುರ ಸಾರ್ವಬೌಮ ಉಮಾ । ಆಶ್ರಿತ ಜನಕಾಮದೆನ್ನೂ । ಸುರವರ ಚಿಂತಾಮಣಿ ಮು xxxxx (ಮುರಿದಿದೆ)

03. ಕಲ್ಪತ್ತರು ಕರುಣ ನಿಧಿ ಕಂಜಾಕ್ಷ ಕಮಲನಾಭಾ । ಸ್ವಪ್ರಕಾಶ ಅಪ್ರಮೆಯ । ಅಗಂಮ್ಯ ಅಗೋಚರ ಶ್ರೆಷ್ಟ । ಸ್ತಿತಿ ಸಂಹಾರ xxxxx (ಮುರಿದಿದೆ)

04. ನಗ್ನಾನಗ್ನಾನ ಬಂಧ । ಮೊಕ್ಷಪ್ರದಾತ್ರೂ । ಚತುರ್ವೆದ ಶಡ್ಯಸ್ತ್ರ ಅಷ್ಟಾದಶ ಪುರಾಣ ಶ್ರೀಮಂನ್ಮಹಾಬಾಶ್ಯ ಬ್ರಂಹ xxxx (ಮುರಿದಿದೆ)

05. ಮೂಲ ರಾಮಾಯಣ । ಮೂಲಮಂತ್ರ ಹಂಸ ಮಂತ್ರ ಅಷ್ಟಾಂಗ ಯೊಗ ಪಂಚಬೆದ ತಾರತಂಮ್ಯ । ನವವಿಧ ಭಕ್ತಿಗ್ಯಾ xxxx (ಮುರಿದಿದೆ)

06. ಗ್ಯ ಗದ್ಯ ಪದ್ಯನಾಮ ಸೂಳಾದಿ ತಾಳ ಮುದಂಗ ವೇಣುನಾದ ಗರಗರಾದಿ ಸಮಸ್ತ ಶಬ್ದ ಪ್ರತಿಪಾದ್ಯಾ ॥ ಅನವದ್ಯ ಸುಗುಣಾ xxxx (ಮುರಿದಿದೆ)

07. ಜಂನಿತಾಪಾದ ಪಲ್ಲವಾ ॥ ವಿಶ್ವಾದಾರ ಕವಳಿ ತ್ರಿಯಾಂಕಿತ್ತೂಧರ ಶ್ರಿದೆವ್ಯಾಸ್ಪದ ವಿಸ್ತಿರ್ಣ ವ xxxx (ಮುರಿದಿದೆ)

ಗರಿ 1 ಹಿಂಭಾಗ :

01. ಕಂಠ ಕಿರೀಟ ಮಕುಟ ಮಕರ ಕುಂಡಲ ಉಸ್ತುಭಧರ ಶಂಖ ಚಕ್ರ ಶಾಂಗ್ಯಂದಂನ್ನಾಗದಾಪಾಣಿ । ಆಜಾನುಬಾಹು xxxx (ಮುರಿದಿದೆ).

02. ಪಾಂಗ ಮಂಜು ಬಾಷಣ ಮಣ್ಡ ಹೂ ಸೊಪೇತಶವ್ನೆಜಯಂತ್ರಿ ತ್ರಿಶೂಲ ಶಿವನ ಮಾಲಾ ಪಿತಾಂಬರಧರ ಗಂಗಾಕ್ಷತಾ ಕಸ್ತೂರ್ರಿ xxxx (ಮುರಿದಿದೆ)

03. ಷ್ಯಾದಿ ಸರ್ವಾಲಂಕಾರ ಭೂಷಣ ಭೂಷಿತಾ । ಆದಿ ಮದ್ಯಾಂತರ ಹಿತ್ತಾ । ಕಮಲ ಜಪಿತ್ತಾ । ಶ್ರೀ ಭೂಸಮೆರ್ತಾ ಅಖಿಳಜನದಾತಾ xxxx (ಮುರಿದಿದೆ).

04. ಕತ್ರಾತಾ ॥ ಬವ ವಿರಹಿತ್ತಾ । ಬಾಗವತ ಚರ್ರಿತ್ತಾ । ಯೊಗವಿಬ್ಯತ್ತಾ । ಆಗಮವಂದಿತ್ತಾ । ಬಜಕಾಬ್ಜಿ ವಂದಿತಾಂಘ್ರಿ xxxx (ಮುರಿದಿದೆ)

05. ಜಾ । ಅನಂತಾನಂತ್ತರವಿತೇಜಾ । ಬ್ರಂಹ್ಮವಾಯು ಸರಸ್ವತ್ತಿ ಭಾರತ್ತಿ ಗರುಢ ಶೆಷರುದ್ರ ಶಂಣ್ಮುಕ ವಿರಭದ್ರ ವಿ xxxx (ಮುರಿದಿದೆ)

06. ದಿ ಕಳಿಂದಿ । ಲಕ್ಷ್ಮಣೆ ಜಾಂಬವತ್ತಿ ಸಲುಪರ್ಣ ವಾರುಣಿ । ಉಮಾ ಯಿಂದ್ರಾ ಕಾಮ ಪ್ರಾಣಾ । ಅನಿರುಧ ರತ್ತಿ ಗುರುಸ್ವ xxxx (ಮುರಿದಿದೆ)

07. ಮನು ದಕ್ಷ ಪುಜಶ ಶಚಿ ಪ್ರವಾಹ ಯಮ ಶತರೂಪ ಚಂದ್ರ ಸೂರ್ಯ್ಯ ವರುಣ ನಾರದ ಶುಕ್ರ ಮರುತ್ತ ಪ್ರಸೂತ್ತಿ ವಿಶ್ವಾಮಿತ್ರಾ xxxx (ಮುರಿದಿದೆ).

08. ಚಿ ಕಶ್ಯಪ ಅತ್ರಿ ಭರದ್ವಾಜ ಗಉತ್ತಮ ಜಮದಗ್ನಿ ವಶಿಷ್ಠ ವೈವಸ್ವತ್ತ ಮನುಮಿತ್ರ ತಾರ ನಿರುತ್ತಿ ಪ್ರವಾಹ ಪತಿ ವಿಶ್ವ xxxxx (ಮುರಿದಿದೆ)

ಗರಿ 2 ಮುಂಭಾಗ :

01. ಅಶ್ವಿನಉಗಣ ಪತ್ತಿಧನಪತಿ ಭಕ್ತಶಶ । ಶಕ್ಮಾಸ್ರದೆವಾಃ ದ್ವಾದಶ ಸತ್ಯಾಬೊಧ ಸತ್ಯಸಂದ ಸತ್ಯವರತ್ತಿರ್ಥ ವಿಬುದೆಂದ್ರ ಚಿತ್ತಾ

02. ಮಿತ್ರಾವರ್ಯ್ಯ ರಘುತನೆಯ ಸುರೇಂದ್ರ ಜಯೆಂದ್ರ ಸುದೆಂದ್ರ ರಘುವೆಂದ್ರರಾಯ । ಯೋಗಿಂದ್ರ ಸುದಿಂದ್ರ ಸುಮುತೆಂದ್ರ ಉಪೆಂದ್ರಾ

03. ವಾದಿಂದ್ರಾರ । ವಸುದೆಂದ್ರ ವರದೆಂದ್ರಾ ಭುವನೆಂದ್ರಾ ಪುರುಶೊತ್ತುಮತಿರ್ಥ ಬ್ರಂಹ್ಮಂಣ್ಯತಿರ್ಥ ವ್ಯಾಸರಾಯ ಶ್ರಿನಿವಾ

04. ಸತ್ತಿರ್ಥ ರಾಮತಿರ್ಥ । ಲಕ್ಷುಮಿಕಾಂತಾ ರಘುನಾಥ ಜಗಂನಾಥ ಶ್ರಿನಾಥ ವಿದ್ಯಾಪತ್ತಿ ವಿಷ್ಣುತೀರ್ಥಚಾರ್ಯ ವಾದಿರಾಜಾ

05. ದಿ ಸಮಸ್ತ ರ್ರಿಷಿಜನ ಯತ್ತಿಜನಹು ಕಮಲ ಕರ್ಣಿಕಾನಿವಾಸಾ । ತದ್ಯಾನಗಂಮ್ಯ ವಿಲಾಸಾ । ಭಕ್ತಜನಪ್ರೊಶಾ । ನಿರ್ದೊ

06. ಶಾ ಜಗದಿಶಾ । ಕಂಬುಘೊಶಾ । ಲಕ್ಷುಮೀಶಾ । ಸಕಲಾಗಮ ತೊಶಾ । ಸರ್ವೆಶಾ । ನಳ ಮಂದಾತ ಭರತ್ತ ಹರ್ರಿ ಚಂದ್ರ ಅಂಬರ್ರಿಶ

07. ರುಕ್ಮಾಂಗದ ಸಗರ ಹೈಹಯ । ಯಿಕ್ಷಾಕು । ಯಯಾತಿ ಯದು ದ್ರುವ ದಿಳಿಪ ಜನಕ ಭಗಿರಥ ಗಾದಿಉತ್ತಾನು । ಪಾದ । ದಾಶಿ

ಗರಿ 2 ಹಿಂಭಾಗ

01. ರಾಯ । ದಶರಥ ಉಗ್ಗ್ರಸೆನ ಶೂರರಾಯ । ರಂಧಗಣದಾಯ ಕುಂತ್ತಿಬೊಜ । ನಉಶ ವಿರಾಟ ಪಾಂಡುರಾಯ ಯುಧಿಷ್ಠಿರ । ಧ

02. ರ್ಮ ಪರ್ರಿಕ್ಷಿತ ಜನಮೆಜಯ । ಕ್ಷೆಮಕಾಂತ್ತಾದಿ ಸಮಸ್ತ ರಾಜ ಕುಲ ಪ್ರತಿಪಾಲಕಾ

03. ನಕಾ । ಯಿತ್ತಿ ಅಜಬವಾದ್ಯಮರ । ಅಷ್ಟದಿಕ್ಪಾಲಕ । ಸುರಜನ ಮನುಜನ । ಮುನಿಜನ । ಚಕ್ರವರ್ತಿಜನ । ಭಕ್ತಜನ ಮುಕ್ತಜನ । ಸಮ ।

04. ಸ್ತಜನ ಪರ್ರಿಪಾಲಾ । ಸುಶಿಲಾ । ರಮಾಲೊಲಾ । ಸದ್ಗುಣಚೆಲಾ । ಶ್ರೀ ಗೊಪಾಲಾ । ಬಾಲಾ ॥ ಮತ್ಸ್ಯಾನಿ ಕೂರ್ಮಾವರಾಹಾನಾರಸಿಂಹ್ವ

05. ವಾಮನ ಭಾರ್ಗವರಾಮ ಕೃಷ್ಣ ಬಉದ್ದ ಕಲ್ಕ್ಯ ಸನತ್ಕುಮಾರ ಕಪಾಲ ಹಯಗ್ರಿವ ದತ್ತಾತ್ರೆಯ ಉ್ರಷಭ ನರನಾರಾಯಣ ।

06. ಹರಿಕೃಷ್ಣ ತ್ತಾಪಸ ಮನುಮ್ಯದಾಸಯಗ್ಯ ಧಂದ್ವಂತ್ರರ್ರಿ ಶಿಂಶುಮಾರ ಪರಿಶುರಾಮ ವೆದವ್ಯಾಸತ್ಮಕ । ಕೆಶವಾದೀ ಚತುರ್ಥಿ

07. ಶಂತ್ತಿ ರೂಪಾತ್ಮ ವಿಶ್ವಂ ವಿಷ್ನು ವಶಿಷ್ಕಾರಾದೀ ಸಹಸ್ರರೂಪಾತ್ಮಕ ದಿಶ್ವತ್ವಜಸ ಪ್ರಗ್ಯ ಸೂರ್ಯ್ಯತ್ಮಕ । ಆತ್ಮಾದಿ ಚತ್ತುರ ರೂಪಾ

ಗರಿ 3 ಮುಂಭಾಗ

01. ಶ್ಮಕ ಪ್ರದ್ಮೊಲ್ಯಾದಿ ಪಂಚರೂಪಾತ್ಮಕಾ । ಅಜಿತ್ಯಾದಿ ಅನಂತರೂಪಾತ್ಮಕ ಪರಾದಿ ಬಹುರೂಪಾತ್ಮಕನ । ರಾಯಣನರಶಉಯ್ರ್ಯಾ

02. ದಿ ಶಕ್ತ ರೂಪಾತ್ಮಕ । ಅನಿರುದ್ದ ಪ್ರದ್ಯುಂಮ್ನ ಸಂಕರುಷಣ । ವಾಸುದೆವ ಅಚ್ಯುತ್ಯಾನಂತ ಗೊವಿಂದಾ । ವಿರಾಟಮುತ್ಯಾದ್ಯನಂತಾವ

03. ತ್ಯೂರಾ ॥ ಸುಖಿಮಯ ಶರ್ರಿರಾ । ಸಚರ್ರಿತ ಪರಾಶರನಿ । ಶ । ದಿಗಂಬರಾ । ಸಮಸ್ತ ಜಗದಾಧಾರಾ । ಪರಮೊದ್ಯಾರಾ । ದುರ್ರಿತ್ತ ವಿದೂ

04. ರಾ । ಜಯ ಸಮರ ಶೂರಾ । ಶ್ರೀಧರಾ । ಅತ್ತಳ ವಿತ್ತಳ ಸುತ್ತಳ ಸುರಾತಳ ರಸಾತ್ತಳ ಪಾತ್ತಾಳ ಭೂಲೊಕ ಭುವಲೋಕ ।

05. ಸುವರ್ಲೊಕ । ಮಹಣರ್ಲೊಕ । ಜನೊಲೊಕ । ಕಪೊಲೊಕ । ಸತ್ಯಲೊಕಾದಿ । ಚತುರ್ದಶ ಭುವನ ಭರತ್ತ ಖಂಡ ಕೆತ್ತುಮಾ

06. ಲಾ । ಕುಮಹಿರಂರ್ಣ್ಯಾಯ । ಭದ್ರಾಶ್ವ ಕಿಂಪುರುಶ ಹರ್ರಿವಂಶ ಯಿಳಾಉತ್ರತ್ತರಂಮ್ಯಕನವಖಂಡ । ಬದರ್ರಿ ಅಯೊದ್ಯ

07. ಕಾಶಿ ಪ್ರಯಾಗ । ಗಯಾ ಅವಂತ್ತಿಕ ದ್ಯಾರಾವತ್ತಿ ಕುರುಕ್ಷೇತ್ರ ಗೊಕುಲ ಬೃಂದಾವನ । ವಡ್ಡಿ ಮಧುರಾ ಪಂಡರಾಪುರಾ ಅಹೊಬಲ

ಗರಿ 3 ಹಿಂಭಾಗ

01. ಶ್ರೀರಂಗ ಕಂಚಿ । ಕಾಳಹಸ್ತಿ ವೆಂಕಟಾದ್ರಿ ಸಾಲಿಗ್ರಾಮ । ಗಂಡಕಿ । ಶ್ರೀಶೈಲ ಹೊಂಪಾನ್ಯಮಿಶತೊತ್ತಾದ್ರಿ ಪುಷ್ಕರ ರಾಮಸೆತ್ತು ।

02. ಅನಂತ್ತಶಯನ । ದರ್ಬಶಯನ ಮದ್ಯಾರ್ಜುನ ಶ್ರಿಮುಷ್ಕ ಕಂನ್ಯಾಕುಮಾರ್ರಿ ಗೊಕರ್ಂರ್ಣ ಕೊಡಚಾದ್ರಿ ಉಡುಪಿ । ಸುಬ್ರಂಹ್ಮಂಣ್ಯ

03. ಮದ್ಯತಾಳ ಸ್ವಾದೆವಿ । ಜಲಾದಿ ಸಮಸ್ತ ಕ್ಷೆತ್ರಾದಿ ವಾಸಾ ॥ ಕಉಸ್ತುಬ ಭೂಶಾ । ದನುಜವಿನಾಶಾ । ಪಾವನವೆಶಾ । ಶ್ರೀವೆ

04. ಂಕಟೆಶಾ । ಲವಣಯಿಕ್ಷ ಸುರಾಸರ್ವೆದ ದಕ್ಷಿರ ಶುದ್ಯೊದ ಕೇದಿ ಸಪ್ತಾರ್ಣವ । ಜಂಬುಪ್ಲಕ್ಷ ಶಾಲ್ಮಲಿ । ಕುಶ ಕ್ರ

05. ಉಂಚ ಶಾತಪುಷ್ಕರ ಸಪ್ತದ್ವಿಪ ವರ್ಜ್ಯದ ದ್ವಿನ ವಾವರ್ಂಣ ಬ್ರಂಹ್ಮಾಂಡ ಬಾಂಹ್ಯ ಅವ್ಯಕುತ್ತ ಆಕಾಶ ಸ ।

06. ಕ್ಷರ ಜತ್ತ ಮೊಗುಣ ಉತ್ತುವಿ ಅಪ್ಪು ತೆಜ । ವಾಯು । ರಾಕಾಶಾದಿ ಚತುರ್ವಿಂಶತ್ತಿ ವಕ್ಷಶ್ರಿ ಬೂದುರ್ಗಾತ್ಮಕ ವೈಕುಂಟ್ಮಶ್ವೆತ್ತದ್ವಿಪ ಅನಂತ್ತಾ

07. ಸನ ಪರಮಾಣು ಪ್ರದೇರ್ಶ ಸಮಸ್ತ ಚೆತನಾ ಚೆತನ ದೆಶಕಾಲ ಗುಣತ್ತ ಖಂಡ ವ್ಯಾಪ್ತ । ನಿರ್ಲಿಪ್ತಾ । ನು ತಾಜನ ಪ್ರಾಪ್ತಾ ಅಹಿಸು

ಗರಿ 4 ಮುಂಭಾಗ

01. ಪ್ರಾ । ನಿತ್ಯತ್ರುಪ್ತಾ । ದಿತ್ತಿಜಕುಲ ಪುಂಣ್ಯ ಜನ ಹಿರಂಣ್ಯಕ್ಷ ಹರಂಣ್ಯಕಶ್ಯಪು ಮಧುಕೈಟಬ ತ್ತಮಾಸುರ ಸುಬಾಹು ಮರ್ರಿ

02. ಚ ತಾಟಕಿ ಖರದೂಶಣ ತ್ರಿಶಿರ ರಾವಣ ಕುಂಬಕರ್ಂರ್ಣ ಸಮೂಲ ಬಲನಾಶನಾರ್ಘ ಹಲ್ಯಾ ಶಾಪವಿಮೊಚನಾ । ವಿಶೆಷಣರಾ ।

03. ಜ್ಯಾಬಿಶಕ್ತಾ ಶ್ರೀ ಸಿತಾರಾಮ । ಅಯೊದ್ಯಾರಾಮ । ಕೊದಂಡರಾಮ । ದಶರಥರಾಮ । ಪಟಾಭಿರಾಮ । ಕಉಸಲ್ಯಾರಾಮ ।

04. ಮುನಿಜನಪ್ರೆಮ । ಸದ್ಗುಣಧಾಮ । ಸುರಕುಲಲಲಾಮ । ಪರ್ರಿಪೂರ್ಣ ಕಾಮ ಯಧುಕುಲಾಬ್ದಿಸೊಮ । ನಿಲಮೆಘಶ್ಯಾ

05. ಮ । ಶಿಶುಪಾಲ ದಂತ್ತವಕ್ತ್ರ ಶಕಟಾಸುರ ಧೆನುಕಾಸುರ ಪ್ರಲಂಬಾಸುರ ತ್ರುಣವರ್ತ ಬಕಕಾಸುರವತ್ಸಾ x ಸುರ ಅಘಾಸುರ

06. ಚಾಣೂರ ಮುಟಿಕ ಮಲ್ಲಿ ಕಂಸಾಸುರ ಮುರಾಸುರ ನರಕಾಸುರ ಶ್ರೀಗಳ ಪುಂಡರ್ರಿಕ ವಾಸುದೆವ ಪೂತನಿ ಕುರುಕುಲಾ

ಗರಿ 4 ಹಿಂಭಾಗ

01. ದಿ ಸಮಸ್ತ ದೈತ್ಯಾ ಪ್ರಾಣಾಪಹೂರಾ । ರಣರಂಗಧಿರಾ । ಆಶ್ರಿತಜನ ಮಂದಾರ । ಭುವನೆಕವಿರಾ । ಜವರಾದಾರ ನಂ

02. ದ ಗೊಪಕುಮಾರ । ಗೊಪಿಜನಜಾರಾ ನವನಿತಚೊರಾ ಗೊಪಿಯರೊಸ್ತ್ರಾಪಹಾರಾ ಉಂದಾವನ ಸಂಚಾರಾ ಪಾಂಡವ

03. ರಾದಾರಾ । ಪವನ ಜನಮಂದಿರಾ । ದಶಾವತಾರಾ । ಅಕ್ರೂರವರದ । ಅಜಮಿಳವರದ ಅಂಬರ್ರಿಶ ವರದ ತ್ತುಂ

04. ಬುರವರದ ನಾರದವರದ ವಿಭಿಷಣವರದ ಗಜೆಂದ್ರವರದ ಕುಚೆಲವರದ ಪ್ರಾಪತ್ತಿವರದ ದ್ರುವವರದ । ಪ್ರಹ

05. ಲಾದವರದ ಉಭವವರದ ಮುಚುಕುಂದವರದ ಪುಂಡರ್ರಿಕವರದ ವ್ಯಾಸಮುನಿವರದ ಶ್ರೀ ಪುರಂದರ ವಿಟಲಾಗುರು

06. ಪುರಂದರಾ ವಿಟಲ ಮದ್ವಪತ್ತಿ ವಿಟಲವರದ ಪುರಂದರ ವಿಟ್ಟಲ ಅಬಿನವ ಪುರಂದರ ವಿಟ್ಟಲ ರಂಗವಿಟ್ಟಲ ತ್ರಿಚಲಾನಂದ ವಿಟ್ಟಲ ಮುದ್ದು

ಗರಿ 5 ಮುಂಭಾಗ

01. ವಿಟಲ ವಿರ ವಿಟಲ ವಿಜಯ ವಿಟಲ ಗೊಪಾಲ ವಿಟಲ ವ್ಯಾಸ ವಿಟಲ ಜಿ xxxxxx (ಮುರಿದಿದೆ)

02. ವಿಟಲ ವೈಕುಂಟ ವಿಟಲ ಶ್ರೀದವಿಟಲ ಶ್ರಿಪತ್ತಿ ವಿಟಲ ಶ್ರೀನಿವಾಸ ವಿಟಲ xxxxx (ಮುರಿದಿದೆ)

03. ಚಟುಳದಾನವಕುಟಿಲ ಕೋಟಿಪಸುನಾಮಕಸ್ಪೂರ್ರಿ ನಿಟಲ ಪಾ xxxxx (ಮುರಿದಿದೆ)

04. ವ ಮೊಹನಾಂಗ ಕಾಳಿಂಗ ಮದಭಂಗ ಕುಪಾಂಗ ಭುಜಂಗ ಶಾಯೀ xxxxx (ಮುರಿದಿದೆ)

05. ರಯಿಂಗಿತ್ತಾಗ್ರಜಗದಂತರಂಗ ಪ್ಲವಂಗ ನಾಯಕ ಸ್ವಾಮಿಂ । ಗಂಗಾ ಜನಕಗ xxxx (ಮುರಿದಿದೆ)

06. ಗೊಪಾಂಗ ಮಂಗಳ ರಥಾಂಗ ಬಾಗಿರಥಿ ವಾರಣಾಶಿ ಮುನೆ ಸರ xxxxx (ಮುರಿದಿದೆ)

ಗರಿ 5 ಹಿಂಭಾಗ

01. ತುಂಗಭದ್ರೆ ಕುಮಾರಧಾರ್ರೆ ನೆತ್ರಾವತಿ ಕುಮದ್ವತಿ ಕುಶಾವತಿ ಹರಿದ್ರವ xxxx (ಮುರಿದಿದೆ)

02. ವತ್ತಿ ಹೆಮಾವತ್ತಿ ಅರ್ಕಾವತ್ತಿ ವೆದಾವತ್ತಿ ಚರ್ಮಣಾವತ್ತಿ ಗಣಪತ್ತಿ ಗೊಮವತ್ತಿ xxxxx (ಮುರಿದಿದೆ)

03. ಲ್ಗುಣಿ ಬಿಮರತ್ತಿ ಮಣಿಕರ್ನಿಕೆ ಗೊದಾವರ್ರಿ ಸರಯೂ ಮಾಲವತ್ತಿ xxxxx (ಮುರಿದಿದೆ)

04. ನಿ ಲೊಕಪಾವನಿ । ನಳಿನಿಲಳಕ ನಂದಿನಿ ನಿಪಯೊಶಿನಿ ಶಂಬಿಮುಚಿತ್ರಿ xxxxx (ಮುರಿದಿದೆ)

05. ನದಿ ಗಾರ್ಗಿ ಗಾಯತ್ರಿ ತ್ರಪಸಿ । ಜಾಂನ್ಹವಿ ಕಉಮೊದಕಿ ಮಾಹೆಶ್ವರ್ರಿ ಧಂಮ್ಯ xxxxx (ಮುರಿದಿದೆ)

06. ಗಉತಮಿ ಪಯೊಷ್ಣಿ ಪ್ರಯಾಗಿ ಸಾನಿನಿಸ್ವಾಮಿ ಪುಷ್ಕರಣಿ ಚಂದ್ರಪುಷ್ಪ xxxxx (ಮುರಿದಿದೆ)

ಗರಿ 6 ಮುಂಭಾಗ

01. ಅಂತರಗಂಗ ನೂಪುರ ಗಂಗ ದವಳಗಂಗ ಸುವರ್ಣಾಮುಖಿ ॥ ಮಂಗಳತ್ತೀರ್ಥ xxxxx (ಮುರಿದಿದೆ)

02. ಸುಗ್ರಿವತೀರ್ಥ ಜಾಂಬವತೀರ್ಥ ಅಂಗದತೀರ್ಥ ಗಂಧಮಾಧವತೀರ್ಥ ಧರ್ಮತೀರ್ಥ xxxxx (ಮುರಿದಿದೆ)

03. ದೆವತೀರ್ಥ ದ್ರಉಪದಿತೀರ್ಥ ಹನುಮತೀರ್ಥ ಅಗಸ್ತ್ಯತೀರ್ಥ ಅಗ್ನಿತೀರ್ಥ xxxxx (ಮುರಿದಿದೆ)

04. ಶಂಬತೀರ್ಥ ಪದ್ಮತೀರ್ಥ ಜಟಾಯುತೀರ್ಥ ಪಾಶಾಣತೀರ್ಥ ಬೆತ್ರಾಳತೀರ್ಥ xxxxx (ಮುರಿದಿದೆ)

05. ಲ್ಲಿತೀರ್ಥ ನಾಗತೀರ್ಥ ಬಾಣತೀರ್ಥ ಬಲ್ಲಾಳತಿರ್ಥ ಪಾಂಡುತಿರ್ಥ ಚಕ್ರತಿರ್ಥ ವಿಷ್ನುತಿರ್ಥ xxxxxx (ಮುರಿದಿದೆ)

06. ರ್ಥ ವಾಸುದೆವತೀರ್ಥ ಸಾಲಿಗ್ರಾಮತೀರ್ಥ ಶಿತೊ xxxxxxxxxx (ಮುರಿದಿದೆ)

ಗರಿ 6 ಹಿಂಭಾಗ

01. ಧ್ಮ ಸರೊವರ ಮದ್ವ ಸರೊವರ ವ್ಯಾಸಾಬ್ದಿಸಿಂಧು ಸಂಗಮಾದಿ ಸಮಸ್ತ ತೀರ್ಥದೆ xxxxx (ಮುರಿದಿದೆ)

02. ಮುನಿಮನ ಧಾಮೀ । ಸೆವಿತ ತ್ರಿಭೂಮಿ । ಸುರಗಣ ಮಣಿ ಮಕುಟವಂದಿತ್ತಾಂಘ್ರಿ ಸರೊ xxxx (ಮುರಿದಿದೆ)

03. ಲಯಕಾರಣಾ । ಅಪಾರ ಕರನಿಧಿಕರುಣಾ । ಕೊಮಲಾಂಗ ಶತ ಸಹಸ್ರ xxxxxx (ಮುರಿದಿದೆ)

04. ಭರಣಾ । ಶ್ರೀ ಲಕ್ಷುಮೀರಮಣಾ । ನಾರಾಯಣ ಪುರಾಣ ಪುರುಶೊತ್ತಮ xxxxx (ಮುರಿದಿದೆ)

05. ಸಮೆತ್ತ ಪೂರ್ಣ ಪ್ರಗ್ನ್ಯಾದಿ ಅಷ್ಟಪಾದಾರ್ಚಿತ ಸಮಸ್ತ ಗುರು ಅಂತರ್ರಿಯಾಮೀಮಮ xxxxx (ಮುರಿದಿದೆ)

06. ಕೃಷ್ಣ ವೆದವ್ಯಾಸಾತ್ಮಕ । ಜಯ ಜಯ ಶ್ರೀವರ ವಿಟ್ಟಲರಾಜಾದಿ ರಾಜ ನಮಸ್ತೆ xxxxxxx (ಮುರಿದಿದೆ)

16. ವಿಜಯನಗರ - ಕೆಳದಿ ರಾಜಕೀಯ ಸಂಬಂಧಗಳು

– ಜಯದೇವಪ್ಪ ಜೈನಕೇರಿ

14 ರಿಂದ 17ನೇ ಶತಮಾನದಲ್ಲಿ ಕನ್ನಡ ನಾಡಿನ ಸಂಸ್ಕೃತಿ, ಜನಜೀವನವನ್ನು ಶ್ರೀಮಂತಗೊಳಿಸಿದ ಪ್ರಸಿದ್ಧ ಅರಸೊತ್ತಿಗೆ ವಿಜಯನಗರ ಸಾಮ್ರಾಜ್ಯದ್ದು. ಕ್ರಿ.ಶ. 1336ರಲ್ಲಿ ಸಂಗಮ ವಂಶದ ಹರಿಹರರಾಯ, ಬುಕ್ಕರಾಯರಿಂದ, ವಿದ್ಯಾರಣ್ಯ ಗುರುಗಳ ಮಾರ್ಗದರ್ಶನದಲ್ಲಿ ಸ್ಥಾಪಿಸಲ್ಪಟ್ಟಿತು. ಇವರು ಆಂಧ್ರದವರೆಂದೂ, ಮುಸ್ಲಿಮರಾಗಿ ಮತಾಂತರ ಹೊಂದಿದ್ದರೆಂದೂ, ಇತಿಹಾಸಕಾರರಲ್ಲಿ ಮತ್ತು ಆಗಿನ ಪ್ರವಾಸಿ ಕಥನಗಳಲ್ಲಿ ಬಿನ್ನಾಭಿಪ್ರಾಯವಿದೆ. ಇವರು ಹೊಯ್ಸಳ ದೊರೆ ಮುಮ್ಮಡಿ ವೀರಬಲ್ಲಾಳನ ಮಾಂಡಲೀಕರಾಗಿದ್ದರೆಂದೂ, ಮಹಮ್ಮದೀಯರ ಧಾಳಿ ಎದುರಿಸಲು, ಹರಿಹರ, ಬಕ್ಕರಿಗೆ ಹೊಯ್ಸಳರು ಬೆಂಬಲ ನೀಡಿ ಪ್ರೋತ್ಸಾಹಿಸಿದರೆಂದೂ ತಿಳಿದುಬರುತ್ತದೆ. ವಿಜಯನಗರ ದೊರೆಗಳು ಕನ್ನಡ ನಾಡು, ನುಡಿಗೆ ಸಲ್ಲಿಸಿರುವ ಅಪಾರ ಪ್ರೋತ್ಸಾಹ, ಪ್ರೀತಿ, ಗೌರವ, ಗಮನಿಸಿದರೆ ಇವರು ಮೂಲತಃ ಕನ್ನಡಿಗರೇ ಎಂದು ಧೈರ್ಯವಾಗಿ ಹೇಳಬಹುದು. ಇವರ ಹೆಚ್ಚು ಶಾಸನಗಳು ಕನ್ನಡದಲ್ಲಿ "ಶ್ರೀ ವಿರೂಪಾಕ್ಷ" ಅಂಕಿತ ಹೊಂದಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೀಯುತ್ತದೆ.

ಹಂಪೆ ಇಂದು ತುಂಗಭದ್ರಾ ನದಿ ತೀರದಲ್ಲಿರುವ ಒಂದು ಹಳ್ಳಿ. ಒಂದು ಕಾಲದಲ್ಲಿ ಇದು ಸುಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು 9 ಚದರ ಮೈಲಿ ವಿಸ್ತಾರ ಹೊಂದಿ ಭಾರತದಲ್ಲಿ ಅತ್ಯಂತ ಶ್ರೀಮಂತ ಪ್ರದೇಶವಾಗಿದ್ದು, ಈಗ ಇಲ್ಲಿ ಪಾಳುಬಿದ್ದ ಕೋಟೆ ಕೊತ್ತಲ, ಹಾಳಾದ ಬೀದಿಗಳು, ಭಗ್ನ ಅರಮನೆ ಅವಶೇಷಗಳು, ದೇವಾಲಯಗಳು ಕಂಡುಬರುತ್ತಿವೆ. ಪೂರ್ವದಲ್ಲಿ ಕಿಷ್ಕಿಂದೆ ಎಂದೂ, ನಂತರದಲ್ಲಿ ಪಂಪಾಕ್ಷೇತ್ರವೆಂದೂ ಕರೆಯಲ್ಪಟ್ಟು, ಇಲ್ಲಿರುವ ಶ್ರೀ ಪಂಪಾ ವಿರೂಪಾಕ್ಷ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ್ದು. ಹಂಪೆಯನ್ನು 1336ರಲ್ಲಿ ಒಂದನೇ ಹರಿಹರನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನು. ವಿಜಯನಗರ ಅರಸರು ರಾಜ್ಯವನ್ನೂ, ರಾಜಧಾನಿಯನ್ನೂ, ವಿರೂಪಾಕ್ಷ ದೇವಾಲಯವನ್ನೂ ಕಾಲಕಾಲಕ್ಕೆ ವಿಸ್ತರಿಸುತ್ತಾ ಬಂದರು. ಕ್ರಿ.ಶ. 1509 ರಿಂದ 1529 ರವರೆಗೆ 20 ವರ್ಷ ಆಳಿದ ಶ್ರೀ ಕೃಷ್ಣದೇವರಾಯನು ಪ್ರಸಿದ್ಧನಾದ ಚಕ್ರವರ್ತಿ. ಈತನ ಕಾಲ ಕರ್ನಾಟಕದ ಸುವರ್ಣ ಯುಗ, ವಿಜಯನಗರ ಸಾಮ್ರಾಜ್ಯದ ಅತ್ಯಂತ ಉನ್ನತಿಯ ವಿಸ್ತಾರದ ಕಾಲ. ಈ ಕಾಲದಲ್ಲಿ ವಿಜಯನಗರಕ್ಕೆ ಬಂದ ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸ ಕಥನಗಳಲ್ಲಿ ಸಾಮ್ರಾಜ್ಯದ ವೈಭವ ಸಂಪತ್ತುಗಳನ್ನು ಚಿತ್ರಿಸಿ ದಾಖಲಿಸಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸುಮಾರು 230 ವರ್ಷಗಳ ಆಳ್ವಿಕೆ ಒಂದು ಪರ್ವಕಾಲ. ಸಮೃದ್ಧ ಸಾಧನ, ಸಂಪತ್ತು, ದಕ್ಷ ಆಡಳಿತ, ಸುವ್ಯವಸ್ಥಿತ ವ್ಯವಸ್ಥೆ, ಶಾಂತಿ, ನೆಮ್ಮದಿ ಜೀವನ ಒಳಗೊಂಡ ರಾಜ್ಯದಲ್ಲಿ ವಿದ್ಯೆ, ಸಾಹಿತ್ಯ, ಸಂಗೀತ, ನೃತ್ಯ, ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡಿ, ವಿದೇಶಗಳೊಂದಿಗೆ ವ್ಯಾಪಾರ ಮತ್ತು ರಾಯಭಾರ ಸಂಬಂಧಗಳನ್ನಿಟ್ಟುಕೊಂಡು, ಪ್ರಬಲವಾದ ಸೇನಾಬಲ ಹೊಂದಿ, ಸಾಮಂತ ರಾಜರ ಸಹಕಾರದಿಂದ ಸಾಮ್ರಾಜ್ಯವಾಳಿದರು. ಈ ಕಾಲದ ಶಿಲ್ಪಕಲೆ, ವಾಸ್ತುಶಿಲ್ಪ, ದೇವಾಲಯಗಳು, ವ್ಯಾಪಾರ ಮಳಿಗೆಗಳನ್ನು ವಿವರಿಸುವುದರೊಂದಿಗೆ, ಮುತ್ತು ರತ್ನಗಳನ್ನು ಬಳ್ಳದಲ್ಲಿ ಅಳೆದು ಮಾರುತ್ತಿದ್ದುದನ್ನು ಇತಿಹಾಸಕಾರರು ದಾಖಲಿಸಿದ್ದಾರೆ.

1347 ರಲ್ಲಿ ದಕ್ಷಿಣದಲ್ಲಿ ಅಸ್ತಿತ್ವಕ್ಕೆ ಬಂದ ಬಹಮನೀ ಸುಲ್ತಾನರು ವಿಜಯನಗರದ ಪ್ರತಿಸ್ಪರ್ಧಿಗಳಾಗಿದ್ದರು. ಬುಕ್ಕರಾಯನ ಕಾಲದಲ್ಲಿ ಬಹಮನೀ ರಾಜ್ಯದೊಂದಿಗೆ ಆಗಾಗ ಕದನಗಳು ಪ್ರಾರಂಭವಾಗಿ ತೀವ್ರ ಹೋರಾಟಗಳು ನಡೆದವು. ವಿಜಯನಗರ ಸಾಮ್ರಾಜ್ಯದ ಕರಾವಳಿ ತೀರದಲ್ಲಿ ಪೋರ್ಚ್‌ಗೀಸರ ಆಗಮನದಿಂದ ಚಕ್ರವರ್ತಿಗಳಿಗೆ ದಕ್ಷಿಣ ಭಾಗದಲ್ಲಿ ಪ್ರಬಲ ಸಾಮಂತರ ಅವಶ್ಯಕತೆ ಉಂಟಾಯಿತು. 1499ರ ಸುಮಾರಿನಲ್ಲಿ ಮಲೆನಾಡಿನ ಸಣ್ಣ ಹಳ್ಳಿ ಕೆಳದಿಯಲ್ಲಿದ್ದ ರೈತರಾದ ಚೌಡಪ್ಪ ಭದ್ರಪ್ಪ ಸಹೋದರರ ಧೈರ್ಯ, ಸಾಹಸದ ವಿಷಯ ವಿಜಯನಗರ ಅರಸರ ಗಮನಕ್ಕೆ ಬಂದು, ಅವರಿಗೆ ಭೂಮಿಯಲ್ಲಿ ಸಿಕ್ಕ ಗುಪ್ತಧನದ ಬಗ್ಗೆ ವಿಚಾರಿಸಲು ತಮ್ಮ ಆಸ್ಥಾನಕ್ಕೆ ಕರೆಸಿಕೊಂಡು ವಿಚಾರಣೆ ನಡೆಸಿದರು. ಚೌಡಪ್ಪ ಭದ್ರಪ್ಪ ಸಹೋದರರ ಧ್ಯೇಯ, ಉದ್ದೇಶ, ಧಾರ್ಮಿಕ ನಡವಳಿಕೆಗೆ ಮಾರು ಹೋದ ವಿಜಯನಗರ ಅರಸನಾದ ಕೃಷ್ಣದೇವರಾಯನು, ತನ್ನ ರಾಜ್ಯಕ್ಕೆ ತುರುಕರು ಮತ್ತು ಬೇಡರು ದೊಡ್ಡ ವೈರಿಗಳಾಗಿದ್ದಾರೆ, ಹಲವು ತುಂಡು ಪಾಳೇಗಾರರು ವಿರೋಧಿಗಳಾಗಿ ತೊಂದರೆ ಕೊಡುತ್ತಿದ್ದಾರೆ. ಆದ ಕಾರಣ ಆ ಸಹೋದರರು ತನ್ನ ಶತ್ರುಗಳನ್ನು ನಿಗ್ರಹಿಸಿ ಸಾಮ್ರಾಜ್ಯಕ್ಕೆ ಸಹಾಯಕರಾಗಬೇಕೆಂದು ಒಪ್ಪಿಸಿ, ಅವರಿಗೆ ಕುದುರೆ, ರಥ, ಛತ್ರಿ, ಚಾಮರ, ಉಡುಗೊರೆ, ಆಭರಣ ಕೊಟ್ಟು ನಿಯಮಿಸಿದನು. ಪೂರ್ವದಿಕ್ಕಿನ ಬೇಡರನ್ನು, ತುಂಡು ಅರಸರನ್ನು ಧೈರ್ಯದಿಂದ ಎದುರಿಸಿ ಹೋರಾಡಿದರು. ಶತ್ರುಗಳನ್ನು ಸೋಲಿಸಿ ಸೆರೆ ಹಿಡಿದರು. ಇದರಿಂದ ಸಂತೋಷಗೊಂಡ ಅರಸು, ಭದ್ರಪ್ಪ ಚೌಡಪ್ಪರಿಗೆ ನಾಯಕ ಎಂಬ ಬಿರುದನ್ನಿತ್ತು, ಕೆಳದಿ, ಇಕ್ಕೇರಿ, ಪೆರ್ಬಯಲು, ಯಲಗಳಲೆ ಮುಂತಾದ 8 ಮಾಗಣೆಗಳ ಅಧಿಕಾರ ನೀಡಿ ಗೌರವಿಸಿದನು. ಅಲ್ಲದೆ ಕೆಳದಿಯ ಮೂಲ ಸಂಸ್ಥಾನ ಮನ್ನೆಯ ಚೌಡಪ್ಪನಾಯಕ ಎಂಬುದಾಗಿ ರಾಯಸ ಬರೆಸಿ, ರಾಜಮುದ್ರೆ, ಆಜ್ಞೆ ಘೋಷಣೆ, ನಾಣ್ಯ ಚಲಾವಣೆ ಮುಂತಾದ

ಅಧಿಕಾರ ನೀಡಿ ಸ್ವತಂತ್ರವಾಗಿ, ವಿಜಯನಗರ ಸಾಮ್ರಾಜ್ಯದ ನಿಷ್ಠರಾಗಿ ಆಳುವಂತೆ ಬೀಳ್ಕೊಟ್ಟನು. ಕೆಳದಿ ಅರಸರ ನಾಡಕಲಸಿಯ ಶಾಸನದಲ್ಲಿ (ಕ್ರಿ.ಶ. 1506) ಎಡವ ಮುರಾರಿ ಕೆಳದಿಯ ಚೆಲುಡಗೌಡರು ಎಂಬ ಉಲ್ಲೇಖವಿದೆ. ಕೆಳದಿ ನೃಪ ವಿಜಯದಲ್ಲಿ ವಿಜಯನಗರ ಅರಸು ರಾಮರಾಯನ ಆದೇಶದಂತೆ ಕಲಬುರ್ಗಿಕೋಟೆಯನ್ನು ಗೆದ್ದ ಸದಾಶಿವನಾಯಕನಿಗೆ "ಕೋಟೆ ಕೋಲಾಹಲ" ಎಂಬ ಬಿರುದನ್ನೂ, ಜಾಲಿಹಾಳ ಗ್ರಾಮ ಮುತ್ತಿ ಕೋಟೆ ವಶಪಡಿಸಿಕೊಂಡ ಕಾರಣ ಎಡವ ಮುರಾರಿ ಎಂಬ ಬಿರುದನ್ನೂ ನೀಡಿ ಗೌರವಿಸಿದರೆಂದೂ ಹೇಳಲಾಗಿದೆ. ವಿಜಯನಗರ ಅರಸರು ತಮ್ಮ ಶಾಸನಗಳ ಕೊನೆಯಲ್ಲಿ "ಶ್ರೀ ವಿರೂಪಾಕ್ಷ" ಎಂಬ ಅಂಕಿತ ಕಂಡು ಬರುವಂತೆಯೇ ಕೆಳದಿ ಅರಸರ ಶಾಸನಗಳ ಕೊನೆಗೆ "ಶ್ರೀ ಸದಾಶಿವ" ಎಂಬ ಅಂಕಿತ ಸಾಮಾನ್ಯವಾಗಿ ಕಂಡು ಬರುತ್ತದೆ. ಅನಂತರ ರಾಮರಾಯನ ಆದೇಶದಂತೆ ಸದಾಶಿವ ನಾಯಕನು ಕರಾವಳಿಗೆ ಮುತ್ತಿಗೆ ಹಾಕಿ ತುಳುರಾಜನನ್ನು ಸೋಲಿಸಿ ಕಾಸರಗೋಡಿನಲ್ಲಿ ಸ್ಥಿರ ಸ್ತಂಭ ನಿಲ್ಲಿಸಿದನು.

ಮಲೆನಾಡಿನ ಭೌಗೋಳಿಕ ಆಯಕಟ್ಟಿನ ಸ್ಥಳಗಳನ್ನೂ, ತುಳುನಾಡಿನ ಭಾಗಗಳನ್ನೂ ತಮ್ಮ ನಂಬಿಗೆಯ ಬಂಟರಾದ ಕೆಳದಿ ಅರಸರಿಗೆ ವಹಿಸಿದುದು, ಎರಡೂ ರಾಜ್ಯಗಳ ಬೆಳವಣಿಗೆ ದೃಷ್ಟಿಯಿಂದ ಮುಖ್ಯವಾಗಿತ್ತು. ಸದಾಶಿವನಾಯಕನು (ಕ್ರಿ.ಶ. 1513–1545) ವಿಜಯನಗರ ಅರಸರ ಅನುಮತಿಯಿಂದ ಕೆಳದಿ ಪಟ್ಟಾಭಿಷಿಕ್ತನಾಗಿ ಕೃಷ್ಣದೇವರಾಯನ ಸಮಕಾಲೀನನಾಗಿದ್ದು, ದಕ್ಷಿಣ ಮತ್ತು ಪೂರ್ವದ ಶತ್ರುಗಳನ್ನು ಎದುರಿಸಿ, ತನ್ನ ಬಲಿಷ್ಠ ಸೈನ್ಯದಿಂದ ಬಿರುದು ಬಾವಲಿ ಪಡೆದು ಗೌರವಿಸಲ್ಪಟ್ಟನು.

ದೊಡ್ಡ ಸಂಕಣ್ಣನಾಯಕನ (ಕ್ರಿ.ಶ. 1546–1559) ಕಾಲದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ವಿಪತ್ತುಗಳು ಬಂದಾಗ, ರಾಮರಾಯನು ಕೆಳದಿ ಅರಸರನ್ನು ವಿಚಾರ ವಿನಿಮಯಕ್ಕೆ ಕರೆಸಿಕೊಂಡು, ಆಪ್ತಾಲೋಚನೆ ಮಾಡಿದನು. ದೊಡ್ಡ ಸಂಕಣ್ಣನಾಯಕನು ಭಾರಿ ಸೈನ್ಯದೊಂದಿಗೆ ಹೋಗಿ ಪೋರ್ಚುಗೀಸರ ವಶದಲ್ಲಿದ್ದ ಗೋವೆಯನ್ನು ಗೆದ್ದನು. ಇದು ಸಹ ಕೆಳದಿ–ವಿಜಯನಗರ ಸಂಬಂಧಗಳನ್ನು ತೋರಿಸುತ್ತದೆ. ಇದರಿಂದಾಗಿ ಕೆಳದಿ ಅರಸರ ಗೌರವ ಪ್ರತಿಷ್ಠೆಗಳು ಹೆಚ್ಚಾದವು. ವಿಜಯನಗರ ಅರಸರ ಪರವಾಗಿ ದೊಡ್ಡ ಸಂಕಣ್ಣನು ಪೋರ್ಚುಗೀಸರೊಡನೆ ಹೋರಾಡಿದ್ದಕ್ಕಾಗಿ "ಭುಜಕೀರ್ತಿ" ಎಂಬ ಬಿರುದನ್ನು ಪಡೆದು ಸನ್ಮಾನಿತನಾಗಿ ಇಕ್ಕೇರಿಗೆ ಹಿಂದಿರುಗಿದನು. ನಂತರದಲ್ಲಿ ಶೂರನಾದ ದೊಡ್ಡ ಸಂಕಣ್ಣನಾಯಕನು ಜಂಬೂರಿನ ವಿರುಪಣ್ಣ ಒಡೆಯರ ಎಂಬುವನ ಉಪಟಳ ತಾಳದೆ, ಜಂಬೂರನ್ನು ವಶಪಡಿಸಿಕೊಂಡು, ಸುಂದರವಾದ ಉಡುಗಣಿ ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಇದರಿಂದಾಗಿ ಜಂಬೂರು ವಿರುಪಣ್ಣನು ವಿಜಯನಗರ ಅರಸರಿಗೆ ದೂರು ಇತ್ತನು. ಆಗ ವಿಜಯನಗರ ಅರಸರು, ದೊಡ್ಡ ಸಣ್ಣನಾಯಕನಿಗೆ ಹೇಳಿ ಕಳಿಸಲಾಗಿ, ತಮ್ಮನಾದ ಚಿಕ್ಕ ಸಂಕಣ್ಣನಾಯಕನಿಗೆ ರಾಜ್ಯಭಾರ ವಹಿಸಿ, ವಿಜಯನಗರಕ್ಕೆ ತೆರಳಿ ರಾಮರಾಯರನ್ನು ಸಂಧಿಸಿದನು. ರಾಮರಾಯನ ಆದೇಶದಂತೆ ಜಂಬೂರು, ಉಡುಗಣಿಗಳನ್ನು ವಿರುಪಣ್ಣ ಒಡೆಯರಿಗೆ ಬಿಟ್ಟುಕೊಟ್ಟನು. ಅಲ್ಲದೆ, ಕುಟುಂಬ ಸಹಿತ ರಾಜಸನ್ನಿಧಿಯಲ್ಲಿ ಇರಬೇಕಾಗಿ ಬಂದಿತು. ಅಲ್ಲಿರುವಾಗಲೇ ದೊಡ್ಡ ಸಂಕಣ್ಣನಾಯಕನಿಗೆ ಇಬ್ಬರು ಪುತ್ರರು ಜನಿಸಿದರೆಂದು ತಿಳಿದು ಬರುತ್ತದೆ. ನಂತರದಲ್ಲಿ ರಾಮರಾಯನ ಅಪೇಕ್ಷೆಯಂತೆ ಯುದ್ಧದಲ್ಲಿ ಗೋವೆ ಕೋಟೆ ಗೆದ್ದನು. ಇದರಿಂದಾಗಿ ರಾಮರಾಯನು ಸಂತೋಷದಿಂದ ಉಡುಗೊರೆ ನೀಡಿ ಬೀಳ್ಕೊಟ್ಟನು. ನಂತರ ತನ್ನ ಇಬ್ಬರು ಗಂಡು ಮಕ್ಕಳಿಗೂ ಮದುವೆ ಮಾಡಿ ವಿದ್ವಾಂಸರಿಂದ ಪ್ರಪಂಚದ ವಿವರ ತಿಳಿದು, ತಮ್ಮ ಚಿಕ್ಕ ಸಂಕಣ್ಣನಾಯಕನಿಗೆ ರಾಜ್ಯಭಾರ ವಹಿಸಿ ದೇಶಾಟನೆ ಹೊರಟನು.

ಚಿಕ್ಕ ಸಂಕಣ್ಣನಾಯಕ (ಕ್ರಿ.ಶ. 1559–1571) ತನ್ನ ಮೇಲೆ ದಂಡೆತ್ತಿ ಬಂದ ತುರುಕರ ಧಾಳಿಯನ್ನು ಎದುರಿಸಿ ಭುಜಬಲ ಪ್ರತಾಪದಿಂದ ರಾಜ್ಯಭಾರವನ್ನು ರಕ್ಷಿಸುತ್ತಿದ್ದನು. ಇದೇ ಸಮಯದಲ್ಲಿ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ರಾಮರಾಯನು ತುರುಕರ ಮೇಲೆ ದಂಡೆತ್ತಿ ಹೋಗಿ ರಕ್ತಾಕ್ಷಿ ಸಂವತ್ಸರ ಮಾಘಮಾಸದಲ್ಲಿ ಯುದ್ಧ ನಡೆದು ತುರುಕರನ್ನು ಹಿಮ್ಮೆಟ್ಟಿಸಿದನು. ನಂತರ ಪುನಃ ರಾಮರಾಯನ ಸೈನ್ಯದಲ್ಲಿದ್ದ ಮುಸ್ಲಿಂ ಸೇನಾಪತಿಗಳ ಒಳಸಂಚಿನಿಂದಾಗಿ ರಕ್ಕಸತಂಗಡಿ (ತಾಳಿ ಕೋಟೆ)ಯಲ್ಲಿ ಯುದ್ಧ ನಡೆದು 1565ರ ಜನವರಿಯಲ್ಲಿ ವಿಜಯನಗರ ಸಾಮ್ರಾಜ್ಯ ಪತನವಾಯಿತು. ರಾಮರಾಯನನ್ನು ಸೆರೆ ಹಿಡಿದು ಶಿರಚ್ಛೇಧನ ಮಾಡಲಾಯಿತು. ಸೈನ್ಯದಲ್ಲಿ ಹಾಹಾಕಾರವಾಗಿ ಹಿಮ್ಮೆಟ್ಟಿ ಓಡಿ ಹೋದರು. ವಿಜಯನಗರ ಧೂಳೀಪಟವಾಯಿತು. 1565ರಲ್ಲಿ ನಡೆದ ನಿರ್ಣಾಯಕ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರ ಚಕ್ರವರ್ತಿಗಳ ಪರವಾಗಿ ಕೆಳದಿ ಅರಸರು ಯುದ್ಧದಲ್ಲಿ ಪಾಲ್ಗೊಂಡ ಬಗ್ಗೆ ಕೆಳದಿ ನೃಪ ವಿಜಯದಲ್ಲಿ ಯಾವುದೇ ಪ್ರಸ್ತಾಪವಿಲ್ಲದಿರುವುದು ಕುತೂಹಲಕರ ಅಂಶವಾಗಿದೆ. ಸಂಪತ್ತಿನ ಬೀಡಾಗಿದ್ದ ಹಂಪೆಯು ಹೇಳ ಹೆಸರಿಲ್ಲದಂತೆ ಲೂಟಿಯಾಯಿತು.

ಕೆಳದಿ ಅರಸರು ವಿಜಯನಗರ ಅರಸರ ಸಾಮಂತರಾಗಿದ್ದು, ಸ್ವತಂತ್ರ ರಾಜರಾಗಿ ಕೆಳದಿ, ಇಕ್ಕೇರಿ, ಕವಲೇದುರ್ಗಗಳಿಂದ ಕ್ರಿ.ಶ. 1763ರವರೆಗೆ ಕನ್ನಡ ನಾಡಿನ ಬಹುಭಾಗವನ್ನು ಆದರ್ಶವಾಗಿ ಆಳಿದರು.

ವಿಜಯನಗರ ಚಕ್ರವರ್ತಿಗಳು ಶೃಂಗೇರಿ ಪೀಠಕ್ಕೆ ಗೌರವ ನೀಡಿ, ದಾನದತ್ತಿ ನೀಡಿದಂತೆ ನಂತರದಲ್ಲಿ ಕೆಳದಿ ಅರಸರೂ ಶೃಂಗೇರಿ ಪೀಠದ ಅನನ್ಯ ಭಕ್ತರಾಗಿ ದಾನ ದತ್ತಿ ನೀಡಿ ಶ್ರೀಪೀಠದಿಂದ ಗೌರವಿಸಲ್ಪಟ್ಟಿದ್ದಾರೆ. ಶೃಂಗೇರಿ ಮಠಕ್ಕೆ ಒದಗಿದ ವಿಪತ್ತುಗಳನ್ನು, ರುಣ ಭಾರಗಳನ್ನು,

ಆಕ್ರಮಣಗಳನ್ನು ನಿಗ್ರಹಿಸಿ ತಮ್ಮ ನಿಷ್ಠೆಯನ್ನು ತೋರಿಸಿದ್ದಾರೆ. ಅಲ್ಲದೆ ವಿಜಯನಗರ ಅರಸರ ಉದಾರ ಧಾರ್ಮಿಕ ಪರಂಪರೆ ಪರಧರ್ಮ ಪ್ರೀತಿ ಮೆರೆದಿದ್ದಾರೆ.

ಆಧಾರ ಗ್ರಂಥಗಳು

1. ಕೆಳದಿ ಗುಂಡಾಜೋಯಿಸ (ಸಂ.), *ಕೆಳದಿ ನೃಪವಿಜಯ*
2. ಕಲಬುರ್ಗಿ ಎಂ.ಎಂ. ಮತ್ತು ರಾಮಭಟ್ಟ ಬಿ.ಎಸ್. (ಸಂ.), 1994, *ಕೆಳದಿ ಸಂಸ್ಥಾನ-ಸಮಗ್ರ ಅಧ್ಯಯನ.*

17. ವಿಜಯನಗರ ಮತ್ತು ಉಮ್ಮತ್ತೂರಿನ ಸಂಬಂಧಗಳು

– ನಿರ್ಮಲ್‌ರಾಜು

ವಿಜಯನಗರ ಸಾಮ್ರಾಜ್ಯ ಮತ್ತು ಉಮ್ಮತ್ತೂರು ಪಾಳಯಪಟ್ಟಿನ ನಡುವಣ ಸಂಬಂಧವು ಕರ್ನಾಟಕದ ಐತಿಹಾಸಿಕ ಹಿನ್ನೆಲೆಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇದು ಅಂದಿನ ರಾಜಕೀಯ ಮತ್ತು ಸೈನಿಕ ಕ್ಷೇತ್ರಗಳ ಪರಿಸ್ಥಿತಿಯನ್ನು ಪ್ರತಿಬಿಂಬಿಸುವಂತಹ ಘಟನೆಯೂ ಆಗಿದೆ. ಏಕೆಂದರೆ ವಿಜಯನಗರ ಸಾಮ್ರಾಜ್ಯದಂತಹ ಬಲಾಢ್ಯ ಹಾಗು ಕೇಂದ್ರೀಕೃತ ರಾಜಕೀಯ ವ್ಯವಸ್ಥೆಯು ಅಂದಿನ ದಿನಗಳಲ್ಲಿ ಹೇಗೆ ಸ್ಥಳೀಯ ರಾಜಕೀಯ ವ್ಯವಸ್ಥೆಯೊಡನೆ ಸಂಬಂಧವನ್ನು ಹೊಂದಿತ್ತೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಮತ್ತು ತನ್ಮೂಲಕ ರಾಜಕೀಯದಲ್ಲಿ ಶ್ರೇಣೀಕೃತ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದು, ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ವಿಕಸನಕ್ಕೆ ಸಹಕಾರಿಯಾಯಿತೆಂಬುದಾಗಿಯೂ ಸಹ ಕಂಡು ಬರುತ್ತದೆ.

ವಿಜಯನಗರ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಯನ್ನು "ಸಂಯುಕ್ತ ಪದ್ಧತಿ" (Federal System) ಎಂದು ವರ್ಣಿಸಬಹುದು. ಏಕೆಂದರೆ ಈ ವ್ಯವಸ್ಥೆಯು ಸಂಪೂರ್ಣ ಕೇಂದ್ರೀಕೃತ ವ್ಯವಸ್ಥೆಗಿಂತ ವಿಭಿನ್ನವಾಗಿತ್ತು. ಕ್ರಿ.ಶ. 1336 ರಿಂದ 1565 ರವರೆಗೆ ವಿಜಯನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶಗಳ ಚಕ್ರವರ್ತಿಗಳು ದಕ್ಷಿಣ ಭಾರತದಲ್ಲಿ ಒಂದು ಬೃಹತ್ ಸಾಮ್ರಾಜ್ಯವನ್ನು ಸ್ಥಾಪಿಸಿ, ಕರ್ನಾಟಕದ ಇತಿಹಾಸದಲ್ಲಿ ವೈಭವದ ಕಾಲಕ್ಕೆ ಸೃಷ್ಟಿಕರ್ತರಾದರು. ಹೀಗೆ ವಿಜಯನಗರದರಸರು ಸ್ಥಾಪಿಸಿದ ಬೃಹತ್ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಯೇ ಪಾಳೇಗಾರರನ್ನು ಸೃಷ್ಟಿಸಿತು. ಈ ಸಾಮ್ರಾಜ್ಯದ ರಾಜಕೀಯ ವ್ಯವಸ್ಥೆಗೆ ಮೂರು ಪ್ರಧಾನ ಲಕ್ಷಣಗಳಿದ್ದವು. ಅವುಗಳು (1) ಉಂಬಳಿಗಮಾನ್ಯದ ಲಕ್ಷಣ, (2) ಸಂಯುಕ್ತ ಪದ್ಧತಿಯ ಲಕ್ಷಣ ಮತ್ತು (3) ವಿಕೇಂದ್ರೀಕರಣ ಲಕ್ಷಣ. ಮೊದಲನೆಯ ಲಕ್ಷಣವು ಮುಂದೆ ಪಾಳೇಗಾರರೆಂದು ಸಾಮಾನ್ಯವಾಗಿ ಕರೆಯಲ್ಪಟ್ಟ ರಾಜಕೀಯ ಅಧಿಕಾರಸ್ಥ ವರ್ಗವನ್ನು ಹುಟ್ಟುಹಾಕಿತು. ರಾಜಕೀಯ ಶಕ್ತಿಯ ಹಂಚಿಕೆಯೇ ಅದರ ಕೇಂದ್ರ ಸೂತ್ರವಾಗಿತ್ತು. ದೇಶೀಯ ಆಕರಗಳಲ್ಲದೆ, ವಿದೇಶಿ ಬರಹಗಳು ಸಹ ಇಂತಹ ತೀರ್ಮಾನಕ್ಕೆ ಪುಷ್ಟಿ ನೀಡುತ್ತವೆ. ವಿಜಯನಗರ ಕಾಲದ ಕನ್ನಡ, ತೆಲುಗು, ಸಂಸ್ಕೃತ ಮೊದಲಾದ ಶಾಸನಗಳಲ್ಲಿಯೂ ಇಂತಹ ಪಾಳೆಯಗಾರರ ಬಗೆಗೆ ಸಾಕಷ್ಟು ಪ್ರಸ್ತಾಪ ಬಂದಿದೆ. ಈ ಕಾಲದಲ್ಲಿ ಪಾಳೇಗಾರರನ್ನು ಅಮರನಾಯಕರೆಂದೂ, ಉಂಬಳಿಗಮಾನ್ಯ ಪದ್ಧತಿಯನ್ನು ನಾಯಂಕರ ಪದ್ಧತಿಯೆಂದೂ ಸಹ ಕರೆಯುತ್ತಿದ್ದರು.[1] ವಿಜಯನಗರಕ್ಕೆ ಭೇಟಿಕೊಟ್ಟ ಪೋರ್ಚುಗೀಸ್ ಪ್ರವಾಸಿಗ ನ್ಯೂನಿಜ್ ಬರೆದಿರುವ ಪ್ರವಾಸಿ ಗ್ರಂಥದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಇಂತಹ ಅಮರನಾಯಕರ ಪಟ್ಟಿಯನ್ನು, ಅವರ ಪಾಳಯಪಟ್ಟನ್ನು, ಅಲ್ಲಿಯ ಉತ್ಪನ್ನವನ್ನು, ಅವರು ಕೇಂದ್ರ ಸರಕಾರಕ್ಕೆ ನೀಡಬೇಕಾಗಿದ್ದ ಕಪ್ಪ ಕಾಣಿಕೆಯ ಮೊತ್ತವನ್ನು ತಿಳಿಸಿದ್ದಾನೆ.[2] ಇಂತಹ ಅಮರನಾಯಕರನ್ನು ನ್ಯೂನಿಜ್ ತನ್ನ ಗ್ರಂಥದಲ್ಲಿ ಕ್ಯಾಪ್ಟನ್[3]ಗಳೆಂದು ಕರೆದಿದ್ದಾನೆ. ಇಂತಹ ಇನ್ನೂರು ಕ್ಯಾಪ್ಟನ್‌ಗಳು ವಿಜಯನಗರ ಸಾಮ್ರಾಜ್ಯದಲ್ಲಿದ್ದರೆಂದು ಅವನು ತಿಳಿಸಿದ್ದಾನೆ. ಕ್ರಿ.ಶ. 1565 ರಲ್ಲಿ ನಡೆದ ತಾಳಿಕೋಟೆ ಕದನದ ನಂತರ, ವಿಜಯನಗರ ಸಾಮ್ರಾಜ್ಯವು ಅವನತಿಯ ಹಾದಿ ಹಿಡಿದಾಗ ಅಮರನಾಯಕರು ಸ್ವತಂತ್ರರಾಗಲು ಹವಣಿಸಿದರು. ಕೆಲವು ಬಲಾಢ್ಯ ಅಮರನಾಯಕರು ಸಾಮ್ರಾಜ್ಯದಲ್ಲಿ ತಲೆದೋರಿದ ಅರಾಜಕತೆ, ಅನೈಕ್ಯತೆ, ಆಂತರಿಕ ಗಲಭೆ, ಅಧಿಕಾರ ಹಸ್ತಾಂತರ, ದುರ್ಬಲ ರಾಜರ ಕಾಲ ಮೊದಲಾದ ಸಂದರ್ಭಗಳಲ್ಲಿಯೂ ಸಹ ಸ್ವತಂತ್ರರಾಗಲು ಪ್ರಯತ್ನಿಸಿ, ವಿಜಯನಗರ ಸಾಮ್ರಾಜ್ಯದ ವಿರುದ್ಧ ಬಹಿರಂಗ ಬಂಡಾಯವನ್ನು ಆರಂಭಿಸಿದರು. ಇಂತಹ ಸಂದರ್ಭಗಳಲ್ಲಿ ಸಾಮ್ರಾಜ್ಯದ ಆಧಾರ ಸ್ತಂಭಗಳಂತಿದ್ದ ಕೆಳದಿ, ಜಿಂಜಿ, ಮಧುರೈ, ತಂಜಾವೂರು, ಮೈಸೂರು, ಉಮ್ಮತ್ತೂರು ಮೊದಲಾದ ಪಾಳೇಗಾರರು ಬಂಡಾಯವೆದ್ದು ಹಲವರು ಸ್ವತಂತ್ರರಾದರು. ಇದೇ ಹಾದಿಯನ್ನು ಉಮ್ಮತ್ತೂರಿನಂತಹ ಅಮರನಾಯಕರು ಅದೂ ಕೃಷ್ಣದೇವರಾಯನಂತಹ ಸಮರ್ಥ ಚಕ್ರವರ್ತಿಯ ಕಾಲದಲ್ಲಿಯೇ ತುಳಿದು, ಸ್ವತಂತ್ರರಾಗಲು ಪ್ರಯತ್ನಿಸಿದ್ದು ಅವರ ಸಾಮರ್ಥ್ಯ, ಮಿಗಿಲಾಗಿ ಸ್ವಾತಂತ್ರ್ಯ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತದೆ. ಈ ಹಿನ್ನಲೆಯಲ್ಲಿ ಉಮ್ಮತ್ತೂರು ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದೊಡನೆ ಹೊಂದಿದ್ದ ವಿವಿಧ ರೀತಿಯ ಸಂಬಂಧಗಳು ಹಾಗು ಅಂದಿನ ಸಂಯುಕ್ತ ರಾಜ್ಯವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿತ್ತು ಮತ್ತು ಪಾಳೇಗಾರರ ಆಡಳಿತದ ಸ್ವರೂಪ ಹೇಗಿತ್ತೆಂಬುದನ್ನು ವಿವರಿಸುವುದೇ ಈ ಪ್ರಬಂಧದ ಆಶಯವಾಗಿದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಕೆಲವು ಹೊಸ ರಾಜಮನೆತನಗಳು ಸಹ ಜನ್ಮವೆತ್ತಿದವು. ಅಂತಹ ರಾಜಮನೆತನಗಳಲ್ಲಿ ಉಮ್ಮತ್ತೂರು ಅರಸುಮನೆತನವೂ ಒಂದು. ಇದು ಈಗಿನ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಮತ್ತು ಕಾವೇರಿ ಕಪಿಲಾ ನದಿಗಳ ಪರಿಸರದಲ್ಲಿ ಅರಳಿದ ಒಂದು ಚಿಕ್ಕ ಅರಸುಮನೆತನ. ಉಮ್ಮತ್ತೂರು, ಯಳಂದೂರು ನಂಜನಗೂಡು ರಸ್ತೆಯಲ್ಲಿ ಯಳಂದೂರಿಗೆ ಸುಮಾರು ಹದಿನಾಲ್ಕು ಕಿ.ಮೀ ದೂರದಲ್ಲಿರುವ ಗ್ರಾಮ. ಉಮ್ಮತ್ತೂರು ಪಾಳೆಯಗಾರರು ಇಲ್ಲಿ ಒಂದು ಕೋಟೆ ಮತ್ತು ಅರಮನೆಯನ್ನು ಕಟ್ಟಿದ್ದು, ಅದರ ಅವಶೇಷಗಳು ಈಗಲೂ ಅಲ್ಲಲ್ಲಿ ಕಾಣಬರುತ್ತವೆ. ಒಟ್ಟು 22 ಪಾಳೇಗಾರರು ಈ ಪಾಳೆಯಪಟ್ಟನ್ನು ಆಳಿದರೆಂಬುದಾಗಿ ತಿಳಿದುಬರುತ್ತದೆ.[4]

ಈ ಉಮ್ಮತ್ತೂರಿನ ಪಾಳೆಯಗಾರರು ತಮ್ಮ ಇತಿಮಿತಿಯಲ್ಲಿ ಹಾಗು ತಮ್ಮ ಹತೋಟಿಯಲ್ಲಿದ್ದ ಮಿತಿಯಾದ ಸಂಪನ್ಮೂಲಗಳ ಸಹಾಯದಿಂದ ತಮ್ಮ ಪಾಳೆಯಪಟ್ಟನ್ನು ಆಂತರಿಕ ದಂಗೆಗಳಿಂದಲೂ, ಪರಕೀಯರ ಆಕ್ರಮಣಗಳಿಂದಲೂ ಕಾಪಾಡಿಕೊಂಡು ಬರಲು ಹೋರಾಟಮಾಡಿದರು. ಅಂದಿನ ರಾಜಕೀಯ ಚದುರಂಗದಾಟದಲ್ಲಿ ಈ ಪಾಳೆಯಪಟ್ಟು ಅಷ್ಟು ದೀರ್ಘಕಾಲ ಉಳಿದುಕೊಂಡಿದ್ದು ಆಶ್ಚರ್ಯವೆಂದು ಹೇಳಬಹುದು. ಹೀಗೆ ವಿಜಯನಗರ ಮತ್ತು ಉಮ್ಮತ್ತೂರುಗಳ ಇತಿಹಾಸವನ್ನು ಕಿರಿದಾಗಿ ಪರಿಚಯಿಸಿಕೊಂಡು, ಅವುಗಳು ರಾಜಕೀಯವಾಗಿ ಹೊಂದಿದ್ದ ಸಂಬಂಧವನ್ನು ಗುರುತಿಸಬೇಕಾಗಿದೆ.

ಉಮ್ಮತ್ತೂರು ಪಾಳೆಯಪಟ್ಟು ವಿಜಯನಗರದೊಡನೆ ಪ್ರಾರಂಭದಲ್ಲಿ ಮಧುರವಾದ ರಾಜಕೀಯ ಸಂಬಂಧವನ್ನೇ ಹೊಂದಿತ್ತು. ಉಮ್ಮತ್ತೂರಿನ ಪಾಳೆಯಗಾರರು ಅಮರನಾಯಕರಾಗಿ ವಿಜಯನಗರ ಸಾಮ್ರಾಜ್ಯದ ಆಧಾರಸ್ತಂಭವಾಗಿದ್ದರು. ಇದನ್ನು ಬಿ.ಎಲ್. ರೈಸ್‌ರವರು ಸಹ ದಾಖಲಿಸಿದ್ದಾರೆ. ಕ್ರಿ.ಶ. 1396-97ರಲ್ಲಿ ಮಹಾಮಂಡಲೇಶ್ವರ ಮಲ್ಲಪ್ಪ ಒಡೆಯರ್‌ನ ಮಗನೂ ಹಾಗೂ ಇಮ್ಮಡಿ ಹರಿಹರನ ಸಹೋದರನಾದ ನಾರಾಯಣದೇವನು ಉಮ್ಮತ್ತೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಸಂಗತಿಯು ಶಾಸನವೊಂದರಿಂದ ತಿಳಿದುಬರುತ್ತದೆ.[5] ವಿಜಯರಾಯ ಮತ್ತು ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲದಲ್ಲಿ ಮೊದಲನೆ ದೇವರಾಯನ ಮಗನಾದ ಮುಮ್ಮಡಿ ಹರಿಹರನು ತೆರಕಣಾಂಬಿಯ ಮಾಂಡಲಿಕನಾಗಿದ್ದನು.[4] ಈ ಎರಡು ಶಾಸನಗಳ ಆಧಾರದ ಮೇಲೆ ಉಮ್ಮತ್ತೂರಿನ ಪಾಳೆಯಗಾರರು ಕರ್ನಾಟಕ ಸಂಸ್ಥಾನಕ್ಕೆ ಸೇರಿದವರಾಗಿದ್ದು ಕೇಂದ್ರದಲ್ಲಿನ ಅಧಿಕಾರವರ್ಗವು ದುರ್ಬಲಗೊಂಡ ಕಾರಣ ಪ್ರಾಬಲ್ಯಕ್ಕೆ ಬಂದರು. ಹೀಗೆ ಪ್ರಾರಂಭದಲ್ಲಿ ಉಮ್ಮತ್ತೂರು ಮತ್ತು ವಿಜಯನಗರದ ನಡುವೆ ನಿಕಟವಾದ ಸಂಬಂಧವಿತ್ತೆಂಬುದು ಮೇಲ್ಕಂಡ ಆಧಾರಗಳಿಂದ ತಿಳಿದುಬರುತ್ತದೆ. ಆದರೆ 15ನೇ ಶತಮಾನದ ಕೊನೆಯ ದಶಕದಲ್ಲಿ ಅಧಿಕಾರಕ್ಕೆ ಬಂದ ಸಂಗಮ ರಾಜರ ದೌರ್ಬಲ್ಯ ಹಾಗೂ ಸಾಳುವ ರಾಜನ ಸಿಂಹಾಸನಾರೋಹಣ ವಿಜಯನಗರ ಸಾಮ್ರಾಜ್ಯದಲ್ಲಿ ಕ್ಷೋಭೆ ಉಂಟುಮಾಡಿದ ಕಾರಣ ಉಮ್ಮತ್ತೂರಿನ ಪಾಳೆಯಗಾರರು ಪ್ರಾಬಲ್ಯಕ್ಕೆ ಬಂದರೆಂದು ಅಭಿಪ್ರಾಯಪಡಲಾಗಿದೆ. ಅಂದರೆ, ಕ್ರಿ.ಶ.1509 ರವರೆಗೆ ಪ್ರಾಯಶಃ ಉಮ್ಮತ್ತೂರಿನ ಪಾಳೆಯಗಾರರು ವಿಜಯನಗರಕ್ಕೆ ಅಧೀನರಾಗಿದ್ದರು. ಆಂತರಿಕ ಯುದ್ಧಗಳ ನಂತರ, ಮುಖ್ಯವಾಗಿ ಎರಡು ಸಂತತಿಗಳು (ಸಂಗಮ ಮತ್ತು ಸಾಳುವ) ಪತನಗೊಂಡು ಮೂರನೆಯದಾಗಿ ತುಳುವ ಸಂತತಿ ಅಧಿಕಾರಕ್ಕೆ ಬಂದ ಆರಂಭದಲ್ಲಿ ಪರಿಸ್ಥಿತಿಯನ್ನು ಗಮನಿಸಿ, ಉಮ್ಮತ್ತೂರಿನ ಅರಸರು ಸ್ವತಂತ್ರರಾಗಲು ಪ್ರಯತ್ನಿಸಿ, ಪ್ರಾದೇಶಿಕವಾಗಿ ವಿಸ್ತಾರಗೊಳ್ಳುವ ಪ್ರಯತ್ನ ಮಾಡಿದರು. ಅದಕ್ಕೋಸ್ಕರ ನೆರೆಯಲ್ಲಿದ್ದ ಕಳಲೆ, ಮೈಸೂರು ಹಾಗೂ ಸುತ್ತಮುತ್ತಲ ಪಾಳೆಯಗಾರರನ್ನು ಹತ್ತಿಕ್ಕಿ ಅವರ ಪ್ರದೇಶಗಳನ್ನು ವಶಪಡಿಸಿಕೊಂಡರು. ಮಾತ್ರವಲ್ಲದೆ ಸೋಮರಾಜ ಒಡೆಯರ್‌ನ ಮಗನಾದ ದೇವಣ್ಣ ಒಡೆಯನು ವಿಜಯನಗರ ಸಾಮ್ರಾಜ್ಯದ ಅಧಿಕಾರನ್ನು ಧಿಕ್ಕರಿಸಿ ದಂಗೆಯೆದ್ದನು. ದೇವಣ್ಣ ಒಡೆಯರ್‌ನ ದಂಗೆಯ ಬಗ್ಗೆ ತಿಳಿದು ಅವನ ಅಹಂಕಾರದ ಸೊಕ್ಕನ್ನಡಗಿಸಲು ನರಸನಾಯಕನು ದಂಡೆತ್ತಿ ಬಂದನು. ಕಾವೇರಿ ನದಿಯು ತುಂಬು ಪ್ರವಾಹದಿಂದ ಹರಿಯುತ್ತಿದ್ದುದರಿಂದ ಕೋಟೆಯ ಮೇಲೆ ಕೈಗೊಳ್ಳಬೇಕಾಗಿದ್ದ ದಾಳಿಯು ಅಸಾಧ್ಯವೆನಿಸಿತು. ಆದುದರಿಂದ ಕಾವೇರಿ ನದಿಗೆ ಅಡ್ಡವಾಗಿ ತುರ್ತಾಗಿ ಸೇತುವೆಯೊಂದನ್ನು ನಿರ್ಮಿಸಿ, ನದಿಯನ್ನು ದಾಟಿ, ಶ್ರೀರಂಗಪಟ್ಟಣವನ್ನು ತಲುಪಿ, ಅಲ್ಲಿನ ಕೋಟೆಯನ್ನು ಹಾಳುಗೆಡವಿ ವಿಜಯಸ್ತಂಭವೊಂದನ್ನು ಅಲ್ಲಿ ನೆಟ್ಟನು. ಅಂತಿಮವಾಗಿ ಯುದ್ಧದಲ್ಲಿ ಸೋತು, ಸೆರೆಯಾದ ನಾಯಕನಿಗೆ ಕ್ಷಮೆನೀಡಿ, ಅವನ ಶರಣಾಗತಿಯನ್ನು ಸ್ವೀಕರಿಸಿ, ಪುನಃ ಶ್ರೀರಂಗಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ಉಮ್ಮತ್ತೂರು ಪ್ರಭುವಿಗೆ ಹಿಂತಿರುಗಿಸಿದನು.[7] ಇಷ್ಟಾದರೂ ಉಮ್ಮತ್ತೂರು ಪಾಳೆಯಗಾರರ ಅವಿಧೇಯ ವರ್ತನೆ ಕಡಿಮೆಯಾಗಲಿಲ್ಲ. ಉಮ್ಮತ್ತೂರಿನ ನಾಯಕ ದೇವಣ್ಣ ಒಡೆಯರ್‌ನ ಮಗ ಮಲ್ಲರಾಜ ಒಡೆಯರ್‌ನು, ನರಸನಾಯಕನು ಮರಣಹೊಂದಿದ ಬಳಿಕ ಹಾಗೂ ವೀರ ನರಸಿಂಹನ ದುರ್ಬಲತೆಯನ್ನು ಬಳಸಿಕೊಂಡು ಪುನಃ ದಂಗೆ ಎದ್ದನು. ಈ ದಂಗೆಯ ಮಾಹಿತಿ ಪಡೆದ ವೀರನರಸಿಂಹನು ದಂಗೆಯನ್ನು ಅಡಗಿಸುವುದಕ್ಕಾಗಿ ಸೈನ್ಯದೊಡನೆ ತೆರಳಿ, ಉಮ್ಮತ್ತೂರು ಕೋಟೆಯನ್ನು ಮೂರು ತಿಂಗಳವರೆಗೆ ಮುತ್ತಿದನು. ಆದರೆ ಶತ್ರುವಿನ ಪ್ರಬಲ ಪ್ರತಿರೋಧದ ಕಾರಣ ಉಮ್ಮತ್ತೂರು ಕೋಟೆಯ ಆಕ್ರಮಣವನ್ನು ಸಡಿಲಿಸಿ, ಶ್ರೀರಂಗಪಟ್ಟಣದ ಕೋಟೆಯನ್ನು ಮುತ್ತಲು ಆ ದಿಕ್ಕಿನಲ್ಲಿ ಹೊರಟನು. ಆದರೆ ವಿಜಯನಗರ ಸೈನ್ಯವು ಅನಿರೀಕ್ಷಿತವಾಗಿ ಉಮ್ಮತ್ತೂರು ನಾಯಕನ ಕೈಯಲ್ಲಿ ಅಪಜಯವನ್ನು ಅನುಭವಿಸಬೇಕಾಯಿತು. ಕೊನೆಗೆ ಉಮ್ಮತ್ತೂರು ನಾಯಕನ ದಂಗೆಯನ್ನು ಅಡಗಿಸಲು ಅಸಮರ್ಥನಾದ ಇಮ್ಮಡಿ ನರಸಿಂಹನು ಸೋಲಿನ ಅವಮಾನದೊಂದಿಗೆ ರಾಜಧಾನಿಗೆ ಹಿಂತಿರುಗಬೇಕಾಯಿತು.[8] ಇದು ಸಾಮ್ರಾಜ್ಯದ ದುರ್ಬಲತೆಯನ್ನೂ, ಉಮ್ಮತ್ತೂರಿನ ಪ್ರಾಬಲ್ಯವನ್ನೂ ಪ್ರಕಟಿಸುವುದಲ್ಲದೆ ಮುಂದೆ ಉಮ್ಮತ್ತೂರಿನ ನಾಯಕರು ಅನೇಕ ಸ್ವತಂತ್ರ ಬಿರುದುಗಳನ್ನು ಧರಿಸಿ,[9] ರಾಜಶಾಹಿ ಖಿಲ್ಲತ್ತುಗಳನ್ನು ಹೊಂದಿ, ವೀರನರಸಿಂಹನಿಂದ ಮಾನ್ಯತೆ ಪಡೆದರೆಂಬುದಾಗಿ ತಿಳಿದುಬರುತ್ತದೆ.[10]

ಮುಂದೆ ಅಧಿಕಾರಕ್ಕೆ ಬಂದ ಈ ಸಂತತಿಯ ಗಂಗರಾಜನು ಸಂದರ್ಭವನ್ನು ಚೆನ್ನಾಗಿ ಬಳಸಿಕೊಂಡು, ವಿಜಯನಗರದೊಡನೆ ಇದ್ದ ಅಧೀನ ರಾಜಕೀಯ ಸಂಬಂಧವನ್ನು ಶಾಶ್ವತವಾಗಿ ಕೊನೆಗಾಣಿಸುವ ಪ್ರಯತ್ನ ಮಾಡಿದನು. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದು, ಬಹಮನಿ ಸುಲ್ತಾನರೊಡನೆ ಹೋರಾಡುತ್ತಿರಬೇಕಾದರೆ, ಇತ್ತ ಉಮ್ಮತ್ತೂರಿನ ಗಂಗರಾಜನು ವೀರನರಸಿಂಹನ ಆಳ್ವಿಕೆಯ ಕೊನೆಗಾಲದಲ್ಲಿಯೇ ಬಂಡಾಯವೆದ್ದು ಸ್ವತಂತ್ರವಾಗಿ ಆಳುತ್ತಿದ್ದನು. ಉಮ್ಮತ್ತೂರು ಪಾಳೆಯಪಟ್ಟು ಶ್ರೀಮಂತವಾಗಿದ್ದುದಲ್ಲದೆ, ಗಂಗರಾಜನ ಕಾಲದಲ್ಲಿ

ರಾಜಧಾನಿಯಾಗಿದ್ದ ಶಿವನಸಮುದ್ರವು ಅಭೇದ್ಯ ಕೋಟೆಯಾಗಿತ್ತು. ಮತ್ತು ಅತ್ಯಂತ ಸಮರ್ಥನಾದ ಗಂಗರಾಜನು ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದು ಮಾತ್ರವಲ್ಲದೆ, ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದ ಪೆನುಗೊಂಡೆಯನ್ನು ಸಹ ವಶಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದನು. ಆದುದರಿಂದ ರಾಯನು ಗಂಗರಾಜನ ಉಪಟಳವನ್ನು ಅಡಗಿಸುವ ದೃಷ್ಟಿಯಿಂದ, ಅವನ ಮೇಲೆ ಯುದ್ಧವನ್ನು ಘೋಷಿಸಿ, ರಾಜಧಾನಿಯನ್ನು ಮುತ್ತಿದನು. ಹೋರಾಟವು ಸುಮಾರು ಎರಡು ವರ್ಷಗಳ ಕಾಲ ಮುಂದುವರಿಯಿತು. ಕೊನೆಗೆ ವಿಜಯನಗರ ಸೈನ್ಯದ ದಾಳಿಯನ್ನು ಎದುರಿಸಲಾರದೆ ಗಂಗರಾಜನು ಗುಪ್ತಮಾರ್ಗದ ಮೂಲಕ ಕೋಟೆಯಿಂದ ಹೊರಬಿದ್ದು ತಪ್ಪಿಸಿಕೊಂಡು ಪಲಾಯನಮಾಡುವಾಗ ಗಗನಚುಕ್ಕಿಯ ಬಳಿ ಕಾವೇರಿ ನದಿಯಲ್ಲಿ ಮುಳುಗಿ ಮರಣ ಹೊಂದಿದನೆಂದು ತಿಳಿದುಬರುತ್ತದೆ.[11] ಕೆಲವು ಆಧಾರಗಳ ಪ್ರಕಾರ ಕೆಲವೇ ದಿನಗಳಲ್ಲಿ ರಾಯನು ಉಮ್ಮತ್ತೂರು ಮತ್ತು ಶಿವನಸಮುದ್ರಗಳೆರಡನ್ನೂ ವಶಕ್ಕೆ ತೆಗೆದುಕೊಂಡನೆಂಬ ಅಭಿಪ್ರಾಯವಿದೆ.[12] ಕೊಂಗುದೇಶರಾಜಕ್ಕಳ್ ಚರಿತಮ್ ಕೃತಿಯ ಪ್ರಕಾರ ಈ ದಂಡಯಾತ್ರೆಯು ಒಂದು ವರ್ಷದವರೆಗೆ ನಡೆಯಿತೆಂದು ತಿಳಿದುಬರುತ್ತದೆ. ಲೂಯಿಸ್‌ರವರ ಪ್ರಕಾರ ಕೃಷ್ಣದೇವರಾಯನು 5000 ಸೈನಿಕರನ್ನುಳ್ಳ ಪದಾತಿದಳ ಹಾಗೂ 2000 ಸೈನಿಕರನ್ನೊಳಗೊಂಡ ಅಶ್ವದಳದೊಡನೆ ಸಾಮ್ರಾಜ್ಯದ ವಿರುದ್ಧ ಬಂಡಾಯವೆದ್ದಿದ್ದ ಗಂಗರಾಜನನ್ನು ಅಡಗಿಸಲು ಆಕ್ರಮಣ ಮಾಡಿದನು.[13] ಕೆಲವು ಆಧಾರಗಳ ಪ್ರಕಾರ ರಾಯನು ತಾನು ಪುನಃ ವಶಪಡಿಸಿಕೊಂಡ ಪ್ರಾಂತ್ಯಗಳನ್ನು ಒಂದುಗೂಡಿಸಿ, ಶ್ರೀರಂಗಪಟ್ಟಣದಲ್ಲಿ ಪ್ರಾಂತೀಯ ರಾಜಧಾನಿಯನ್ನು ಸ್ಥಾಪಿಸಿ, ಈ ಭಾಗವನ್ನು ಎರಡು ಘಟಕಗಳಾಗಿ ವಿಭಜಿಸಿ, ಒಂದು ಭಾಗವನ್ನು ಮಾಗಡಿಕೆಂಪೇಗೌಡನಿಗೂ, ಮತ್ತೊಂದು ಭಾಗವನ್ನು ಸಾಳುವ ಗುಂಡನ ಮಗ ಗೋವಿಂದರಾಜನಿಗೂ ವಹಿಸಿಕೊಟ್ಟು, ಬಂಡಾಯವನ್ನು ಹತ್ತಿಕ್ಕಿ ಶಾಂತಿ ಸ್ಥಾಪಿಸುವುದರಲ್ಲಿ ಯಶಸ್ವಿಯಾದನು. ಮತ್ತೆ ಕೆಲವು ಶಾಸನಾಧಾರಗಳ ಪ್ರಕಾರ ಗಂಗರಾಜನು ಪರಾಜಯಗೊಂಡ ನಂತರ ಅವನ ಮಗ ವೀರಪ್ಪ ಒಡೆಯರ್‌ನನ್ನು ಈ ಭಾಗದ ಅಧಿಕಾರಿಯಾಗಿ ನೇಮಿಸಲಾಯಿತೆಂದೂ ತಿಳಿದುಬರುತ್ತದೆ.[15] ಇದರಿಂದ ವಿಜಯನಗರ ಮತ್ತು ಉಮ್ಮತ್ತೂರುಗಳ ನಡುವಣ ಸಂಬಂಧ ಪುನಃ ಮುಂದುವರಿಯಲು ಅನುವಾಯಿತಲ್ಲದೆ, ಶತ್ರುಗಳ ಬಗ್ಗೆ ರಾಯನು ಹೊಂದಿದ್ದ ಕ್ಷಮೆಯಾಧಾರಿತ ಉದಾರಗುಣವನ್ನು ಪ್ರಕಟಿಸುತ್ತದೆ.[16]

ಒಟ್ಟಾರೆ ಮೇಲ್ಕಂಡ ಅಧ್ಯಯನದಿಂದ ಕಂಡುಬರುವುದೇನೆಂದರೆ ಉಮ್ಮತ್ತೂರು ಮತ್ತು ವಿಜಯನಗರ ಇಟ್ಟುಕೊಂಡಿದ್ದ ಅಥವಾ ಐತಿಹಾಸಿಕ ಸಂದರ್ಭಗಳಲ್ಲಿ ಹೊಂದಿದ್ದ ರಾಜಕೀಯ ಸಂಬಂಧಗಳನ್ನು ನಮಗೆ ದೊರಕುವ ಅಲ್ಪ ಸಾಮಗ್ರಿಯ ಆಧಾರದ ಮೇಲೆ ಕೆಲವು ತೀರ್ಮಾನಗಳನ್ನು ಕೈಗೊಳ್ಳಬಹುದು. ಮುಖ್ಯವಾಗಿ 300 ವರ್ಷಗಳಿಗೂ ಅಧಿಕವಾಗಿ ಅಸ್ತಿತ್ವದಲ್ಲಿದ್ದು ಪ್ರಾದೇಶಿಕ ಮತ್ತು ಸಂಪನ್ಮೂಲಗಳ ದೃಷ್ಟಿಯಿಂದ, ಬೇರೆ ಪಾಳೆಯಪಟ್ಟುಗಳೊಡನೆ ಹೋಲಿಸಿದಾಗ ಹಿರಿಯದಾಗಿದ್ದೂ ರಾಜಕೀಯ ಹೋರಾಟದಲ್ಲಿ ಮುತ್ಸದ್ದಿತನವನ್ನು ತೋರುವುದರಲ್ಲಿ ಇದು ಹಿಂದಾಗಿರಲಿಲ್ಲ. ಕೃಷ್ಣದೇವರಾಯನಂತಹ ಬಲಾಢ್ಯ ಚಕ್ರವರ್ತಿಯ ಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯದ ವಿರುದ್ಧ ಬಂಡಾಯ ಏಳುವುದರ ಮೂಲಕ ಉಮ್ಮತ್ತೂರಿನ ನಾಯಕರು ತಮ್ಮ ಸ್ವಾತಂತ್ರ್ಯ, ಸಾಮರ್ಥ್ಯ ಮತ್ತು ಸ್ವಾಭಿಮಾನ ಗುಣಗಳನ್ನು ಪ್ರದರ್ಶಿಸಿದ್ದನ್ನು ಅವಲೋಕಿಸಿದಾಗ ಉಮ್ಮತ್ತೂರು ಪಾಳೆಯಗಾರರು ಶಕ್ತಿ ಸಾಮರ್ಥ್ಯಗಳನ್ನು ಎಷ್ಟರಮಟ್ಟಿಗೆ ಹೊಂದಿದ್ದರೆಂಬುದು ಗೊತ್ತಾಗುತ್ತದೆ. ಜೊತೆಗೆ ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಅನೇಕ ಏಳು–ಬೀಳು, ಸೋಲು–ಗೆಲುವು, ಸಾಮ್ರಾಜ್ಯ–ಪಾಳೆಯಪಟ್ಟು ಹೇಗೆ ಸಮನ್ವಯತೆಯಿಂದ ಕೂಡಿತ್ತೆಂಬುದು ಸಹ ಅರ್ಥವಾಗುತ್ತದೆ. ಹೀಗೆ ವಿಜಯನಗರ ಮತ್ತು ಉಮ್ಮತ್ತೂರುಗಳ ನಡುವಣ ಸಂಬಂಧಗಳು ಸ್ವಾರಸ್ಯಕರವಾದ ವಿಷಯಗಳನ್ನು ಒದಗಿಸಿಕೊಟ್ಟಿವೆ.

ಅಡಿ ಟಿಪ್ಪಣಿಗಳು

1. *ಎಕ,* XII, ಚಿನಾ 38, ಕ್ರಿ.ಶ. 1669.
2. ರಾಬರ್ಟ್ ಸಿವೆಲ್, 1924, *ಎ ಫರ್ಗಾಟನ್ ಎಂಪೈರ್,* ಲಂಡನ್, ಪು. 389.
3. *ಅದೇ.*
4. ಕಲಬುರ್ಗಿ ಎಂ.ಎಂ. (ಸಂ.), 1994, *ಸಾರಂಗಶ್ರೀ – ವೀರಶೈವ ಅರಸುಮನೆತನಗಳ ಅಧ್ಯಯನ,* ಸಿಂದಗಿ, ಪು. 214-215.
5. *ಎಕ,* IV, ಚಾಮರಾಜನಗರ 372, ಕ್ರಿ.ಶ. 1422.
6. *ಅದೇ,* ಗುಂಡ್ಲುಪೇಟೆ 78, ಕ್ರಿ.ಶ. 1422.
7. *ಫರ್ದರ್ ಸೋರ್ಸಸ್,* ಪು. 158.
8. *ಅದೇ,* ಪು. 182.

9. ಅದೇ, ಪು. 182.

10. ಇಂಆರಿ, 1908-09, ಪು. 173

11. ಫರ್ದರ್ ಸೋರ್ಸಸ್, ಸಂ. I, ಪು. 198.

12. ಅದೇ.

13. ಮೈಸೂರು ಗೆಜೆಟಿಯರ್, ಸಂ. II, ಪು. 1787.

14. ಎಕ, V, ತಿನ 132, 133, 289, ಕ್ರಿ.ಶ. 1517 ಮತ್ತು 1522.

15. ಅದೇ, ಮೈಸೂರು 116; ಎಕ, VI, ಶ್ರೀರಂಗಪಟ್ಟಣ 31.

16. ಮೈಸೂರು ಗೆಜೆಟಿಯರ್, ಪು. 1788.

18. ವಿಜಯನಗರ ಹಾಗೂ ಪೋರ್ತುಗೀಜರು

– ಕೆಳದಿ ಗುಂಡಾಜೋಯಿಸ್

ಕೆಳದಿ ನೃಪವಿಜಯ ಕೃತಿಕಾರ ಕವಿ ಲಿಂಗಣ್ಣನು ವಿಜಯನಗರ ಇತಿಹಾಸವನ್ನು ಪ್ರಸ್ತಾಪಿಸುತ್ತಾ ಗೋವೆಯ ಗಡವಂ ಕುರಿತು:

ಕಂ|| ಶ್ರೀ ವಿಠ್ಠಲರಾಯರ ಕೂ
ಡಾ ವಿಭುವರನ್ನೆದಿ ದಾಳಿವರಿದಂಬುಧಿಮ
ದ್ಯಾವಷ್ಟಂಭನಮೆನಿಸಿದ
ಗೋವೆಯ ಗಡವಂ ಸಮೀಕದೊಳ್ ಸಾಧಿಸಿದಂ||

ವ|| ಇಂತು ಗೋವೆಯ ಗಡವಂ ಕೊಂಡು ಮರಳ್ದೊಡನಾ ಸಂಕಣನಾಯಕಂ ರಾಯರಂ ಕಾಣಲತ್ಯಂತಪ್ರಮುದಿತಮಾನಸರಾಗಿ ಮಾಳೇನಹಳ್ಳಿ ಹೋಬಳಿಯನುಚಿತವಾಗಿತ್ತನರ್ಘ್ಯ ರತ್ನಾಭರಣಾಂಬರ ತಾಂಬೂಲವಂ ಭುಜಕೀರ್ತಿ ಮುಂತಾದ ಬಿರುದುಗಳುಮಂ ತತ್ಪುತ್ರರ್ಗುಚಿತಮಾದುಡುಗೊರೆ ವೀಳ್ಯಂಗಳುಮನಿತ್ತಾದರಿಸಿ ಬೀಳ್ಕೊಡಲಪ್ಪಣೆಗೊಂಡತ್ಯಂತ ಹರ್ಷದಿಂ ಸ್ವಕುಟುಂಬ ಸಹಿತಂ ವಿದ್ಯಾನಗರಿಯಿಂ ತೆರಳ್ದೈತಂದಿಕ್ಕೇರಿ ಪುರವರಮಂ ....[1]

ಈ ಘಟನೆಗೆ ಪೂರಕವಾಗಿರುವಂತೆ ವಿಜಯನಗರ ಚಕ್ರವರ್ತಿಗಳ ಕಾಲ:

1.	ಸದಾಶಿವರಾಯ (ಜೀವಮಾನವಿಡೀ ಬಂಧಿತ)	ಕ್ರಿ.ಶ. 1542-67
	ರಾಮರಾಯ	ಕ್ರಿ.ಶ. 1542-65
	ತಿರುಮಲ (ಕಾರ್ಯತಃ ಸಾರ್ವಭೌಮ)	ಕ್ರಿ.ಶ. 1565-67
	ತಿರುಮಲ ಪ್ರತ್ಯಕ್ಷವಾಗಿ ಅಧಿಪತಿ	ಕ್ರಿ.ಶ. 1567-75
2.	ಕೆಳದಿ ದೊಡ್ಡ ಸಂಕಣ್ಣನಾಯಕನ ಕಾಲ	ಕ್ರಿ.ಶ. 1545-59
	ಕೆಳದಿ ಚಿಕ್ಕ ಸಂಕಣ್ಣನಾಯಕ	ಕ್ರಿ.ಶ. 1559-72[2]

ಇಲ್ಲಿ ಕಂಡುಬರುವ ವಿಠಲರಾಯ ಮತ್ತು ಸಂಕಣನಾಯಕರಿಬ್ಬರೂ ಗೋವೆಯನ್ನು ಸ್ವಾಧೀನ ಪಡಿಸಿಕೊಂಡಿರುವುದು ವ್ಯಕ್ತಪಡುತ್ತದೆ. ಕ್ರಿ.ಶ. 1551 ರಲ್ಲಿ ವಿಠ್ಠಲರಾಯನ ಸೈನಿಕರಿಂದ ಪೋರ್ತುಗೀಜ ಜೆಸುಯಿಟ್ ಪಾದ್ರಿ ಪಾವುಡೋ ಡಿ ವಲ್ಲೆಯ ಬಂಧನ ಹಾಗೂ ಪೆರವರಿಂದ ಅವನ ಬಿಡುಗಡೆಯಾಗಿರುವುದೂ ಕಂಡುಬರುತ್ತದೆ.[3] ಇದು ಕೆಳದಿ ದೊಡ್ಡ ಸಂಕಣ್ಣನಾಯಕನ ಕಾಲವನ್ನು ಸೂಚಿಸುತ್ತದೆ. ರಾಬರ್ಟ್ ಸೀವೆಲ್‌ರವರ 'ಮರೆತುಹೋಗಿರುವ ಸಾಮ್ರಾಜ್ಯ ವಿಜಯನಗರ' ಕೃತಿಯಲ್ಲಿ ವಿಠ್ಠಲರಾಯನ ಕುರಿತು ಪ್ರಸ್ತಾಪವೇ ಕಾಣಸಿಗುವುದಿಲ್ಲ. ಈ ಇತಿಹಾಸದಲ್ಲಿ ಪ್ರಮುಖನಾಗಿರುವ ಈತನನ್ನು ಕುರಿತು ಡಾ|| ಎಂ.ಎಚ್. ಗೋಪಾಲ್ ಹಾಗೂ ರಾಮಶರ್ಮರವರು The History of Vijayanagara Empire ನಲ್ಲಿ Ferista's account in his Adil Shahi Narrative; Briggs ಆಕರಗಳೊಂದಿಗೆ ಇದನ್ನು ನಿರೂಪಿಸುತ್ತಾ 1542 ರಿಂದ 1565ರಲ್ಲಿ ಆಳಿದ ಚಕ್ರವರ್ತಿ ರಾಮರಾಯನ ಕಾಲದಲ್ಲಿ ಈತನ ಕಕ್ಕನ ಮಗ (Cousin) ವಿಠಲರಾಜನೊಂದಿಗೆ ಗೋವೆಯನ್ನು ಜಯಿಸಲು ಸಂಕಣನಾಯಕನೂ ಇದ್ದುದನ್ನು ಸಮರ್ಥಿಸಿದ್ದಾರೆ.[4] ಪ್ರಕೃತ ಉಪಲಬ್ಧ ಮಾಹಿತಿಗಳನ್ನು ಆಧರಿಸಿ ವಿಜಯನಗರ-ಗೋವಾ-ಪೋರ್ತುಗೀಜರ ಕುರಿತು ಸ್ಥೂಲ ರಾಜಕೀಯ ಇತಿಹಾಸವನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ.

1925ರಲ್ಲಿ ಎಸ್.ಜೆ. ಫಾದರ್ ಹೆನ್ರಿ ಹೆರಾಸ್‌ರವರು "Early relations between Vijayanagara and Portugal" ಪ್ರಬಂಧವೊಂದನ್ನು ಸಾದರಪಡಿಸಿದ್ದು ಇದು ಕೇರಳ ವಿಶ್ವವಿದ್ಯಾಲಯದ Journal of Indian History ಸಂಪುಟದಲ್ಲಿ ಪ್ರಕಟವಾಯಿತು.[5] ಇದಕ್ಕೆ ಮುಂಚೆ ರಾಬರ್ಟ್ ಸೀವೆಲ್‌ರವರ 'ಮರೆತುಹೋಗಿರುವ ಸಾಮ್ರಾಜ್ಯ ವಿಜಯನಗರ' ಕೃತಿಯಲ್ಲಿ ನರಸಿಂಗನ ಕಾಲದಿಂದ 1565 ರವರೆಗೆ ವಿಜಯನಗರ-ಪೋರ್ತುಗೀಜರನ್ನು ಕುರಿತು ಐತಿಹಾಸಿಕ ಸಂಗತಿಗಳು ಸಮ್ಮಿಳಿತಗೊಂಡಿವೆ. ಪೋರ್ತುಗೀಜ್ ಭಾಷಾತಜ್ಞರಾಗಿದ್ದ ಗೋವಾದ ದಿ|| ಡಾ. ಬಿ.ಎಸ್. ಶಾಸ್ತ್ರಿಗಳು ಈ ದಿಸೆಯಲ್ಲಿ ವಿಪುಲ ಅಪ್ರಕಟಿತ ಆಕರಗಳೂ ಇರುವುದಾಗಿ ತಿಳಿಸಿ, ಹೆಚ್ಚಿನ ಸಂಶೋಧನೆ ಅಗತ್ಯವೆಂದು ಒತ್ತಿ ಹೇಳಿದ್ದರು.

ಆಕರಗಳು:

ವಿಜಯನಗರ ಪೋರ್ತುಗೀಜ್ ಇತಿಹಾಸ ರಚನೆಗೆ ಅಪ್ರಕಟಿತ-ಪ್ರಕಟಿತ ಮೂಲ ಸಾಮಾಗ್ರಿಗಳು ಸಾಕಷ್ಟು ಉಪಲಬ್ಧವಿವೆ. ಪ್ರಕೃತ ಕೆಳದಿ ನೃಪವಿಜಯ, ದಿಲ್ಲಿ ರಾಜ ಕಥಾ,[6] Chronica does Reis Bisnaga by Lopes, Society of Geography of Lisbon 1897, ರಾಬರ್ಟ್ ಸೀವೆಲ್‌ರವರ ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ, Regimentos das Fortalezas da India (Ordinances or Instructions for the fortresses of India), The Jesuit Archives in Italy or the Archives of the Archbishops Palace in Goa, Danvers-Portuguese in India, Whiteway - The rise of Portuguese in India, Commentaries de Grande Alfonso D' Alboquerque, Vol, Adil Shahi Narrative, Portuguese documents concerning the emperors of Vijayanagara, The Adil Shahis of Bijapur, The Nayakas of Keladi and Sonda, ಗೋವಾ, ಲಿಸ್ಬನ್, ಇಂಡಿಯಾ ಆಫೀಸ್ ಗ್ರಂಥಾಲಯ ಹಾಗೂ ಪತ್ರಾಗಾರದ ಸಂಗ್ರಹಗಳು, ಹಂಪೆಯಲ್ಲಿ ಉತ್ಖನನಾದಿ ಸಂಶೋಧನಾ ವರದಿಗಳು, ಡಾ. ವಸಂತಮಾಧವರ Trends in Karnataka, ಸಂಗ್ರಹಾಲಯಗಳಲ್ಲಿರುವ ಪೋರ್ತುಗೀಜ್ ಪುರಾತನ ಸಾಮಗ್ರಿಗಳು,[7] ಈ ಕುರಿತ ಅಪ್ರಕಟಿತ ಮಹಾಪ್ರಬಂಧಗಳು ಗೋವಾದ ದಿ॥ ಡಾ. ಬಿ.ಎಸ್. ಶಾಸ್ತ್ರಿಯವರ Studies in Indo Portuguese History ಈ ಇತಿಹಾಸ ರಚನೆಗೆ ತುಸು ಮಟ್ಟಿಗೆ ಸಹಕಾರಿಗಳಾಗಿವೆ.

ಭಾರತ ನೆಲದಲ್ಲಿ ಪೋರ್ತುಗೀಜರು:

17-5-1498 ರಂದು ವಾಸ್ಕೋಡಿ ಗಾಮನು ಅಟ್ಲಾಂಟಿಕ್ ಮಾರ್ಗವಾಗಿ ಹೊಸ ಸಮುದ್ರ ಮಾರ್ಗವನ್ನು ಕಂಡುಹಿಡಿದು ಮೂರು ಹಡಗುಗಳೊಂದಿಗೆ ಕಾಲಿಕತ್ ಸಮೀಪ ಬಂದು ತಲುಪಿದುದರಿಂದ ಹೊಸ ಅಧ್ಯಾಯವಾರಂಭವಾಯಿತು. ರಾಬರ್ಟ್ ಸೀವೆಲ್ 26-8-1498; ಬ್ಯಾರೋಸ್‌ನು 20-5-1498 ರಂದು ಇದು ಜರುಗಿತೆಂದು ಉಲ್ಲೇಖಿಸಿದ್ದಾರೆ. ಆನುವಂಶಿಕವಾದ ಝೋಮೋರಿನ್ ಎಂಬ ಬಿರುದು ಹೊಂದಿದ್ದ ಕಾಲಿಕತ್‌ನ ರಾಜನು ವಾಸ್ಕೋಡಿ ಗಾಮ ಹಾಗೂ ಅವನ ಸಿಬ್ಬಂದಿಗೆ ಸ್ವಾಗತ ನೀಡಿದನು. ವಿಜಯನಗರಕ್ಕೆ ಸೇರಿದ್ದ ಈ ಪ್ರದೇಶದ ಅಧಿಪತಿಯು ಚಕ್ರವರ್ತಿಯ ಅನುಜ್ಞೆಯಿಲ್ಲದೆ ನೆಲೆಯೂರಲು ಅವಕಾಶವಿತ್ತುದು ಪ್ರಶ್ನಾರ್ಹವಾಗಿದೆ. ಆದರೆ ಝೋಮೋರಿನ್ - ಪೋರ್ತುಗೀಜ್ ನಾಯಕನಿಗೆ ಭಿನ್ನಾಭಿಪ್ರಾಯವಂಕುರಿಸಿ ಕಾಲಿಕತ್‌ನಿಂದ ಕೊಚ್ಚಿನ್‌ಗೆ ತೆರಳುವಂತಾಯಿತು. ಕ್ರಿ.ಶ. 1505ರಲ್ಲಿ ಪೋರ್ತುಗೀಜ-ಭಾರತದ ಇತಿಹಾಸದಲ್ಲಿ ಹೊಸ ಯುಗ ಆರಂಭವಾಯಿತು. ತಮ್ಮ ಸ್ಥಾನವನ್ನು ಭದ್ರಪಡಿಸುವ ಏಡನ್, ಅರ್ಮಝು ಮತ್ತು ಮಲಕ್ಕಗಳನ್ನು ವಶಪಡಿಸಿಕೊಂಡು ತುರುಕರ ವ್ಯಾಪಾರವನ್ನು ನಾಶಪಡಿಸುವ ಉದ್ದೇಶದಿಂದ ಸಾಕಷ್ಟು ಸೈನಿಕ ಬಲದೊಂದಿಗೆ ಮೂರು ವರ್ಷ ಅವಧಿಯವರೆಗೆ ಒಬ್ಬ ರಾಜ್ಯಪಾಲನನ್ನು ನಿಯಮಿಸಲು ಪೋರ್ತುಗೀಜ ರಾಜನು ನಿಶ್ಚಯಿಸಿದನು. ಈ ಮೇರೆಗೆ ಫ್ರಾನ್ಸಿಸ್ಕೋ ಡಿ ಆಲ್ಮೆಡಾ ಮೊದಲನೆಯ ರಾಜ್ಯಪಾಲನಾದನು. 1505ರಲ್ಲಿ ಈತನು ಭಾರತವನ್ನು ತಲುಪಿ ಮುಸಲ್ಮಾನ ಶಕ್ತಿಗಳೊಡನೆ ಹೋರಾಟ ನಡೆಸಿದನು. ಈಜಿಪ್ಟಿನ ಸುಲ್ತಾನನು ತನ್ನ ಹಡಗು ಮತ್ತು ಸೇನಾಪಡೆಗಳನ್ನು ಪೋರ್ತುಗೀಜರನ್ನು ಹಿಮ್ಮೆಟ್ಟಿಸಲು ಕಳುಹಿಸಿದನು. 1508ರ ಜನವರಿಯಲ್ಲಿ ಪೋರ್ತುಗೀಜರಿಗೆ ಸೋಲುಂಟಾದರೂ ಫೆಬ್ರವರಿ 1509ರಲ್ಲಿ ಆಲ್ಮೆಡಾನು ದೀವುದ ಮುಸಲ್ಮಾನರ ಹಡಗುಪಡೆಗಳನ್ನು ಸೋಲಿಸಿ ಜಯಗಳಿಸಿದನು. 1509 ನವೆಂಬರ್ 5ರಂದು ಆಲ್ಮೆಡಾನ ತರುವಾಯ ಅಫೋನ್ಸೋ-ಡಿ-ಆಲ್ಬುಕರ್ಕನು ಅಧಿಕಾರಕ್ಕೆ ಬಂದು ಈತನೇ ಭಾರತದಲ್ಲಿ ಪೋರ್ತುಗೀಜರ ನಿಜವಾದ ಸಂಸ್ಥಾಪಕನೆಂದು ಪರಿಗಣಿಸಲ್ಪಟ್ಟನು. 1510ರಲ್ಲಿ ಬಿಜಾಪುರ ಆದಿಲ್‌ಷಹನ ವಶದಲ್ಲಿದ್ದ ಗೋವೆಯನ್ನು ಜಯಿಸಿ ಅದನ್ನು ಕೇಂದ್ರವನ್ನಾಗಿಸಿಕೊಂಡನು. ಈ ಸಮಯದಲ್ಲಿ ವಿಜಯನಗರದ ನಾವಿಕ ಮುಖ್ಯಾಧಿಕಾರಿ (ಈತನು ಕಡಲುಗಳ್ಳನೆಂದೂ ದಾಖಲೆ ಹೇಳುತ್ತದೆ) ಬಿಜಾಪುರದ ಆದಿಲ್‌ಷಹನ ವಿರುದ್ಧ ಹೋರಾಡಲು ನೇಮಿಸಲ್ಪಟ್ಟ ವ್ಯಕ್ತಿಯೆಂದು ರೆ. ಹೆರಾಸರು ಅಭಿಪ್ರಾಯ ಪಟ್ಟಿದ್ದಾರೆ ಮತ್ತು ವಿಜಯನಗರದ ಮಂಡಲಿಕ ಮಲ್ಲಿರಾಯ (Melrao of the Portuguese documents)ನು ಆಲ್ಬುಕರ್ಕನಿಗೆ ವಿವಿಧ ರೀತಿಗಳಲ್ಲಿ ಸಹಾಯ ಮಾಡಿದನು.

ಇಮ್ಮಡಿ ನರಸಿಂಗರಾಯ ಮತ್ತು ಪೋರ್ತುಗೀಜರು:

ಕ್ರಿ.ಶ. 1503-1509ರಲ್ಲಿ ವಿಜಯನಗರದಲ್ಲಿ ಇಮ್ಮಡಿ ನರಸಿಂಗರಾಯನ ಆಳ್ವಿಕೆ ನಡೆಯುತ್ತಿತ್ತು. ಆಲ್ಮೆಡಾ ಒಬ್ಬ ಪ್ರಭಾವಿ ಸ್ಥಳೀಯನಿಂದ ವಿಜಯನಗರದ ಸರ್ವೋತ್ತಮ ರಾಜ್ಯದ ಸ್ಥಿತಿ ಹಾಗೂ ನರಸಿಂಹನ ಬಗೆಗೆ ಹಾಗೂ ದೇಶದ ಸ್ಥಿತಿಗತಿಗಳನ್ನು ಕಣ್ಣಾನೂರಿನಲ್ಲಿ ರಾಜಪ್ರತಿನಿಧಿಯ ಮಗ ತಾರೆಂಕೋ ಹಾಗೂ ಇಟಾಲಿಯನ್ ಪ್ರವಾಸಿ ವಾರ್ತೆಮಾನಿಂದ ತಿಳಿದುಕೊಂಡ. ಇದರ ಪರಿಣಾಮದಿಂದ ನರಸಿಂಗ ರಾಜನನ್ನು ಭಟಕಳದಲ್ಲಿ ಕೋಟೆ ಕಟ್ಟಿಕೊಳ್ಳಲು ಅನುಮತಿ ಕೇಳಿದ. ಆದರೆ ನಿರುತ್ತರನಾದ.

ಮುಸಲ್ಮಾನರಿಂದ ಕಾಲಿಕತ್ತದಲ್ಲಿ 47 ಪೋರ್ತುಗೀಜ ವರ್ತಕರು ಕೊಲೆಯಾದುದನ್ನು ವಾರ್ತೆಮಾ ಕಂಡನು. 1506ರಲ್ಲಿ ಪೋರ್ತುಗೀಜ್ ಹಡಗುಪಡೆ ಕಾಲಿಕತ್ ರಾಜನಿಗೆ ಸೇರಿದ ದೋಣಿಗಳ ತಂಡವನ್ನು ನಾಶಪಡಿಸಿತು. ಈ ಅತ್ಯಾಚಾರದಿಂದ ಕಣ್ಣಾನೂರಿನ ಕಾರಖಾನೆಗೆ ರಾಜನ ಪಡೆ ಮುತ್ತಿಗೆ ಹಾಕಿತು. 1507ರಲ್ಲಿ ಆಲ್ಮೆಡಾ ಮತ್ತು ಟ್ರಿಸ್ಟನ್ ದ ಕುನ್ಹಾ ಮುತ್ತಿಗೆಯನ್ನು ತೆಗೆಸಿ ಕಾಲಿಕತ್ ಮೇಲೆ ದಾಳಿ ಮಾಡಿದರು.

ಅಲ್ಫೋಂಸೋ ದ ಆಲ್ಬುಕರ್ಕ್ ಪರ್ಷಿಯನ್ ಸಮುದ್ರದಲ್ಲಿ ಮುಸ್ಲಿಮರೊಂದಿಗೆ ಕಾದಿದನು. 1509ರಲ್ಲಿ ಅವನು ಅಲ್ಮೈಡಾನ ಉತ್ತರಾಧಿಕಾರಿಯಾಗಿ "ಭಾರತದ ಮಂಡಲಾಧಿಪತಿ" ಅಂದರೆ ಪೋರ್ತುಗೀಜ ಭಾರತ ಡಿಯೊಗೊ ಲೋಪ್ಸ್ ದ ಸಿಕ್ವೆರಾ ಪೋರ್ತುಗಾಲದ ರಾಜನ ಆಧಿಪತ್ಯದಲ್ಲಿ ಕೇಪ್ ಕಾಮರಿನ್ ಪೂರ್ವಕ್ಕಿರುವ ಸಮುದ್ರಗಳ ಮಂಡಲಾಧಿಪತಿಯಾದನು.

ದುಆರ್ತೆ ಬಾರ್ಬೋಸಾ ಕಥನದಲ್ಲಿ ಭಟಕಳ:

ಪಶ್ಚಿಮ ಕರಾವಳಿಯ ಭಟಕಲ್ ರೇವಿನ ಕುರಿತು ಬಾರ್ಬೋಸಾನು: ಲೋಹ, ಮಸಾಲೆ, ಔಷಧಿ, ಅಳಲೇಕಾಯಿ ಅಲ್ಲಿನ ನಿರ್ಯಾತಗಳು; ಕುದುರೆ ಹಾಗೂ ಮುತ್ತುಗಳು ಆಯಾತಗಳು. ಆದರೆ ಕುದುರೆ, ಮುತ್ತುಗಳು ಪೋರ್ತುಗೀಜರಿಂದಾಗಿ ಗೋವಾಕ್ಕೆ ಹೋಗುತ್ತವೆ. ಭಟಕಲ್‌ನ ಪ್ರಾಂತಾಧಿಪತಿ ದೊರೆ ಕೃಷ್ಣದೇವರಾಯನ ಸೋದರನ ಮಗನಾಗಿದ್ದಾನೆ. ಅವನು ವೈಭವದ ಜೀವನ ಸಾಗಿಸುತ್ತಿದ್ದು ತನ್ನನ್ನು ದೊರೆ ಎಂದು ಕರೆದುಕೊಳ್ಳುತ್ತಾನೆ, ಆದರೆ ತನ್ನ ಕಕ್ಕನಿಗೆ ವಿಧೇಯನಾಗಿದ್ದಾನೆ. ಈ ರೀತಿ ಹೇಳಿ ಕರಾವಳಿ ಬಿಟ್ಟು ಘಟ್ಟಗಳ ಮೇಲೆ ಸಾಗಿ ನರಸಿಂಗ ರಾಜನಿದ್ದ ಬಿಜನಗರದ ವೈಭವವನ್ನು ವರ್ಣಿಸುತ್ತಾ ಪೆಗು ಮತ್ತು ಸೆಲಾನಿ (ಸಿಲೋನ್)ಗಳಿಂದ ತರಲಾಗುವ ರತ್ನಗಳು, ವಜ್ರಗಳು ಹಾಗೂ ನರಸಿಂಗನ ರಾಜ್ಯದಲ್ಲೊಂದು ಮುತ್ತಿನ ಗಣಿ ಇರುವುದನ್ನೂ ಕಥಿಸಿದ್ದಾನೆ.

ಗೋವಾದ ಮೇಲೆ ಪೋರ್ತುಗೀಜ್ ದಾಳಿಗೆ ಮುಂಚೆ "ಸಬಾಯಮ್ ಡೆಲ್ಕನಿ" ಎಂದರೆ ದಖ್ಖನ್ ರಾಜನು ಅಧಿಪತಿಯಾಗಿದ್ದನೆಂದೂ ಬಾರ್ಬೋಸಾ ಹೇಳುತ್ತಾ 25-2-1510 ಹಾಗೂ 25-11-1510ರಂದು ಆಲ್ಬುಕರ್ಕನಿಗೆ ಸ್ವಾಧೀನವಾಯಿತೆಂದು ಉಲ್ಲೇಖಿಸಿದ್ದಾನೆ.

ಕ್ರಿ.ಶ. 1500ರಲ್ಲಿ ಪೆಡ್ರೋ ಅಲ್ವಾರಿಸ್ ಕ್ಯಾಬ್ರಲ್‌ನ ಹಡಗಿನ ನಾವಿಕನು (ಈತನ ಹೆಸರು ತಿಳಿದುಬರುವುದಿಲ್ಲ) ವಿಜಯನಗರದ ಚಕ್ರವರ್ತಿ ಹಾಗೂ ಅಲ್ಲಿನ ವೃತ್ತಾಂತಗಳನ್ನು ದಿನಚರಿಯಲ್ಲಿ ಸಂಗ್ರಹಿಸಿದ್ದನು.[8] ಈ ಮಧ್ಯೆ ಅಲ್ಮೈಡಾ ಅಂಜದೀವದಲ್ಲಿದ್ದಾಗ ವಿಜಯನಗರ ತುಳುವ ಮನೆತನದ ವೀರ ನರಸಿಂಹನು ಕಣ್ಣಾನೂರಿನಲ್ಲಿದ್ದುದು ತಿಳಿದುಬಂತು. ಅಲ್ಲಿಗೆ ಭಾರೀ ಉಡುಗೊರೆಯೊಂದಿಗೆ ನಿಯೋಗಿಯನ್ನು ಕಳುಹಿಸಿದರೂ ಸರಿಯಾದ ಉತ್ತರ ಲಭಿಸದಂತಾಯಿತು. ಪೆರೋ ಫರ್ನ್ಯಾಂಡೆಜ್ ಟಿನೊಕೊ ಪೋರ್ತುಗಲ್ ರಾಜನಿಗೆ 21-11-1505 ರಂದು ಬರೆದ ಪತ್ರದಲ್ಲಿ ಇಮ್ಮಡಿ ನರಸಿಂಹನ ತರುವಾಯ ವೀರ ನರಸಿಂಹನೇ ಆಳುತ್ತಿದ್ದನೆಂದು ಉಲ್ಲೇಖನಗೊಂಡಿದೆ.[9]

'ಪರ್ಚಸ್'ನ ಮೂಲವೊಂದು ಪೋರ್ತುಗೀಜರು ಗೋವಾ ಆಕ್ರಮಣವನ್ನು ಹೀಗೆ ಉದ್ಧರಿಸುತ್ತದೆ:

"ಸಬಾಯಸ್" (ಸಬಾಯೋ) ತೀರಿಕೊಂಡಾಗ ಅವನ ಮಗ ಇದಲ್‌ಖಾನ್ (ಆದಿಲ್‌ಖಾನ್) ತೀರ ಚಿಕ್ಕವನಿದ್ದ. ಆದುದರಿಂದ ಅವನ ಪ್ರಜೆಗಳು ಬಂಡೆದ್ದರು ಮತ್ತು ಅವನ ಪ್ರದೇಶವನ್ನು ಕಿತ್ತುಕೊಳ್ಳಲು ರಾಜ ನರಸಿಂಗ ಅವನ ಮೇಲೆ ಯುದ್ಧ ಮಾಡಿದ. ಈ ಸುಸಂಧಿಯನ್ನು ಬಳಸಿಕೊಂಡು ಮುತ್ತಿಗೆ ಹಾಕಿದನು ಮತ್ತು .... ದ್ವೀಪದೊಂದಿಗೆ ಗೋವಾವನ್ನು ವಶಪಡಿಸಿಕೊಂಡ. ಮುಂದೆ ಶೀಘ್ರದಲ್ಲಿಯೇ ಇದಲ್‌ಖಾನ್ ಪ್ರಬಲ ಸೈನ್ಯದೊಂದಿಗೆ ಬಂದು ಅದನ್ನು ಪುನಃ ವಶಪಡಿಸಿಕೊಳ್ಳಲಾಗಿ ಪೋರ್ತುಗೀಜರು ರಾತ್ರಿ ಓಡಿಹೋದರು. ಆದರೆ ರಾಜ ನರಸಿಂಗ ಪುನಃ ಇದಲ್‌ಖಾನನ ಮೇಲೆ ಆಕ್ರಮಣ ಮಾಡಿದಾಗ ಅವನು ಹೆಚ್ಚು ಅಪಾಯಕಾರಿ ಶತ್ರುವನ್ನು ಎದುರಿಸಬೇಕಾಗಿ ಬಂದು ಗೋವಾದಲ್ಲಿ ಬಲಶಾಲಿ ಠಾಣ್ಯ ಬಿಟ್ಟು ಹೋದ. ಅದನ್ನು ಸಹ ಅಲ್ಬುಕರ್ಕ್ ಜಯಿಸಿ ನಗರವನ್ನು ನಾಶಮಾಡಿದ. ಈ ರೀತಿ ಉಲ್ಲೇಖನವಿದೆ.

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಪೋರ್ತುಗೀಜರು (1509-1530):

ವಿಜಯನಗರ ಚಕ್ರವರ್ತಿಯ ಸಹಾಯ ಬೆಳೆಸಲು ಆಲ್ಬುಕರ್ಕನು 1510 ರಲ್ಲಿ ಫ್ರೇ ಲೂಯಿಜ್ (Fray Luiz) ನನ್ನು ಫ್ರಾನ್ಸಿಸ್ಕಾನ್ ಫ್ರೈಯರ್ ಮುಖಾಂತರ ಉಚಿತ ಉಡುಗೊರೆಗಳೊಂದಿಗೆ ನಿಯೋಗಿಯನ್ನು ಕಳುಹಿಸಿದನು. ಬಿಜಾಪುರ ಆದಿಲ್‌ಷಹನನ್ನು ಸೋಲಿಸಿ ಪೋರ್ತುಗೀಜರು ಗೋವೆಯನ್ನು ವಶಪಡಿಸಿಕೊಂಡಿರುವುದನ್ನು ತಿಳಿದು ಕೃಷ್ಣದೇವರಾಯನು ಪೋರ್ತುಗೀಜರೊಂದಿಗೆ ಸ್ನೇಹ ಹಸ್ತ ಚಾಚಲು ಸಿದ್ಧನಾಗಿದ್ದನು. ತುರುಕರು ಹಾಗೂ ಪೋರ್ತುಗೀಜರಿಗೆ ದ್ವೇಷವಿರುವುದನ್ನು ಮನಗಂಡು, ರಣರಂಗಗಳಿಂದ ಬೇಸತ್ತು ಒಪ್ಪಂದವನ್ನು ಮಾಡಿ ಕೊಳ್ಳಲು ಕಾತುರನಾದನು. ಪರ್ಷಿಯಾದಿಂದ ಯುದ್ಧಾಶ್ವಗಳನ್ನು ಸರಬರಾಜು ಮಾಡುತ್ತಿದ್ದ ಅರಬ್ಬರು ಬಿಜಾಪುರಕ್ಕೆ ಮಾರುತ್ತಿದ್ದರು. ಇದನ್ನು ತಪ್ಪಿಸಿ ವಿಜಯನಗರಕ್ಕೆ ಲಭಿಸುವಂತೆ ಪೋರ್ತುಗೀಜರಿಗೆ ಸ್ನೇಹ ಹಸ್ತ ನೀಡಲು ಆಗತ್ಯವಾಗಿತ್ತು. ಈ ಕಾರಣಗಳಿಂದ ಕೃಷ್ಣದೇವರಾಯನು ಬಾರ್ಕೂರಿನ ರಾಜ್ಯಪಾಲ ರತ್ನಂಶೆಟ್ಟಿಯ ಮುಖಾಂತರ ನಿಯೋಗಿಯನ್ನು ಕ್ರಿ.ಶ. 1514 ರಲ್ಲಿ ಕಳುಹಿಸಿದನು. ಇದೇ ಕಾಲದಲ್ಲಿ ಬಿಜಾಪುರದ ಆಧಿಪತಿಯೂ ಇದೇ ಉದ್ದೇಶಕ್ಕೆ ಗೋವಾಕ್ಕೆ ದೂತನನ್ನು ಕಳುಹಿಸಿದ್ದನು. ಅಂತ್ಯದಲ್ಲಿ ಆಲ್ಬುಕರ್ಕನ ಸೈನಿಕರಿಗೆ ಭತ್ಯವನ್ನೂ ಯುದ್ಧಾಶ್ವಗಳಿಗೆ ವಾರ್ಷಿಕವಾಗಿ 30,000 ಕ್ರುಜಾಡೋ (Cruzados) ಕೃಷ್ಣದೇವರಾಯನು ಸಲ್ಲಿಸತಕ್ಕದೆಂದು ಒಪ್ಪಂದವೇರ್ಪಟ್ಟಿತು.

ಕಾಮೆಂಟೇರಿಯೋದಲ್ಲಿ ಕಂಡು ಬರುವ ತಿಮ್ಮಯ್ಯ - ಆಲ್ಬುಕರ್ಕ್:

ಕಾಮೆಂಟೇರಿಯೋ (Commentarios) ಆಕರದ ಮೇರೆಗೆ ತಿಮ್ಮಯ್ಯನು ಆಲ್ಬುಕರ್ಕನನ್ನು ಭೇಟಿ ಮಾಡಿದ ಪ್ರಸ್ತಾಪವಿದ್ದು ಕ್ಯಾಸ್ಟನ್‌ಹೇಡಾ (Castanheda) ಕೂಡ ಇದನ್ನು ನಿರೂಪಿಸಿದೆ. ತಿಮ್ಮಯ್ಯನು ಆಲ್ಬುಕರ್ಕನನ್ನು ತಾನೇ ಭೇಟಿಯಾಗಿ ಮುಸ್ಲಿಂ ಪ್ರಭಾವವನ್ನು ತಗ್ಗಿಸುವಂತೆ ಏರ್ಪಡಿಸುವುದಾಗಿಯೂ ಇದಕ್ಕೆ ತನಗೆ ಹಾಗೂ ತನ್ನ ತಮ್ಮ ಚಿದಂಬರನಿಗೆ ಪ್ರತಿಫಲವಾಗಿ ತನಗೆ ಗೋವಾ ದಕ್ಕಬೇಕೆಂದೂ ವಾದವೊಂದನ್ನು ಒಡ್ಡಿರುವುದಾಗಿ ತಿಳಿದುಬರುತ್ತದೆ. ಹೀಗಾದಲ್ಲಿ ಗೋವಾ ಕೃಷ್ಣದೇವರಾಯನ ಅಧೀನಕ್ಕೊಳಪಟ್ಟಂತಾಗುತ್ತದೆ. ಚಕ್ರವರ್ತಿಯು ತಿಮ್ಮಯ್ಯನಿಗೆ ಅರೇಬಿಯಾ ಮತ್ತು ಪರ್ಷಿಯಾದಿಂದ ಯುದ್ಧಾಶ್ವಗಳನ್ನು ಆಮದು ಮಾಡಿಕೊಳ್ಳುವಲ್ಲಿ ಒಪ್ಪಂದವೊಂದನ್ನು ರೂಪಿಸಿ ಪೋರ್ತುಗೀಜರನ್ನು ಅಲ್ಲಿ ನೆಲೆಗೊಳಿಸಲು ಆದೇಶವಿತ್ತಿರುವುದೂ ವ್ಯಕ್ತಪಡುತ್ತದೆ. ಈ ಸಂದರ್ಭದಲ್ಲಿ ತಿಮ್ಮಯ್ಯನ ವರ್ತನೆಯೂ ಹಲವು ಸಂದೇಹಕ್ಕೆಡೆಯುಂಟು ಮಾಡುತ್ತದೆ. ಕಾಮೆಂಟೇರಿಯೋಸ್ ಪ್ರಕಾರ 1509 ರಲ್ಲಿ ಆದಿಲ್‌ಷಹನೂ ಕೃಷ್ಣದೇವರಾಯನಿಗೆ ತಿಮ್ಮಯ್ಯ ಮತ್ತು ಪೋರ್ತುಗೀಜರ ಹಲವಾರು ಸಂದೇಹಾಸ್ಪದ ವರ್ತನೆಗಳನ್ನು ತಿಳಿಸಿ ದೂರನ್ನು ನೀಡಿರುವುದೂ ವ್ಯಕ್ತಪಡುತ್ತದೆ. ಐತಿಹಾಸಿಕವಾಗಿ ಇದು ಗಮನಾರ್ಹವಾಗಿದೆ.[10]

ವಿಜಯನಗರಕ್ಕೆ ಪೋರ್ತುಗೀಜರ ನಿಯೋಗಿಗಳು:

1505 ರಿಂದ 1512 ರವರೆಗೆ ನಾಲ್ಕು ಬಾರಿ ರಾಯಭಾರಿಗಳಾಗಿ ಪೋರ್ತುಗೀಜ್ ನಿಯೋಗಿಗಳು ವಿಜಯನಗರಕ್ಕೆ ಧಾವಿಸಿರುವುದು ಕಂಡುಬರುತ್ತದೆ. ಈ ಮಧ್ಯೆ ಪೋರ್ತುಗೀಜರು ವಿಜಯನಗರದ ಸ್ನೇಹ ಹಾಗೂ ಮೌನದ ದುರುಪಯೋಗ ಪಡೆದು ಕುಂದಾಪುರ ಆದಿಯಾಗಿ ವಿಜಯನಗರ ಅಧೀನದಲ್ಲಿದ್ದ ಕರಾವಳಿ ಪ್ರದೇಶಗಳಲ್ಲಿ ಸರ್ವ ಸ್ವಾಮಿಗಳೆಂಬಂತೆ ವರ್ತಿಸಿ ವಾರ್ಷಿಕ ಕಪ್ಪ ಸಂಗ್ರಹಿಸತೊಡಗಿದರು. ಮಂಗಳೂರು ಹಾಗೂ ಭಟ್ಕಳಗಳನ್ನು ಸುಟ್ಟು ನಾಶ ಮಾಡಿದರು. "ಪೋರ್ತುಗೀಜ್" ಎಂದರೆ "ಜಗಳಗಂಟ" ಎಂಬ ಅರ್ಥ ಕರಾವಳಿಯಲ್ಲಿ ರೂಢಿಯಲ್ಲಿದೆ.[11]

1511 ರಲ್ಲಿ ಆಲ್ಬುಕರ್ಕನು ಗ್ಯಾಸ್‌ಪರ್ ಚಾನೊಕಾ (Gasper Chanoca) ಎಂಬವನನ್ನು ಮೂರನೇ ಬಾರಿ ವಿಜಯನಗರಕ್ಕೆ ನಿಯೋಗಿಯನ್ನಾಗಿ ಕಳುಹಿಸಿದನು. ಇಸ್ಮಾಯಿಲ್ ಆದಿಲ್‌ಷಹನಿಂದ ಇರುವ ಅಪಾಯವನ್ನರಿತ ಚಕ್ರವರ್ತಿಯು ಪೋರ್ತುಗೀಜ್ ನಿಯೋಗಿಯನ್ನು ಬರಮಾಡಿಕೊಂಡು ಸ್ನೇಹದ ಒಪ್ಪಂದಕ್ಕೆ ಸಿದ್ಧನಾದನು. ವೀಜಯನಗರಕ್ಕೆ ಯಾವಾಗ ಆಹ್ವಾನಿಸಿದರೂ ಪೋರ್ತುಗೀಜರು ಸಹಕಾರ ನೀಡಬೇಕಾಗಿಯೂ, ವಿದೇಶಗಳಿಂದ ಗೋವೆಗೆ ಬಂದಿಳಿದ ಯುದ್ಧಾಶ್ವಗಳನ್ನು ವಿಜಯನಗರಕ್ಕೆ ಮಾರಬೇಕೆಂದೂ ಒಪ್ಪಂದವೇರ್ಪಟ್ಟಿತು. ಸಾಮ್ರಾಜ್ಯದೊಳಗಿನ ಎಲ್ಲ ವ್ಯಾಪಾರಿಗಳೂ ವಸ್ತುಗಳನ್ನು ಕುಂದಾಪುರ ಮತ್ತು ಹೊನ್ನಾವರ ಬಂದರುಗಳ ಮುಖಾಂತರ ಪೋರ್ತುಗೀಜರಿಗೇ ಮಾರತಕ್ಕದೆಂದು ಕರಾರಾಯಿತು.[12]

1512 ರಲ್ಲಿ ತಿರುಗಿ ನಾಲ್ಕನೆಯ ಬಾರಿ ಗ್ಯಾಸ್‌ಪರ್ ಚಾನೋಕಾನನ್ನು ನಿಯೋಗಿಯಾಗಿ ವಿಜಯನಗರಕ್ಕೆ ಕಳುಹಿಸಿ ಭಟ್ಕಳದಲ್ಲಿ ಕೋಟೆ ಮತ್ತು ಕಾರ್ಖಾನೆ ನಿರ್ಮಾಣಕ್ಕೆ ಆಲ್ಬುಕರ್ಕನು ಅನುಮತಿ ಕೇಳಿದನು. ಈ ಕಾಲದಲ್ಲಿ ಒರಿಸ್ಸಾದ ಗಜಪತಿ ಮೇಲಣ ದಂಡಯಾತ್ರೆ ಜರುಗಿದ್ದರಿಂದ ಚಕ್ರವರ್ತಿಯಿಂದ ಯಾವ ಪ್ರತಿಕ್ರಿಯೆ ಬಂತೆಂಬುದು ಅಸ್ಪಷ್ಟ ಸಂಗತಿಯಾಗಿದೆ. ಡಾ. ಬಿ.ಎಸ್. ಶಾಸ್ತ್ರಿರವರ ಪ್ರಕಾರ ಅನುಮತಿ ಪಡೆಯಲು ಆಲ್ಬುಕರ್ಕನಿಗೆ ಸಧ್ಯವಾಗಲಿಲ್ಲವೆಂದು ಅಭಿಪ್ರಾಯಸಿದ್ದಾರೆ.

ರಾಯಚೂರು ಕದನ:

ಆದಿಲ್‌ಷಾಹನಿಂದ ರಾಯಚೂರು ಕೋಟೆಯನ್ನು ವಶಪಡಿಸಿಕೊಳ್ಳಲು ನಿರ್ಧರಿಸಿ ಕೃಷ್ಣದೇವರಾಯನು ಅಪಾರ ದಂಡಿನೊಂದಿಗೆ ವಿಜಯನಗರದಿಂದ ಹೊರಟು ಈಶಾನ್ಯ ದಿಕ್ಕಿಗೆ ಸಾಗಿದನು. 19-5-1520 ರಂದು ನಿರ್ಣಾಯಕ ಯುದ್ಧದಲ್ಲಿ ಸಲಾಬತ್‌ಖಾನನ 500 ಸ್ವಪಕ್ಷದ್ರೋಹಿಗಳು ಹಿಂದೂಗಳ ವಿರುದ್ಧ ಮುನ್ನುಗ್ಗಿದ್ದರೂ ಸಲಾಬತ್‌ಖಾನನು ಸೆರೆ ಸಿಕ್ಕನು. ಭೀತಿಗ್ರಸ್ತ ಸುಲ್ತಾನನು ತನ್ನ ಜೀವಿತ ಕಾಲದಲ್ಲಿ ಇನ್ನೊಮ್ಮೆ ಎಂದೂ ವಿಜಯನಗರ ಒಳರಾಷ್ಟ್ರಗಳ ಮೇಲೆ ಯುದ್ಧ ಮಾಡಲು ಯತ್ನಿಸಲಿಲ್ಲ. ಅತ್ಯಲ್ಪ ಕಾಲದಲ್ಲಿ ರಾಯಚೂರು ದುರ್ಗ ವಿಜಯನಗರದ ಅಧೀನವಾಯಿತು. ರಾಬರ್ಟ್ ಸೀವೆಲ್ ಪೋರ್ತುಗೀಜ್ ಉಲ್ಲೇಖವನ್ನು ಆಧರಿಸಿ ಮಹಾಮಂಡಲಾಧಿಪತಿ ಡಿಬಗೊ ಲೋಪ್ಸದ ಸಿಕ್ವೆರಾ ಕೆಂಪು ಸಮುದ್ರದಲ್ಲಿದ್ದಾಗ ಮತ್ತು ರಾಯ ದ ಮೆಲೊ ಗೋವಾ ಮಂಡಲಾಧಿಪತಿಯಾಗಿದ್ದಾಗ ರಾಯಚೂರಿನ ಪತನಾನಂತರ ಕೂಡಲೇ ಕೃಷ್ಣದೇವನ ಪರೋಕ್ಷ ಸಮ್ಮತಿಯೊಂದಿಗೆ ವಿಸ್ತೃತ ಭೂಭಾಗದ ಸ್ವಾಧೀನ ನಡೆದುದು ಖಚಿತವೆಂದು ಉಲ್ಲೇಖಿಸಿದ್ದಾನೆ. ಈ ಕಾಲದಲ್ಲಿ ಗೋವಾ, ವಿಜಯನಗರ ಮತ್ತು ಪೋರ್ತುಗೀಜ್ ಇತಿಹಾಸಗಳಲ್ಲಿ ಒಂದಕ್ಕೊಂದು ಸಾಮರಸ್ಯ ಕಂಡು ಬಾರದಿರುವುದರಿಂದ ಖಚಿತ ಸಂಗತಿಗಳಿಗೆ ಸಂಶೋಧನೆಯ ಅಗತ್ಯವಿದೆ. ಇದೇ ಸಂದರ್ಭದಲ್ಲಿ (1522) ತಿಮ್ಮಯ್ಯನು ಕಾಣಿಸಿಕೊಂಡು ಸಾಲ್ಸೆಟ್ ಮತ್ತು ಗೋವಾದ ಮೇಲೆ ಕಣ್ಣಿಟ್ಟಿದ್ದನೆಂದೂ ಪೋರ್ತುಗೀಜರು ಇದನ್ನು ನಿಗ್ರಹಿಸಿದರೆಂದೂ ಹೇಳಲಾಗಿದೆ.

ಅಚ್ಯುತದೇವರಾಯನ ಕಾಲ (1530-1542):

ಗೋವೆಯ ಪೋರ್ತುಗೀಜ ಮಂಡಲಾಧಿಪತಿ ದ ಕುನ್ಹಾ ವಿಜಯನಗರದ ಅಂತಃಕಲಹಗಳು, ಬಿಜಾಪುರ, ಅಹಮದ್‌ನಗರ ಹಾಗೂ ರಾಯಚೂರು ದೋಆಬ್‌ಗಳ ದುಸ್ಥಿತಿಯನ್ನು ಹಾಗೂ ಅಲ್ಲಿನ ಘಟನೆಗಳ ಪ್ರಯೋಜನ ಪಡೆದು ದೀವ್‌ನಲ್ಲಿ ಕೋಟೆಯೊಂದನ್ನು ಕಟ್ಟಿಸಿ 1536 ರಲ್ಲಿ ಅಸದ್‌ಖಾನನ ವಶದಲ್ಲಿದ್ದ ಗೋವಾ ಭೂಖಂಡಗಳನ್ನು ಪುನಃ ಹಿಡಿದುಕೊಂಡ. ಖಾನನು ಮೂರು ಬಾರಿ ಗೋವೆಯನ್ನು ಪಡೆಯಲು ಸೈನ್ಯ ಕಳಿಸಿದರೂ ಸಾಧ್ಯವಾಗದೆ ಹಿಂದಕ್ಕೆ ಸರಿಯಬೇಕಾಯಿತು.

ಇದೇ ಸಂದರ್ಭಕ್ಕನುಗುಣವಾಗಿ 1526 ರಲ್ಲಿ ಬಾಬರ್ ಚಕ್ರವರ್ತಿ ದಿಲ್ಲಿಯನ್ನು ವಶಪಡಿಸಿಕೊಂಡು ಶ್ರೇಷ್ಠ ಮೊಗಲ ವಂಶದ ಪ್ರಥಮ ದೊರೆಯೆಂದು ಘೋಷಿಸಿಕೊಂಡುದೂ ನೆನಪಿಡುವ ಅಂಶವಾಗಿದೆ.

ರಾಬರ್ಟ್ ಸೀವೆಲ್‌ರವರ ಪ್ರಕಾರ ಈ ಆಳ್ವಿಕೆಯಲ್ಲಿ ಪೋರ್ತುಗೀಜರು ಕರಾವಳಿಯಲ್ಲಿನ ವಿವಿಧ ಸ್ಥಳಗಳಲ್ಲಿ ನೆಲೆಯೂರುವುದರಲ್ಲಿ ನಿರತರಾಗಿದ್ದರು. ತಮ್ಮ ವ್ಯಾಪಾರದ ರಕ್ಷಣೆಗಾಗಿ ಹಲವಾರು ಕೋಟೆಗಳನ್ನು ನಿರ್ಮಿಸಿದರು. ಕಾಲಿಕತ್ತದ ಸಾಮುರಿ ಮತ್ತು ವಿಜಯನಗರದ ಇತರ ಸಾಮಂತರೊಂದಿಗೆ ಯಾವಾಗಲೂ ಕದನ ನಿರತರಾಗಿದ್ದರು. ತುಸು ಮಟ್ಟಿಗೆ ರಾಯನೊಂದಿಗೆ ಮಾತ್ರ ಮೈತ್ರಿ ಹೊಂದಿದ್ದರು.

ಸೀವೆಲ್ ಹಿಂದೂ ಮತ್ತು ಪೋರ್ತುಗೀಜರ ಸ್ವಭಾವಗಳನ್ನು ಕುರಿತು:

ಪೋರ್ತುಗೀಜರೊಂದಿಗಿನ ವ್ಯವಹಾರಗಳುದ್ದಕ್ಕೂ ಹಿಂದೂ ರಾಜರು ವಚನ ಮುರಿದ ಒಂದು ಪ್ರಸಂಗವನ್ನು ನಾನು ಕಾಣೆ. ಆದರೆ ಅದೇ ಮಾತನ್ನು ಇನ್ನೊಂದು ಬದಿಯವರ ವಿಷಯದಲ್ಲಿ ಹೇಳಲಾಗದು. ಭಾರತೀಯರನ್ನು ಲೂಟಿ, ದರೋಡೆ, ಕೊಲೆ ಮಾಡಲು ತಮಗೆ ದೈವದತ್ತ ಹಕ್ಕು ಇತ್ತೆಂದು ಐರೋಪ್ಯರು ಭಾವಿಸಿದಂತೆ ತೋರುತ್ತದೆ. ಉಪ್ಪು ಖಾರ ಹಚ್ಚದೆ ಹೇಳುವುದಾದರೆ, ಅವರ ಇಡೀ ದಾಖಲೆ ದುಷ್ಕೃತ್ಯಗಳ ಸರಮಾಲೆಯಾಗಿದೆ. ಪ್ಯಾಸ್ ಕೊಟ್ಟಿರುವ ಆ "ವೀರ ಹಾಗೂ ಪರಿಪೂರ್ಣ ರಾಜಾ ಕೃಷ್ಣದೇವ ಪೋರ್ತುಗೀಜರೊಂದಿಗೆ, ವಿಶೇಷತಃ ಕ್ರಿಸ್ಟೊವಾಒ ದ ಫಿಗ್ಯೆರೆಡೊನೊಂದಿಗೆ ತಳೆದ ಮೈತ್ರಿಯ ವರ್ಣನೆಯಿಂದ ಹೊರಳಿ ಆ ಘನ ಹಿಂದೂ ಸರಕಾರದೊಂದಿಗೆ ರಾಜ ಪ್ರತಿನಿಧಿಯ ವಿಶ್ವಾಸ ಘಾತುಕತನದ ಬಗೆಗೆ ಓದಲು ಕೆಡುಕೆನಿಸುತ್ತದೆ. ಪೋರ್ತುಗೀಜರು ಮೈತ್ರಿ, ಒಪ್ಪಂದಗಳನ್ನು ಮಾಡಿಕೊಂಡುದು ಇವರೊಂದಿಗೇನೇ ಹಾಗೂ ಬಹಿರಂಗವಾಗಿ ಗೆಳೆತನ ಪ್ರಕಟಿಸುತ್ತಿದ್ದುದೂ ಇವರೊಂದಿಗೇನೇ. ಒಂದೇ ಒಂದು ಉದಾಹರಣೆ ನೀಡುವುದಾದರೆ 1545 ರಲ್ಲಿ ಗೋವಾದ ಮಂಡಲಾಧಿಪತಿ ದೊಡ್ಡ ಹಡಗುಪಡೆಯನ್ನು ಮತ್ತು 3000 ಸೈನಿಕರನ್ನು ಸಿದ್ಧಗೊಳಿಸಿದ, ಆದರೆ ಇದನ್ನು ಗುಪ್ತವಾಗಿಟ್ಟ. ಮದ್ರಾಸದ ಹತ್ತಿರವಿರುವ ಸ್ಯಾನ್ ಥೋಮೆಗೆ ಕರಾವಳಿಗುಂಟ ಹಡಗು ಪ್ರಯಾಣ ಬೆಳೆಸಿ, ಸೈನಿಕರನ್ನು ಅಲ್ಲಿ ಇಳಿಸಿ ಒಳನಾಡಿನಲ್ಲಿ ಸಾಗಿ ಕೇವಲ ತನ್ನ ದುರಾಸೆಗಾಗಿ ತಿರುಪತಿ ಮಹಾದೇವಾಲಯವನ್ನು ನಾಶಮಾಡುವುದು ಅವನ ಹೇತುವಾಗಿತ್ತು. ಅದೃಷ್ಟವಶಾತ್ ತೀವ್ರ ಬಿರುಗಾಳಿ ಅವನು ಸಮುದ್ರಯಾನ ಬೆಳೆಸದಂತೆ ತಡೆಗಟ್ಟಿತು. ಆದರೂ ಅವನು ಪಶ್ಚಿಮ ಕರಾವಳಿಯಲ್ಲಿನ ಶ್ರೀಮಂತ ದೇವಾಲಯಗಳನ್ನು ಕೊಳ್ಳೆ ಹೊಡೆದು ಆ ಲೂಟಿಯಿಂದ ತನ್ನನ್ನು ಶ್ರೀಮಂತನನ್ನಾಗಿಸಿಕೊಂಡ. ಇದು ವಿಜಯನಗರ ಸಾಮ್ರಾಜ್ಯದ ಧಾರ್ಮಿಕ-ಸಾಂಸ್ಕೃತಿಕ ಶ್ರೀಮಂತಿಕೆ ಮೇಲೆ ಮಾಡಿದ ಸ್ವೈರ ಆಕ್ರಮಣವಾಗಿತ್ತು. ಈ ದೇವಾಲಯಗಳಿಗೆ ಸೇರಿದ ಶಾಂತಿಪ್ರಿಯ ಬ್ರಾಹ್ಮಣರು ಪೋರ್ತುಗೀಜರನ್ನು ಯಾವುದೇ ರೀತಿಯಲ್ಲಿ ರೇಗಿಸಿದ ಅಥವಾ ಹಸ್ತಕ್ಷೇಪ ಮಾಡಿದ ನೆಪ ಕೂಡ ಇರಲಿಲ್ಲ.

ವೀರ ಸದಾಶಿವರಾಯ - ಪೋರ್ತುಗೀಸರು (1543-1568):

ಕ್ರಿ.ಶ. 1545ರಲ್ಲಿ ಅಸೂದ್‌ಖಾನನು ಇಬ್ರಾಹಿಂ ಆದಿಲ್‌ಷಹನ ಬದಲಾಗಿ ಅವನ ಸಹೋದರ ಅಬ್ದುಲ್ಲಾನನ್ನು ಪಟ್ಟಕ್ಕೇರಿಸಲು ಸಿದ್ಧತೆ ನಡೆಸಿದನು. ಗೋವಾ ಮಂಡಲಾಧಿಪತಿ ಡೋಂ ಗಾರ್ಸಿಯಾ ಡಿ ಕ್ಯಾಸ್ಟ್ರೊ ಅಸೂದನ ವಕ್ರದೃಷ್ಟಿ ಕೊಂಕಣದ ಮೇಲಿರುವುದನ್ನು ಗಮನಿಸಿ ವಿಜಯನಗರದ ಪ್ರತಿಕ್ರಿಯೆಗಾಗಿ ನಿರೀಕ್ಷಿಸತೊಡಗಿದನು. ತನ್ನ ಆಂತರಿಕ ಕುಟುಂಬ ಕಲಹದ ದುರುಪಯೋಗ ಪಡೆಯಲು ಕರಾವಳಿ ಪ್ರದೇಶಕ್ಕೆ ಕರೆಯದಲೇ ತಳವೂರಿದ್ದ ಪೋರ್ತುಗೀಜರನ್ನು ಶಿಕ್ಷಿಸಿ ಸದೆಬಡಿಯಲು ಆದಿಲ್‌ಷಹನು ಸೈನ್ಯದೊಂದಿಗೆ ಘಟ್ಟದ ಕೆಳಗೆ ತೆರಳಿದನು. ಇದರಿಂದ ತಾತ್ಕಾಲಿಕ ಜಯವುಂಟಾದರೂ ಭಯದಿಂದ ಕೂಡಿದ್ದ ಇಬ್ರಾಹಿಮನು ಬಂಡಾಯವೆದ್ದ ರಾಜ ಕುಮಾರನನ್ನು ನಿಗ್ರಹಿಸಲು ಸಾಲ್ಸೆಟ್ ಮತ್ತು ಬಾರ್ಡೆಸ್‌ನ್ನು ತನಗೆ ಒಪ್ಪಿಸಬೇಕೆಂದು ಪೋತುಗೀಜರಿಗೆ ತಗಾದೆ ಮಾಡಿದನು. ಸಮೃದ್ಧ ಸಾಲ್ಸೆಟ್ ಮತ್ತು ಬಾರ್ಡೆಸ್ ತನ್ನ ಕೈಬಿಡುವುದನ್ನು ಕಂಡುಕೊಂಡ ಅಲ್ಫೊಂಸೋನ ಉತ್ತರಾಧಿಕಾರಿ ಡಿ ಕ್ಯಾಸ್ಟ್ರೊ ವಿಜಯನಗರದೊಂದಿಗೆ ಒಪ್ಪಂದಕ್ಕೆ ಬರಬೇಕಾಯಿತು. ಬರ್ಹಾನ್ ಮುಖಾಂತರ ಉಚಿತಾಭರಣಗಳೊಂದಿಗೆ ತಲುಪಿದ ನಿರೂಪದ ಮೇರೆಗೆ ಬಿಜಾಪುರದ ವಿರುದ್ಧವಾಗಿ ಈ ಕೆಳಕಂಡಂತೆ ಒಪ್ಪಂದವೇರ್ಪಟ್ಟಿತು:

1. ಉಭಯತಾಪಿ ಸ್ನೇಹ ಸಂವರ್ಧನದಲ್ಲಿ ಕೂಡಿಕೊಂಡೇ ಆಯಾ ಸಂದರ್ಭಗಳಲ್ಲಿ ಶತ್ರುಗಳನ್ನು ನಿಗ್ರಹಿಸತಕ್ಕದು. ಒಬ್ಬರ ಶತ್ರುವಿಗೆ ಇನ್ನೊಬ್ಬರು ಸಹಮತವಿಲ್ಲದೆ ಸಹಾಯವೆಸಗಕೂಡದು.

2. ನೈಜಾಂಷಾನ ಹೊರತಾಗಿ ಭಾರತದ ಪ್ರಾಂತ್ಯಾಧಿಪತಿಗಳು ಕೇಂದ್ರದಿಂದ (ವಿಜಯನಗರ) ಬರುವ ಸೂಚನೆಯಂತೆ ಸಹಾಯವೆಸಗತಕ್ಕದು.

3. ಪರ್ಷಿಯಾ ಮತ್ತು ಅರೇಬಿಯಾದಿಂದ ಸರಬರಾಜಾಗುವ ಯುದ್ಧಾಶ್ವಗಳನ್ನು ಗೋವಾ ಬಂದರಿಗೆ ಬಂದ ಕೂಡಲೇ ಪೋರ್ತುಗೀಜರು ಬಿಜಾಪುರಕ್ಕೆ ನೀಡದೇ ವಿಜಯನಗರಕ್ಕೆ ಮಾತ್ರ ಸರಬರಾಜು ಮಾಡತಕ್ಕದು.

4. ವಿಜಯನಗರ ಪ್ರಾಂತ್ಯದ ವರ್ತಕರು ತಮ್ಮ ಸರಕುಗಳನ್ನು ಆಯಾ ಬಂದರುಗಳಿಂದ ಬಿಜಾಪುರಕ್ಕೆ ನೀಡಬಾರದು. ಸೂಕ್ತ ಬೆಲೆಯಲ್ಲಿ ಪೋರ್ತುಗೀಜರಿಗೇ ಸರಬರಾಜು ಮಾಡತಕ್ಕದು.

5. ಮೂರಿಷ್ ಹಡಗುಗಳನ್ನು ಬಂದರುಗಳಲ್ಲಿ ಬಿಡಕೂಡದು ಹಾಗೂ ನಿಲ್ಲಿಸಕೂಡದು. ಆ ರೀತಿ ನಿಂತ ಜಹಜುಗಳನ್ನು ವಿಜಯನಗರ ಅಥವಾ ಗೋವಾಕ್ಕೆ ಒಪ್ಪಿಸತಕ್ಕದು.

ಬಿಜಾಪುರದಲ್ಲಿ ಅಬ್ದುಲ್ಲನ ಬಂಡಾಯ (ಕ್ರಿ.ಶ. 1548):[13]

ಬಿಜಾಪುರದ ಅರಮನೆಯಲ್ಲಿ ಜರುಗಿದ ಬಂಡಾಯಗಳಿಂದ ಹೂರ್ಚಿಯನ್ ಯುದ್ಧದಲ್ಲಿ 40 ಹಿಂದು 70 ಮುಸ್ಲಿಮ್ ಜನರನ್ನು ಸಂಶಯದ ಮೇರೆಗೆ ಕೊಲ್ಲಲಾಯಿತು. ರೊಚ್ಚಿಗೆದ್ದ ನಾಗರೀಕರು ಹಾಗೂ ಸಾಮಂತರು ಆದಿಲ್‌ಷಾನ ಸೋದರ ಅಬ್ದುಲ್ಲಾನನ್ನು ನಿಗ್ರಹಿಸಿ ಪಟ್ಟದಿಂದ ಇಳಿಸಲು ಸನ್ನಾಹ ನಡೆಸಿದರು. ಅಬ್ದುಲ್ಲಾನು ಗೋವಾ ಪೋರ್ತುಗೀಜರನ್ನು ರಕ್ಷಣೆಗಾಗಿ ಮೊರೆ ಹೊಕ್ಕನು. ಅಸಾದ್‌ಖಾನನು ಅನಾರೋಗ್ಯದಿಂದಿರುವುದನ್ನು ಮನಗಂಡ ಬರ್ಹಾನ್ ಅಬ್ದುಲ್ಲಾನಿಗೆ ರಕ್ಷಣೆ ನೀಡಿದನು. ಬಿಜಾಪುರದ ಈ ಘಟನೆಗಳು ಪೋರ್ತುಗೀಸರಿಗೆ ಸಹಕಾರಿಯಾದುವು. ಸಾಲ್ಸೆಟ್, ಬಾರ್ಡೆಸ್ ಮತ್ತು ಅಸೂದನ ಸಂಪದ್ಭರಿತ ಭಂಡಾರಗಳು ಕೈಸೇರುವವರೆಗೂ ಮಾರ್ಟಿನ್ ಅಲ್ಫೊಂಸೋ ಎಚ್ಚರಿಕೆ ವಹಿಸಿದ್ದನು. ಇವುಗಳು ಕೈಸೇರಿದ ನಂತರ ಅಬ್ದುಲ್ಲಾನನ್ನು ಕಣ್ಣಾನೂರಿಗೆ ಕಳುಹಿಸಲಾಯಿತು.

ಫ್ರಾನ್ಸಿಸ್ ಕ್ಸೇವಿಯರ್ ಮತ್ತು ಕ್ರೈಸ್ತ ಧರ್ಮ ಪ್ರಸಾರ (1541-1559):

ಗೋವಾ ಮತ್ತು ಮಲಬಾರ್ ಪ್ರಾಂತದ 20,000 ಪರವಾರರು, ಮೀನುಗಾರರು, ಮುಸ್ಲಿಮರುಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಲಾಯಿತು. ಸಮಗ್ರ ಘಟ್ಟದ ಸೀಮೆಗಳು ಪೋರ್ತುಗೀಜ್ ಅಡ್ಮಿರಲ್ ಮಾರ್ಟಿನ್ ಅಲ್ಫೊಂಸೋ ಡಿ ಸೌಜಾನಿಗೆ ಅಧೀನವಾಗಿದ್ದರಿಂದ ಲಿಸ್ಬನ್‌ನ 3ನೇ ಜಾರ್ಜ್ ಪೋಪ್‌ಗೆ ಸಂದೇಶವೊಂದನ್ನು ಕಳುಹಿಸಿದನು. 50,000 ಕುಟುಂಬಗಳು ಕ್ರೈಸ್ತ ಧರ್ಮಕ್ಕೆ ಸೇರಿದ್ದುದನ್ನು ಪೋಪ್‌ಗೆ ಪತ್ರ ಬರೆದು ತಿಳಿಸಿದನು. 6-5-1542 ರಲ್ಲಿ ಪೋಪನು ಸೇಂಟ್ ಇಗ್ನೇಷಿಯಸ್‌ನ ಕ್ಸೇವಿಯರ್‌ನ್ನು ಭಾರತಕ್ಕೆ ಕಳುಹಿಸಿದನು. ಕ್ಸೇವಿಯರನ ಮುಖಾಂತರ ಕ್ರೈಸ್ತ ಧರ್ಮವು ತೀವ್ರವಾಗಿ ಹರಡಿತು. ಇದರಿಂದ ಪೋಪನ ಅಧಿಕಾರ ದ್ವಿಗುಣವಾಯಿತು. ಭಿನ್ನ ತೀರಗಳ ಹಾಗೂ ವಿವಿಧ ರೂಪಗಳ ಕ್ರೈಸ್ತ ಧರ್ಮ 16ನೇ ಶತಕದ ಮಧ್ಯಭಾಗದಲ್ಲಿ ಆಕ್ರಮಿಸಿಕೊಂಡಿತು. ಹಲವು ಚರ್ಚುಗಳ ಆಂತರಿಕ ಕಚ್ಚಾಟಗಳಿಂದ ತಲ್ಲಣಗೊಂಡಿದ್ದ ಈ ಧರ್ಮವು ಪೋರ್ತುಗೀಜ್ ಅವನತಿಯ ನಂತರ ದಂಗೆಯೆದ್ದು ಸ್ವಾತಂತ್ರ್ಯ ಪಡೆದುಕೊಂಡಿತು. ವಿಜಯನಗರದ ದುರ್ಬಲತೆಯು ಇದಕ್ಕೆ ಮತ್ತಷ್ಟು ಪುಷ್ಟಿ ನೀಡಿತು.

ಕಿ.ಶ. 1559-60 ರಲ್ಲಿ ಪೋರ್ತುಗೀಜರ ಹಾವಳಿ:

ವಿಜಯನಗರ ರಾಮರಾಯನ ಮೈಲಾಪುರ ದಂಡಯಾತ್ರೆಯಿಂದ ಸಿಟ್ಟಿಗೆದ್ದ ಪೋರ್ತುಗೀಜ್ ಅಧಿಕಾರಿ ಲ್ಯೂಯಿಜ್ ಡಿ ಮೆಲ್ಲೊ (Luiz de Mello) ಮಂಗಳೂರು ಹಾಗೂ ಮಲಬಾರ್ ಕಡಲ ತೀರದ ಪ್ರದೇಶಗಳಿಗೆ ಬೆಂಕಿಯಿಟ್ಟು ನಾಶಮಾಡಿದನು. ಅಸಂಖ್ಯಾತ ನಾಕರೀಕರು ಕೊಲ್ಲಲ್ಪಟ್ಟರು. ಗೋವಾ ಸುತ್ತಮುತ್ತಲಿನ ನಾಗರೀಕರೆಲ್ಲರನ್ನೂ ಬೆದರಿಸಿ ಬಲಾತ್ಕಾರವಾಗಿ ಮತಾಂತರಗೊಳಿಸಿದನು. ಇಂತಹ ಸನ್ನಿವೇಶದಲ್ಲಿ ವಿಜಯನಗರದಿಂದ ಯಾವ ಪ್ರತಿಕ್ರಿಯೆಯುಂಟಾಯಿತೆಂಬುದು ಇತಿಹಾಸದಲ್ಲಿ ಅಸ್ಪಷ್ಟ ಸಂಗತಿಯಾಗಿದೆ.

ಕ್ರಿ.ಶ. 1565ರ ವಿಜಯನಗರ ಅವನತಿಯ ನಂತರ ಪೋರ್ತುಗೀಜರು:

ಕ್ರಿ.ಶ. 1565ರ ವಿಜಯನಗರ ಪತನಾನಂತರ ಗೋವೆಯಲ್ಲಿ ಪೋರ್ತುಗೀಜರ ಪ್ರಭಾವ ತಗ್ಗಿತು. ವ್ಯಾಪಾರಕ್ಕೆ ಭಾರೀ ನಷ್ಟವುಂಟಾಯಿತು. ಫೆಡರಿಚಿಯ ಕಥನದ ಮೇರೆಗೆ ಯುದ್ಧಾಶ್ವದ ಆದಾಯವು 120 ರಿಂದ 150 ಸಾವಿರ ಡುಕಟ್‌ಗಳ ಆದಾಯ ಕೇವಲ 6 ಸಾವಿರಕ್ಕಿಳಿಯಿತು. ಆದರೆ ವಿಜಯನಗರ ಹಿಡಿತ ಸಡಿಲಗೊಂಡಾಗ ಇವರ ದುಂಡಾವರ್ತನೆಯೂ ಉಲ್ಬಣಗೊಂಡಿತು. 1567ರಲ್ಲಿ ಮಂಗಳೂರನ್ನು ವಶಪಡಿಸಿಕೊಂಡು ಸೆಂಟ್ ಸೆಬೆಸ್ಟಾವು ಕೋಟೆ ನಿರ್ಮಿಸಿದರು. ಕುಂದಾಪುರ, ಬಸ್ರೂರು, ಹೊನ್ನಾವರ ಕೋಟೆಗಳೂ ಪೋರ್ಚುಗೀಜರ ವಶವಾದವು.

ಇದೇ ಕಾಲದಲ್ಲಿ ಕೆಳದಿ ರಾಜ್ಯ ಸ್ವತಂತ್ರವಾಗಿ ಸಮರ್ಥ ದೊರೆಗಳು ಆಳಿದರು. 1618ರಲ್ಲಿ ಕೆಳದಿ ಹಿರಿಯ ವೆಂಕಟಪ್ಪ ನಾಯಕನು ಕರಾವಳಿಯಿಂದ ಪೋರ್ತುಗೀಜರನ್ನು ಹೊಡೆದೋಡಿಸಿ "ಪಡುಗಡಲೊಡೆಯ" ನೆಂದೆನಿಸಿಕೊಂಡನು. ಕೆಳದಿ ಅರಸರಿಂದ ಪೋರ್ತುಗೀಜ್ ನೌಕಾಪಡೆಗೆ ಆದ ಭಾರಿ ಸೋಲೊಂದನ್ನು (1620) ಇಂಗ್ಲೀಷ್ ದಾಖಲೆಗಳು ವರದಿ ಮಾಡಿವೆ.[14] 1652 ಪ್ರಸಿದ್ಧನಾದ ಕೆಳದಿ ಶಿವಪ್ಪ ನಾಯಕನು ಪೋರ್ತುಗೀಜರನ್ನು ಕನ್ನಡ ಕರಾವಳಿಯಿಂದ ಪೂರ್ತಿಯಾಗಿ ಹಿಮ್ಮೆಟ್ಟಿಸಿ ಕಡಲ ತೀರದಲ್ಲಿ ತನ್ನ ಪೂರ್ತಿ ಸ್ವಾಮ್ಯವನ್ನು ಸ್ಥಾಪಿಸಿದುದನ್ನು ಜಿ. ಮೊರೇಸ್ ಸಾಧಾರವಾಗಿ ಸಮರ್ಥಿಸಿದ್ದಾರೆ.

ಉಪಸಂಹಾರ:

17-5-1498 ರಂದು ವಿಜಯನಗರ ಚಕ್ರಾಧಿಪತ್ಯಕ್ಕೆ ಸೇರಿದ್ದ ಕರಾವಳಿ ಪ್ರದೇಶಕ್ಕೆ ಅನಧಿಕೃತವಾಗಿ ವಾಸ್ಕೋಡಿಗಾಮನು ಪ್ರವೇಶ ಮಾಡಿದ ನಂತರ 1565 ರವರೆಗೂ ವಿಜಯನಗರ ಹಾಗೂ ಪೋರ್ತುಗೀಜ್ ಇತಿಹಾಸದ ಅಧ್ಯಾಯವು ಆರಂಭವಾಯಿತು. ವಿನಾ ತರಲೆಗಳನ್ನು ಹುಟ್ಟು ಹಾಕುವುದರಲ್ಲಿ ಪರಿಣತರಾದ ಪೋರ್ತುಗೀಜರು ವಿಜಯನಗರ ಮೊದಲುಗೊಂಡು ದಕ್ಷಿಣ ಭಾರತದಲ್ಲಿ ಕಡಲ ತೀರದ ನೆಮ್ಮದಿಯ ಜೀವನಕ್ಕೆ ತಲೆನೋವನ್ನುಂಟು ಮಾಡಿದರು. ಹೊನ್ನಾವರ, ಭಟಕಲ್, ಗೋವಾ, ದಿಯು ಆದಿಯಾಗಿ ಕಡಲ ತೀರದ ಸಮೃದ್ಧ ಕರಾವಳಿ ತೀರಗಳನ್ನು ತಮ್ಮದನ್ನಾಗಿಸಿಕೊಂಡು ರಾಜಕೀಯ ನೈಪುಣ್ಯತೆಯನ್ನು ಸಾಧಿಸಿದರು. ಇಲ್ಲಿನ ರಾಜಕೀಯ ದೊಂಬೆಗಳು ಪೋರ್ತುಗೀಜರಿಗೆ ತಳವೂರಲು ಸಹಕಾರಿಯಾದುವು. 1493 ರಿಂದ 1568 ರವರೆಗೆ ವಿಜಯನಗರ ಹಾಗೂ ಪೋರ್ತುಗೀಜ್ ಸಂಬಂಧಗಳು ಇತಿಹಾಸದಲ್ಲಿ ಸ್ಥೂಲವಾಗಿ ಲಭಿಸುತ್ತವೆ. ದಿ|| ಡಾ. ಬಿ.ಎಸ್. ಶಾಸ್ತ್ರಿಗಳು (ಗೋವಾ) ಹೇಳುವಂತೆ ಈ ಕುರಿತು ವಿಪುಲ ಆಕರಗಳಿದ್ದರೂ ಸಶಾಸ್ತ್ರೀಯ ಅಧ್ಯಯನ ಕೈಗೊಂಡಂತೆ ಕಂಡುಬರುವುದಿಲ್ಲ. ಪೋರ್ತುಗೀಜ್, ಡಚ್, ಪರ್ಷಿಯನ್, ಕನ್ನಡ, ಮಲೆಯಾಳೀ, ತಮಿಳು ಮತ್ತು ಇಂಗ್ಲೀಷ್ ಭಾಷಾ ತಜ್ಞರು ಈ ಕುರಿತು ಪ್ರಾಮಾಣಿಕವಾಗಿ ಸಾಹಸೀ ಮನೋಭಾವದಿಂದ ಹಾಗೂ ಆಸಕ್ತಿಯಿಂದ ಯೋಜನೆಯೊಂದನ್ನು ರೂಪಿಸಿಕೊಂಡು ಅಧ್ಯಯನ ಕೈಗೊಂಡಲ್ಲಿ ಬೃಹತ್ ಸಂಪುಟಗಳೇ ಹೊರಬಂದಾವು. ಡಾ. ವಸಂತಮಾಧವ ನುಡಿದಂತೆ Vijayanagara Rule in Coastal Karnataka, Europeans Activities in Coastal Karnataka and Impact on Socio Economic Conditions (1498-1763), Adilshahis hold in Coastal Karnataka (1500-1675) ಮುಂತಾದ ಆಕರಗಳೂ ಸಹಕಾರ ನೀಡುತ್ತವೆ. ಮುಂದುವರಿದ ದೇಶದಲ್ಲಿ ಸಂಶೋಧನಾ ಸಹೃದಯ ಗೋಷ್ಠಿಯ ಮಾದರಿಯಲ್ಲಿದ್ದಂತೆ ವಿಜಯನಗರ ಪ್ರತಿಷ್ಠಾನವು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗುವುದು ಸೂಕ್ತವಾಗಿದೆ.

ಅಡಿ ಟಿಪ್ಪಣಿಗಳು

1. *ಕೆಳದಿ ನೃಪ ವಿಜಯ*, ಕ.ಸಾ.ಪ. 1977, ಪು. 75.
2. ವೆಂಕಟೇಶ್ ಜೋಯಿಸ್, *ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಕ.ಸಾ.ಪ.
3. ಎಸ್. ರಾಜಶೇಖರ, *ವಿಜಯನಗರ ಕಾಲದ ಘಟನಾವಳಿ ಸೂಚಿ*, ಕರ್ನಾಟಕ ಭಾರತಿ ಸಂಪುಟ 9, ಸಂ. 4.
4. Briggs, *Ferista's account in his Adil Shahi Narrative*, p. 93. ಪೂನಾದಲ್ಲಿ ಜರುಗಿದ ಯು.ಜಿ.ಸಿ. ವಿದ್ವತ್ ಸಭೆಯಲ್ಲಿ ಸಾದರಪಡಿಸಿದ ನನ್ನ ಪ್ರಬಂಧದಲ್ಲಿ ಈ ಕುರಿತು ಗೋವಾದ ಪುರಾತತ್ವ ನಿರ್ದೇಶಕ ಡಾ. ಶಿರೋಡ್‌ಕರ್ ಹಾಗೂ ದಿ|| ಡಾ. ಬಿ.ಎಸ್. ಶಾಸ್ತ್ರಿಗಳು ನನ್ನನ್ನು ಕರೆಸಿಕೊಂಡು "Goa through the Ages" ಸಂಪುಟಕ್ಕೆ ಸೇರಿಸಲು ಲೇಖನ ಕೇಳಿದ್ದು ಸಲ್ಲಿಸಿರುವೆನು. ಕೆಳದಿ ನೃಪ ವಿಜಯದ ಐತಿಹಾಸಿಕ ಪ್ರಾಮಾಣಿಕತೆ ಆಕರಗಳಿಗೆ ಅಲ್ಲಗಳೆಯಲಾರದಂತಿರುವುದರಿಂದ ಪೋರ್ತುಗೀಜ್ ಆಕರಕ್ಕೆ ಈ ಸಾಮಗ್ರಿ ಒಪ್ಪಿಕೊಳ್ಳಲು ಅರ್ಹವಾಗಿದೆಯೆಂದು ಡಾ. ಶಾಸ್ತ್ರಿಗಳು ತಿಳಿಸಿದ್ದರು.
5. *Journal of Indian History*, Vol. LII, pt. I, April 1974, University of Kerala, Trivandrum, pp. 147-55.
6. Unpublished Palm Leaf Mss. Mackenzie collection by H.H. Wilson, Vol. I, 1928, p. 200.
7. ಸಾಗರ ತಾಲ್ಲೂಕಿನ ವದ್ದಾಳ್ಳಿ ಗ್ರಾಮದ ದೇವಾಲಯದಲ್ಲಿದ್ದ ಪೋರ್ತುಗೀಜ್ ಫಲಕ ಮೈಸೂರು ಪ್ರಾಚ್ಯ ವಸ್ತು ಸಂಶೋಧನಾಲಯದಲ್ಲಿದೆ. ವದ್ದಾಳ್ಳಿಯಲ್ಲಿ ಪೋರ್ತುಗೀಜ್ ಫಲಕವಿದ್ದುದು ಕುತೂಹಲಕಾರಿ ಅಂಶವಾಗಿದೆ.
8. Greenlee W.B., *A Viagem de Pedro Alvares Cabral ao Brasil e a India* (Porto, 1951), pp. 179-180.
9. Rego Antonio da Silva, *Documentacao Para a Historiadas Missoes do Padroado Portuguese do Oriente India* (I Lisbon, 1947), pp. 33, 36.

10. ಗೋವಾ ದಿ|| ಡಾ. ಬಿ.ಎಸ್. ಶಾಸ್ತ್ರಿರವರ *Studies in Indo Portuguese History* ಯಲ್ಲಿ "Timmayya's relations with Portuguese" ನೋಡಿರಿ.

11. ಸೂರ್ಯನಾಥ ಕಾಮತ್, *ಕರ್ನಾಟಕದ ಪರಂಪರೆ : ಪೋರ್ಚುಗೀಸರು ಮತ್ತು ಕರ್ನಾಟಕ*, ಪು. 180.

12. *Bombay Gazetteer*, Kanara II 115. Quoting subsidios II 255-57.

13. M.H. Rama Sharma, *The History of the Vijayanagar Empire*, p. 229, Foot notes.

14. Foster·W., *The English Factories in India 1630-33*, p. 98-99.

19. ವಿಜಯನಗರೋತ್ತರ ಕಾಲದಲ್ಲಿ ಬಳ್ಳಾರಿ ಪ್ರದೇಶದ ಗ್ರಾಮರಕ್ಷಣಾ ವಾಸ್ತು ಮತ್ತು ರಾಜಕೀಯ ಸ್ಥಿತಿಗತಿ

– ಸಿ. ಮಹದೇವ

ಕ್ರಿ.ಶ. 1565ರ ಯುದ್ಧಾನಂತರ ವಿಜಯನಗರವು ಬಿಜಾಪುರದ ಆದಿಲ್‌ಶಾಹಿಗಳ ವಶವಾಗುತ್ತದೆ. ಆದರೂ ಅರವೀಡು ಸಂತತಿಯವರು ಹದಿನೆಂಟನೆಯ ಶತಮಾನದ ಪ್ರಥಮಾರ್ಧದವರೆಗೂ ಈ ಭಾಗದಲ್ಲಿ ಗ್ರಾಮದಾನ, ಭೂದಾನ ಮತ್ತಿತರ ದಾನಗಳನ್ನು ನೀಡಿರುವ ಸಂಗತಿಗಳು ಶಾಸನಗಳಲ್ಲಿವೆ. ಒಡೆದ ವ್ಯವಸ್ಥೆಯನ್ನು ಪುನಃ ಸ್ಥಾಪಿಸಲಾಗಲಿಲ್ಲ. ಪೆನುಗೊಂಡೆಯಿಂದ ಆಳುತ್ತಿದ್ದ ಅರವೀಡು ಸಂತತಿಯವರನ್ನು ವಿಜಯನಗರದ ಅರಸರೆಂದು ಪರಿಗಣಿಸಲಾಗಿತ್ತು. ವೆಂಕಟಪತಿದೇವ (1586-1614)ನು ಹಂಪೆ ಪ್ರದೇಶವನ್ನು ಹರಪನಹಳ್ಳಿ ಪಾಳೆಯಗಾರರಿಗೆ ಬಿಟ್ಟುಕೊಟ್ಟನೆಂದು ತಿಳಿಯಲಾಗಿದೆ. 1677-78ರಲ್ಲಿ ಬಳ್ಳಾರಿ ಪ್ರದೇಶವನ್ನು ಮರಾಠರ ಶಿವಾಜಿ ವಶಪಡಿಸಿಕೊಳ್ಳುತ್ತಾನೆ. ಆಗ ಇಲ್ಲಿನ ಪಾಳೆಯಗಾರರು ಮರಾಠರಿಗೆ "ಚೌತ" ಎಂಬ ಹೆಸರಿನಲ್ಲಿ ಕಪ್ಪ ಕಾಣಿಕೆಯನ್ನು ಸಲ್ಲಿಸುತ್ತಾರೆ. ಕ್ರಿ.ಶ. 1680ರಲ್ಲಿ ಶಿವಾಜಿಯ ಮರಣದ ನಂತರ ಈ ಭಾಗ ಮೊಗಲರ ವಶವಾಗುತ್ತದೆ. ಔರಂಗಜೇಬನ ಮರಣಾನಂತರ ಈ ಪ್ರದೇಶ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಸೇರುತ್ತದೆ. ನಂತರದ ದಶಕಗಳಲ್ಲಿ ಹೈದರ್ ಮತ್ತು ಟಿಪ್ಪೂ ಆಳ್ವಿಕೆಗೆ ಒಳಗಾಗಿ ಅಂತಿಮವಾಗಿ ಕ್ರಿ.ಶ. 1800 ರಲ್ಲಿ ಬ್ರಿಟಿಷರ ಆಡಳಿತಕ್ಕೆ ಸೇರಿಕೊಳ್ಳುತ್ತದೆ.

ಹೀಗೆ ರಾಜಕೀಯ ಅಸ್ಥಿರತೆಯಿಂದ ಕೂಡಿದ ವಿಜಯನಗರೋತ್ತರ ಕಾಲದ ಬಳ್ಳಾರಿ ಪ್ರದೇಶದ ಪ್ರತಿ ಗ್ರಾಮಗಳಲ್ಲಿ ಗ್ರಾಮ ರಕ್ಷಣೆಗಾಗಿ ರಕ್ಷಣಾಗೋಡೆ ಮತ್ತು ಅದಕ್ಕೆ ಸೇರಿದಂತೆ ಬುರುಜುಗಳು ನಿರ್ಮಾಣಗೊಂಡವು. ಇಂದು ರಕ್ಷಣಾ ಗೋಡೆಗಳು ಹಾಳಾಗಿದ್ದು, ಕೇವಲ ಬುರುಜುಗಳು ಮಾತ್ರ ಉಳಿದುಕೊಂಡಿವೆ. ಈ ಬುರುಜುಗಳನ್ನು ಸ್ಥಳೀಯರು "ಹುಡೇವು" ಎಂದು ಕರೆಯುತ್ತಾರೆ. ಸರಳಾರ್ಥದಲ್ಲಿ ಕಾವಲು ದಿಬ್ಬಗಳೆನ್ನಬಹುದು. ಇವುಗಳನ್ನು ರಕ್ಷಣಾ ಗೋಡೆಗಳ ನಡುವೆ ಎತ್ತರದ ಆಯಕಟ್ಟಿನ ಜಾಗದಲ್ಲಿ ನಿರ್ಮಿಸುತ್ತಿದ್ದರು. ಹುಡೇವುಗಳು ವೃತ್ತಾಕಾರದಲ್ಲಿದ್ದು, ಸಾಮಾನ್ಯವಾಗಿ ತಳದಲ್ಲಿ ಸುಮಾರು 20 ರಿಂದ 25 ಅಡಿ ವಿಸ್ತೀರ್ಣದ ವ್ಯಾಸವನ್ನು, ತುದಿಯಲ್ಲಿ ಸುಮಾರು 15 ರಿಂದ 20 ಅಡಿ ವಿಸ್ತೀರ್ಣದ ವ್ಯಾಸವನ್ನು ಹೊಂದಿರುತ್ತವೆ. ಅಂದರೆ ತಳದಿಂದ ಮೇಲೆ ಹೋದಂತೆ ವ್ಯಾಸದ ವಿಸ್ತೀರ್ಣ ಕಿರಿದಾಗುತ್ತಾ ಹೋಗುತ್ತದೆ. ಹುಡೇವುಗಳ ಎತ್ತರ ಸಾಮಾನ್ಯವಾಗಿ 30 ಅಡಿಗಳಷ್ಟು ಇರುತ್ತದೆ. ರಕ್ಷಣಾ ಗೋಡೆ ಮತ್ತು ಹುಡೇವುಗಳನ್ನು ಸ್ಥಳೀಯವಾಗಿ ದೊರೆಯುವ ಒರಟು ಕಲ್ಲುಗುಂಡುಗಳು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗುತ್ತಿತ್ತು. ಇಂತಹ ರಕ್ಷಣಾವಶೇಷಗಳನ್ನು ಇಂದಿಗೂ ಈ ಭಾಗದ ಗ್ರಾಮ ಗ್ರಾಮಗಳಲ್ಲಿ ಕಾಣಬಹುದು. ಅಲ್ಲದೆ ನೆರೆಯ ರಾಯಚೂರು, ಚಿತ್ರದುರ್ಗದ ಜಿಲ್ಲೆಗಳಲ್ಲೂ ಗ್ರಾಮರಕ್ಷಣಾವಶೇಷಗಳು ಕಂಡುಬರುತ್ತವೆ. ಪಾಳೆಯಗಾರರ ಆಳ್ವಿಕೆ ಕಾಲದ ಈ ರಚನೆಗಳನ್ನು ಕುರಿತಂತೆ ಅಧ್ಯಯನವೇ ನಡೆದಿಲ್ಲ. ಇದುವರೆವಿಗೂ ಸಾಮ್ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿನ ರಕ್ಷಣಾ ವಾಸ್ತು ನಿರ್ಮಾಣಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಲೇಖನದ ಮುಖ್ಯ ಉದ್ದೇಶ ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡ ಗ್ರಾಮರಕ್ಷಣಾ ವಾಸ್ತು ನಿರ್ಮಾಣಗಳನ್ನು ಪರಿಚಯಿಸುವುದಾಗಿದೆ. ಈ ನಿರ್ಮಾಣಗಳಲ್ಲಿ ಈಗ ಉಳಿದಿರುವುದು ಬುರುಜು ಅಥವಾ ಹುಡೇವುಗಳು ಮಾತ್ರ. ಬುರುಜು ಅಥವಾ ಹುಡೇವುಗಳನ್ನು ಕೆಲವೆಡೆ ಬಿಡಿಯಾಗಿ ನಿರ್ಮಿಸಲಾಗುತ್ತಿತ್ತು. ಹೊಸಪೇಟೆ ತಾಲ್ಲೂಕಿನ ತಿಮ್ಮಲಾಪುರ ಮತ್ತು ಮಲಪನಗುಡಿ ಗ್ರಾಮಗಳಲ್ಲಿ ವಿಜಯನಗರ ಕಾಲದ ದೇವಾಲಯಗಳಿದ್ದು, ಪ್ರಾಕಾರದ ಹೊರಗೋಡೆಗೆ ಹೊಂದಿಕೊಂಡಂತೆ ಉಡೇವುಗಳನ್ನು ನಿರ್ಮಿಸಲಾಗಿದೆ. ಅಂದರೆ ವಿಜಯನಗರೋತ್ತರ ಕಾಲದಲ್ಲಿ ಈ ರೀತಿಯ ನಿರ್ಮಾಣಗಳು ನಡೆದಿವೆ ಎನ್ನುವುದು ಸ್ಪಷ್ಟ. ಹಡಗಲಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಕಲ್ಯಾಣ ಚಾಲುಕ್ಯ ಕಾಲದ ದೇವಾಲಯದ ಮೇಲೆ ರಕ್ಷಣಾ ಉದ್ದೇಶಕ್ಕಾಗಿ ಬುರುಜೊಂದನ್ನು ನಿರ್ಮಿಸಲಾಗಿದೆ. ಹೀಗೆ ವಿಜಯನಗರೊತ್ತರ ಕಾಲದಲ್ಲಿ ಗ್ರಾಮರಕ್ಷಣಾ ಉದ್ದೇಶಗಳಿಗೆ ದೇವಾಲಯಗಳನ್ನು ಬಳಸಿಕೊಳ್ಳಲಾಗಿದೆ. ಈ ರೀತಿಯ ರಕ್ಷಣಾ ವಾಸ್ತುಗಳು ಗ್ರಾಮ ಗ್ರಾಮಗಳಲ್ಲಿ ನಿರ್ಮಾಣಗೊಳ್ಳಲು ಕಾರಣವಾದ ರಾಜಕೀಯ ಪರಿಸ್ಥಿತಿಗಳನ್ನು ತಿಳಿಯುವುದು ಅವಶ್ಯ. ಹೊಸಪೇಟೆ-ಹಂಪೆ ರಸ್ತೆಯಲ್ಲಿನ ಕೊಂಡನಾಯಕನಹಳ್ಳಿ ಮತ್ತು ಮಲಪನಗುಡಿ ಗ್ರಾಮಗಳಲ್ಲಿ ರಕ್ಷಣಾ ವಾಸ್ತು ಅವಶೇಷಗಳು ಕಂಡುಬರುತ್ತವೆ. ಈ ಎರಡೂ ಗ್ರಾಮಗಳು ಕೇವಲ ಒಂದು ಫರ್ಲಾಂಗ್ ಅಂತರದಲ್ಲಿದ್ದು, ಅಲ್ಲಿ ಗ್ರಾಮರಕ್ಷಣಾ ವಾಸ್ತು ನಿರ್ಮಾಣಗಳ ಅಗತ್ಯವಾದರೂ ಏನಿತ್ತು? ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಈ ಮೂಲಕ ವಿಜಯನಗರೋತ್ತರ ಕಾಲದ ರಾಜಕೀಯ ಸ್ಥಿತಿಗತಿಗಳನ್ನು ಅರಿಯುವಲ್ಲಿ ಪ್ರಯತ್ನ ಮಾಡುತ್ತೇವೆ.

ಪ್ರತಿ ಗ್ರಾಮಗಳು ಹೊಂದಿದ್ದ ಪ್ರತ್ಯೇಕ ರಕ್ಷಣಾ ವ್ಯವಸ್ಥೆಯು ಅಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಬಹುಶಃ ಪ್ರತಿಯೊಂದು ಊರಿಗೂ ಒಬ್ಬ ನಾಯಕ ಅಥವಾ ಗೌಡ ಇದ್ದು, ಇಡೀ ಗ್ರಾಮದ ಮೇಲೆ ಪೂರ್ಣ ಹತೋಟಿ ಹೊಂದಿದ್ದನೆಂದು ಹೇಳಬಹುದು.

ಈ ಸ್ಥಳೀಯ ನಾಯಕರು ತಮ್ಮ ಭಾಗದ ಪಾಳೆಯಗಾರನಿಗೆ ವಿಧೇಯರಾಗಿದ್ದು, ಆತನಿಗೆ ಎಲ್ಲಾ ರೀತಿಯಲ್ಲೂ ಸಹಕರಿಸುತ್ತಿದ್ದರೆನ್ನಬಹುದು. ಅಲ್ಲದೆ ಸ್ಥಳೀಯ ನಾಯಕರುಗಳ ನಡುವೆ ಆಗಾಗ್ಗೆ ಘರ್ಷಣೆಗಳು ನಡೆಯುತ್ತಿದ್ದವೆಂಬ ಊಹೆಗೆ, ಗ್ರಾಮಗಳಲ್ಲಿ ಕಂಡುಬರುವ ರಕ್ಷಣಾ ವಾಸ್ತು ಅವಶೇಷಗಳೇ ಆಧಾರವಾಗಿವೆ. ಇದರಿಂದ ಈ ಭಾಗದಲ್ಲಿ ವಿಜಯನಗರೋತ್ತರ ಕಾಲದಲ್ಲಿ ರಾಜಕೀಯ ಅಸ್ಥಿರತೆ ನೆಲೆಗೊಂಡಿತ್ತೆಂಬುದರ ಬಗ್ಗೆ ಸೂಚನೆಗಳು ದೊರೆಯುತ್ತವೆ. ಅಲ್ಲದೆ ಚರಿತ್ರೆಯಿಂದಲೂ ಸಹ ಇಲ್ಲಿನ ಪಾಳೆಯಪಟ್ಟುಗಳು ಮರಾಠರಿಗೆ, ನಿಜಾಮನಿಗೆ ಮತ್ತು ಶ್ರೀರಂಗಪಟ್ಟಣದ ಸುಲ್ತಾನರಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದವೆಂದು ತಿಳಿದುಬರುತ್ತದೆ. ಈ ಕಪ್ಪಕಾಣಿಕೆಗಳ ಸಂಗ್ರಹಕ್ಕಾಗಿ ಪಾಳೆಯಪಟ್ಟುಗಳು ಸ್ಥಳೀಯ ನಾಯಕ ಅಥವಾ ಗೌಡನ ಕಪಿಮುಷ್ಟಿಯಲ್ಲಿ ಸಿಲುಕಿ ತೆರಿಗೆಗಳಿಂದ ಜರ್ಜರಿತಗೊಂಡಿದ್ದವು. ಕ್ರಿ.ಶ. 1800 ರಲ್ಲಿ ಬಳ್ಳಾರಿ ಪ್ರದೇಶಕ್ಕೆ ಬಂದ ಬ್ರಿಟಿಷ್ ಆಡಳಿತಾಧಿಕಾರಿ ಮನ್ರೊವಿನ ವರದಿಗಳು ಈ ಮೇಲಿನ ಅಂಶಗಳನ್ನು ಪರೋಕ್ಷವಾಗಿ ಬೆಂಬಲಿಸುತ್ತವೆ.

ಹೀಗೆ ಗ್ರಾಮ ರಕ್ಷಣಾ ವಾಸ್ತು ಅವಶೇಷಗಳು ವಿಜಯನಗರೋತ್ತರ ಬಳ್ಳಾರಿ ಪ್ರದೇಶದ ಚರಿತ್ರೆಯನ್ನು ಗ್ರಹಿಸಲು ಪರೋಕ್ಷವಾಗಿ ಕೆಲವು ಸೂಚನೆಗಳನ್ನು ನೀಡುತ್ತವೆ. ಒರಟು ಕಲ್ಲು ಮತ್ತು ಮಣ್ಣಿನಿಂದ ನಿರ್ಮಾಣಗೊಂಡಿರುವ ಈ ರಕ್ಷಣಾ ವಾಸ್ತು ಅವಶೇಷಗಳು ಊಳಿಗಮಾನ್ಯ ವ್ಯವಸ್ಥೆಯ ಕೊಡುಗೆಗಳಾಗಿವೆ. ಇಂದಿಗೂ ಈ ಬುರುಜುಗಳ ಮೇಲೆ ನಿಂತು ಗ್ರಾಮ ವೀಕ್ಷಣೆ ಮತ್ತು ದೂರದ ವೀಕ್ಷಣೆಯನ್ನು ಮಾಡಬಹುದು. ಸಾಮ್ರಾಜ್ಯದ ಕಾಲದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಮೆರೆದ ದೇವಾಲಯಗಳು ವಿಜಯನಗರೋತ್ತರ ಕಾಲದಲ್ಲಿ ರಕ್ಷಣಾ ಉದ್ದೇಶಗಳಿಗೆ ಬಳಸಲ್ಪಟ್ಟವು. ದೇವಾಲಯಗಳಿಗೆ ಹೊಂದಿಕೊಂಡಂತೆ ನಿರ್ಮಾಣಗೊಂಡಿದ್ದ ಬುರುಜುಗಳನ್ನು ಏರಲು ದೇವಾಲಯದ ಒಳಗಿನಿಂದಲೇ ಮೆಟ್ಟಿಲುಗಳ ವ್ಯವಸ್ಥೆ ಇತ್ತು. ಹೀಗಾಗಿ ದೇವಾಲಯಗಳು ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡಿದ್ದವೆನ್ನಬಹುದು. ಬೃಹತ್ ಕೋಟೆಗಳನ್ನು ವನದುರ್ಗ, ಜಲದುರ್ಗ, ಗಿರಿದುರ್ಗ ಮುಂತಾಗಿ ಹೆಸರಿಸಲಾಗುತ್ತದೆ. ಆದರೆ ಗ್ರಾಮರಕ್ಷಣಾ ನಿರ್ಮಾಣಗಳು ಒಂದೇ ತೆರನಾಗಿರುತ್ತವೆ. ನಮ್ಮ ಸಮಾಜದಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆ ಅವನತಿ ಹೊಂದಿದಂತೆ ಗ್ರಾಮರಕ್ಷಣಾ ವಾಸ್ತು ನಿರ್ಮಾಣಗಳು ಸಹ ಅವನತಿ ಹೊಂದಿವೆ. ಆದರೆ ಚಾರಿತ್ರಿಕ ದೃಷ್ಟಿಯಿಂದ ಇಂತಹ ಸ್ಮಾರಕಗಳನ್ನು ಉಳಿಸಿಕೊಳ್ಳುವುದು ಸೂಕ್ತ. ಅವುಗಳನ್ನು ದಾಖಲಿಸಿ ಮತ್ತು ಛಾಯಾಚಿತ್ರ ಮಾಡಿ ಈ ಕುರಿತಂತೆ ಸಮಗ್ರ ಅಧ್ಯಯನ ನಡೆಯಬೇಕಾಗಿದೆ.

ಗ್ರಂಥಋಣ

1. ಹೊಸಪೇಟೆ ತಾಲ್ಲೂಕ ದರ್ಶನ ಅಪ್ರಕಟಿತ ಯೋಜನೆ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1994.
2. ಎಂ.ಎಂ. ಕಲಬುರ್ಗಿ, 1994, *ಕರ್ನಾಟಕದ ಕೈಫಿಯತ್ತುಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
3. ವಿರೂಪಾಕ್ಷಿ, 1995, ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ (1800-1947): ಒಂದು ಸಮೀಕ್ಷೆ (ಎಂ.ಫಿಲ್. ಪ್ರೌಢ ಪ್ರಬಂಧ), ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
4. ಎಂ.ವಿ. ಕೃಷ್ಣರಾವ್ ಮತ್ತು ಕೇಶವಭಟ್, 1970, *ಕರ್ನಾಟಕ ಇತಿಹಾಸ ದರ್ಶನ,* ಕರ್ನಾಟಕ ಸಹಕಾರಿ ಪ್ರಾಕಾಶನ ಮಂದಿರ, ಬೆಂಗಳೂರು.
5. *ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್.*
6. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ 9, ಭಾಗ 2.*
7. *ಡೈನಾಸ್ಟಿಕ್ ಲಿಸ್ಟ್ ಆಫ್ ಕಾಪರ್ ಪ್ಲೇಟ್ ಇನ್ಸ್‌ಕ್ರಿಪ್ಷನ್ಸ್* (1887 ರಿಂದ 1964), ಸಂಖ್ಯೆ 1221.
8. *ಅನ್ಯೂಯಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಾಫಿ,* 1972-73, ಸಂಖ್ಯೆ ಎ. 4, ಎ. 5.
9. *ಸುವರ್ಣ ಪುಷ್ಪಾಂಜಲಿ,* ಹೊಸಪೇಟೆ ನಗರ ಸಭೆ ಸುವರ್ಣ ಮಹೋತ್ಸವ ಸಂಚಿಕೆ, 1964, ಹೊಸಪೇಟೆ.

COVER DESIGN : S. UMES
PRINTED AT GOOD TOUC